ಶನಿವಾರ, ಜನವರಿ 7, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 7 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ವರ್ಷದ ಎಲ್ಲ ಋತುಗಳಲ್ಲೂ ಬೆಚ್ಚಗಿರಲಿ ಪುಟ್ಟ ಕಂದಮ್ಮ

ಪ್ರಜಾವಾಣಿ@75 — ಸಿನಿಮಾ ಸಂಸ್ಕೃತಿ... ಅಸ್ಮಿತೆಯ ಛಾಪು
‘ಖಾಸಗಿ ಶಾಲೆಗಳ ಶುಲ್ಕ ನಿಗದಿ ಸರ್ಕಾರಕ್ಕೆ ಅವಕಾಶ ಇಲ್ಲ’ 4
ಭದ್ರಕೋಟೆ ರಕ್ಷಣೆಯೇ ಜೆಡಿಎಸ್‌ಗೆ ಸವಾಲು 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,900	17,859	₹57,310 (ಬೆಂಗಳೂರು)	₹69,600 (ಬೆಂಗಳೂರು)	82.66

ಒಳ ಪುಟಗಳು

ಕೇಂದ್ರದ ವಿರುದ್ಧ ರಾಹುಲ್ ವಾಗ್ದಾಳಿ 12
ರಾಜ್ಯಕ್ಕೆ ಶೇ 25 ಸೀಟು ನೀಡಲಾಗಿದೆ: ಲಾ ಸ್ಕೂಲ್ 5

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬೆಳಗಾವಿಯ ಒಂದಂಗುಲ ಬಿಡೆವು; ‘ಡಬಲ್ ಎಂಜಿನ್’ ನಿರ್ಲಕ್ಷ್ಯ: ಅಧ್ಯಕ್ಷರ ನುಡಿ

ಶಾಸ್ತ್ರೀಯ ಸ್ಥಾನ: ತರಾಟೆ

●ರಶ್ಮಿ ಎಸ್.

ಕನಕ-ಶರೀಫ-ಸರ್ವಜ್ಞ ವೇದಿಕೆ (ಹಾವೇರಿ): ‘ಡಬಲ್ ಎಂಜಿನ್ ಸರ್ಕಾರದ ಅನುಕೂಲಗಳ ಬಗ್ಗೆ ಪದೇಪದೆ ಹೇಳುವ ಸರ್ಕಾರ ಕನ್ನಡಕ್ಕೆ ಮಾಡಿದ್ದೇನು’ ಎಂದು ಪ್ರಶ್ನಿಸಿ, 86ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಡಾ.ದೊಡ್ಡರಂಗೇಗೌಡರು ತರಾಟೆಗೆ ತೆಗೆದುಕೊಂಡರು.

ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅಧ್ಯಕ್ಷೀಯ ಭಾಷಣವನ್ನು ಮಾಡುತ್ತ, ಕನ್ನಡ ಶಾಸ್ತ್ರೀಯ ಭಾಷೆಯಾಗಿ ಪ್ರಚಾರ ಮಾಡುವ ನಿಟ್ಟಿನಲ್ಲಿ ಕೇಂದ್ರದಿಂದ ಸಾಕಷ್ಟು ಅನುದಾನ ಬಂದಿಲ್ಲ ಎಂಬುದನ್ನು ಉಲ್ಲೇಖಿಸುತ್ತ ಸ್ಪಷ್ಟವಾಗಿ ಮತ್ತು ತರಾಟೆಗೆ ತೆಗೆದುಕೊಳ್ಳುವ ಧ್ವನಿಯಲ್ಲಿಯೇ ಪ್ರಶ್ನಿಸಿದರು.

ತಮಿಳು ಮಾದರಿಯ ನಿದರ್ಶನ ನೀಡಿದ ಅವರು, ‘ಸಂಸ್ಕೃತ ಮತ್ತು ತಮಿಳು ಭಾಷೆಗೆ ಕಳೆದ ಮೂರು ವರ್ಷಗಳಲ್ಲಿ ಸುಮಾರು ₹40–50 ಕೋಟಿ ಅನುದಾನ ನೀಡಲಾಗಿದೆ. ಕನ್ನಡಕ್ಕೆ ನಾಲ್ಕಾರು ಕೋಟಿಯೂ ದಾಟಿಲ್ಲ, ಶಾಸ್ತ್ರೀಯ ಭಾಷೆಯ ಅಧ್ಯಯನಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸುವಲ್ಲಿ ವಿಫಲರಾಗಿದ್ದೇವೆ, ಇದು ನಮ್ಮ ಜಡತ್ವದ ಕುರುಹು ಅಲ್ಲವೇನು?’ ಎಂದು ಪ್ರಶ್ನಿಸಿದರು.

ಬೆಳಗಾವಿಯ ಒಂದಂಗುಲ ಬಿಡೆವು: ನೆರೆಯ ಮಹಾರಾಷ್ಟ್ರದವರು ಬೆಳಗಾವಿಗಾಗಿ ಮೊಂಡಾಟ ಹಿಡಿದಿದ್ದಾರೆ. ಸಂಯಮವನ್ನು ಕಳೆದುಕೊಳ್ಳದೆಯೇ ನ್ಯಾಯಯುತವಾಗಿ ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕು. ಧೈರ್ಯ ಸ್ಥೈರ್ಯಕ್ಕೆ ಹೆಸರಾದ ರಾಜಾ ಹುಲಿಯಂತಹ ರಾಜಕಾರಣಿ ಬಿ.ಎಸ್. ಯಡಿಯೂರಪ್ಪ, ಚಾಣಾಕ್ಷ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮರಾಠಿಗರು ಸೊಲ್ಲೆತ್ತದಂತೆ ಪರಿಹಾರ ಪಡೆಯಬೇಕು ಎಂದರು.

9ನೇ ಪುಟ ನೋಡಿ

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ನಿಕಟಪೂರ್ವ ಅಧ್ಯಕ್ಷ ಡಾ.ಎಚ್.ಎಸ್.ವೆಂಕಟೇಶಮೂರ್ತಿ ಅವರು ಸಮ್ಮೇಳನಾಧ್ಯಕ್ಷ ಡಾ.ದೊಡ್ಡರಂಗೇಗೌಡ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಮ್ಮುಖದಲ್ಲಿ ಕನ್ನಡ ಧ್ವಜ ಹಸ್ತಾಂತರಿಸಿದರು –ಪ್ರಜಾವಾಣಿ ಚಿತ್ರ

ಕನ್ನಡ ಮಸೂದೆಗೆ ಕಾನೂನು ರೂಪ ಶೀಘ್ರ: ಬೊಮ್ಮಾಯಿ

ಹಾವೇರಿ: ‘ಕನ್ನಡ ಭಾಷೆಗೆ ಹತ್ತು ಹಲವು ಸವಾಲುಗಳಿವೆ. ಈ ಭಾಷೆಯ ಸಂರಕ್ಷಣೆಗೆ ‘ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ-2022’ಕ್ಕೆ ಶೀಘ್ರದಲ್ಲಿಯೇ ಕಾನೂನು ರೂಪ ನೀಡಲಾಗುವುದು. ಕನ್ನಡಿಗರಿಗೆ ಶೇ80ರಷ್ಟು ಕೈಗಾರಿಕೆಗಳ ಉದ್ಯೋಗದಲ್ಲಿ ಪ್ರಾಶಸ್ತ್ಯ ನೀಡಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

9ನೇ ಪುಟ ನೋಡಿ

ವಿಶೇಷ ಪುಟ 9

ಮಠದ ಜಮೀನು ಮಾರಾಟ ಆರೋಪದ ಕ್ರಿಮಿನಲ್ ಪ್ರಕರಣ

ಮುರುಘಾ ಶರಣರಿಗೆ ಬಾಡಿ ವಾರಂಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಹೋಬಳಿಯ ಸೂಲಿಕೆರೆ ಗ್ರಾಮದಲ್ಲಿ ಚಿತ್ರದುರ್ಗ ಮುರುಘಾ ಮಠಕ್ಕೆ ಸೇರಿದ 7 ಎಕರೆ 18 ಗುಂಟೆ ಜಮೀನನ್ನು ಅಕ್ರಮವಾಗಿ ಮಾರಾಟ ಮಾಡಿದ ಕ್ರಿಮಿನಲ್ ಆರೋಪಕ್ಕೆ ಸಂಬಂಧಿಸಿದಂತೆ ಪೀಠಾಧಿಪತಿ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ನಗರದ 4ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿಯವರ (ಎಸಿಎಂಎಂ) ನ್ಯಾಯಾಲಯ ಬಾಡಿ ವಾರಂಟ್ ಹೊರಡಿಸಿದೆ.

ಸದ್ಯ ಚಿತ್ರದುರ್ಗ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಆರೋಪಿಯನ್ನು, ಫೆಬ್ರುವರಿ 9ರಂದು ಕೋರ್ಟ್‌ಗೆ ಹಾಜರುಪಡಿಸುವಂತೆ ನ್ಯಾಯಾಧೀಶರು ಚಿತ್ರದುರ್ಗ ಜಿಲ್ಲಾ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಅವರಿಗೆ ಆದೇಶಿಸಿದ್ದಾರೆ

ಪ್ರಕರಣವೇನು?: ಬೆಂಗಳೂರಿನ ಹೃದಯಭಾಗದ ಗಾಂಧಿನಗರದಲ್ಲಿ ಚಿತ್ರದುರ್ಗ ಮುರುಘರಾಜೇಂದ್ರ ಬೃಹನ್ಮಠಕ್ಕೆ ಸೇರಿದ ‘ತಿಪ್ಪಶೆಟ್ಟಿ’ ಹೆಸರಿನ ಶಾಖಾಮಠ ಇದೆ. ಈ ಮಠಕ್ಕೆ ಬೆಂಗಳೂರು ದಕ್ಷಿಣ ಕೆಂಗೇರಿ ಹೋಬಳಿಯ ಸೂಲಿಕರೆ ಗ್ರಾಮದಲ್ಲಿ ಸರ್ವೆ ನಂಬರ್ 34ರಲ್ಲಿ 7 ಎಕರೆ 18 ಗುಂಟೆ ಜಮೀನಿದೆ. ಮಠದ ಈ ಬೆಲೆಬಾಳುವ ಸ್ವತ್ತು ಇರುವ ಮಠಕ್ಕೆ ಶಿವಮೂರ್ತಿ ಮುರುಘಾ ಶರಣರು ಅಧ್ಯಕ್ಷ.

‘ಈ ಜಮೀನನ್ನು ಶರಣರು ಆನಂದ ಕುಮಾರ್ ಎಂಬುವರಿಗೆ ಅಕ್ರಮವಾಗಿ ಮಾರಾಟ ಮಾಡಿದ್ದಾರೆ’ ಎಂದು ಆರೋಪಿಸಿ ತುಮಕೂರಿನ ಪಿ.ಎಸ್. ಪ್ರಕಾಶ್ ಬಿನ್ ಸಂಗಪ್ಪ ಎಂಬುವರು 2013ರಲ್ಲಿ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು. ಈ ಪ್ರಕರಣದಲ್ಲಿ ಶರಣರು ಮೊದಲ ಆರೋಪಿ ಮತ್ತು ಆನಂದಕುಮಾರ್ ಎರಡನೇ ಆರೋಪಿ.

5ನೇ ಪುಟ ನೋಡಿ

ಪೌಷ್ಟಿಕ ಆಹಾರ ಸೇವಿಸಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

‘ಖಾಸಗಿ ಶಾಲಾ ಶುಲ್ಕ ನಿಗದಿ ಸರ್ಕಾರಕ್ಕೆ ಅವಕಾಶ ಇಲ್ಲ’

ಬೆಂಗಳೂರು: ಖಾಸಗಿ ಅನುದಾನ ರಹಿತ ಶಾಲೆಗಳು ರಾಜ್ಯ ಸರ್ಕಾರ ನಿಗದಿಪಡಿಸಿದ ಕ್ರಮವನ್ನು ಹೊರತುಪಡಿಸಿ ಇತರೆ ಕಾರಣಗಳಿಗೆ ಶುಲ್ಕ ಪಡೆಯುವುದನ್ನು ನಿಷೇಧಿಸುವ ಕರ್ನಾಟಕ ಶಿಕ್ಷಣ ಕಾಯ್ದೆ–1983ರ ಕಲಂ 48 ಅನ್ನು ಹೈಕೋರ್ಟ್ ಅಸಾಂವಿಧಾನಿಕ ಎಂದು ಘೋಷಿಸಿದೆ. ಇದರಿಂದಾಗಿ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳು ಶುಲ್ಕ ವಿಧಿಸುವುದನ್ನು ನಿಯಂತ್ರಿಸುವುದಕ್ಕೆ ಸರ್ಕಾರಕ್ಕಿದ್ದ ಅಧಿಕಾರ ರದ್ದುಗೊಂಡಂತಾಗಿದೆ.

ಕರ್ನಾಟಕ ಖಾಸಗಿ ಶಾಲೆಗಳ ಸಮಿತಿ ಹಾಗೂ ಇತರ ಶಾಲಾ ಆಡಳಿತ ಮಂಡಳಿಗಳು ಸಲ್ಲಿಸಿದ್ದ ಅರ್ಜಿಗಳನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, ‘ಪೂರ್ವ ಪ್ರಾಥಮಿಕ ಅವಧಿಗೆ ಶುಲ್ಕ ವಿಧಿಸುವುದು ಮತ್ತು ವಿಶೇಷ ಅಭಿವೃದ್ಧಿ ಶುಲ್ಕ ಸಂಗ್ರಹಿಸುವುದನ್ನು ನಿಯಂತ್ರಿಸಬಹುದಾದ 1995 ಮತ್ತು 1999ರಲ್ಲಿ ಅನುಷ್ಠಾನಕ್ಕೆ ತಂದಿರುವ ನಿಯಮಗಳು ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ‘ ಎಂದು ಹೇಳಿದೆ.

‘ಮಕ್ಕಳನ್ನು ಲೈಂಗಿಕ ಅಪರಾಧಗಳಿಂದ ರಕ್ಷಿಸುವ ಮತ್ತು ಅವರ ಸುರಕ್ಷತೆ ಕಾಪಾಡುವ ವಿಚಾರಕ್ಕೆ ಸಂಬಂಧಿಸಿದಂತೆ ಸರ್ಕಾರ ಖಾಸಗಿ ಅನುದಾನರಹಿತ ಶಾಲೆಗಳು ಮತ್ತು ಅದರ ಉದ್ಯೋಗಿಗಳ ಮೇಲೆ ಕ್ರಮ ಕೈಗೊಳ್ಳಲು ಅವಕಾಶ ನೀಡುವ ಕಲಂ 5ಎ, ಅನುದಾನ ರಹಿತ ಶಾಲೆಗಳನ್ನು ನಿಯಂತ್ರಿಸುವ ಜಿಲ್ಲಾಧಿಕಾರಿಗಳ ನೇತೃತ್ವದ ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರಕ್ಕೆ ಅಧಿಕಾರ ಒದಗಿಸುವ ಕಲಂ 2(11ಎ), ನಿಗದಿಗಿಂತಲೂ ಹೆಚ್ಚುವರಿ ಶುಲ್ಕ ಪಡೆಯುವುದನ್ನು ನಿಯಂತ್ರಿಸುವ ಕಲಂ 48 ಅನ್ನು ಉಲ್ಲಂಘಿಸುವ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೆ ₹ 10 ಲಕ್ಷದವರೆಗೂ ದಂಡ ವಿಧಿಸುವುದಕ್ಕೆ ಅವಕಾಶ ಕಲ್ಪಿಸುವ ಕಲಂ 124 ಎ ಅನ್ನು ಅಸಾಂವಿಧಾನಿಕ’ ಎಂದು ಸಾರಿದೆ. ಕರ್ನಾಟಕ ಅನುದಾನ ರಹಿತ ಶಾಲೆಗಳ ನಿರ್ವಹಣಾ ಸಂಘ (ಕುಸ್ಮಾ) 1995ರಲ್ಲಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ, 2022ರ ಡಿಸೆಂಬರ್ 1 ರಂದು ಕರ್ನಾಟಕ ಶಿಕ್ಷಣ ಕಾಯ್ದೆ–1983ರ ಹಲವು ಕಲಂಗಳನ್ನು ಅಸಾಂವಿಧಾನಿಕ ಎಂದು ಘೋಷಿಸಿತ್ತು.

ಹೆಜ್ಜೇನು ದಾಳಿ: ಕೋಟಿ ಮೌಲ್ಯದ 2 ಕುದುರೆ ಸಾವು

ಕುಣಿಗಲ್: ಹೆಜ್ಜೇನು ದಾಳಿಗೆ ಸಿಲುಕಿ ಇಲ್ಲಿನ ಸ್ಟಡ್ ಫಾರಂನಲ್ಲಿ ವಂಶಾಭಿವೃದ್ಧಿಗೆ ಬಳಸುತ್ತಿದ್ದ ತಲಾ ₹ 1 ಕೋಟಿಗೂ ಹೆಚ್ಚು ಮೌಲ್ಯದ 2 ಕುದುರೆಗಳು ಶುಕ್ರವಾರ ಮೃತಪಟ್ಟಿವೆ.

ಅಮೆರಿಕ ಮೂಲದ ಏರ್ ಸಪೋರ್ಟ್ (15) ಮತ್ತು ಐರ್ಲೆಂಡ್ ಮೂಲದ ಸನಸ್ ಪರ್ ಅಕ್ಷಮ್ (10) ಹೆಸರಿನ ಕುದುರೆಗಳು ಮೃತಪಟ್ಟಿವೆ.

ಗುರುವಾರ ಬೆಳಿಗ್ಗೆ ಬಯಲಿನಲ್ಲಿ ಮೇಯುವಾಗ ಏಕಾಏಕಿ ಹೆಜ್ಜೇನು ದಾಳಿ ಮಾಡಿವೆ. ಸ್ಟಡ್ ಫಾರಂ ವ್ಯವಸ್ಥಾಪಕ ಡಾ.ದಿನೇಶ್ ಮತ್ತು ಮನೋಜ್ ನೇತೃತ್ವದ ತಂಡ ತೀವ್ರ ಅಸ್ವಸ್ಥಗೊಂಡಿದ್ದ ಕುದುರೆಗಳಿಗೆ ಚಿಕಿತ್ಸೆ ನೀಡಿತು. ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿವೆ. ಏರ್ ಸಪೋರ್ಟ್ ಕುದುರೆಗೆ ಜನಿಸಿದ್ದ ‘ವಾರ್ ಹ್ಯಾಮರ್’ ಹೆಸರಿನ ಕುದುರೆಯು ಏಷ್ಯಾದ ಪ್ರತಿಷ್ಠಿತ ಇಂಡಿಯನ್ ಡರ್ಬಿ ರೇಸ್‌ನಲ್ಲಿ ಗೆಲುವು ಸಾಧಿಸಿತ್ತು.

THE CAMPCO LTD
Varanasi Tower,P.B No.223,Mission street, Mangaluru-575001, D.K., Karnataka
PBX:0824-2888200 Email:info@campco.org,
Web: www.campco.org, www.campcochocolates.com

INVITATION FOR SUPPLY OF ELECTRICAL POWER UNITS

THE CAMPCO Ltd,Mangaluru invites bids/tenders for selection of seller for the supply of 20 lakh units electrical power per year for consumption at Campco Chocolate Factory, Puttur-574202 Karnataka in different time slots on long term basis.
(For details visit our website www.campco.org/others/tender, https://campcochocolates.com/)

Sd- The Managing Director

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ
ಕ್ರ.ಸಂಕಿಮ್ಸ್/ಪೂ.ವಿ.(1)/ಡಿ/575/2022-23 ದಿನಾಂಕ : 03-01-2023

ಇ–ಟೆಂಡರ ಪ್ರಕಟಣೆ (ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ)

ನಿರ್ದೇಶಕರು, ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ ಇವರು ಅರ್ಹ ಟೆಂಡರದಾರರಾದ ಉತ್ಪಾದಕರು, ಅಧಿಕೃತ ಏಜೆಂಟ್ಸ್ ಮತ್ತು ಅಧೀಕೃತ ವಿತರಕರಿಂದ ಕಿಮ್ಸ್ ಆಸ್ಪತ್ರೆಗೆ ಔಷಧ (ಇಂಜೆಕ್ಷನ್ಸ & ಟ್ಯಾಬ್ಲೇಟ್ಸ್) ಸಾಮಗ್ರಿ ಪೂರೈಸುವದಕ್ಕಾಗಿ ಕರ್ನಾಟಕ ಪಾರದರ್ಶಕ ಸಾರ್ವಜನಿಕ ಪೂರೈಕೆ ಕಾಯ್ದೆ 1999 ಶಾಸನ 2000 ಅನ್ವಯ ಇ–ಟೆಂಡರ ಮೂಲಕ ಟೆಂಡರ್ ಪ್ರಕಟಣೆ ಆಹ್ವಾನಿಸಲಾಗಿದೆ. ಈ ದಾಖಲೆಗಳನ್ನು ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ https://www.e-proc. karnataka.gov.in ಮೂಲಕ ಮಾಹಿತಿ ಪಡೆಯಬಹುದು.

ಸಹಿ/– (ನಿರ್ದೇಶಕರು)
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ.

ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ನಂ.1, ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ: 080–22255210
ಐಎಫ್‌ಟಿ ಸಂ: ಕಾಪಾಅ/ಕಟ್ಟಡ–1/ಸಅ–1/2022–23/46 ದಿನಾಂಕ: 05.01.2023

ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ)

ಮೇಲ್ಕಂಡ ಇಲಾಖೆಯು ಬೆಂಗಳೂರಿನ ಕೆಎಎಸ್ ಅಧಿಕಾರಿಗಳ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಲ್ಲಿ ಹಾಲಿ ಕಟ್ಟಡದ ನವೀಕರಣಗೊಳಿಸುವ ಉದ್ದೇಶಕ್ಕೆ ಸಲಹಾ ಸೇವೆಗಳು ಮತ್ತು ಹೆಚ್ಚುವರಿ ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್ ವೆಚ್ಚ: **ಇ–ಪೋರ್ಟಲ್‌ನಲ್ಲಿ ತಿಳಿಸಿರುವಂತೆ.** ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ **ದಿನಾಂಕ: 20.01.2023ರಂದು ಅಥವಾ ಅದರೊಳಗೆ** ಸಲ್ಲಿಸುವುದು. ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ನಿಂದ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ಉನಿ-ಸಿ.ಪಿ/3911/ಎಂಸಿಎ/2022-23

ಕಾರ್ಯಪಾಲಕ ಇಂಜನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.
ಟೆಂಡರ್ ಪ್ರಕಟಣೆ ಸಂಖ್ಯೆ: 40/2022–23 ದಿನಾಂಕ : 04.01.2023

ಟೆಂಡರ್ ಪ್ರಕಟಣೆ

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಒಳಪಡುವ ತರೀಕೆರೆ, ಕೊಪ್ಪ ಹಾಗೂ ತರೀಕೆರೆ ಲೋಕೋಪಯೋಗಿ ಇಲಾಖೆ ಉಪವಿಭಾಗಗಳಿಗೆ ಒಳಪಡುವ ಒಟ್ಟು 05 ಕಾಮಗಾರಿಗಳಿಗೆ ಇ–ಪ್ರೋಕ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document-KW-1, 2,3 & 4 ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು, ಗುತ್ತಿಗೆದಾರರಿಗೆ ಅಧಿನಿಯಮ 3 ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಠ ಅಂದಾಜು ಮೊತ್ತ ರೂ.10.90 ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ.100.00 ಲಕ್ಷಗಳು ಆಗಿರುತ್ತವೆ. ಇ–ಪ್ರೋಕ್ ಮೂಲಕ ಟೆಂಡರ್ ಸಲ್ಲಿಸಬೇಕಾಗಿರುವ 5 ಕಾಮಗಾರಿಗಳಲ್ಲಿ (4–ಕಾಮಗಾರಿಗಳಿಗೆ ದಿ:21.01.2023, ಹಾಗೂ 1–ಕಾಮಗಾರಿಗೆ ದಿ: 13.01.2023 ಸಂಜೆ 4.00 ಗಂಟೆಯೊಳಗೆ) ಟೆಂಡರ್ ಸಲ್ಲಿಸಬೇಕು, ಈ ದಿನಾಂಕಗಳಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು, ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಕರಾಸಕೈಅನಿನಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೋಂದಣಿ ಸಂಖ್ಯೆ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560 010.
ಫೋನ್: 080–2340 7011 ಇಂದ 25, ಫ್ಯಾಕ್ಸ್: 91–2314 3566/2338 9070 ತಂತಿ: ಮೈಸ್ಮಾಲ್ ಕಾರ್ಪ್
ಇ–ಮೇಲ್: kssidcho@karnataka.gov.in ವೆಬ್‌ಸೈಟ್: www.kssidc.co.in
ಸಂಖ್ಯೆ: ಕರಾಸಕೈಅನಿನಿ/ಅಭಿಯಂತರರು/ಹೊರಗುತ್ತಿಗೆ/2022–24 ದಿನಾಂಕ: 06.01.2023

ಹೊರಸಂಪನ್ಮೂಲ ಆಧಾರದ ಮೇಲೆ ಸಿವಿಲ್ ಹಾಗೂ ಎಲೆಕ್ಟ್ರಿಕಲ್ ಅಭಿಯಂತರರುಗಳ ಸೇವೆಯನ್ನು ಒದಗಿಸಲು ಟೆಂಡರ್ ಆಹ್ವಾನ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕೆ.ಎಸ್.ಎಸ್.ಐ.ಡಿ.ಸಿ) ಗೆ ಒಂದು ವರ್ಷದ ಅವಧಿಗೆ ಹೊರಸಂಪನ್ಮೂಲ ಆಧಾರಿತ ಸಿವಿಲ್ ಹಾಗೂ ಎಲೆಕ್ಟ್ರಿಕಲ್ ಅಭಿಯಂತರರ ಸೇವೆ ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು e-proc portal ನಲ್ಲಿ ದಿನಾಂಕ 09.01.2023 ರಿಂದ ವೀಕ್ಷಿಸಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 24.01.2023 ಸಂಜೆ 4.30 ಗಂಟೆಯೊಳಗೆ. ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್ www.kssidc.co.in ಮತ್ತು ಇ–ಪ್ರೊಕ್ಯೂರ್‌ಮೆಂಟ್ ವಿಳಾಸ https://eproc.karnataka.gov.in. ಕ್ಕೆ ಸಂಪರ್ಕಿಸಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು,
ಕರಾಸಕೈಅನಿನಿ, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/3932/ಆಕಾರ್/22–23

TAMILNADU NEWSPRINT AND PAPERS LIMITED
Unit - 1: Kagithapuram - 639 136. Karur Dist. Tamil Nadu. Ph.: 04324 - 277001 (10 Lines)
Unit - 2: Mondipatti - 621 306, Trichy District, Tamil Nadu. Ph.: 04332 - 261600

NOTICE INVITING TENDERS

Tender No.	Material Description	Due date
222313 006013	Supply of debarked Eucalyptus pulpwood from open market sources of Karnataka to TNPL Unit-I at Kagithapuram, Karur district, Tamilnadu	13.01.2023
222323 003713	Supply of debarked Eucalyptus pulpwood from open market sources of Karnataka to TNPL Unit-2 at Mondipatti, Trichy district, Tamilnadu	18.01.2023
Email:	purchase.wood@tnpl.co.in	

Corrigendum if any will be issued by TNPL Website only. Detailed requirements, Period, Terms & conditions, Tender fee, EMD, etc., are available in tender document at our websites: www.tnpl.com / www.tenders.tn.gov.in

DIPR/149/Tender/2023 *TNPL - Maker of bagasse based eco-friendly Paper*

“சோதனை கடந்து சுதந்திரம் அடைந்தோம், சாதனை புரிந்து சரித்திரம் படைப்போம்.”

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN - U04010KA2002SGC030438

ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ)
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಸಂ. ಮುಇಂ(ವಿ)/ಕೇವ/ಅಇಂವಿ(ಕ)/ಸಕಾನಿಇಂ–1/2022–23/8745–46 ದಿನಾಂಕ : 05–01–2023

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಇವರು, **ಶೇಕಡಾವಾರು ಕೋಟಿಂಗ್ ಆಧಾರದ ಮೇಲೆ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ 11ಕೆವಿ ಮಾರ್ಗಗಳನ್ನು ವಿಸ್ತರಿಸಿ, 25ಕೆವಿಎ 4 ಸ್ಟಾರ್ ದರ್ಜೆಯ ವಿತರಣಾ ಪರಿವರ್ತಕಗಳನ್ನು ಸ್ಥಾಪಿಸಿ ಮತ್ತು ಎಲ್‌ಟಿ ಮಾರ್ಗ 3 ಫೇಸ್ 4 ವೈರ್‌ನ ವಿಸ್ತರಣೆಯಿಂದ ಸಕ್ರಮಗೊಳಿಸಿದ ಐಪಿ ಸೆಟ್‌ಗಳಿಗೆ ವಿದ್ಯುತ್ ಮೂಲಸೌಕರ್ಯವನ್ನು ಒದಗಿಸುವುದಕ್ಕಾಗಿ ಈ ಕೆಳಕಂಡ ವಿಚಾರಣೆ ಸಂಖ್ಯೆಗೆ ಅನ್ವಯಿಸುವಂತೆ ಮರು–ಟೆಂಡರ್ ಆಹ್ವಾನಿಸಿದೆ.**

ವಿಚಾರಣೆ ಸಂಖ್ಯೆ : ಮುಇಂ(ವಿ)/ಕೇವ/ಅಇಂವಿ(ಕ)/ಸಕಾನಿಇಂ–1/2022–23/ಟಿಟಿಕೆ–005/ಕರೆ–3. ಉಪ ವಿಭಾಗದ ಹೆಸರು : ಎಡಿಯೂರು

ಬಿಡ್ ದಾಖಲೆಗಳ ಲಭ್ಯತೆ : 07–01–2023 ರಂದು 12:00 ಗಂಟೆ ನಂತರ. **ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ :** 21–01–2023 ರಂದು 17:00 ಗಂಟೆಗೆ. **ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ :** 23–01–2023 ರಂದು 11:00 ಗಂಟೆಗೆ. **ಬಿಡ್–ಪೂರ್ವ ಸಭೆಯ ದಿನಾಂಕ :** 12–01–2023 ರಂದು 11:00 ಗಂಟೆಗೆ. **ಬಿಡ್ ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ :** 16–01–2023 ರಂದು 17:00 ಗಂಟೆಗೆ ಮುಂಚಿತವಾಗಿ. **ಬಿಡ್–ಪೂರ್ವ ಸಭೆಯ ಸ್ಥಳ :** ಮುಖ್ಯ ಇಂಜನಿಯರ್‌ರವರ ಕಛೇರಿ, ಬೆಸ್ಕಾಂ, ಆರ್‌ಟಿಓ ಕಛೇರಿ ಎದುರು, ತುರುವನೂರು ರಸ್ತೆ, ಚಿತ್ರದುರ್ಗ – 577501.

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ http://www.e-proc.karnataka.gov.in ಮೂಲಕ ಟೆಂಡರ್‌ಗಳನ್ನು ಪಡೆಯಬಹುದು. ಇಚ್ಛೆಯುಳ್ಳ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ನೋಂದಾಯಿಸಿಕೊಳ್ಳಬೇಕು. ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ +91–8046010000, +91–8022631200 ಅಥವಾ ಇ–ಮೇಲ್ support@ihelpdsk.com ನಿಂದ ಕೆಲಸದ ಸಮಯದಲ್ಲಿ ಸಹಾಯವನ್ನು ಪಡೆಯಬಹುದು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/– ಮುಖ್ಯ ಇಂಜನಿಯರ್ (ವಿದ್ಯುತ್),
ಕಾ & ಪಾ ವಲಯ, ಚಿತ್ರದುರ್ಗ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜನಿಯರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ.
ಸಂಖ್ಯೆ:ಕಾ.ಇಂ:ಗ್ರಾಕುನೀ&ನೈ:ವಿ.ಮಂ:JJMTENDER22–23:2022–23/2407
ದಿನಾಂಕ:02–01–2023.

1.ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:12/2022–23 (ಏಕ&ದ್ವಿ–ಲಕೋಟೆ ಪದ್ಧತಿ)2ನೇ ಕರೆ
2.ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:13/2022–23 (ಏಕ&ದ್ವಿ–ಲಕೋಟೆ ಪದ್ಧತಿ)2ನೇ ಕರೆ
(e-procurement portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರಿಂದ ಜೆ.ಜೆ.ಎಂ ಯೋಜನೆಯಡಿ ಮಂಡ್ಯ ಜಿಲ್ಲೆ ಮದ್ದೂರು, ನಾಗಮಂಗಲ, ಶ್ರೀರಂಗಪಟ್ಟಣ, ಪಾಂಡವಪುರ ಮತ್ತು ಮಂಡ್ಯ ತಾಲ್ಲೂಕಿನ ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸುವ (FHTC) ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ದರ್ಜೆಯ ಗುತ್ತಿಗೆದಾರರಿಂದ ಐಟಂವಾರು ಮರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ **ರೂ.318.46 ಲಕ್ಷಗಳು.** ಪೂರ್ವಭಾವಿ ಸಭೆ ದಿನಾಂಕ : **06.01.2023 ಸಮಯ: ಬೆಳಿಗ್ಗೆ 11:00 ಗಂಟೆಗೆ (ಸ್ಥಳ:ಕಾ.ಇಂ ಕಛೇರಿ, ಗ್ರಾ.ಕು.ನೀ&ನೈ ವಿಭಾಗ, ಮಂಡ್ಯ),** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **10.01.2023 ಸಂಜೆ:5:30 ಗಂಟೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 11.01.2023 ಸಂಜೆ: 05:35 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 16.01.2023 ಬೆಳಿಗ್ಗೆ 11:00 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ https://eproc.karnataka.gov.in ವೆಬ್‌ಸೈಟ್‌ನಲ್ಲಿ ಅಥವಾ ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. **ದೂರವಾಣಿ ಸಂಖ್ಯೆ: 08232–222363.**

ಸಹಿ/–ಕಾರ್ಯಪಾಲಕ ಇಂಜನಿಯರರು,
ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ.
ವಾಸಾಸಂಇ/ಸನಿ–ಮಂ/ಎಂಸಿ&ಎ/572/2022–23

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.
ಸಂ:ಕಾ.ಸಾ.ಚಿ/ಪಿ.ಬಿ–1/ಅ.ಟೆಂಡರ್ ಅವಧಿ ವಿಸ್ತರಣೆ/2022–23 ದಿ: 04.01.2023

ಅಲ್ಪಾವಧಿ ಟೆಂಡರ್ ಅವಧಿ ವಿಸ್ತರಣೆ

ಉಲ್ಲೇಖ:ಸಂ:ಕಾ.ಸಾ.ಚಿ/ಪಿ.ಬಿ–1/ಟೆಂಡರ್ ಪ್ರಕಟಣೆ–ಐ.ಎಫ್.ಟಿ–36/2022–23/ ದಿನಾಂಕ: 23.12.2022

ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಪಿಪಿಪಿ, ಆಕ್ಟ್–2000 ನಿಯಮದಂತೆ, ಹಾಗೂ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ (ಡಬ್ಲ್ಯೂ 4 ನಿಬಂಧನೆಗಳಿಗೊಳಪಟ್ಟಂತೆ ಐ.ಎಫ್.ಟಿ–36ರಲ್ಲಿ ಕರೆಯಲಾದ 03 ಕಾಮಗಾರಿಗಳನ್ನು ತಾಂತ್ರಿಕ ಕಾರಣಗಳಿಂದ ಇ–ಪೋರ್ಟನಲ್ಲಿ ಪ್ರಚುರ ಪಡಿಸಲಾಗಿರುವದಿಲ್ಲ. ಆದ್ದರಿಂದ ಐ.ಎಫ್.ಟಿ–36 ರಲ್ಲಿ ಕರೆಯಲಾದ 03 ಕಾಮಗಾರಿಗಳ ಪ್ರಚುರವನ್ನು ಈ ಕೆಳಗಿನಂತೆ ನಿಗಧಿಪಡಿಸಲಾಗಿರುತ್ತದೆ. ದಿನಾಂಕ: 04–01–2023 ರಿಂದ ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್, ಬಗ್ಗೆ ವಿಚಾರಿಸಲು ಮಾಹಿತಿ ಪಡೆಯಲು ಕೊನೆಯ ದಿನಾಂಕ: 17–01–2023 ಸಾಯಂಕಾಲ 5.30 ರವರೆಗೆ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 18–01–2023 ರ ಸಾಯಂಕಾಲ 4.00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 19–01–2023 ಸಾಯಂಕಾಲ 04–30 ಗಂಟೆಯ ನಂತರ (ಸಾಧ್ಯವಾದಲಿ), ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ, ದಿನಾಂಕ: 20–01–203 ಸಾಯಂಕಾಲ 04–30 ಗಂಟೆಯ ನಂತರ (ಸಾಧ್ಯವಾದಲ್ಲಿ) ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194–231811) .ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ: 080–25501216/080–25501227 ರಿಂದ ಪಡೆಯಬಹುದು,

DIPR/CTA/MCA/845/2022-23

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

Government of Karnataka
Office of the Commissioner,
Hindu Religious Institutions and Charitable Endowments,
Sri Minto Anjaneya Bhavana, 4th Floor, Chamarajpet, Bangalore-18

E-AUCTION FOR INVESTMENT OF SURPLUS FUNDS IN FIXED DEPOSITS (CALLABLE) THROUGH E-PORTAL OF GOVERNMENT OF KARNATKA

e-Auction Document - ACT 2/CR1/2022-23 Date : 03.01.2023

(e-Auction Notification, Eligibility Criteria and Terms and Conditions)
SCHEDULE OF EVENTS FOR e-AUCTION 2/CR 2/2022-23

Particulars : 1) Date of e-Auction Notification, **Date : 05.01.2023**
2) Last Date to upload the Eligibility Criteria in Annexure-A & Declaration in Annexure-B & Annexure-C in the e-portal, **Date : 15.01.2023 on or before 17.00 hrs. 3)** Evaluation of Bankers based on documentary evidence : **Date 17.01.2023. 4)** Live Bidding, **Date : 19.01.2023 11.30 to 12.30 Hrs.**
For any further details please logon to: https://eproc.karnataka.gov.in
Note : For any further information and announcement regarding this tender please contact office of the Commissioner.

Sd/-
Commissioner
Hindu Religious Institutions and Charitable Endowments, Bangalore
DIPR/CP/SSC/3915/2022-23

ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ
ದೂರವಾಣಿ : 08354–235042, ಇ–ಮೇಲ್: bgkeezpe@yahoo.com
ಸಂ: ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ–1/ಟೆಂಡರ್/22–23/4604 ದಿ: 05–01–2023

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಏಕ–ಲಕೋಟೆ ಟೆಂಡರ್ ಮರುಕರೆ ಪ್ರಕಟಣೆ ಕೆ.ಡಬ್ಲ್ಯೂ-1 & 2 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ 2021–22ನೇ ಸಾಲಿನ **ಲೆಕ್ಕಶೀರ್ಷಿಕೆ:–5054 ರಡಿ ಬಾಗಲಕೋಟೆ ಜಿಲ್ಲೆ ಬಾಗಲಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ರಸ್ತೆ ಕಾಮಗಾರಿಗಳು ರೂ. 25.00 ಕೋಟಿ ಅನುದಾನದಡಿ (ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ/56 (15)–1/ಆರ್‌ಆರ್‌ಸಿ 2022 (ಇ–697183), ಬೆಂಗಳೂರು ದಿನಾಂಕ : 18–03–2022) ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ/56(15)–1–1/ ಆರ್‌ಆರ್‌ಸಿ 2022 (ಇ–697183), ಬೆಂಗಳೂರು ದಿನಾಂಕ : 19–07–2022 ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಬಾಗಲಕೋಟೆ ಇವರ ಕಛೇರಿ ಪತ್ರ ಸಂಖ್ಯೆ : ಜಿಪಂಬಾ/ಅ/5054/ಬಾ.ಮ/ವಿನಿದಿ /43/ಇ–8855/2022–23/2792 ದಿನಾಂಕ : 29–09–2022 ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ಮತ್ತು ಹುನಗುಂದ ಮತಕ್ಷೇತ್ರ ವ್ಯಾಪ್ತಿಯ ಹುನಗುಂದ ತಾಲೂಕಿನ ಈ ಕೆಳಗಿನ ಕಾಮಗಾರಿಗಳಿಗೆ Standard Tender Document KW-1&2** ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000 ರ ಪ್ರಕಾರ ಆ್ಯಕ್ಟ್ 2000ರ ನಿಯಮದಂತೆ ಏಕ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನ್‌ಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಯ ಇಂಡೆಂಟ್ ನಂ.: 96297/ಕರೆ–2 ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ (ರೂ. 40.00 ಲಕ್ಷಗಳ ಮಿತಿಗೊಳಪಟ್ಟು) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 13–01–2023 ರ ಸಾಯಂಕಾಲ 5.30 ಗಂಟೆವರೆಗೆ. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ಸಾಧ್ಯವಾದಲ್ಲಿ ತೆರೆಯುವ ದಿನಾಂಕ ಮತ್ತು ಸಮಯ : 16–01–2023 ರಂದು ಮುಂಜಾನೆ 11.00 ಗಂಟೆಯ ನಂತರ.

ಸೂಚನೆ : ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್: http://www.eprocurment.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ) ವಿಭಾಗ,
ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟ/751/ಮಣಿಪಾಲ್/2022–23

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ)
ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನೆ ವಿಭಾಗ ನಂ.4, ಹೊಸದುರ್ಗ, ಚಿತ್ರದುರ್ಗ (ಜಿ)
ಫೋನ್/ಫ್ಯಾಕ್ಸ್ 08199–230018. ಇ–ಮೇಲ್: eeubpdvn4@gmail.com
ಸಂಖ್ಯೆ : ಕಾಇಂ/ವಿಜನಿನಿ/ಭಮೇಯೋ/ವಿ–4/ಹೊ/ಟೆಂಡರ್25/2022–23/1499
ದಿನಾಂಕ : 03.01.2023

ಟೆಂಡರ್ ತಿದ್ದುಪಡಿ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಉಲ್ಲೇಖ: (1) ಟೆಂಡರ್ ಅಧಿಸೂಚನೆ ಸಂಖ್ಯೆ: No:EE/VJNL/UBP-Dv-4/HSD/TND-25/TBC Drip/P-III/2022-23/ Date:16/11/2022. (2) ಟೆಂಡರ್ ತಿದ್ದುಪಡಿ ಅಧಿಸೂಚನೆ ಸಂಖ್ಯೆ: No:EE/VJNL/UBP-Dv-4/HSD/TND-25/TBC Drip/P-III/2022-23/1276 Date:06.12.2022. (3) ಟೆಂಡರ್ ತಿದ್ದುಪಡಿ ಅಧಿಸೂಚನೆ ಸಂಖ್ಯೆ: No:EE/VJNL/UBP-Dv-4/HSD/TND-25/TBC Drip/P-III/2022-23/1375 Date:21.12.2022. (4) ಟೆಂಡರ್ ತಿದ್ದುಪಡಿ ಅಧಿಸೂಚನೆ ಸಂಖ್ಯೆ: No:EE/VJNL/UBP-Dv-4/HSD/TND-25/TBC Drip/P-III/2022-23/1498 Date:03.01.2023

ಈ ಮೇಲಿನ ಉಲ್ಲೇಖಿತ ಪತ್ರ (1) ರಲ್ಲಿ ಟೆಂಡರ್ ಅಧಿಸೂಚನೆಯಲ್ಲಿ ಪ್ರಕಟಣೆಗೊಳಿಸಿದ **“Survey, Design, Supply, Installation, Testing & commissioning of Micro Irrigation Syste under TBC comprising Gravity Bulk Feeders, Construction of SCPH, Supplying & installation of Pumping machineries, Electrical substation, Electrical power line& other appurtenant works including construction of PDN & Drip irrigation system including SCADA and Automation for providing irrigation facility to 8150.44 Ha under Block- 4 & filling up of 25 Nos. tanks coming under TBC of UBP with all accessories O&M for 5 years after the date of completion and transfer (BOMT) on Turnkey basis Excluding Drip laterals and including sub-main and Drip Raisers”-TBC-Drip-Package-III.” (Indent No.2380)** ಕಾಮಗಾರಿಗೆ ಸಂಬಂಧಿಸಿದಂತೆ ತಾಂತ್ರಿಕ ಕಾರಣಗಳಿಂದ ಉಲ್ಲೇಖಿತ ಪತ್ರ (2) ಹಾಗೂ (3) ರಲ್ಲಿ ಮುಂದೂಡಲಾಗಿತ್ತು, **ತಾಂತ್ರಿಕ ಕಾರಣಗಳಿಂದ, ಟೆಂಡರ್ ನಲ್ಲಿ ವ್ಯಾಪಕ ಭಾಗವಹಿಸುವಿಕೆಯ ಮತ್ತು ಸ್ಪರ್ಧಾತ್ಮಕ ದರಗಳನ್ನು ಪಡೆಯುವ ಉದ್ದೇಶದಿಂದ** ಈ ಕೆಳಕಂಡ ದಿನಾಂಕಗಳನ್ನು ಮರು ನಿಗದಿಪಡಿಸಲಾಗಿದೆ. (1) ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿ: **21–01–2023** ರಂದು ಅಪರಾಹ್ನ **16.30** ಘಂಟೆವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **23–01–2023** ರಂದು ಬೆಳಗ್ಗೆ **11.00** ಘಂಟೆಗೆ ಕಾರ್ಯಪಾಲಕ ಅಭಿಯಂತರರು, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.04, ಹೊಸದುರ್ಗ ಇವರ ಕಛೇರಿಯಲ್ಲಿ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್‌ನಲ್ಲಿ ಅನುಮೋದನೆಯಾದ ಗುತ್ತಿಗೆದಾರರಿಗೆ ಪ್ರತ್ಯೇಕವಾಗಿ ತಿಳಿಸಲಾಗುವುದು.

DIPR/CTA/MCA/846/2022-23

ಸಹಿ/– **ಕಾರ್ಯಪಾಲಕ ಇಂಜಿನಿಯರ್,** ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.04, ಹೊಸದುರ್ಗ

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 009.
ದೂ: 080–22341230/35 ಇ–ಮೇಲ್: bmicapa@gmail.com
ಸಂಖ್ಯೆ: ಬಿಎಂಐಸಿಎಪಿಎ/ಭೂಉಬ–02/35/2022–23 ದಿನಾಂಕ: 06.01.2023

ಸಾರ್ವಜನಿಕ ಪ್ರಕಟಣೆ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಶ್ರೀ ರವಿ.ಆರ್ ಬಿನ್ ರುದ್ರಪ್ಪ ಹಾಗೂ ಯಮುನಾ.ಎ ಬಿನ್ ಕೃಷ್ಣಮೂರ್ತಿ ಇವರುಗಳು ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ವಾಜರಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 12/6ರ 01ಎ–10ಗು ವಿಸ್ತೀರ್ಣದ ಪ್ರದೇಶಕ್ಕೆ ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ **“ವ್ಯವಸಾಯ”** ವಲಯದಿಂದ **“ವಸತಿ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರು ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ.

1. ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ದೊರಕುತ್ತವೆ.
2. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ.
4. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಅವುಗಳನ್ನು ಈ ಪ್ರಕಟಣೆಯ ದಿನಾಂಕದಿಂದ 16 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಸದಸ್ಯ–ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.
ವಾಸಾಸಂಇ/ವಾಪ್ರ/3934/ಎಎಎ/22–23

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಅಟಲ್ ಬಿಹಾರಿ ವಾಜಪೇಯಿ ಸಂಕೀರ್ಣ, ಕೇಂದ್ರ ಕಛೇರಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–27.
ಸಂ: ಬೆಂಮಸಾಸಂ/ಕೇಕ/ಮಾಸಂಅ/ಎಸ್‌ಸಿಎಸ್‌ಪಿ/ಟಿಎಸ್‌ಪಿ/743/2022–23 ದಿನಾಂಕ: 06.01.2023

ಪತ್ರಿಕಾ ಪ್ರಕಟಣೆ

ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್.ಸಿ.ಎಸ್.ಪಿ) ಹಾಗೂ ಗಿರಿಜನ ಉಪ ಯೋಜನೆ (ಟಿ.ಎಸ್.ಪಿ) ಯೋಜನೆಯಡಿ ಪರಿಶಿಷ್ಟ ಜಾತಿ(ಎಸ್.ಸಿ) ಮತ್ತು ಪರಿಶಿಷ್ಟ ಪಂಗಡ(ಎಸ್.ಟಿ)ಗಳ ಅಭ್ಯರ್ಥಿಗಳಿಗೆ **ಉಚಿತವಾಗಿ ಲಘು ಮತ್ತು ಭಾರಿ ವಾಹನ ಚಾಲನ ತರಬೇತಿ** ನೀಡಿ ಪ್ರಾದೇಶಿಕ ಸಾರಿಗೆ ಕಛೇರಿಯಿಂದ **ಚಾಲನ ಅನುಜ್ಞಾಪತ್ರ/ಬ್ಯಾಡ್ಜ್** ನೀಡುವ ಕಾರ್ಯಕ್ರಮವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿರುತ್ತದೆ. ಸದರಿ ತರಬೇತಿಯನ್ನು ಪಡೆಯಲು ಇಚ್ಛಿಸುವ ಪರಿಶಿಷ್ಟ ಜಾತಿ(ಎಸ್.ಸಿ) ಮತ್ತು ಪರಿಶಿಷ್ಟ ಪಂಗಡ(ಎಸ್.ಟಿ)ಗಳ ಅಭ್ಯರ್ಥಿಗಳು ಹೊಂದಿರಬೇಕಾದ ಕನಿಷ್ಠ ಅರ್ಹತೆಗಳು/ ಸಲ್ಲಿಸಬೇಕಾಗಿರುವ ದಾಖಲಾತಿಗಳ ವಿವರ ಕೆಳಕಂಡಂತೆ ಇರುತ್ತದೆ.

➢ **ಲಘು ವಾಹನ ಚಾಲನಾ ತರಬೇತಿ (ಕಾರ್/ಜೀಪ್):**
- ಕನಿಷ್ಠ 18 ವರ್ಷ ವಯೋಮಿತಿ ತುಂಬಿರಬೇಕು. ಗರಿಷ್ಠ: 45 ವರ್ಷ.
- ಜನ್ಮ ದಿನಾಂಕದ ಬಗ್ಗೆ ಜನನ ಪ್ರಮಾಣಪತ್ರ ಅಥವಾ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಶಾಲಾ ವರ್ಗಾವಣಾ ಪ್ರಮಾಣ ಪತ್ರ ಅಥವಾ ನೋಟರಿಯಿಂದ ಪ್ರಮಾಣ ಪತ್ರ.
- ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ.
- ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ–5.

➢ **ಭಾರಿ ವಾಹನ ಚಾಲನಾ ತರಬೇತಿ (ಬಸ್):**
- ಕನಿಷ್ಠ 20 ವರ್ಷಗಳ ವಯೋಮಿತಿ ಪೂರೈಸಿರಬೇಕು. ಗರಿಷ್ಠ: 45 ವರ್ಷ.
- ಲಘು ವಾಹನ ಚಾಲನಾ ಅನುಜ್ಞಾಪತ್ರ ಪಡೆದು ಒಂದು ವರ್ಷ ಪೂರೈಸಿರಬೇಕು.
- ಜನ್ಮ ದಿನಾಂಕದ ಬಗ್ಗೆ ಜನನ ಪ್ರಮಾಣಪತ್ರ ಅಥವಾ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಶಾಲಾ ವರ್ಗಾವಣಾ ಪ್ರಮಾಣ ಪತ್ರ ಅಥವಾ ನೋಟರಿಯಿಂದ ಪ್ರಮಾಣ ಪತ್ರ.
- ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ.
- ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ–5.

❖ **ಅರ್ಹ ಎಸ್.ಸಿ/ಎಸ್.ಟಿ ಅಭ್ಯರ್ಥಿಗಳಿಗೆ ಲಘು/ಭಾರಿ ವಾಹನ ಚಾಲನಾ ತರಬೇತಿ (30 ದಿನಗಳು) ಮತ್ತು ತರಬೇತಿಯ ಅವಧಿಯಲ್ಲಿ ವಸತಿ ಮತ್ತು ಊಟೋಪಚಾರದ ವ್ಯವಸ್ಥೆಯನ್ನು ಉಚಿತವಾಗಿ ನೀಡಲಾಗುತ್ತದೆ.**

ಮೇಲಿನ ಅರ್ಹತೆ ಹೊಂದಿದ್ದು, ಆಸಕ್ತಿ ಇರುವ **ಪರಿಶಿಷ್ಟ ಜಾತಿ/ಪಂಗಡದ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು** ತಮ್ಮ ಮೂಲ ದಾಖಲೆ ಮತ್ತು 02 ಸೆಟ್ ಜೆರಾಕ್ಸ್ ಪ್ರತಿಗಳೊಂದಿಗೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ, ತರಬೇತಿ ಕೊಠಡಿ, 2ನೇ ಮಹಡಿ, ಶಾಂತಿನಗರ ಬಸ್ ನಿಲ್ದಾಣ, ಬೆಂಗಳೂರು–560027 ಇಲ್ಲಿ **ದಿನಾಂಕ: 31.01.2023 ರವರೆಗೂ** ಹೆಸರು ನೋಂದಾಯಿಸಿಕೊಳ್ಳಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಸಂಸ್ಥೆಯ ವೆಬ್‌ಸೈಟ್ www.mybmtc.com ನಿಂದ ಪಡೆಯಬಹುದಾಗಿದೆ. ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳು: 080–22537481, 7892529634, 7760576556, 7760991348, 7760991190, 7760979980, 7760991086.

ಸಹಿ/– ಮುಖ್ಯ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿ (ಮಾಸಂಅ), ಬೆಂ.ಮ.ಸಾ.ಸಂಸ್ಥೆ

ಕರ್ನಾಟಕ ಸರ್ಕಾರ – ಜಿಲ್ಲಾ ಪಂಚಾಯತ್
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಾಗರ
ನಂ.ಕಾಇಂ/ಪಂರಾಇಂ/ವಿಸಾ/ಸಾಗರ/ಹೊಸನಗರ/KW-1,2&3/ಎಇ/ಜೆಇ/2022–23/1841 ದಿನಾಂಕ:– 04.01.2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಈ ವಿಭಾಗದಿಂದ 2022–23 ನೇ ಸಾಲಿನ 5054 ಮಳೆಹಾನಿ, ವಿವೇಕ ಶಾಲಾ (ರಾಜ್ಯವಲಯ) ಯೋಜನೆ, 5054 ವಿಶೇಷ ಅನುದಾನ ಮತ್ತು 3054–ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಐಟಂ ವಾರು ದರಗಳನ್ನು ನಮೂದಿಸಲು ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್/ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಇ ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು Standard Document for procurement of work K/W-1,2&3 ರ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಫಾರಂ ಫೀ & ಇ.ಎಂ.ಡಿ.ಯನ್ನು 'ಇ' ಪೇಮೆಂಟ್‌ನಲ್ಲಿ (Credit Card/Direct Debit/NEFT & OTC) ಚಲನ್ ಮೂಲಕ ಭರ್ತಿ ಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕಕ್ಕಿಂತ ಎರಡು ದಿನ ಮುಂಚಿತವಾಗಿ ಸಲ್ಲಿಸುವುದು.

1. ಟೆಂಡರ್ ಫಾರಂ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ:04–01–2023 ರಿಂದ 16–01–2023 ರವರೆಗೆ 2) ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 16–01–2023 ಸಮಯ 17:00:00 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17–01–2023 ಸಮಯ 17:01:00 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 19–01–2023 ಸಮಯ 10:30:00

ಇ–ಪ್ರೋಕ್ಯೂರ್‌ಮೆಂಟ್ ವೆಬ್ ಸೈಟ್ ಟೆಂಡರಿನ ವಿವರಗಳನ್ನು ಈ ಕಛೇರಿಯ ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಾಗರ ಇವರ ಕಛೇರಿಯನ್ನು ಸಂಪರ್ಕಿಸುವುದು ಮತ್ತು ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ (www.eproc.karnataka.gov.in) ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08183–226064 ಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರಿಂದ ಪಡೆಯಬಹುದು ಅಥವಾ hphelpdesk ದೂರವಾಣಿ ಸಂಖ್ಯೆ: 080–25501216, 25501227 ಇವರನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಇಂಜಿನಿಯ ಪಂ.ರಾ.ಇಂ.ವಿಭಾಗ, ಸಾಗರ.
ವಾ.ಸಾ.ಸಂ.ಇ/ಎಂಸಿಎ/ಶಿ/42/01//22–23/1614

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಚೇರಿ, ರಸ್ತೆ ಮೂಲಭೂತ ಸೌಕರ್ಯ–ಪಶ್ಚಿಮ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು – 560 002.
ಸಂಖ್ಯೆ:ಕಾಪಾಅ/ರಮೂ–ಪಶ್ಚಿಮ/ಟೆಂಡರ್/09/2022–23/2ನೇ ಕರೆ ದಿನಾಂಕ:06.01.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ–ಪಶ್ಚಿಮ ವಿಭಾಗ ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ (₹. ಲಕ್ಷಗಳಲ್ಲಿ)
ರಾಜಾಜಿನಗರ ಕ್ಷೇತ್ರದ ರಮೂಸೌ–ಪಶ್ಚಿಮ ವಲಯದಲ್ಲಿ ಪ್ರಧಾನ, ಉಪ ಪ್ರಧಾನ ಮತ್ತು ಮುಖ್ಯ ಸಂಪರ್ಕಿತ ರಸ್ತೆಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. ಪ.ವ 2022–23 –ಪ್ಯಾಕೇಜ್ ಸಂ.05	1673.35	16.75 ಲಕ್ಷಗಳು ಅಥವಾ ರೂ.1.00 ಲಕ್ಷ + ರೂ.15.75 ಲಕ್ಷಗಳು ಬ್ಯಾಂಕ್ ಗ್ಯಾರಂಟಿ ಮೂಲಕ

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ **06.01.2023**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ **13.01.2023**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **10.01.2023**ರ ಮಧ್ಯಾಹ್ನ **3:00** ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ ರಸ್ತೆ ಮೂಲಭೂತಸೌಕರ್ಯ, 4ನೇ ಮಹಡಿ, ಅನೆಕ್ಸ್ ಕಟ್ಟಡ–3, ಬೃ.ಬೆಂ.ಮ.ಪಾಲಿಕೆ ಕೇಂದ್ರ ಕಚೇರಿ, ಬೆಂಗಳೂರು–02 ಇಲ್ಲಿ ನಡೆಸಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **16.01.2023**ರ ಸಂಜೆ **5:30** ಗಂಟೆಗೆ ತೆರೆಯಲಾಗುವುದು. (5) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in.** ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ರಸ್ತೆ ಮೂಲಭೂತಸೌಕರ್ಯ–ಪಶ್ಚಿಮ ವಿಭಾಗ

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 110.
ಸಂ: ಬಿಐಎಎಪಿಎ/ಟಿಪಿ/ಭೂಉಬ/110/2022–23/2256 ದಿನಾಂಕ: 06.01.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ “ವಾಣಿಜ್ಯ” ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಲಕ್ಷ್ಮಮ್ಮ ಕೋಂ ಲೇ॥ ರಾಮಯ್ಯ	ದೇವನಹಳ್ಳಿ	ಕಸಬಾ	ದಾಸರಹಳ್ಳಿ	59/11	0–20	ವ್ಯವಸಾಯ	ವಾಣಿಜ್ಯ

ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವ್ಯವಸಾಯ ಮಾಡಲು ಸೂಕ್ತವಾಗಿರುವುದಿಲ್ಲ ಹಾಗೂ ಪರಿಸರದಲ್ಲಿ ವಾಣಿಜ್ಯ ಅಭಿವೃದ್ಧಿ ಬೆಳವಣಿಗೆಗಳು ಬರುತ್ತಿದ್ದು, ಈ ಜಮೀನಿನ ಪರಿಸರದಲ್ಲಿ ವಾಣಿಜ್ಯ ಉದ್ದೇಶಕ್ಕೆ ಸಾರ್ವಜನಿಕರಿಂದ ತುಂಬ ಬೇಡಿಕೆಯಿದ್ದು, ಭವಿಷ್ಯದಲ್ಲಿ ವಾಣಿಜ್ಯ ಉದ್ದೇಶಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಪ್ರಸ್ತಾಪಿತ ಪ್ರದೇಶದಲ್ಲಿ ವಾಣಿಜ್ಯ ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತೇವೆ ಅಲ್ಲದೇ, ಪ್ರಸ್ತಾಪಿತ ಜಮೀನಿನಲ್ಲಿ ವಾಣಿಜ್ಯ ಬೆಳವಣಿಗೆ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **ವ್ಯವಸಾಯ** ವಲಯ ದಿಂದ **ವಾಣಿಜ್ಯ** ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ
ವಾಸಾಸಂಇ/ವಾಪ್ರ/3927/ಎಎಎ/2022–23

ಪಂಚರತ್ನ ಯಾತ್ರೆ ಯಶಸ್ಸಿನ ಹುರುಪು • ಹಾಲಿ ಶಾಸಕರು ವಲಸೆ ಹೋಗುವ ಆತಂಕ

ಭದ್ರಕೋಟೆ ರಕ್ಷಣೆಯೇ ಜೆಡಿಎಸ್‌ಗೆ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೆ ಮೈಸೂರು ಭಾಗದಲ್ಲಿ ಪ್ರಬಲವಾಗಿರುವ ಜೆಡಿಎಸ್ ಪಕ್ಷಕ್ಕೆ ಈ ಚುನಾವಣೆಯಲ್ಲಿ ತನ್ನ ಭದ್ರಕೋಟೆಯನ್ನು ರಕ್ಷಿಸಿಕೊಳ್ಳುವುದೇ ಸವಾಲಾಗಿ ಪರಿಣಮಿಸಿದೆ. ತಮ್ಮ ತವರು ಜಿಲ್ಲೆ ಹಾಸನದಲ್ಲೇ ಪಕ್ಷದ ಶಾಸಕರು ಪಕ್ಷಾಂತರ ಮಾಡುವ ಭೀತಿ ಜೆಡಿಎಸ್ ವರಿಷ್ಠರನ್ನು ಆವರಿಸಿದೆ.

ಬಿಜೆಪಿ, ಕಾಂಗ್ರೆಸ್ ಪಕ್ಷಗಳಿಗಿಂತ ಮುಂಚಿತವಾಗಿ ಚುನಾವಣಾ ಸಿದ್ಧತೆ ಆರಂಭಿಸಿರುವ ಜೆಡಿಎಸ್, 2022ರ ಡಿಸೆಂಬರ್ 19ರಂದೇ 93 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದೆ. ಪಂಚರತ್ನ ಯಾತ್ರೆ ನಡೆಸುತ್ತಿರುವ ಪಕ್ಷದ ನೇತಾರ ಎಚ್.ಡಿ. ಕುಮಾರಸ್ವಾಮಿ, ಎಲ್ಲೆಡೆ ಸಿಗುತ್ತಿರುವ ಜನ ಬೆಂಬಲದಿಂದ ಹುರುಪು ಹೆಚ್ಚಿಸಿಕೊಂಡಿದ್ದಾರೆ. ಆದರೆ, ತಮ್ಮ ಪಕ್ಷದ ಹುರಿಯಾಳುಗಳನ್ನು ಬಿಜೆಪಿ–ಕಾಂಗ್ರೆಸ್ ನಾಯಕರು ಸೆಳೆಯುವ ಭೀತಿ ಅವರನ್ನು ಆತಂಕಕ್ಕೆ ದೂಡಿರುವುದು ರಹಸ್ಯವೇನಲ್ಲ.

ಅಭ್ಯರ್ಥಿಗಳು ಬದಲಾಗುವ ಅನುಮಾನ

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಪಕ್ಷದ ಅಭ್ಯರ್ಥಿಗಳ ಮೊದಲ ಪಟ್ಟಿ ಪ್ರಕಟಿಸಿದ್ದಾರೆ. ಆದರೆ, 'ಅಂತಿಮವಾಗಿ ಬಿ ಫಾರ್ಮ್ ಕೊಡುವವನು ನಾನು' ಎನ್ನುವ ಮೂಲಕ ಕೊನೆಯ ಕ್ಷಣದಲ್ಲಿ ಅಭ್ಯರ್ಥಿಗಳು ಬದಲಾಗಬಹುದು ಎಂಬ ಅನುಮಾನವನ್ನು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಹುಟ್ಟುಹಾಕಿದ್ದಾರೆ. ಗೌಡರ ಈ ಹೇಳಿಕೆ ಪಕ್ಷದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಹಾಸನ ಜಿಲ್ಲೆಯ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಲು ಪಕ್ಷದ ವರಿಷ್ಠರಿಗೆ ಸಾಧ್ಯವಾಗಿಲ್ಲ. ತಮ್ಮದೇ ಶಾಸಕರ ನಿಗೂಢ ನಡೆಯನ್ನು ಅರಿಯಲಾಗದೇ ಅವರು ಇಕ್ಕಟ್ಟಿಗೆ ಸಿಲುಕಿದ್ದಾರೆ. ಅರಕಲಗೂಡು ಕ್ಷೇತ್ರದ ಎ.ಟಿ. ರಾಮಸ್ವಾಮಿ, ಅರಸೀಕೆರೆ ಕ್ಷೇತ್ರದ ಕೆ.ಎಂ. ಶಿವಲಿಂಗೇಗೌಡ, ಬೇಲೂರು ಶಾಸಕ ಕೆ.ಎಸ್. ಲಿಂಗೇಶ್ ಜೆಡಿಎಸ್ ತೊರೆದು ಕಾಂಗ್ರೆಸ್ ಅಥವಾ ಬಿಜೆಪಿಯತ್ತ ಹೋಗಬಹುದು ಎಂಬ ಅನುಮಾನ ಬಹು ದಿನಗಳಿಂದಲೂ ಇದೆ. ಶಿವಲಿಂಗೇಗೌಡ ಅವರು ಬಹಿರಂಗವಾಗಿಯೇ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಹೊಗಳುತ್ತಿದ್ದಾರೆ. ಶಿವಲಿಂಗೇಗೌಡ ಮತ್ತು ರಾಮಸ್ವಾಮಿ ಜೆಡಿಎಸ್ ಕಾರ್ಯಕ್ರಮಗಳಿಂದಲೂ ದೂರ ಉಳಿದಿದ್ದಾರೆ. ಲಿಂಗೇಶ್ ಬಿಜೆಪಿಯತ್ತ ವಾಲಬಹುದು ಎಂಬ ಮಾತುಗಳು ರಾಜಕೀಯ ವಲಯದಲ್ಲಿವೆ.

ಕೊನೆಯ ಹಂತದಲ್ಲಿ ಅಖಾಡಕ್ಕೆ ಇಳಿದಿರುವ ಪಕ್ಷದ ವರಿಷ್ಠ ಎಚ್.ಡಿ. ದೇವೇಗೌಡ, ಸಮಾಧಾನದ ಮಾತುಗಳ ಮೂಲಕವೇ ತವರು ಜಿಲ್ಲೆಯ ಎಲ್ಲ ಶಾಸಕರನ್ನು ಹಿಡಿದಿಟ್ಟುಕೊಳ್ಳುವ ಪ್ರಯತ್ನ ಆರಂಭಿಸಿದ್ದಾರೆ. ಆದರೆ, ಈ ವಿಚಾರದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮತ್ತು ಶಾಸಕರ ನಡುವೆ ಸಹಮತ ಮೂಡದೇ ಇರುವುದು ಸವಾಲಾಗಿ ಪರಿಣಮಿಸಿದೆ ಎನ್ನುತ್ತಾರೆ ಪಕ್ಷದ ಮುಖಂಡರು.

ಮಂಡ್ಯ, ಮೈಸೂರಿನಲ್ಲೂ ಆತಂಕ: ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ ಬಹುತೇಕ ಕ್ಷೇತ್ರಗಳಿಗೆ ಜೆಡಿಎಸ್ ಅಭ್ಯರ್ಥಿಗಳನ್ನು ಪ್ರಕಟಿಸಿದೆ. ಆದರೆ, ಈ ಎರಡೂ ಜಿಲ್ಲೆಗಳಲ್ಲಿ ಜೆಡಿಎಸ್‌ನ ಹಾಲಿ ಶಾಸಕರು ಮತ್ತು ಪ್ರಭಾವಿ ಮುಖಂಡರನ್ನು ಸೆಳೆಯಲು ಬಿಜೆಪಿ ಹಾಗೂ ಕಾಂಗ್ರೆಸ್ ಸತತ ಪ್ರಯತ್ನ ನಡೆಸುತ್ತಿವೆ.

ಜೆಡಿಎಸ್ ತ್ಯಜಿಸುವ ನಿರ್ಧಾರಕ್ಕೆ ಬಂದಿದ್ದ ಮೈಸೂರಿನ ಶಾಸಕ ಜಿ.ಟಿ. ದೇವೇಗೌಡ ಮತ್ತು ಅವರ ಮಗ ಹರೀಶ್ ಗೌಡ ಅವರನ್ನು ಪಕ್ಷದಲ್ಲೇ ಹಿಡಿದಿಟ್ಟುಕೊಳ್ಳುವಲ್ಲಿ ವರಿಷ್ಠರು ಯಶಸ್ವಿಯಾಗಿದ್ದಾರೆ. ಇಬ್ಬರಿಗೂ ಟಿಕೆಟ್ ಕೂಡ ಘೋಷಿಸಿದ್ದಾರೆ. ಆದರೆ, ಮಂಡ್ಯದಲ್ಲಿ ಟಿಕೆಟ್ ಘೋಷಿಸಿರುವ ಕ್ಷೇತ್ರಗಳ ಹಾಲಿ ಶಾಸಕರೂ ಸೇರಿದಂತೆ ಕೆಲವು ಮುಖಂಡರ ನಡೆ ಇನ್ನೂ ನಿಗೂಢವಾಗಿದೆ. ಮೈಸೂರಿನಲ್ಲೂ ಕೆಲವು ಮುಖಂಡರು ಪಕ್ಷಾಂತರಕ್ಕೆ ಸಿದ್ಧತೆ ನಡೆಸುತ್ತಿರುವ ಮಾಹಿತಿಗಳಿವೆ. ಈ ಬೆಳವಣಿಗೆಗಳು ಪಂಚರತ್ನ ಯಾತ್ರೆಯ ಯಶಸ್ಸಿನ ನಡುವೆಯೂ ಜೆಡಿಎಸ್ ವರಿಷ್ಠರನ್ನು ಆತಂಕಕ್ಕೆ ತಳ್ಳಿವೆ ಎನ್ನುತ್ತವೆ ಆ ಪಕ್ಷದ ಮೂಲಗಳು.

ಕರ್ನಾಟಕ ಪ್ರಜಾ ಮತ 2023 ಜನತಂತ್ರದ ಹಬ್ಬ

ಇಡಬ್ಲ್ಯುಎಸ್ ಹಂಚಿಕೆಗೆ ಆಕ್ಷೇಪ

ಬೆಂಗಳೂರು: ಆರ್ಥಿಕವಾಗಿ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ಕೇಂದ್ರ ಸರ್ಕಾರ ನೀಡಿರುವ ಶೇ 10ರಷ್ಟು ಮೀಸಲಾತಿಯಲ್ಲಿ ಇತರೆ ಸಮುದಾಯಗಳಿಗೂ ಪಾಲು ನೀಡಲು ಮುಂದಾಗಿರುವ ರಾಜ್ಯ ಸರ್ಕಾರದ ನಡೆಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಆಕ್ಷೇಪ ವ್ಯಕ್ತಪಡಿಸಿದೆ.

ಸರ್ಕಾರದ ನಡೆಯನ್ನು ಖಂಡಿಸಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಬ್ರಾಹ್ಮಣ ಸಮುದಾಯ ತೀವ್ರ ಪ್ರತಿಭಟನೆ ನಡೆಸಬೇಕು ಎಂದು ನಗರದಲ್ಲಿ ಈಚೆಗೆ ನಡೆದ ಮಹಾಸಭೆಯ ಪದಾಧಿಕಾರಿಗಳು, ಕೇಂದ್ರ ಕಾರ್ಯಕಾರಿಣಿ ಸಮಿತಿಯ ಸದಸ್ಯರು ಹಾಗೂ ವಿಪ್ರ ಸಮುದಾಯದ ಪ್ರಮುಖರ ಸಭೆಯಲ್ಲಿ ಒಕ್ಕೊರಲ ನಿರ್ಣಯ ತೆಗೆದುಕೊಳ್ಳಲಾಯಿತು ಎಂದು ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು 2019ರಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತಂದು ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಶೇ 10 ಮೀಸಲಾತಿ ಕಲ್ಪಿಸಿದ್ದರು. ತಿದ್ದುಪಡಿಯನ್ನು ಕೆಲವರು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಅರ್ಜಿಗಳನ್ನು ಸಂವಿಧಾನಪೀಠ ವಜಾಗೊಳಿಸಿದೆ. ಕೇಂದ್ರ ಸರ್ಕಾರದ ನೀತಿಯನ್ನು ಬೆಂಬಲಿಸುವ ಐತಿಹಾಸಿಕ ತೀರ್ಪು ಪ್ರಕಟಿಸಿದೆ. ಆದರೂ, ರಾಜ್ಯದಲ್ಲಿ ಇದುವರೆಗೂ ಆದೇಶ ಜಾರಿಗೊಳಿಸಿಲ್ಲ ಎಂಬ ಚರ್ಚೆ ಸಭೆಯಲ್ಲಿ ನಡೆಯಿತು.

ಕ್ರಿಯಾ ಸಮಿತಿಯು ಕರಡು ಪ್ರತಿಭಟನಾ ನಿರ್ಣಯಗಳನ್ನು ಸಿದ್ಧಪಡಿಸಿ ಎಲ್ಲಾ ತಾಲ್ಲೂಕು, ಜಿಲ್ಲೆಗಳಿಗೆ ಕಳುಹಿಸಬೇಕು. ಅಲ್ಲಿಯ ವಿಪ್ರ ಸಂಘ–ಸಂಸ್ಥೆಗಳು ಸಭೆ ಸೇರಿ ನಿರ್ಣಯ ಕೈಗೊಳ್ಳಬೇಕು. ಪ್ರತಿಭಟನಾ ಸಮಾವೇಶ, ಮೆರವಣಿಗೆಗಳನ್ನು ಆಯೋಜಿಸಬೇಕು. ಜಿಲ್ಲಾಧಿಕಾರಿಗಳಿಗೆ ಹಾಗೂ ತಹಶೀಲ್ದಾರ್‌ಗಳಿಗೆ ಮನವಿ ಸಲ್ಲಿಸಬೇಕು. ಬೆಂಗಳೂರಿನಲ್ಲೂ ಸಮಾವೇಶ ಆಯೋಜಿಸಬೇಕು. ಸಮಾವೇಶದ ನಂತರ ಬೃಹತ್ ಪ್ರತಿಭಟನಾ ಮೆರವಣಿಗೆಯಲ್ಲಿ ಸಾಗಿ, ರಾಜ್ಯಪಾಲರಿಗೆ, ಮುಖ್ಯಮಂತ್ರಿಗೆ ಮನವಿ ಸಲ್ಲಿಸಬೇಕು ಎಂದು ತೀರ್ಮಾನಿಸಲಾಯಿತು ಎಂದು ಅವರು ಹೇಳಿದ್ದಾರೆ.

ಹೋರಾಟಕ್ಕೆ ರಾಜ್ಯಮಟ್ಟದಲ್ಲಿ ವಿಪ್ರ ಮುಖಂಡರನ್ನೊಳಗೊಂಡ ಕ್ರಿಯಾ ಸಮಿತಿ ರಚಿಸುವ, ಪೂರ್ಣ ರೂಪರೇಷೆಗಳನ್ನು ಸಿದ್ಧಪಡಿಸುವ ಅಧಿಕಾರವನ್ನು ಅಶೋಕ ಹಾರನಹಳ್ಳಿ ಅವರಿಗೆ ನೀಡಲಾಗಿದೆ.

ಮುರುಘಾ ಶರಣರಿಗೆ ಬಾಡಿ ವಾರಂಟ್

ಒಂದನೇ ಪುಟದಿಂದ

ಕಡಿಮೆ ದರಕ್ಕೆ ಮಾರಾಟ: 'ಆರೋಪಿಗಳಾದ ಶರಣರು ಮತ್ತು ಆನಂದಕುಮಾರ್ 7 ಎಕರೆ 18 ಗುಂಟೆ ಜಮೀನನ್ನು ಅಕ್ರಮವಾಗಿ ಸಬ್ ರಿಜಿಸ್ಟ್ರಾರ್ (ಉಪ ನೋಂದಣಾಧಿಕಾರಿ) ಕಚೇರಿಯಲ್ಲಿ ಮಾರುಕಟ್ಟೆ ದರಕ್ಕಿಂತ ಕಡಿಮೆ ದರದಲ್ಲಿ ಕ್ರಯ ಮಾಡಿಸಿಕೊಂಡಿರುತ್ತಾರೆ. ಈ ಜಮೀನನ್ನು ಮಾರಾಟ ಮಾಡುವ ಮುನ್ನ ಈ ವಿಷಯವನ್ನು ಶರಣರು ಭಕ್ತರ ಗಮನಕ್ಕೆ ತಂದಿರುವುದಿಲ್ಲ. ಅಂತೆಯೇ ಯಾವುದೇ ಸಾರ್ವಜನಿಕ ಪ್ರಕಟಣೆಯನ್ನೂ ನೀಡಿರುವುದಿಲ್ಲ' ಎಂದು ಪ್ರಕಾಶ್ ದೂರಿನಲ್ಲಿ ಆರೋಪಿಸಿದ್ದಾರೆ.

'ಈ ಜಮೀನಿನ ಬೆಲೆ 2008ರಲ್ಲಿ 1 ಎಕರೆಗೆ ₹ 50 ಲಕ್ಷ ಮೌಲ್ಯ ಹೊಂದಿದ್ದು, 7 ಎಕರೆಗೆ ಸುಮಾರು ₹3.72 ಕೋಟಿ ಆಗಿರುತ್ತದೆ. ಸಬ್ ರಿಜಿಸ್ಟ್ರಾರ್ ಕಚೇರಿಗೆ ನೋಂದಣಿ ಶುಲ್ಕವನ್ನೇ ₹30 ಲಕ್ಷ ಕಟ್ಟಬೇಕಾಗಿರುತ್ತದೆ. ಆದರೆ, ಇಷ್ಟೂ ಜಮೀನನ್ನು ಕೇವಲ ₹ 49 ಲಕ್ಷಕ್ಕೆ ಮಾರಾಟ ಮಾಡಲಾಗಿದೆ. ಈ ಜಮೀನಿನ ಬೆಲೆ ಪ್ರಸ್ತುತ ₹1 ಕೋಟಿ ಇದೆ. ಇದರಿಂದ ಮಠಕ್ಕೆ ಸುಮಾರು ₹7 ಕೋಟಿ ನಷ್ಟವುಂಟಾಗಿರುತ್ತದೆ' ಎಂದು ದೂರಿನಲ್ಲಿ ಆಪಾದಿಸಲಾಗಿದೆ.

ಬಾಡಿ ವಾರಂಟ್ ಎಂದರೇನು?: ಒಂದು ಕೇಸಿನಲ್ಲಿ ಈಗಾಗಲೇ ಬಂಧನದಲ್ಲಿರುವ ವ್ಯಕ್ತಿಯನ್ನು ಮತ್ತೊಂದು ಕೇಸಿನಲ್ಲಿ ಕೋರ್ಟ್‌ಗೆ ಹಾಜರುಪಡಿಸಲು ಬೇಕಾಗಿರುವಾಗ ಆ ವ್ಯಕ್ತಿಯನ್ನು ಖುದ್ದಾಗಿ ಅರ್ಥಾತ್ ದೈಹಿಕವಾಗಿ ಹಾಜರುಪಡಿಸಲು ಸಿಆರ್‌ಪಿಸಿ ಕಲಂ 267ರ ಅನ್ವಯ ಹೊರಡಿಸುವ ಆದೇಶವೇ ಬಾಡಿ ವಾರಂಟ್.

ಬಿಲ್ಲವ, ಈಡಿಗ, ನಾಮಧಾರಿ ಸಮುದಾಯಗಳ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಆರಂಭಿಸಲಾದ ಪಾದಯಾತ್ರೆಗೆ ಬಿ.ಜನಾರ್ದನ ಪೂಜಾರಿ ಹಾಗೂ ತೆಲಂಗಾಣದ ಸಚಿವ ವಿ. ಶ್ರೀನಿವಾಸ ಗೌಡ್ ಅವರು ಮಂಗಳೂರಿನ ಕುದ್ರೋಳಿ ಗೋಕರ್ಣನಾಥ ಕ್ಷೇತ್ರದಲ್ಲಿ ಶುಕ್ರವಾರ ಚಾಲನೆ ನೀಡಿದರು. ಸಂಗಮಾನಂದ ಸ್ವಾಮೀಜಿ, ಪ್ರಣವಾನಂದ ಸ್ವಾಮೀಜಿ, ಕವಿತಾ ಸನಿಲ್, ಆರ್. ಪದ್ಮರಾಜ್, ಅರ್ಚನಾ ಜೈಸ್ವಾಲ್, ಸಮುದಾಯದ ಮುಖಂಡರು ಇದ್ದಾರೆ

ಬಿಲ್ಲವ, ಈಡಿಗ, ನಾಮಧಾರಿಗಳ ಬೇಡಿಕೆ ಈಡೇರಿಕೆಗಾಗಿ ಪಾದಯಾತ್ರೆ ಆರಂಭ

ಮಂಗಳೂರು: ಬಿಲ್ಲವ, ಈಡಿಗ, ನಾಮಧಾರಿ ಸಮುದಾಯದ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕಲಬುರಗಿ ಜಿಲ್ಲೆಯ ಕರದಾಳು ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿ ಪೀಠದ ಪ್ರಣವಾನಂದ ಸ್ವಾಮೀಜಿ ನೇತೃತ್ವದಲ್ಲಿ ಇಲ್ಲಿನ ಕುದ್ರೋಳಿ ಗೋಕರ್ಣನಾಥ ಕ್ಷೇತ್ರದಿಂದ ಬೆಂಗಳೂರಿಗೆ ಪಾದಯಾತ್ರೆ ಶುಕ್ರವಾರ ಆರಂಭವಾಯಿತು.

ಸಮುದಾಯದ ಮುಖಂಡ ಬಿ.ಜನಾರ್ದನ ಪೂಜಾರಿ ಹಾಗೂ ತೆಲಂಗಾಣದ ಸಚಿವ ವಿ.ಶ್ರೀನಿವಾಸ ಗೌಡ್ ಪಾದಯಾತ್ರೆಗೆ ಚಾಲನೆ ನೀಡಿದರು.

41 ದಿನಗಳ ಪಾದಯಾತ್ರೆ ಒಟ್ಟು 658 ಕಿ.ಮೀ ಕ್ರಮಿಸಲಿದ್ದು, ಉಡುಪಿ, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ತುಮಕೂರು, ನೆಲಮಂಗಲ ಮಾರ್ಗವಾಗಿ ಬೆಂಗಳೂರು ತಲುಪಲಿದೆ.

ಪರ್ಯಾಯ 'ಸ್ವಾಭಿಮಾನಿ ಶರಣ ಮೇಳ'

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಜಿಲ್ಲೆಯ ಕೂಡಲಸಂಗಮ ಕ್ರಾಸ್ ಹತ್ತಿರದ ಹೂವನೂರಿನಲ್ಲಿ ಜ.13 ಹಾಗೂ 14 ರಂದು 'ಸ್ವಾಭಿಮಾನಿ ಶರಣ ಮೇಳ' ಆಯೋಜಿಸಲಾಗಿದೆ ಎಂದು ಸ್ವಾಭಿಮಾನ ಶರಣ ಮೇಳ ಉತ್ಸವ ಸಮಿತಿ ಅಧ್ಯಕ್ಷ ಚನ್ನಬಸವಾನಂದ ಸ್ವಾಮೀಜಿ ಅವರು ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '35 ವರ್ಷಗಳಿಂದ ಮಾತೆ ಮಹಾದೇವಿ ಶರಣ ಮೇಳ ಆಯೋಜಿಸುತ್ತ ಬಂದಿದ್ದರು. ಈ ಬಾರಿ ಬಸವ ಧರ್ಮ ಪೀಠದಲ್ಲಿ ಸಮ್ಮೇಳನ ನಡೆಸಲು ಅವಕಾಶ ನೀಡದ್ದರಿಂದ ಭಕ್ತರಿಗಾಗಿ ಪರ್ಯಾಯ ಮೇಳ ಆಯೋಜನೆ ಮಾಡುತ್ತಿದ್ದೇವೆ' ಎಂದರು.

ರಾಜ್ಯಕ್ಕೆ ಶೇ 25 ಸೀಟು ನೀಡಲಾಗಿದೆ: ಲಾ ಸ್ಕೂಲ್

ಬೆಂಗಳೂರು: ನಿಯಮದಂತೆ ಕರ್ನಾಟಕದ ವಿದ್ಯಾರ್ಥಿಗಳಿಗೆ ಅಡ್ಡ ವಿಭಾಗೀಯ ಮೀಸಲಾತಿ ಅಡಿಯಲ್ಲಿ ಶೇ 25ರಷ್ಟು ಸ್ಥಳೀಯ ಮೀಸಲಾತಿ ನೀಡಲಾಗುತ್ತಿದೆ ಎಂದು ನಗರದ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ವಿಶ್ವವಿದ್ಯಾಲಯ ಸ್ಪಷ್ಟಪಡಿಸಿದೆ.

ಕರ್ನಾಟಕ ಸರ್ಕಾರ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಕಾಯ್ದೆಗೆ 2020ರಲ್ಲಿ ತಿದ್ದುಪಡಿ ತಂದು ಕರ್ನಾಟಕ ರಾಜ್ಯದ ಯಾವುದೇ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಯಲ್ಲಿ ಅರ್ಹತಾ ಪರೀಕ್ಷೆಗೂ ಹಿಂದಿನ 10 ವರ್ಷಗಳ ಅವಧಿಗೆ ಕಡಿಮೆ ಇಲ್ಲದಂತೆ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಶೇ 25ರಷ್ಟು ಸೀಟುಗಳನ್ನು ದೊರಕಿಸಲು ಅವಕಾಶ ಕಲ್ಪಿಸಿತ್ತು. ಆದರೆ, ಹೈಕೋರ್ಟ್ ಈ ತಿದ್ದುಪಡಿಯ ಸಿಂಧುತ್ವವನ್ನು ತಳ್ಳಿಹಾಕಿತ್ತು.

ಪ್ರಸ್ತುತ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದ್ದರೂ, ವಿಶ್ವವಿದ್ಯಾಲಯ ಸಮಾಲೋಚನೆಗಳ ನಂತರ 2021–22ರಿಂದ ಅನ್ವಯವಾಗುವಂತೆ ಎಸ್ಸಿ, ಎಸ್ಟಿ, ಒಬಿಸಿ, ಇಡಬ್ಲ್ಯುಎಸ್ ಮೀಸಲಾತಿ ಒಳಗೆ ಪ್ರತಿ ಶ್ರೇಣಿ ವರ್ಗದಲ್ಲಿ ಶೇ 25ರಷ್ಟು ಸೀಟುಗಳಿಗೆ ರಾಜ್ಯದ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿದ್ದಾರೆ. 2022–23ನೇ ಶೈಕ್ಷಣಿಕ ವರ್ಷದಲ್ಲಿ ಲಭ್ಯವಿದ್ದ 307 ಸೀಟುಗಳಲ್ಲಿ ಕರ್ನಾಟಕ 78 ವಿದ್ಯಾರ್ಥಿಗಳು ಇದ್ದಾರೆ. 2026–27ನೇ ಸಾಲಿನ ವೇಳೆಗೆ ಈ ಸಂಖ್ಯೆ 500 ದಾಟಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸ್ಥಳೀಯರಿಗೆ ಮೀಸಲಾತಿ: ಸಚಿವರ ಪತ್ರ

ನಗರದ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ವಿಶ್ವವಿದ್ಯಾಲಯ ಸಹ ಸರ್ಕಾರದ ನಿಯಮದಂತೆ ಕರ್ನಾಟಕದ ವಿದ್ಯಾರ್ಥಿಗಳಿಗೆ ಶೇ 25ರಷ್ಟು ಸ್ಥಳೀಯ ಮೀಸಲಾತಿ ಕೊಡಬೇಕು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ಕುಲಪತಿಗೆ ಪತ್ರ ಬರೆದಿದ್ದಾರೆ.

ನ್ಯಾಷನಲ್ ಲಾ ಸ್ಕೂಲ್ ವಿಶ್ವವಿದ್ಯಾಲಯ ಎರಡು ವರ್ಷಗಳಿಂದ ಶೇ 25ರಷ್ಟು ಸ್ಥಳೀಯ ಮೀಸಲಾತಿ ಕೊಡುತ್ತಿಲ್ಲ. ಬದಲಿಗೆ ಅಖಿಲ ಭಾರತ ಕೋಟಾದಡಿ ಮೆರಿಟ್ ಮೇಲೆ ಆಯ್ಕೆಯಾದ ರಾಜ್ಯದ ವಿದ್ಯಾರ್ಥಿಗಳನ್ನೇ ಈ ಮೀಸಲಾತಿ ವ್ಯಾಪ್ತಿಗೆ ತರುತ್ತಿದೆ. ಇದು ಸರ್ಕಾರದ ನಿಯಮಗಳ ಉಲ್ಲಂಘನೆ. ಸಹಜ ನ್ಯಾಯದ ತತ್ವಕ್ಕೆ ವಿರುದ್ಧ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ

ಆರ್‌ಎಸ್‌ಎಸ್: ಲಾಠಿ ಹಿಡಿದ ಮೂವರು ಪ್ರಾಧ್ಯಾಪಕರು

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ಮೂವರು ಸಹಾಯಕ ಪ್ರಾಧ್ಯಾಪಕರು ಲಾಠಿ ಹಿಡಿದು ಆರ್‌ಎಸ್‌ಎಸ್ ಗಣವೇಷಧಾರಿಗಳಾಗಿ ವಿಶ್ವವಿದ್ಯಾಲಯದ ಆವರಣದಲ್ಲಿ ಕಾಣಿಸಿಕೊಂಡರು.

ವಿದ್ಯಾರ್ಥಿಯೊಬ್ಬರ ಜತೆ ಸಹಾಯಕ ಪ್ರಾಧ್ಯಾಪಕರಾದ ಸಾರ್ವಜನಿಕ ಆಡಳಿತ ವಿಭಾಗದ ಡಾ.ಅಲೋಕ್ ಕುಮಾರ್ ಗೌರವ್, ಮನಃಶಾಸ್ತ್ರದ ವಿಭಾಗದ ಡಾ.ವಿಜಯೇಂದ್ರ ಪಾಂಡೆ ಮತ್ತು ಜೀವ ವಿಜ್ಞಾನ ವಿಭಾಗದ ಡಾ.ರಾಕೇಶ್ ಕುಮಾರ್ ಅವರು ಸೆಲ್ಫಿ ಚಿತ್ರ ಕ್ಲಿಕ್ಕಿಸಿಕೊಂಡ ಚಿತ್ರ ವೈರಲ್ ಆಗಿದೆ. ವಿಶ್ವವಿದ್ಯಾಲಯದ ಆವರಣದಲ್ಲಿ ಈಚೆಗೆ ನಡೆದ ಆರ್‌ಎಸ್‌ಎಸ್ ಪಥಸಂಚಲನದ ವೇಳೆ ಕ್ಲಿಕ್ಕಿಸಿದ ಚಿತ್ರ ಎನ್ನಲಾಗುತ್ತಿದೆ.

'ವಿಶ್ವವಿದ್ಯಾಲಯದ ಗಮನಕ್ಕೆ ತಾರದೇ ಬೋಧನೆ ಮತ್ತು ಸಂಶೋಧನೆಗೆ ಹೊರತುಪಡಿಸಿ ಇತರೆ ಚಟುವಟಿಕೆಗಳಲ್ಲಿ ಬೋಧಕ ವರ್ಗವು ತೊಡಗಬಾರದು ಮತ್ತು ವಿಶ್ವವಿದ್ಯಾಲಯದ ನೌಕರರು ಯಾವ ಸಂಘಟನೆ ಜೊತೆ ಗುರುತಿಸಿಕೊಳ್ಳಬಾರದು ಎಂಬ ನಿಯಮವಿದೆ' ಎಂದು ಸಿಯುಕೆ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಇಲ್ಲಿನ ಅಧ್ಯಾಪಕರು ಬೋಧನೆಗೆ ಮಾತ್ರ ಸೀಮಿತರಾಗಬೇಕು. ಬೇರೆ ಚಟುವಟಿಕೆ ನಡೆಸಬಾರದು. ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರು ಆರ್‌ಎಸ್‌ಎಸ್ ಗಣವೇಷಧಾರಿಗಳಾಗಿದ್ದು ನನ್ನ ಗಮನಕ್ಕೆ ಬಂದಿಲ್ಲ. ಈ ಕುರಿತು ಪರಿಶೀಲಿಸುವೆ' ಎಂದು ವಿಶ್ವವಿದ್ಯಾಲಯದ ಕುಲಸಚಿವ ಡಾ.ಬಸವರಾಜ ಡೋಣುರ 'ಪ್ರಜಾವಾಣಿ'ಗೆ ತಿಳಿಸಿದರು.

ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಆರ್‌ಎಸ್‌ಎಸ್ ಗಣವೇಷಧಾರಿಗಳಾಗಿ ಲಾಠಿ ಹಿಡಿದಿರುವ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರು

ಕಾಂಗ್ರೆಸ್‌ನಿಂದ ಕೆಜಿಎಫ್ ಬಾಬು ಅಮಾನತು


ಯೂಸುಫ್ ಷರೀಫ್

ಬೆಂಗಳೂರು: ಉದ್ಯಮಿ ಯೂಸುಫ್ ಷರೀಫ್ ಅಲಿಯಾಸ್ ಕೆಜಿಎಫ್ ಬಾಬು ಅವರನ್ನು ಪಕ್ಷದಿಂದ ಅಮಾನತುಗೊಳಿಸಿ ಕೆಪಿಸಿಸಿ ಶಿಸ್ತು ಸಮಿತಿ ಅಧ್ಯಕ್ಷ ಕೆ. ರೆಹಮಾನ್ ಖಾನ್ ಶುಕ್ರವಾರ ಆದೇಶ ಹೊರಡಿಸಿದ್ದಾರೆ.

ಪಕ್ಷದ ವಿರುದ್ಧ ಹೇಳಿಕೆ ನೀಡುತ್ತಿರುವುದು ಹಾಗೂ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ಭಾಗಿಯಾಗುತ್ತಿರುವ ಆರೋಪದ ಮೇಲೆ ಬಾಬು ಅವರಿಗೆ ಮೂರು ತಿಂಗಳ ಹಿಂದೆ ಶಿಸ್ತು ಸಮಿತಿ ನೋಟಿಸ್ ನೀಡಿತ್ತು. ಶುಕ್ರವಾರ ಕೂಡ ಕೆಪಿಸಿಸಿ ಕಚೇರಿಗೆ ಭೇಟಿ ನೀಡಿದ್ದ ಬಾಬು, ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದರು. ಆ ಬಳಿಕ ಅವರನ್ನು ಪಕ್ಷದಿಂದ ಅಮಾನತುಗೊಳಿಸಲಾಗಿದೆ.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ ಬಿಬಿಎಂಪಿ ಪ್ರಮಾಣಪತ್ರ

ಕೆಂಬತ್ತಹಳ್ಳಿ ಕೆರೆ: ಸ್ಮಶಾನ, ದೇವಸ್ಥಾನ!

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಅಂಜನಾಪುರ ವಾರ್ಡ್‌ನ ಕೆಂಬತ್ತಹಳ್ಳಿ ಕೆರೆಯಂಗಳದಲ್ಲಿ ಎರಡು ಸ್ಮಶಾನ ಹಾಗೂ ಒಂದು ದೇವಸ್ಥಾನ ಇರುವುದು ನಿಜ ಎಂದು ಬಿಬಿಎಂಪಿ ಒಪ್ಪಿಕೊಂಡಿದೆ.

ಕೆರೆಯಂಗಳ ಒತ್ತುವರಿ ಮಾಡಿ ಸ್ಮಶಾನ ನಿರ್ಮಿಸಲಾಗಿದೆ ಎಂದು ಆರೋಪಿಸಿ ಸ್ಥಳೀಯ ನಿವಾಸಿ ವಿಲಾಸಿನಿ ರಾಮ್ ಕುಮಾರ್ ಹಾಗೂ ಇತರರು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠದಲ್ಲಿ ಪ್ರಕರಣ ದಾಖಲಿಸಿದ್ದರು. ಈ ಬಗ್ಗೆ ಪರಿಶೀಲಿಸಲು ಅಧಿಕಾರಿಗಳ ಜಂಟಿ ಸಮಿತಿ ರಚಿಸುವಂತೆ ಪ್ರಧಾನ ಪೀಠವು ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಬೆಂಗಳೂರು ನಗರ ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ಜಂಟಿ ಸಮಿತಿ ರಚಿಸಲಾಗಿತ್ತು. ಈ ಸಮಿತಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಿತ್ತು. ಇದೀಗ, ಬಿಬಿಎಂಪಿಯು ಎನ್‌ಜಿಟಿಗೆ ವರದಿ ಸಲ್ಲಿಸಿದೆ.

‘ಈ ಜಲಕಾಯ ಈ ಹಿಂದೆ ಬಿಡಿಎ ಸುಪರ್ದಿಯಲ್ಲಿತ್ತು. 2020ರಲ್ಲಷ್ಟೇ ಬಿಬಿಎಂಪಿಗೆ ಕೆರೆ ಹಸ್ತಾಂತರ ಆಗಿದೆ. ಜಲಕಾಯದ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. 12 ಗುಂಟೆ ಜಾಗದಲ್ಲಿ ದೇವಸ್ಥಾನ, 20 ಗುಂಟೆಯಲ್ಲಿ ಒಂದು ಸ್ಮಶಾನ ಹಾಗೂ 1 ಎಕರೆ 8 ಗುಂಟೆಯಲ್ಲಿ ಮತ್ತೊಂದು ಸ್ಮಶಾನ ಇದೆ. ಇದು ಭಾವನಾತ್ಮಕ ವಿಚಾರ. ಏಕಾಏಕಿ ತೆರವುಗೊಳಿಸುವುದು ಕಷ್ಟ. ಸ್ಮಶಾನಕ್ಕೆ ಪರ್ಯಾಯ ಜಾಗ ಒದಗಿಸುವಂತೆ ಸ್ಥಳೀಯರು ಜಿಲ್ಲಾಧಿಕಾರಿ ಅವರಿಗೆ ಮನವಿ ಸಲ್ಲಿಸಿದ್ದಾರೆ’ ಎಂದು ಪ್ರಮಾಣಪತ್ರದಲ್ಲಿ ತಿಳಿಸಲಾಗಿದೆ.

ಸ್ಮಶಾನಕ್ಕೆ ಎರಡು ಎಕರೆ ಜಾಗ ಮೀಸಲಿಡುವ ಸಂಬಂಧ ತಹಶೀಲ್ದಾರ್ ಅವರು ಉಪವಿಭಾಗಾಧಿಕಾರಿ ಅವರಿಗೆ ಈಗಾಗಲೇ ಪ್ರಸ್ತಾವ ಸಲ್ಲಿಸಿದ್ದಾರೆ ಎಂದು ಪ್ರಮಾಣಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಕೆರೆ, ಕಾಲುವೆಗಳ ಒತ್ತುವರಿಗೆ ಅವಕಾಶ ಕಲ್ಪಿಸಬಾರದು ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಹಾಗೂ ಹೈಕೋರ್ಟ್ ಪದೇ ಪದೇ ಆದೇಶ ಮಾಡುತ್ತಲೇ ಇವೆ. ಕೆರೆಗಳು ಸೇರಿದಂತೆ ಯಾವುದೇ ಜಲಕಾಯಗಳ ಜಾಗವನ್ನು ಸರ್ಕಾರವಾಗಲೀ ಖಾಸಗಿಯವರಾಗಲೀ ಅನ್ಯ ಉದ್ದೇಶಕ್ಕೆ ಬಳಸಲೇಬಾರದು ಎಂದು ಕಂದಾಯ ಇಲಾಖೆಯು 2020ರ ಜುಲೈ 14ರಂದು ಸುತ್ತೋಲೆ ಹೊರಡಿಸಿದೆ. ಈ ಆದೇಶ ಹೊರಬಿದ್ದ ಬಳಿಕವೇ, ಈ ಕೆರೆಗೆ ಸಂಬಂಧಿಸಿದ ಜಾಗದಲ್ಲಿ ಸ್ಮಶಾನ ಅಭಿವೃದ್ಧಿಗಾಗಿ ಆವರಣ ಗೋಡೆ ನಿರ್ಮಿಸಲಾಗಿದೆ ಎಂದು ಸ್ಥಳೀಯರು ದೂರುತ್ತಾರೆ.

ಕಂದಾಯ ಇಲಾಖೆಯ ದಾಖಲೆ ಪ್ರಕಾರ ಕೆಂಬತ್ತಹಳ್ಳಿ ಕೆರೆ ಎಂಟು ಎಕರೆ ಏಳು ಗುಂಟೆ ಪ್ರದೇಶದಲ್ಲಿ ವ್ಯಾಪಿಸಿದೆ. ಕೆರೆಯ ಸ್ವಲ್ಪ ಭಾಗ ಒತ್ತುವರಿಯಾಗಿದೆ. ಈ ಕೆರೆಗೆ ಸಂಬಂಧಿಸಿದ ಜಾಗದಲ್ಲಿ ಗ್ರಾಮಸ್ಥರು ಹೆಣಗಳನ್ನು ಹೂಳುತ್ತಿದ್ದರು. ಈ ಜಾಗವನ್ನೇ ಸ್ಮಶಾನ ಎಂದು ಗುರುತಿಸಿ, ಅದಕ್ಕೆ ತಡೆಗೋಡೆ ಕಟ್ಟುವ ಪ್ರಯತ್ನ ನಡೆಸಲಾಗುತ್ತಿದೆ. ಇಂತಹ ಪ್ರಯತ್ನಗಳು ಪದೇ ಪದೇ ಮರುಕಳಿಸುತ್ತಿವೆ ಎಂಬುದು ಈ ಕೆರೆ ಉಳಿಸಲು ಹೋರಾಟ ನಡೆಸುತ್ತಿರುವ ಕಾರ್ಯಕರ್ತರ ಆರೋಪ.

ಸುದ್ದಿ 2 ನಿಮಿಷ

ನಾಗರಿಕರ ಬಳಕೆಗೆ ‘ಎಫ್‌ಎಂಎಸ್’

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ರಸ್ತೆಗಳ ಗುಂಡಿ ಸೇರಿದಂತೆ ದುರವಸ್ಥೆ ಬಗ್ಗೆ ‘ಫಿಕ್ಸ್ ಮೈ ಸ್ಟ್ರೀಟ್’ (ಎಫ್‌ಎಂಎಸ್) ಆ್ಯಪ್ ಮೂಲಕ ನಾಗರಿಕರು ದೂರು ನೀಡಬಹುದು.

ಬಿಬಿಎಂಪಿ ಎಂಜಿನಿಯರ್‌ಗಳು ಬಳಸುತ್ತಿದ್ದ ‘ಫಿಕ್ಸ್ ಮೈ ಸ್ಟ್ರೀಟ್’ ಆ್ಯಪ್ ಇದೀಗ ಸಾರ್ವಜನಿಕರಿಗೆ ಲಭ್ಯವಿದೆ. ದಾಸರಹಳ್ಳಿ ಹೊರತುಪಡಿಸಿದಂತೆ ಇತರೆ ಎಲ್ಲ ವಲಯದ ಮುಖ್ಯ ರಸ್ತೆಗಳು ಗುಂಡಿ ಮುಕ್ತವಾಗಿವೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಪಶ್ಚಿಮ ವಲಯದ ಮಲ್ಲೇಶ್ವರ ಉಪ ವಿಭಾಗದ ಸ್ಥಳಗಳಲ್ಲಿ ಪರಿಶೀಲನೆ ನಡೆಸಿ ಅವರು ಮಾತನಾಡಿದರು. ‘ನಮ್ಮ ಕ್ಲಿನಿಕ್’ ಬಿಬಿಎಂಪಿ ವ್ಯಾಪ್ತಿಯ 108 ಪ್ರದೇಶಗಳಲ್ಲಿ ಜ.15ರೊಳಗೆ ಆರಂಭವಾಗಲಿವೆ’ ಎಂದರು.

ಕೇಂದ್ರದ ಹಿಂದುಳಿದ ಪಟ್ಟಿಗೆ ಸೇರಿಸಲು ಕುಂಚಿಟಿಗರ ಒತ್ತಾಯ

ಬೆಂಗಳೂರು: ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಗೆ ಕುಂಚಿಟಿಗ ಸಮುದಾಯ ಸೇರಿಸುವಂತೆ ಕುಂಚಿಟಿಗರ ಮಹಾಸಭಾ ಒತ್ತಾಯಿಸಿದೆ.

ಸಚಿವ ಸಂಪುಟದಲ್ಲಿ ನಿರ್ಣಯ ಕೈಗೊಂಡು ರಾಜ್ಯ ಸರ್ಕಾರವು ಕೇಂದ್ರಕ್ಕೆ ಶಿಫಾರಸು ಮಾಡಬೇಕು ಎಂದು ಮಹಾಸಭಾ ಅಧ್ಯಕ್ಷ ಮುರುಳೀಧರ ಹಾಲಪ್ಪ ಒತ್ತಾಯಿಸಿದರು.

ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಕುಂಚಿಟಿಗ ಸಮುದಾಯವನ್ನು 3ಎ ಪಟ್ಟಿಗೆ ಸೇರಿಸಿದೆ. ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಹ ಪರಾಮರ್ಶೆ ನಡೆಸಿ ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಲು ಕ್ರಮಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಜ.31 ಒಳಗೆ ಸರ್ಕಾರ ನಿರ್ಧಾರ ಕೈಗೊಳ್ಳಬೇಕು ಎಂದರು.

ಬಿ.ಎ. ವಿವೇಕ ರೈಗೆ ‘ಶ್ರೀ ಸಾಹಿತ್ಯ ಪ್ರಶಸ್ತಿ’

ವಿವೇಕ ರೈ

ಬೆಂಗಳೂರು: ಬಿಎಂಶ್ರೀ ಪ್ರತಿಷ್ಠಾನದ ವತಿಯಿಂದ ನೀಡಲಾಗುವ 2023ನೇ ಸಾಲಿನ ‘ಶ್ರೀ ಸಾಹಿತ್ಯ ಪ್ರಶಸ್ತಿ’ಗೆ ಜಾನಪದ ವಿದ್ವಾಂಸರು, ಸಂಶೋಧಕರೂ ಆಗಿರುವ ಬಿ.ಎ. ವಿವೇಕ ರೈ ಅವರನ್ನು ಆಯ್ಕೆ ಮಾಡಲಾಗಿದೆ.

ಹಿ.ಚಿ. ಬೋರಲಿಂಗಯ್ಯ, ನಾ. ದಾಮೋದರ ಶೆಟ್ಟಿ ಮತ್ತು ವಿಜಯಕುಮಾರ್ ಕಟಗಿಹಳ್ಳಿಮಠ ಅವರಿದ್ದ ಆಯ್ಕೆ ಸಮಿತಿಯು ವಿವೇಕ ರೈ ಅವರನ್ನು ಸರ್ವಾನುಮತದಿಂದ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಪ್ರಶಸ್ತಿ ₹1 ಲಕ್ಷ ನಗದು, ಸ್ಮರಣಿಕೆ ಒಳಗೊಂಡಿದೆ.

ಜನವರಿ 22ರಂದು ಬೆಂಗಳೂರಿನ ಎನ್.ಆರ್.ಕಾಲೊನಿಯಲ್ಲಿರುವ ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ತಿಳಿಸಿದ್ದಾರೆ.

ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ಟೀಕೆ

ವಿಧಾನಸೌಧ ನಿರ್ವಹಣೆಗೂ ಹೊರಗುತ್ತಿಗೆ!

ಪ್ರಜಾವಾಣಿ ವಾರ್ತೆ

ನಾಗಮೋಹನ್ ದಾಸ್

ಬೆಂಗಳೂರು: ದೇಶದಲ್ಲಿ ಖಾಸಗೀಕರಣದ ಪರ್ವ ಹೀಗೇ ಮುಂದುವರಿದರೆ ವಿಧಾನಸೌಧ, ಸಂಸತ್ ನಿರ್ವಹಣೆಗೂ ಹೊರಗುತ್ತಿಗೆ ನೀಡುವ ದಿನಗಳೂ ದೂರವಿಲ್ಲ ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಟೀಕಿಸಿದರು.

ಸ್ಲಂ ಜನಾಂದೋಲನ ಕರ್ನಾಟಕ ಸಾವಿತ್ರಿ ಬಾಯಿಫುಲೆ ಅವರ 192ನೇ ಜಯಂತಿ ಅಂಗವಾಗಿ ಶುಕ್ರವಾರ ಹಮ್ಮಿಕೊಂಡಿದ್ದ ಪ್ರತಿನಿಧಿಗಳ ಸಮ್ಮೇಳನದಲ್ಲಿ ‘ವರ್ತಮಾನದಲ್ಲಿ ಸ್ಲಂ ಜನರು ಮತ್ತು ಸಂವಿಧಾನ’ ವಿಷಯ ಕುರಿತು ಅವರು ಮಾತನಾಡಿದರು.

ಮೀಸಲಾತಿ ವಿಷಯದಲ್ಲಿ ಸರ್ಕಾರ ಸಮುದಾಯಗಳ ಮಧ್ಯೆ ಗೊಂದಲ ಸೃಷ್ಟಿಸುತ್ತಿದೆ. ಎಲ್ಲರಿಗೂ ಎಲ್ಲಿಂದ ಮೀಸಲಾತಿ ಕೊಡುತ್ತಾರೆ. ಸಂವಿಧಾನದ ಆಶಯಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಇಂತಹ ಗೊಂದಲಗಳಿಗೆ ಅವಕಾಶವೇ ಇರುವುದಿಲ್ಲ. ಕಲ್ಯಾಣ ರಾಜ್ಯದ ಕನಸೂ ನುಚ್ಚುನೂರಾಗಿದೆ ಎಂದರು.

‘ತಳ ವರ್ಗದ ಜನರೇ ಎಲ್ಲ ಕಾಲಘಟ್ಟದಲ್ಲೂ ಭೂಹೀನರು, ಶೋಷಿತರು, ಬಡವರಾಗಿ ಉಳಿದಿದ್ದಾರೆ. ಸಾಮಾಜಿಕ, ಸಾಂಸ್ಕೃತಿಕ ಅಸಮಾನತೆಗೆ ಜಾತಿ ವ್ಯವಸ್ಥೆಯೆ ಮೂಲ ಕಾರಣ. ಕಸುಬುಗಳ ಆಧಾರದಲ್ಲಿ ಜಾತಿಗಳು ಹುಟ್ಟಿಕೊಂಡವು. ಇಂದು ಕಸುಬುಗಳು ಬದಲಾದರೂ ಜಾತಿ ವ್ಯವಸ್ಥೆ ಬದಲಾಗಲಿಲ್ಲ. ಹೆಣಗಳ ಸಮಾಧಿಗೂ ಜಾತಿ ಹುಡುಕುವ ಮನಸ್ಸು ಸೃಷ್ಟಿಸಿಕೊಂಡಿದ್ದೇವೆ’ ಎಂದು ಅವರು ಹೇಳಿದರು.

ಸಮಾನತೆ, ಸಹಬಾಳ್ವೆಯ ಬದುಕು, ಬಹುತ್ವವನ್ನು ಭಾರತದ ಸಂವಿಧಾನ ಸೊಗಸಾಗಿ ಕಟ್ಟಿಕೊಟ್ಟಿದೆ. ಸಂವಿಧಾನ ನಮ್ಮ ಆತ್ಮವಾಗಿದೆ. ಎಲ್ಲರೂ ಸಂವಿಧಾನವನ್ನು ಓದಿ ಅರ್ಥ ಮಾಡಿಕೊಳ್ಳಬೇಕು. ಸಹಿಷ್ಣುತೆ ಮೊದಲು ಕುಟುಂಬದಿಂದಲೇ ಆರಂಭವಾಗಬೇಕು. ಜಾತಿ ಮೀರುವ ಹೆಜ್ಜೆಗೆ ದೃಢ ಸಂಕಲ್ಪ ಮಾಡಬೇಕು ಎಂದು ಸಲಹೆ ನೀಡಿದರು.

ಲೇಖಕಿ ದು.ಸರಸ್ವತಿ ಅಧ್ಯಕ್ಷತೆ ವಹಿಸಿದ್ದರು. ಸಾಮಾಜಿಕ ಕಾರ್ಯಕರ್ತ ಶಿವಸುಂದರ್, ಸ್ಲಂ ಜನಾಂದೋಲನದ ರಾಜ್ಯ ಸಂಚಾಲಕ ಎ. ನರಸಿಂಹಮೂರ್ತಿ, ಸಂಚಾಲಕಿ ಚಂದ್ರಮ್ಮ ಉಪಸ್ಥಿತರಿದ್ದರು.

ನೈರುತ್ಯ ರೈಲ್ವೆ G20
ಇ–ಟೆಂಡರು ಸೂಚನೆ ಸಂ. SWRTMYPR202223WT01
ದಿನಾಂಕ: 03.01.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬಾಲಾಸ್ಟ್ ಕ್ಲೀನಿಂಗ್ ಯಂತ್ರಗಳ ಮೇಲೆ ವಿಯರ್ ರೆಸಿಸ್ಟೆಂಟ್ ಪ್ಲೇಟ್‌ಗಳ ತಯಾರಿಕೆ, ಪೂರೈಕೆ ಮತ್ತು ಅಳವಡಿಸುವಿಕೆ – ಬಿಸಿಎಂ–351, ಬಿಸಿಎಂ–384, ಬಿಸಿಎಂ–392 & ಬಿಸಿಎಂ–400.	ರೂ. 39,92,760/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03.02.2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್, ಟ್ರ್ಯಾಕ್ ಯಂತ್ರಗಳು ಯಶವಂತಪುರ
PUB/593/AAD/PRB/SWR/2022-23
S.W.Railways SWRRLY SWRRLY

PUBLIC NOTICE

TO WHOMSOEVER IT MAY CONCERN

My client has negotiated to purchase the Schedule Property from **Sri.B.R.Sujay, Son of late B.R.Murthy**, who has represented that he is having clear and marketable title over the Schedule Property.

Any persons claiming to have any right or claims or objection, may lodge their objections or claim along with supporting documents with the undersigned within **10 days** from the date of publication of this notice.

If no such objection or claims is received within the prescribed time, my client will proceed to complete the transaction. If any objection and claim is lodged beyond the prescribed period it shall not be reckoned and it shall be deemed that all objections and claims by whomsoever are waived.

SCHEDULE PROPERTY

All that piece and parcel of Immovable agricultural dry land bearing Sy.No.43/1, measuring 1.35.00.00(1 Acre 35 Guntas out of 2 Acres and 37.04 Guntas) and 3 Guntas of Kharab land being part of the converted land Vide Conversion Order No. BDS.ALN.SR(D)23:91-92, dated 02-11-1991 and Sy.No.43/2, measuring 2 Acre 05 guntas (out of 4.23.08.00) in all measuring 4.00.00.00 (Four Acres) and 3 Guntas of Kharab and bounded on the **East by:** Newly formed NH 207 & Remaining portion of Sy.No.43/2, **West by:** Gramathana/ Private land in Sy.No.45, **North by:** Property bearing Sy.No.44, **South by:** Road leading from Devanahalli to Sulibele and Remaining portion of Sy.No.43/2 retained by Sri.B.R.Sujay.

B. Srinivas, Advocate
"SUNDERA RAMA" No.230,
39th 'C' Cross, 9th Main, 5th Block,
Jayanagar, Bangalore-560041.
Ph: 9900148162
Email: srinivasadvocate@gmail.com
Date: 05-01-2023

ನಿಧನ ವಾರ್ತೆ

ಪಾರ್ವತಮ್ಮ

ರಾಜರಾಜೇಶ್ವರಿನಗರ: ಕೊಡಿಗೇಹಳ್ಳಿ ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ಎನ್.ನಂಜುಂಡೇಶ್ ಅವರ ತಾಯಿ ಪಾರ್ವತಮ್ಮ (88) ಅವರು ನಿಧನರಾದರು.

ಮೃತರಿಗೆ ಆರು ಮಂದಿ ಪುತ್ರರು ಹಾಗೂ ಪುತ್ರಿ ಇದ್ದಾರೆ.

ಅವರ ಅಂತ್ಯಕ್ರಿಯೆ ಕೊಡಿಗೆಹಳ್ಳಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂವಾದದಲ್ಲಿ ಲೇಖಕಿ ಕೆ.ಶರೀಫಾ ಕಳವಳ

‘ವಿಷಕಾರಿ ಚಿಂತನೆ ಬಿತ್ತುವ ಕೆಲಸ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ ನೆಲ, ಜಲ ಎಲ್ಲವೂ ಕಲುಷಿತವಾದಂತೆ ಜನರ ಮನಸ್ಸಿನಲ್ಲೂ ವಿಷಕಾರಿ ಚಿಂತನೆ ಬಿತ್ತಲಾಗುತ್ತಿದೆ’ ಎಂದು ಲೇಖಕಿ ಡಾ.ಕೆ. ಶರೀಫಾ ಕಳವಳ ವ್ಯಕ್ತಪಡಿಸಿದರು.

ಭೀಮ್ ಆರ್ಮಿ ಬೆಂಗಳೂರು ನಗರ ಜಿಲ್ಲಾ ಸಮಿತಿಯು ಸಾವಿತ್ರಿಬಾಯಿ ಫುಲೆ ಅವರ 192ನೇ ಜನ್ಮದಿನಾಚರಣೆ ಹಾಗೂ ಮಹಿಳೆಯರ ಹಕ್ಕುಗಳ ಕುರಿತು ಸಂವಾದದಲ್ಲಿ ಅವರು ಮಾತನಾಡಿದರು.

‘ಮಾನವೀಯ ವಿಚಾರ ಹಾಗೂ ಮಹಿಳಾ ಹಕ್ಕುಗಳ ಕುರಿತು ಸಾವಿತ್ರಿಬಾಯಿ ಫುಲೆ ಮೊದಲು ಧ್ವನಿಯೆತ್ತಿದ್ದರು. ರಾಜರ ಆಳ್ವಿಕೆಯ ಕಾಲದಲ್ಲಿಯೇ ಫುಲೆ ಅವರು ಸ್ವದೇಶಿ ಕಲ್ಪನೆಯ ಬಗ್ಗೆ ಮಾತನಾಡಿದ್ದರು. ಇಂದು ವಿದ್ಯಾರ್ಥಿನಿಯರು ಆತ್ಮಸ್ಥೈರ್ಯದಿಂದ ಶಿಕ್ಷಣ ಪಡೆಯುತ್ತಿದ್ದಾರೆ ಎಂದರೆ ಅವರ ಹೋರಾಟವೇ ಕಾರಣ’ ಎಂದು ಪ್ರತಿಪಾದಿಸಿದರು.

ವೈದ್ಯೆ ಸರೋಜಾ ಮಾತನಾಡಿ, ‘ಫುಲೆ ಅವರು ಹೊತ್ತಿಸಿದ ಕಿಡಿ ಇಂದು ಅಕ್ಷರದ ಕ್ರಾಂತಿಯಾಗುತ್ತಿದೆ. ಶಿಕ್ಷಕರದ್ದು ಬರೀ ವೃತ್ತಿಯಲ್ಲ. ಅದು ಸಮಾಜದಲ್ಲಿ ಬದಲಾವಣೆ ತರುವ ಕಾಯಕ ಎಂದು ತೋರಿಸಿಕೊಟ್ಟವರು’ ಎಂದು ಹೇಳಿದರು.

ನಗರದಲ್ಲಿ ಮಂಗಳವಾರ ‘ಭೀಮ್ ಆರ್ಮಿ’ ಸಾವಿತ್ರಿಬಾಯಿ ಫುಲೆ ಜನ್ಮದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಮಹಿಳೆಯರ ಹಕ್ಕುಗಳ ಕುರಿತು ಒಂದು ಸಂವಾದ ಕಾರ್ಯಕ್ರಮದಲ್ಲಿ (ಎಡದಿಂದ) ಮಹಾರಾಣಿ ಕಾಲೇಜಿನ ಇತಿಹಾಸ ವಿಭಾಗದ ಪ್ರಾಧ್ಯಾಪಕಿ ಪ್ರೊ.ಕಾವಲಮ್ಮ, ಕನ್ನಡ ಪ್ರಾಧ್ಯಾಪಕಿ ಎಂ.ಎಸ್ ಆಶಾದೇವಿ, ಬಹು ಮಾಧ್ಯಮ ತಜ್ಞೆ ಶಮಂತಾ, ಲೇಖಕಿ ಡಾ.ಸರೋಜಾ, ಡಾ.ಕೆ ಶರೀಫಾ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕಿ ಎಂ.ಎಸ್.ಆಶಾದೇವಿ ಮಾತನಾಡಿ, ‘ವಿಚಾರಗಳನ್ನು ಮರೆಯುತ್ತಿದ್ದೇವೆ. ಮೌಲ್ಯಗಳು ಕಣ್ಮರೆಯಾಗುತ್ತಿವೆ. ಈ ಸೋಲಿನ ಹೊಣೆಗಾರರು ನಾವೇ. ಸಾವಿತ್ರಿಬಾಯಿ ಫುಲೆ ಅವರು ಮಹಿಳಾ ಶಕ್ತಿ ತೋರಿಸಿಕೊಟ್ಟಿದ್ದಾರೆ. ನಮ್ಮ ಉದ್ಧಾರವನ್ನು ನಾವೇ ಮಾಡಿಕೊಳ್ಳುತ್ತೇವೆ’ ಎಂದು ಹೇಳಿದರು.

ಬಹುಮಾಧ್ಯಮ ತಜ್ಞೆ ಶಮಂತಾ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪ್ರೊ.ಕಾವಲಮ್ಮ ಹಾಜರಿದ್ದರು.

‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ಅವಕಾಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಜಾಪ್ರಭುತ್ವ ವ್ಯವಸ್ಥೆಯು ಎಲ್ಲರಿಗೂ ಅವಕಾಶ ಕಲ್ಪಿಸುತ್ತಿದ್ದು, ಪ್ರಜಾತಂತ್ರ ವ್ಯವಸ್ಥೆಗೆ ನಾವೆಲ್ಲರೂ ಕೃತಜ್ಞರಾಗಿರಬೇಕು’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ನವರತ್ನ ಅಗ್ರಹಾರ ಬಳಿಯ ಸ್ವಿಸ್‌ಟೌನ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ರೊನಾಲ್ಡ್ ಕೊಲಾಸೊ ಅವರ ಕುರಿತಾದ ‘ವಿಶ್ವಭೂಷಣ ಡಾ.ರೊನಾಲ್ಡ್ ಕೊಲಾಸೊ’ ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು. ‘ಪ್ರಧಾನಿ ನರೇಂದ್ರ ಮೋದಿ ಚಹಾ ಮಾರುತ್ತಿದ್ದರು. ಲಂಡನ್ ಪಾರ್ಲಿಮೆಂಟ್ ಸದಸ್ಯ ವೀರೇಂದ್ರ ಶರ್ಮ ಬಸ್ ನಿರ್ವಾಹಕ ಆಗಿದ್ದರು. ಇವರೆಲ್ಲ ಈ ಹಂತಕ್ಕೆ ಬೆಳೆಯಲು ಪ್ರಜಾಪ್ರಭುತ್ವ ಕಾರಣ. ಹೀಗಾಗಿ, ಎಲ್ಲರೂ ಪ್ರಜಾಪ್ರಭುತ್ವಕ್ಕೆ ಧನ್ಯವಾದ ಸಲ್ಲಿಸಬೇಕು’ ಎಂದರು.

ಕೊಲಾಸೊ ಅವರು ದಾನದ ಪರಂಪರೆ ಸಮರ್ಥವಾಗಿ ಮುಂದುವರಿಸಿದ್ದಾರೆ ಎಂದರು.

ಶಾಸಕ ದಿನೇಶ್ ಗುಂಡೂರಾವ್ , ‘ಕೊಲಾಸೊ ದೇಶ, ಭಾಷೆ, ಗಡಿಯನ್ನು ಮೀರಿ, ಶಿಕ್ಷಣ, ಆರೋಗ್ಯ, ಸಾರ್ವಜನಿಕ ಮೂಲಕ ಸೌಕರ್ಯ ಅಭಿವೃದ್ಧಿಪಡಿಸಿದ್ದಾರೆ. ಜಾತಿ, ಧರ್ಮದ ಚೌಕಟ್ಟು ದಾಟಿ ರಚನಾತ್ಮಕ ಕೆಲಸಗಳನ್ನು ಮಾಡಿದ್ದಾರೆ’ ಎಂದರು.

ಡಾ.ರೊನಾಲ್ಡ್ ಕೊಲಾಸೊ ಅವರ ಕುರಿತ ‘ವಿಶ್ವಭೂಷಣ ಡಾ.ರೊನಾಲ್ಡ್ ಕೊಲಾಸೊ’ ಕೃತಿ ಬಿಡುಗಡೆ ಸಮಾರಂಭದಲ್ಲಿ ಶಾಸಕ ದಿನೇಶ್ ಗುಂಡೂರಾವ್, ಎಐಸಿಸಿ ಸದಸ್ಯೆ ಡಾ.ಆರತಿ ಕೃಷ್ಣ, ಲಂಡನ್ ಪಾರ್ಲಿಮೆಂಟ್ ಸದಸ್ಯ ಡಾ.ವೀರೇಂದ್ರ ಶರ್ಮಾ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಮೊದಲಾದವರು ಹಾಜರಿದ್ದರು.

ಲಂಡನ್ ಸಂಸತ್ ಸದಸ್ಯ ಡಾ.ವೀರೇಂದ್ರ ಶರ್ಮ, ‘ಮನುಕುಲಕ್ಕೆ ಸೇವೆ ಸಲ್ಲಿಸುತ್ತಿರುವ ಡಾ.ರೊನಾಲ್ಡ್ ಕೊಲಾಸೊ ಅವರನ್ನು ಇಡೀ ಜಗತ್ತು ಗಮನಿಸುತ್ತಿದೆ. ಲಂಡನ್ ಪಾರ್ಲಿಮೆಂಟ್ ಅವರ ಸೇವೆ ಗುರುತಿಸಿ ಗೌರವಿಸಿದೆ’ ಎಂದರು.

ಡಾ.ರೊನಾಲ್ಡ್ ಕೊಲಾಸೊ ಮಾತನಾಡಿ, ‘ನಾನು ಯಾವುದೇ ಪ್ರಚಾರದ ಉದ್ದೇಶದಿಂದ ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿಲ್ಲ. ಇದು ಆತ್ಮತೃಪ್ತಿಗಾಗಿ ಮಾಡುತ್ತಿರುವ ಕೆಲಸ’ ಎಂದರು.

ಎಐಸಿಸಿ ಸದಸ್ಯೆ ಡಾ.ಆರತಿ ಕೃಷ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಬೋಜೇಗೌಡ ಉಪಸ್ಥಿತರಿದ್ದರು. ಲಂಡನ್ ಸಂಸತ್‌ನ ಗೌರವಕ್ಕೆ ಪಾತ್ರರಾದ ಡಾ.ರೊನಾಲ್ಡ್ ಕೊಲಾಸೊ ಅವರಿಗೆ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್ ಗೌರವ ದಾಖಲೆ ಹಸ್ತಾಂತರಿಸಲಾಯಿತು.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562101
ದೂರವಾಣಿ ಸಂಖ್ಯೆ: ಕಛೇರಿ: 08156–295427
ಫ್ಯಾಕ್ಸ್: 08156–295427 ಇಮೇಲ್: eemidcbpura@gmail.com
ಅಲ್ಪಾವಧಿ ಟೆಂಡರ್ ಅಧಿಸೂಚನೆ
ಸಂಖ್ಯೆ:ಕಾಸಬ/ತಾಂಶಾ/ಸ.ಇಂ/ ಟೆಂಡರ್ ಪ್ರಕಟಣೆ ಸಂಖ್ಯೆ: 15/2022–23, ದಿನಾಂಕ: 04/01/2023
4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ ಯೋಜನೆ ಅಡಿಯಲ್ಲಿ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಶಿಡ್ಲಘಟ್ಟ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಕೆ.ಡಬ್ಲ್ಯೂ 1 & 2 ನಿಬಂಧನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1 ಮತ್ತು 2 ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ಮೊತ್ತ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 18/01/2023 ಸಾಯಂಕಾಲ 4.00 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ: 21/01/2023 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ–08156–295427 ಮತ್ತು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080–25501216 ಮತ್ತು 080–25501227 ರಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಬಿಬಿಎಂಪಿ ಗುತ್ತಿಗೆದಾರರ ಪ್ರತಿಭಟನೆ

ಬೆಂಗಳೂರು: ಗುತ್ತಿಗೆದಾರರಿಗೆ 25 ತಿಂಗಳಿಂದ ಬಾಕಿ ಇರುವ ₹3 ಸಾವಿರ ಕೋಟಿ ಮೌಲ್ಯದ ಬಿಲ್ ಪಾವತಿ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘ ಜ.9ರಿಂದ ಪ್ರತಿಭಟನೆ ನಡೆಸಲಿದೆ.

‘ಬಿಬಿಎಂಪಿ ಅನುದಾನದಲ್ಲಿ ನಿರ್ವಹಿಸಿರುವ ಕಾಮಗಾರಿಗಳಿಗೆ ಕೂಡಲೇ ‘ಸಾಮಾನ್ಯ ಎಲ್‌ಒಸಿ’ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ, ತ್ಯಾಜ್ಯ ನಿರ್ವಹಣೆ ಸೇರಿದಂತೆ ಎಲ್ಲ ರೀತಿಯ ಗುತ್ತಿಗೆದಾರರು ಕೆಲಸವನ್ನು ಸ್ಥಗಿತಗೊಳಿಸಲಿದ್ದಾರೆ’ ಎಂದು ಸಂಘದ ಅಧ್ಯಕ್ಷ ಆರ್. ಅಂಬಿಕಾಪತಿ ಹೇಳಿದರು.

‘ಬಿಲ್ ಅನ್ನು ಹಿಂದಿನಂತೆಯೇ ಕೇಂದ್ರ ಕಚೇರಿಯಿಂದ ಪಾವತಿಸಬೇಕು. ಹೊಸದಾಗಿ ಆದೇಶಿಸಿರುವ ಗುಣಮಟ್ಟ ನಿಯಂತ್ರಣ ಮತ್ತು ಟಿವಿಸಿಸಿ ರ್‍ಯಾಂಡಮೈಸೇಷನ್‌ನಿಂದ ಗುತ್ತಿಗೆದಾರರಿಗೆ ಹೆಚ್ಚಿನ ಹೊರೆಯಾಗಿದೆ. ಇದನ್ನು ನಿಲ್ಲಿಸಬೇಕು’ ಎಂದು ಆಗ್ರಹಿಸಿದರು.

‘ಗುತ್ತಿಗೆದಾರರ ಹಲವು ಬೇಡಿಕೆಗಳನ್ನು ಈಡೇರಿಸಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರೊಂದಿಗೆ ಐದಾರು ಬಾರಿ ಭೇಟಿ ಮಾಡಿ ಮನವಿ ಸಲ್ಲಿಸಿದ್ದೆವು. ಈಡೇರಿಸುವ ಭರವಸೆಯನ್ನೂ ನೀಡಿದ್ದರು. ಆದರೆ ಯಾವುದೇ ಕ್ರಮವಾಗಿಲ್ಲ’ ಎಂದು ಪ್ರಧಾನ ಕಾರ್ಯದರ್ಶಿ ಜಿ.ಎಂ.ನಂದಕುಮಾರ್ ತಿಳಿಸಿದರು.

‘ಡಿಸೆಂಬರ್ ಅಂತ್ಯದೊಳಗೆ ಗುತ್ತಿಗೆದಾರರಿಗೆ ಬಿಲ್ ಪಾವತಿಸಲಾಗುತ್ತದೆ ಎಂದು ಮುಖ್ಯ ಆಯುಕ್ತರು ಭರವಸೆ ನೀಡಿದ್ದು, ಅದು ಈಡೇರಿಲ್ಲ. ಹೀಗಾಗಿ ಜ.9ರ ಸೋಮವಾರ ಎಲ್ಲ ಕಾಮಗಾರಿಗಳನ್ನು ಸ್ಥಗಿತಗೊಳಿಸಿ ಬಿಬಿಎಂಪಿ ಕೇಂದ್ರ ಕಚೇರಿ ಬಳಿ ಪ್ರತಿಭಟನೆ ನಡೆಸಲಾಗುತ್ತದೆ’ ಎಂದರು.

ನಗರದಲ್ಲಿ ಇಂದು

ಅಡ್ವೊಕೇಟ್ ಜನರಲ್ ಕಪ್–2023: ಉದ್ಘಾಟನೆ: ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ, ಪ್ರಭುಲಿಂಗ ಕೆ. ನಾವದಗಿ, ವಿಶಾಲ್ ರಘು, ವಿವೇಕ್ ಸುಬ್ಬಾರೆಡ್ಡಿ, ಎಂ.ಬಿ. ನರಗುಂದ, ಉದಯ್ ಹೊಳ್ಳ, ಆಯೋಜನೆ: ಸ್ಥಳ: ಯೂನಿವರ್ಸಿಟಿ ಆಫ್ ಡೈರಿ ಸೈನ್ಸ್, ಹೆಬ್ಬಾಳ, ಬೆಳಿಗ್ಗೆ 8

ಶಿಕ್ಷಣ ಹಬ್ಬ ಅಭಿನಂದನಾ ಕಾರ್ಯಕ್ರಮ: ಅತಿಥಿಗಳು: ಮಂಜಮ್ಮ ಜೋಗತಿ, ರಂಜಿನಿ ರಾಘವನ್, ಅಧ್ಯಕ್ಷತೆ: ರವಿ. ಡಿ. ಚನ್ನಣ್ಣನವರ್, ಆಯೋಜನೆ: ಶಿಕ್ಷಣ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 9

ಜಿನ ಭಜನಾ ಉದ್ಘಾಟನಾ ಸಮಾರಂಭ: ಧರ್ಮಸ್ಥಳ ಸುರೇಂದ್ರಕುಮಾರ್, ದಿಲೀಪ್ ಸುರಾನಾ, ಕುಮಾರ್ ಪಾಲ್ ಸಿಸೋಡಿಯಾ ಜಿ., ಉಪಸ್ಥಿತಿ: ಅನಿತಾ ಸುರೇಂದ್ರಕುಮಾರ್, ಪುಷ್ಪರಾಜ್ ಜೈನ್, ಆಯೋಜನೆ: ಭಾರತೀಯ ಜೈನ್ ಮಿಲನ್, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಳಿಗ್ಗೆ 9.30

ಛಾಯಾಪತಿ ದೊಡ್ಡಬಿದರೆ ಅವರ ‘ತಲಾಂತರ’ ಪುಸ್ತಕ ಬಿಡುಗಡೆ: ಬಿ.ಆರ್. ಲಕ್ಷ್ಮಣರಾವ್, ಅಧ್ಯಕ್ಷತೆ: ನರಹಳ್ಳಿ ಬಾಲಸುಬ್ರಹ್ಮಣ್ಯ, ಪುಸ್ತಕ ಪರಿಚಯ: ವೈ.ವಿ. ಗುಂಡೂರಾವ್, ಉಪಸ್ಥಿತಿ: ಬಾಬು ಹಿರಣ್ಣಯ್ಯ, ಎನ್. ರಾಮನಾಥ್, ಆಯೋಜನೆ: ಶ್ರೀನಿವಾಸ ಪುಸ್ತಕ ಪ್ರಕಾಶನ, ಸ್ಥಳ: ಅಶ್ವತ್ಥ ಕಲಾಭವನ, ಎನ್. ಆರ್. ಕಾಲೊನಿ, ಬೆಳಿಗ್ಗೆ 10

ಶಾಲಾ–ಕಾಲೇಜು ವಾರ್ಷಿಕೋತ್ಸವ ಸಮಾರಂಭ: ಉದ್ಘಾಟನೆ: ಕೆ. ಗೋಪಾಲಯ್ಯ, ಅತಿಥಿಗಳು: ಜಿ.ಕೆ. ಶ್ರೀರಾಮ್, ಮನೋಜ್ ಎಂ., ಅಧ್ಯಕ್ಷತೆ: ರವಿ ಪ್ರಕಾಶ್, ಆಯೋಜನೆ ಮತ್ತು ಸ್ಥಳ: ಅಂಬೇಡ್ಕರ್ ಮೆಮೋರಿಯಲ್ ಸೊಸೈಟಿ, ಪಶ್ಚಿಮ ಕಾರ್ಡ್ ರಸ್ತೆ, ಮಹಾಲಕ್ಷ್ಮೀಪುರ, ಮಧ್ಯಾಹ್ನ 3

ಗಾನ ಸಂಭ್ರಮ: ಆಯೋಜನೆ: ಬೆಂಗಳೂರು ಮಲ್ಲಿಗೆ, ಸ್ಥಳ: ಸಿಂಗರ್ಸ್ ಅಕಾಡೆಮಿ, ಎಂ.ಇ.ಟಿ. ಲೇಔಟ್, ಗೆದ್ದಲಹಳ್ಳಿ, ಸಂಜಯನಗರ, ಮಧ್ಯಾಹ್ನ 3.30

ಎಂ.ಎಸ್. ನಂಜುಂಡ ರಾವ್ ನ್ಯಾಷನಲ್ ಅವಾರ್ಡ್, ಚಿತ್ರಕಲಾ ಸಮ್ಮಾನ ಪ್ರಶಸ್ತಿ ಪ್ರದಾನ: ಎಸ್. ಎಂ. ಕೃಷ್ಣ, ಅತಿಥಿಗಳು: ಎಸ್. ಎಂ. ಜಯಕರ, ಪ್ರಶಸ್ತಿ ಪುರಸ್ಕೃತರು: ಕೆ. ಲಕ್ಷ್ಮ ಗೌಡ, ಕೆ. ವಿಠ್ಠಲ್ ಭಂಡಾರಿ, ಮಾರ್ಟಾ ಜಾಕಿಮೊವಿಚ್, ರಜನಿ ಪ್ರಸನ್ನ, ಶಾಂತಮಣಿ ಮುದ್ದಯ್ಯ, ಅಧ್ಯಕ್ಷತೆ: ಬಿ.ಎಲ್. ಶಂಕರ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 4.30

ಅಂಬಾರಿ–2023: ಅತಿಥಿಗಳು: ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಮಲಿಂಗಾರೆಡ್ಡಿ, ವಿವೇಕ್ ಸುಬ್ಬಾರೆಡ್ಡಿ, ಪಿ.ಎಸ್. ಮಾಯಾಚಂದ್ರ, ಧರ್ಮೇಂದ್ರ ಕುಮಾರ್, ಕೋಮಲ ಗೋವಿಂದಪ್ಪ, ಅಧ್ಯಕ್ಷತೆ, ಎ.ಎಸ್. ವಿಷ್ಣುಭರತ್, ಆಯೋಜನೆ ಮತ್ತು ಸ್ಥಳ: ಆರ್.ವಿ. ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್‌ನ ಆವರಣ, ಜಯನಗರ, ಸಂಜೆ 4.30

ರಜತ ಮಹೋತ್ಸವ ಸಮಾರಂಭ: ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಅತಿಥಿಗಳು: ಎಸ್.ಟಿ. ಸೋಮಶೇಖರ್, ಎಂ. ಕೃಷ್ಣಪ್ಪ, ಶರಣ ಗೌಡ ಜಿ. ಪಾಟೀಲ್, ಅಧ್ಯಕ್ಷತೆ: ಐ. ಜಯಪ್ರಸಾದ ಶೆಟ್ಟಿ, ಆಯೋಜನೆ: ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಸ್ಥಳ: ಆರ್.ಟಿ.ಬಿ. ಸಭಾಂಗಣ, ಬಂಟರ ಸಂಘ, ವಿಜಯನಗರ, ಸಂಜೆ 5

ಎಸ್. ಗೋವಿಂದಪ್ಪ ಪಾವಗಡ ಅವರ ‘ಹರಿದ ಚಡಾವು ಮತ್ತು ಬೆಂಕಿ ಮುಳ್ಳು’ ಪುಸ್ತಕಗಳ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಎಲ್. ಹನುಮಂತಯ್ಯ, ಅತಿಥಿಗಳು: ಸುಬ್ಬು ಹೊಲೆಯಾರ್, ಕೆ.ವೈ. ನಾರಾಯಣಸ್ವಾಮಿ, ಟಿ.ಎಂ. ಮಂಜುನಾಥ್, ವೈ. ರಮೇಶ್, ಕೃತಿ ಕುರಿತು: ಎಚ್. ಲಕ್ಷ್ಮೀನಾರಾಯಣಸ್ವಾಮಿ, ಉಪಸ್ಥಿತಿ: ಎಸ್. ಗೋವಿಂದಪ್ಪ ಪಾವಗಡ, ಕುಮಾರ್ ಇಂದ್ರಬೆಟ್ಟ, ಆಯೋಜನೆ: ಡಾ.ಎಸ್. ಗೋವಿಂದಪ್ಪ ಪಾವಗಡ ಸ್ನೇಹ ಬಳಗ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಇನ್ಫೋಸಿಸ್ ಪ್ರಶಸ್ತಿ ಪ್ರದಾನ: ಅತಿಥಿಗಳು: ಶಫಿ ಗೋಲ್ಡ್‌ವಾಸರ್, ಉದ್ಘಾಟನಾ ಭಾಷಣ: ಎಸ್. ಗೋಪಾಲಕೃಷ್ಣನ್, ಅತಿಥಿಗಳು ಪರಿಚಯ: ನಾರಾಯಣ ಮೂರ್ತಿ, ಉಪಸ್ಥಿತಿ: ಸಲಿಲ್ ಪಾರೇಖ್, ಆಯೋಜನೆ: ದಿ ಇನ್ಫೋಸಿಸ್ ಸೈನ್ಸ್ ಫೌಂಡೇಷನ್, ಸ್ಥಳ: ದಿ ಲೀಲಾ ಪ್ಯಾಲೆಸ್, ಸಂಜೆ 5.30

ಕರ್ನಾಟಕ ಶಾಸ್ತ್ರೀಯ ಸಂಗೀತ: ದ್ವಂದ್ವ ಗಾಯನ: ಕಲಾಂಬಿಕ ಸಹೋದರಿಯರಾದ ಕಲಾಧರಿ ಭವಾನಿ, ಅಂಬಿಕಾ ದತ್, ಪಿಟೀಲು: ಎಸ್. ಯಶಸ್ವಿ, ಮೃದಂಗ: ಸಿ.ಎ. ಗುರುದತ್, ಖಂಜಾರ: ಶ್ರೀಧರ್ ಶಿವಶಂಕರ್, ಆಯೋಜನೆ: ಗಿರಿನಗರ ಸಂಗೀತ ಸಭಾ ಟ್ರಸ್ಟ್, ಸ್ಥಳ: ವಿಮಲಶ್ರೀ ಪ್ರವಚನ ಮಂದಿರ, ಗಿರಿನಗರ, 2ನೇ ಹಂತ, ಸಂಜೆ 6

‘ಸೀತೂ ಮದುವೆ’ ನಾಟಕ ಪ್ರದರ್ಶನ: ನಿರ್ದೇಶನ: ಶೈಲೇಶ್ ಕುಮಾರ್ ಎಂ.ಎಂ., ರಚನೆ: ಬೀಚಿ, ಆಯೋಜನೆ: ಸೈಡ್ ವಿಂಗ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7.30

‘ಸುಭದ್ರಾ ಕಲ್ಯಾಣ’ ಯಕ್ಷಗಾನ ಪ್ರದರ್ಶನ: ಮುಖ್ಯ ಅಭ್ಯಾಗತರು: ಆರ್. ಚಂದ್ರಶೇಖರ್, ಬಿ.ವಿ. ರಾಜಾರಾಮ್, ನಾಗಲಕ್ಷ್ಮೀ ಕೆ. ರಾವ್, ಆಯೋಜನೆ: ಯಕ್ಷಕಲಾ ಅಕಾಡೆಮಿ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 5.30


‘ಸುಭದ್ರಾ ಕಲ್ಯಾಣ’ ಯಕ್ಷಗಾನದ ದೃಶ್ಯ

BEFORE THE PRESIDING OFFICER: INDUSTRIAL TRIBUNAL AT BANGALORE
Serial Application No.1059/2021
IN
I.D. NO.13/2013

BETWEEN
The Divisional Controller
K.S.R.T.C
Bangalore Central Division,
Bangalore. **APPLICANT**

AND

Sri. M.R. Sampath Kumar **RESPONDENT**

SUMMONS/NOTICE TO THE RESPONDENT
Sri. M.R. Sampath Kumar,
C/o Sri. M.D. Narasimhamurthy,
20 K.M., Bellary Road,
Hunasamaranahalli,
Bangalore North,
Bangalore-562 157.

Whereas, the Applicant Corporation has filed the above Serial Application under section 33(2) (b) of I.D. Act against you for approval of dismissal order dated 25/08/2021, you are hereby summoned to appear before this Tribunal in person or by a pleader on the 25th day of January 2023 at 11 a.m. to answer the same, filing which suit/application will be disposed of exparte.

Given under my hand and the seal of the Court on this 23rd day of December 2022.

BY ORDER OF THE TRIBUNAL
Sheristedar
Industrial Tribunal
Bangalore

ADVOCATE FOR APPLICANT
B L Sanjeev
Advocate
M/S BLS LEGAL, TF-1, Alpine Arch, Langford Road, Bangalore

DIPR/CP/3923/AKAR/22-23

ನಾಲ್ಕು ವರ್ಷಗಳಿಂದ ಯೋಜನೆ ಸ್ಥಗಿತ: ಹೆಣ್ಣು ಮಕ್ಕಳಿಗೆ ದೊರೆಯದ ಸ್ಯಾನಿಟರಿ ನ್ಯಾಪ್‌ಕಿನ್‌ಗಳು

'ಶುಚಿ'ಯಾಗದ ಟೆಂಡರ್ ಪ್ರಕ್ರಿಯೆ

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಕಳೆದ ನಾಲ್ಕು ವರ್ಷಗಳಿಂದ ಸ್ಥಗಿತಗೊಂಡಿರುವ ಆರೋಗ್ಯ ಇಲಾಖೆಯ 'ಶುಚಿ' ಯೋಜನೆಗೆ ಈಗ ಟೆಂಡರ್ ಪ್ರಕ್ರಿಯೆಯೇ ಅಂತಿಮಗೊಳಿಸದಿರುವುದೇ ಅಡ್ಡಿಯಾಗಿದೆ. ಹೀಗಾಗಿ, ಈ ಶೈಕ್ಷಣಿಕ ವರ್ಷವೂ ಈ ಯೋಜನೆಯ ಪ್ರಯೋಜನ ಹೆಣ್ಣುಮಕ್ಕಳಿಗೆ ದೊರೆಯುವ ಸಾಧ್ಯತೆ ಕ್ಷೀಣ.

2021ರ ಸೆಪ್ಟೆಂಬರ್‌ನಿಂದ 2022ರ ಜುಲೈವರೆಗೆ ಮೂರು ಬಾರಿ ಟೆಂಡರ್ ಕರೆಯಲಾಗಿದೆ. ವಿವಿಧ ಕಾರಣ ನೀಡಿ ಎರಡು ಟೆಂಡರ್‌ಗಳನ್ನು ರದ್ದು ಮಾಡಲಾಗಿದೆ. ಮೂರನೇ ಬಾರಿ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಅತಿ ಕಡಿಮೆ ದರ (ಪ್ರತಿಪ್ಯಾಡ್‌ಗೆ ₹2.55) ನಮೂದಿಸಿದ ಬಿಡ್ದಾರರನ್ನು ಆಯ್ಕೆ ಮಾಡಲಾಗಿದೆ. ಆದರೆ, ಕಾರ್ಯಾದೇಶ ನೀಡಬೇಕಾದರೆ ಭೇಟಿಯಾಗುವಂತೆ ಸೂಚಿಸಿ ಅನಗತ್ಯವಾಗಿ ವಿಳಂಬ ಮಾಡಲಾಗುತ್ತಿದೆ ಎಂದು ಗುತ್ತಿಗೆದಾರರು ದೂರಿದ್ದಾರೆ.

ಸರ್ಕಾರಿ, ಅನುದಾನಿತ ಮತ್ತು ಸರ್ಕಾರಿ ವಸತಿ ಶಾಲಾ–ಕಾಲೇಜುಗಳ ಹದಿಹರೆಯದ ಎಲ್ಲ ಹೆಣ್ಣುಮಕ್ಕಳಿಗೆ ಸ್ಯಾನಿಟರಿ ನ್ಯಾಪ್‌ಕಿನ್ ವಿತರಿಸುವುದು 'ಶುಚಿ' ಯೋಜನೆಯ ಉದ್ದೇಶ. ರಾಜ್ಯದಲ್ಲಿ ಅಂದಾಜು 19 ಲಕ್ಷ ಹೆಣ್ಣುಮಕ್ಕಳನ್ನು ಈ ಯೋಜನೆ ಅಡಿಯಲ್ಲಿ ಗುರುತಿಸಲಾಗಿದೆ.

ಸ್ಥಗಿತಗೊಳಿಸಲಾಗಿದ್ದ ಈ ಯೋಜನೆಗೆ ಮರುಚಾಲನೆ ನೀಡಲು 2021–22 ನೇ ಸಾಲಿನ ಬಜೆಟ್‌ನಲ್ಲಿ ₹47 ಕೋಟಿ ಮೀಸಲಿರಿಸಿ, ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮಕ್ಕೆ (ಕೆಎಸ್‌ಎಂಎಸ್‌ಸಿಎಲ್) ಅನುಷ್ಠಾನದ ಹೊಣೆ ವಹಿಸಲಾಗಿತ್ತು.

'ಶುಚಿ'ಯಂಥ ಮಹತ್ವದ ಯೋಜನೆಗಳನ್ನು ಸ್ಥಗಿತಗೊಳಿಸುವುದೇ ಅಪರಾಧ. ಹೆಣ್ಣು ಮಕ್ಕಳ ಗೌರವ ಕಾಪಾಡುವ ಯೋಜನೆಯನ್ನು ನಿಲ್ಲಿಸುವುದು ಅಮಾನವೀಯ.
ವಿ.ಪಿ. ನಿರಂಜನಾರಾಧ್ಯ, ಶಿಕ್ಷಣ ತಜ್ಞ

ಟೆಂಡರ್‌ಗಳನ್ನು ಸ್ವೀಕರಿಸಲಾಗಿದ್ದು, ಕಾರ್ಯಾದೇಶವನ್ನು ನೀಡುವಂತೆ ಕೆಎಸ್‌ಎಂಎಸ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಲಾಗಿದೆ. ಆದರೆ, ಅವರು ಇದುವರೆಗೆ ನೀಡಿಲ್ಲ
ಡಿ. ರಂದೀಪ್, ಆರೋಗ್ಯ ಇಲಾಖೆ ಆಯುಕ್ತ

ಪ್ರತಿ ಯೂನಿಟ್‌ಗೆ ಅಂದಾಜು ದರ ₹21.50ರಂತೆ ಒಟ್ಟು 2.18 ಕೋಟಿ ಯೂನಿಟ್ (1ಯೂನಿಟ್‌ನಲ್ಲಿ 10 ಪ್ಯಾಡ್‌ಗಳು) ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಖರೀದಿಸಲು ಟೆಂಡರ್ ಕರೆಯಲಾಗಿತ್ತು. ಆದರೆ, ನಿಗಮವು ಇದುವರೆಗೆ ಕೇವಲ ಟೆಂಡರ್ ಪ್ರಕ್ರಿಯೆಯಲ್ಲಿ ಸಮಯ ವ್ಯರ್ಥ ಮಾಡಿದೆ.

ಮೂರು ಬಾರಿ ಟೆಂಡರ್: ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಖರೀದಿಗೆ ಇದುವರೆಗೆ ಮೂರು ಬಾರಿ ಟೆಂಡರ್ ಕರೆಯಲಾಗಿದೆ. ಮೊದಲ ಬಾರಿ 2021ರ ಸೆಪ್ಟೆಂಬರ್ 7ರಂದು ಟೆಂಡರ್ ಕರೆಯಲಾಗಿತ್ತು. ಬಿಡ್ ಮಾಡಿದ್ದ ಸ್ಯಾನಿಟರಿ ಪ್ಯಾಡ್‌ಗಳ ಮಾದರಿಗಳನ್ನು ಚೆನ್ನೈನ 'ಟ್ರಸ್ಟ್ ಇನ್ ಅನಾಲಿಟಿಕಲ್ ಸೊಲ್ಯೂಷನ್ಸ್' ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸಲಾಗಿತ್ತು. ಈ ಮಾದರಿಗಳು ನಿಗದಿಪಡಿಸಿದ ಮಾನದಂಡಗಳನ್ನು ಪೂರೈಸಿಲ್ಲ ಎಂದು ತಾಂತ್ರಿಕ ಸಮಿತಿ ತಿರಸ್ಕರಿಸಿತು. ಪ್ಯಾಡ್‌ಗಳು ಕೇವಲ 0.2 ಮಿಲಿ ಮೀಟರ್ ಕಡಿಮೆ ಉದ್ದ ಇದ್ದರೂ ತಿರಸ್ಕರಿಸಿ, ಇಡೀ ಟೆಂಡರ್ ಪ್ರಕ್ರಿಯೆಯನ್ನು ರದ್ದುಗೊಳಿಸಲಾಗಿತ್ತು.

ನಂತರ, 2022ರ ಫೆಬ್ರುವರಿಯಲ್ಲಿ ಮತ್ತೆ ಕರೆಯಲಾಗಿದ್ದ ಟೆಂಡರ್‌ನಲ್ಲಿ ಕೇಂದ್ರ ಸರ್ಕಾರಿ ಸ್ವಾಮ್ಯದ ಎಚ್‌ಎಲ್‌ಎಲ್ ಲೈಫ್ ಕೇರ್ ಬಿಡ್ ಮಾಡಲಾಗಿತ್ತು. ಆದರೆ, ಉಕ್ರೇನ್–ರಷ್ಯಾ ಯುದ್ಧದ ಕಾರಣದಿಂದ ಕಚ್ಚಾವಸ್ತುಗಳ ಬೆಲೆ ಏರಿಕೆಯಾಗಿದೆ. ಇದರಿಂದ, ದರ ವ್ಯತ್ಯಾಸಗಳಾಗಿವೆ ಎನ್ನುವ ಕಾರಣವನ್ನು ನೀಡಿ ಈ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸಲಾಯಿತು.

2022ರ ಜುಲೈ 28ರಂದು ಮೂರನೇ ಬಾರಿ ಕರೆಯಲಾಗಿದ್ದ ಟೆಂಡರ್ ಪ್ರಕ್ರಿಯೆ ನಡೆದಿದೆ. ಈ ಟೆಂಡರ್ ಪ್ರಕ್ರಿಯೆಯ ಅವಧಿ 90 ದಿನ ಮುಗಿದಿರುವುದರಿಂದ ಮತ್ತೆ ಹೊಸದಾಗಿ ಟೆಂಡರ್ ಕರೆಯಲು ಇಲಾಖೆ ಸಿದ್ಧತೆ ನಡೆಸಿದೆ.

ಪ್ರಜಾವಾಣಿ ವಿಶೇಷ

'ಮುಟ್ಟಿನ ನೈರ್ಮಲ್ಯದ ಅರಿವು ಮೂಡಿಸುವ ಯೋಜನೆ'

ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್‌ಗಳನ್ನು ಉಚಿತವಾಗಿ ನೀಡುವ ಮೂಲಕ ಮುಟ್ಟಿನ ನೈರ್ಮಲ್ಯ ನಿರ್ವಹಣೆ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ 2013–14ನೇ ಸಾಲಿನಲ್ಲಿ 'ಶುಚಿ' ಯೋಜನೆ ಆರಂಭಿಸಲಾಗಿತ್ತು.

'ಗ್ರಾಮೀಣ ಪ್ರದೇಶಗಳಲ್ಲಿ ಮುಟ್ಟಿನ ಸ್ರಾವದ ನಿರ್ವಹಣೆಗೆ ಹಳೆಯ ಬಟ್ಟೆ ಬಳಸುವುದು ಮತ್ತು ಅವೈಜ್ಞಾನಿಕ ವಿಧಾನಗಳನ್ನು ಅನುಸರಿಸುತ್ತಿದ್ದಾರೆ. ಕೆಲವೊಮ್ಮೆ ಕುಟುಂಬ ಸದಸ್ಯರು ಬಳಸಿದ ಬಟ್ಟೆಯನ್ನು ಹಂಚಿಕೊಳ್ಳುವುದು ಮತ್ತು ಮರುಬಳಕೆ ಮಾಡುವುದು ಹಲವು ಅಧ್ಯಯನಗಳಿಂದ ತಿಳಿದು ಬಂದಿದೆ. ಇದರಿಂದ, ಸಂತಾನೋತ್ಪತ್ತಿ ಅಂಗಾಂಗಳಿಗೆ ಸೋಂಕು ಹರಡುವ ಸಾಧ್ಯತೆ ಹೆಚ್ಚಿದ್ದು, ಗಂಭೀರ ಸಮಸ್ಯೆಗಳಿಗೂ ಕಾರಣವಾಗಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಸುರಕ್ಷಿತ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್‌ಗಳನ್ನು ಬಳಸುವುದರಿಂದ ಇಂತಹ ಸಮಸ್ಯೆಗಳನ್ನು ಪರಿಹರಿಸಬಹುದು' ಎಂದು ಆರೋಗ್ಯ ಇಲಾಖೆ ನಿರ್ದೇಶಕರು ವರದಿ ಸಲ್ಲಿಸಿದ್ದರು. ಹೀಗಾಗಿ, 'ಶುಚಿ' ಯೋಜನೆ ರೂಪಿಸಲಾಗಿತ್ತು.

ಹೈಕೋರ್ಟ್‌ನಿಂದಲೂ ನಿರ್ದೇಶನ

ಶುಚಿ ಯೋಜನೆಯನ್ನು ಮರು ಜಾರಿಗೊಳಿಸುವಂತೆ ಹೈಕೋರ್ಟ್ 2021ರ ಮೇ 3ರಂದು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಆಡಳಿತಾತ್ಮಕ ಅನುಮೋದನೆ ಪಡೆದು 90 ದಿನಗಳಲ್ಲಿ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಒದಗಿಸುವುದಾಗಿ ಸರ್ಕಾರ ನ್ಯಾಯಾಲಯಕ್ಕೆ ತಿಳಿಸಿತ್ತು. ನಂತರ, ಇದೇ ವಿಷಯಕ್ಕೆ ಸಂಬಂಧಿಸಿದಂತೆ 2021ರ ಜುಲೈನಲ್ಲಿ ಆರೋಗ್ಯ ಇಲಾಖೆ ಆಯುಕ್ತರಿಗೂ ನ್ಯಾಯಾಲಯ ಸಮನ್ಸ್ ಜಾರಿಗೊಳಿಸಿತ್ತು.

ವಿಭಾಗ	ಸ್ಯಾನಿಟರಿ ನ್ಯಾಪ್‌ಕಿನ್ ಹಂಚಿಕೆ ಮಾಡಬೇಕಿರುವ ಪ್ರಮಾಣ
ಮೈಸೂರು ವಿಭಾಗ	38,72,112
ಕಲಬುರ್ಗಿ ವಿಭಾಗ	52,87,931
ಬೆಂಗಳೂರು ವಿಭಾಗ	56,64,189
ಬೆಳಗಾವಿ ವಿಭಾಗ	70,22,279
ಒಟ್ಟು	2,18,46,511

'ಡಿಎಚ್ ಬೆಂಗಳೂರು 2040 ಶೃಂಗ' ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರೂಪರೇಷೆಗಳನ್ನು ಆಳವಾಗಿ ವಿಶ್ಲೇಷಿಸುವ ಕಳಕಳಿಯೊಂದಿಗೆ 'ಪ್ರಜಾವಾಣಿ'ಯ ಸೋದರ ಪತ್ರಿಕೆಯಾದ ಡೆಕ್ಕನ್ ಹೆರಾಲ್ಡ್ 'ಡಿಎಚ್ ಬೆಂಗಳೂರು 2040 ಶೃಂಗ'ವನ್ನು ಶನಿವಾರ (ಜನವರಿ 7) ಆಯೋಜಿಸಿದೆ. ನೀತಿ ನಿರೂಪಕರು, ಕಾರ್ಪೊರೇಟ್ ವಲಯದ ದಿಗ್ಗಜರು, ಉದ್ಯಮಿಗಳು, ಕಲಾವಿದರು, ಸಾಮಾಜಿಕ ಕಾರ್ಯಕರ್ತರನ್ನು ಒಂದೇ ವೇದಿಕೆಯಲ್ಲಿ ತರುವ ಅಪರೂಪದ ಕಾರ್ಯಕ್ರಮ ಇದು.

ಐಟಿ ಸಿಟಿಯಾಗಿ ಹೊರಹೊಮ್ಮಿರುವ ಬೆಂಗಳೂರನ್ನು ಮುನ್ನಡೆಸಲು ಸದೃಢ, ಸುಸ್ಥಿರ ವಿಧಾನವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಈ ಶೃಂಗವನ್ನು ಡೆಕ್ಕನ್ ಹೆರಾಲ್ಡ್ ಏರ್ಪಡಿಸಿದೆ. ನಗರದ ಜೆ.ಡಬ್ಲ್ಯು ಮ್ಯಾರಿಯಟ್ ಹೋಟೆಲ್‌ನಲ್ಲಿ ಬೆಳಿಗ್ಗೆ 10ರಿಂದ ಸಂಜೆ 6 ಗಂಟೆ ತನಕ ವಿವಿಧ ಗೋಷ್ಠಿಗಳು ನಡೆಯಲಿವೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶೃಂಗವನ್ನು ಉದ್ಘಾಟಿಸಲಿದ್ದು, ಬಯೋಕಾನ್ ಕಾರ್ಯನಿರ್ವಾಹಕ ಅಧ್ಯಕ್ಷೆ ಕಿರಣ್ ಮಜುಮ್ದಾರ್ ಶಾ ಪ್ರಾಸ್ತಾವಿಕ ಮಾತನಾಡುವರು.

'ಹಸಿರು ಬೆಂಗಳೂರು ರೂಪಿಸುವ ನಿಟ್ಟಿನಲ್ಲಿ ಸಂಚಾರ ವ್ಯವಸ್ಥೆಯ ಮರು ಪರಿಕಲ್ಪನೆ' ಕುರಿತ ಗೋಷ್ಠಿಯಲ್ಲಿ ಬಾಷ್ ಕಂಪನಿ ಜಂಟಿ ವ್ಯವಸ್ಥಾಪಕ ನಿರ್ದೇಶಕ ಗುರುಪ್ರಸಾದ್ ಮುದ್ಲಾಪುರ, ವಿಶೇಷ ಕಮಿಷನರ್(ಸಂಚಾರ) ಎಂ.ಎ.ಸಲೀಂ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್, ಸನ್ ಮೊಬಿಲಿಟಿ ಸಹ ಸಂಸ್ಥಾಪಕ ಚೇತನ್ ಮೈನಿ ಭಾಗವಹಿಸುವರು.

'ಬೆಂಗಳೂರಿನ ಪ್ರಜಾಕೀಯ' ಗೋಷ್ಠಿಯಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ, ಶಾಸಕಿ ಸೌಮ್ಯರೆಡ್ಡಿ, ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರರಾವ್ ಪಾಲ್ಗೊಳ್ಳುವರು.

'ವಿಶ್ವದ ಪ್ರಯೋಗಾಲಯ: ವಿಜ್ಞಾನ ಮತ್ತು ನಾವೀನ್ಯದಲ್ಲಿ ಬೆಂಗಳೂರಿನ ಭವಿಷ್ಯ' ಗೋಷ್ಠಿಯಲ್ಲಿ ಮರ್ಸಿಡಿಸ್ ಬೆಂಜ್ ಸಂಶೋಧನಾ ಮತ್ತು ಅಭಿವೃದ್ಧಿ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಮನು ಸಾಲೆ, ರಾಮನ್ ಸಂಶೋಧನಾ ಸಂಸ್ಥೆಯ ನಿರ್ದೇಶಕ ತರುಣ್ ಸೌರದೀಪ್, ಗೋಪಿಚಂದ್ ಕತ್ರಗಡ್ಡ, ಪ್ರೊ.ನವಕಾಂತ ಭಟ್ ಭಾಗವಹಿಸುವರು.

ನಂತರ ನಡೆಯುವ ವಿವಿಧ ಗೋಷ್ಠಿಗಳಲ್ಲಿ ಪುರವಂಕರ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಆಶಿಶ್ ಪುರವಂಕರ, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಪುರವಂಕರ ಸಿಇಒ ಅಭಿಷೇಕ್ ಕಪೂರ್, ಎನ್‌ಎಸ್‌ಎನ್ ಮೂರ್ತಿ, ಹಾಕಿ ಆಟಗಾರ ಅಭಿಷೇಕ ಲಿಲ್ಲಾಳ್, ಅಥ್ಲೀಟ್ ರೀತು ಅಬ್ರಹಾಂ, ಬ್ಯಾಡ್ಮಿಂಟನ್ ಆಟಗಾರ ಯು.ವಿಮಲ್ ಕುಮಾರ್, ನಂದನ್ ಕಾಮತ್, ಸೈನ್ಸ್ ಗ್ಯಾಲರಿ ಸಂಸ್ಥಾಪಕ ನಿರ್ದೇಶಕ ಜಾಹ್ನವಿ ಫಾಲ್ಕಿ, ಅರುಂಧತಿ ಘೋಷ್, ಮಾನಸಿ ಪ್ರಸಾದ್, ಕಾಮಿನಿ ಸಾಹ್ನಿ ಪಾಲ್ಗೊಳ್ಳುವರು.

ಸೋನು ವೇಣುಗೋಪಾಲ್ ಅವರ ಸ್ಯಾಂಡ್ ಆರ್ಟ್ ಕಾಮಿಡಿ ನಡೆಸಿಕೊಡುವರು. 'ಬೆಂಗಳೂರು–ಭಾರತದ ಮುಂದಿನ ಮೊದಲ ಮನರಂಜನಾ ಕೇಂದ್ರ' ಗೋಷ್ಠಿಯಲ್ಲಿ ನಟ ಪ್ರಕಾಶ್ ರಾಜ್, ನಟಿ ಶ್ರುತಿ ಹರಿಹರನ್, ಗಾಯಕ ವಿಜಯಪ್ರಕಾಶ್ ಭಾಗವಹಿಸುವರು. ಶೃಂಗದ ಕುರಿತು ಅಂತಿಮ ನುಡಿಗಳನ್ನು ಮದನ್ ಪಡಕಿ ಆಡುವರು. ಅಪರೂಪ್ ಗುಪ್ತ ಮತ್ತು ತಂಡದಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ.

'ವಸತಿ ಶಾಲೆ ಪ್ರವೇಶಾತಿ 100ಕ್ಕೆ ಏರಿಕೆ'

ಮಡಿಕೇರಿ: 'ಸರ್ಕಾರಿ ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಯನ್ನು ಮುಂದಿನ ಶೈಕ್ಷಣಿಕ ವರ್ಷದಿಂದ 50ರಿಂದ 100ಕ್ಕೆ ಏರಿಸಲಾಗುವುದು' ಎಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಜಿಲ್ಲೆಯ ಕುಶಾಲನಗರದ ಕೂಡಿಗೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಸಭಾಂಗಣದಲ್ಲಿ ಶುಕ್ರವಾರ ನಡೆದ 'ಒಬವ್ವ ಆತ್ಮ ರಕ್ಷಣೆ ಕಲೆ' ಪ್ರದರ್ಶನಕ್ಕೆ ಚಾಲನೆ ನೀಡಿದ ನಂತರ ಅವರು ಮಾತನಾಡಿದರು.

'ರಾಜ್ಯದಲ್ಲಿ ವಸತಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡುತ್ತಿರುವುದರಿಂದ ಪ್ರವೇಶಕ್ಕೆ ಬೇಡಿಕೆ ಇದೆ. ಇದನ್ನು ಪರಿಗಣಿಸಿ, 6ನೇ ತರಗತಿಗೆ ಹೆಚ್ಚುವರಿಯಾಗಿ 50 ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗುವುದು. 'ಎ' ಮತ್ತು 'ಬಿ' ವಿಭಾಗ ರೂಪಿಸಲಾಗುವುದು' ಎಂದರು.

'ವಸತಿಶಾಲೆಯಲ್ಲಿ ಓದಿದ 14 ವಿದ್ಯಾರ್ಥಿಗಳು ಐಎಎಸ್ ಅಧಿಕಾರಿಗಳಾಗಿರುವುದು ಗುಣಮಟ್ಟದ ಶಿಕ್ಷಣಕ್ಕೆ ಸಾಕ್ಷಿಯಾಗಿದೆ. ರಾಜ್ಯದಲ್ಲಿ ಒಟ್ಟು 830 ವಸತಿ ಶಾಲೆಗಳಿದ್ದು, 2 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ' ಎಂದು ಹೇಳಿದರು.

ರಥೋತ್ಸವ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಬನಶಂಕರಿಯಲ್ಲಿ ಶುಕ್ರವಾರ ಆದಿಶಕ್ತಿ ಬನಶಂಕರಿ ಜಾತ್ರಾ ರಥೋತ್ಸವವು ಸಂಭ್ರಮದಿಂದ ಜರುಗಿತು. ಭಾರಿ ಸಂಖ್ಯೆಯಲ್ಲಿ ಭಕ್ತರು ನೆರೆದಿದ್ದರು
–ಪ್ರಜಾವಾಣಿ ಚಿತ್ರ/ಮಂಜುನಾಥ ಗೋಡೆಪ್ಪನವರ

'ಗಾಂಧಿ ಬಜಾರ್ ಉಳಿಸಿ' ಹೋರಾಟಕ್ಕೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನಸ್ಸು ಗಾಂಧಿ ಬಜಾರ್' ಇಲ್ಲಿನ ಜನರ ಮನಸ್ಸನ್ನು ಒಡೆದು ಹಾಕಿ, ನಾಗರಿಕರಿಗೆ ತೊಂದರೆ ಕೊಡುವ ಯೋಜನೆಯಾಗಿದೆ' ಎಂದು ನೈಜ ಹೋರಾಟಗಾರರ ವೇದಿಕೆಯ ಎಚ್.ಎಂ. ವೆಂಕಟೇಶ್ ದೂರಿದರು.

ನೈಜ ಹೋರಾಟಗಾರರ ವೇದಿಕೆ, ಜನಾಧಿಕಾರ ಸಂಘರ್ಷ ಪರಿಷತ್, ಹಳ್ಳಿ ಮಕ್ಕಳ ಸಂಘಟನೆ, ಮಾಹಿತಿ ಅಧ್ಯಯನ ಕೇಂದ್ರ ಇನ್ನಿತರ ಸಂಘಟನೆಗಳ ಸಹಭಾಗಿತ್ವದಲ್ಲಿ 'ಪ್ರಜಾ ನ್ಯಾಯವೇದಿಕೆ'ಯ ಸದಸ್ಯರು ಶುಕ್ರವಾರ ಗಾಂಧಿಬಜಾರ್‌ನಲ್ಲಿ ಕಾಮಗಾರಿ ಸ್ಥಳ ಪರಿಶೀಲನೆ ನಡೆಸಿ ನಿವಾಸಿಗಳ, ವ್ಯಾಪಾರಸ್ಥರ ಬೀದಿ ಬದಿ ವ್ಯಾಪಾರಿಗಳ ಸಮಸ್ಯೆಯನ್ನು ಆಲಿಸಿದರು.

'ಗಾಂಧಿ ಬಜಾರ್ ಉಳಿಸಿ ಹೋರಾಟ ಸಮಿತಿ' ಎಂಬ ಘೋಷಣೆಯಡಿ ಮುಂದಿನ ದಿನಗಳಲ್ಲಿ ಹೋರಾಟ ಮಾಡಲು ನಿರ್ಧರಿಸಲಾಗಿದೆ ಎಂದು ಎಚ್.ಎಂ. ವೆಂಕಟೇಶ್ ತಿಳಿಸಿದರು.

'ಗಾಂಧಿ ಬಜಾರಿನ 70 ಅಡಿ ರಸ್ತೆಯನ್ನು 20 ಅಡಿಗೆ ಕಡಿಮೆ ಮಾಡಿ ಕೇವಲ ಪಾದಚಾರಿಗಳ ಮಾರ್ಗವನ್ನಾಗಿ ಪರಿವರ್ತಿಸಲಾಗುತ್ತಿದೆ. ಬೆಂಗಳೂರು ದಕ್ಷಿಣದಿಂದ ಉತ್ತರದ ಕಡೆಗೆ ಸಂಪರ್ಕಿಸುವ ಗಾಂಧಿ ಬಜಾರ್ ರಸ್ತೆಯನ್ನು ಸಂಚಾರ ಮುಕ್ತಗೊಳಿಸಿ ಪಾದಚಾರಿ ಮಾರ್ಗವಾಗಿಸುವುದರಿಂದ 125 ವರ್ಷಗಳಿಗೂ ಹೆಚ್ಚು ಕಾಲದಿಂದ ಇಲ್ಲಿ ವಾಸಿಸುತ್ತಿರುವವರು, ವ್ಯಾಪಾರಕ್ಕಾಗಿ ಬರುವ ಬೆಂಗಳೂರಿನ ವಿವಿಧ ಭಾಗಗಳ ಜನಸಾಮಾನ್ಯರಿಗೆ ಈ ಯೋಜನೆಯು ತೊಂದರೆ ಉಂಟು ಮಾಡುತ್ತಿದೆ' ಎಂದರು.

'ಬಿಬಿಎಂಪಿ ಇಲ್ಲಿ ನಡೆಸುತ್ತಿರುವ ಕಾಮಗಾರಿ ಬಗ್ಗೆ ಮಾಹಿತಿ ಫಲಕವನ್ನೂ ಹಾಕಿಲ್ಲ. ನಾಗರಿಕರನ್ನು ಕತ್ತಲೆಯಲ್ಲಿಟ್ಟು ಕಾಮಗಾರಿ ನಡೆಸಲಾಗುತ್ತದೆ' ಎಂದು ಆರೋಪಿಸಿದರು.

'ಗಾಂಧಿಬಜಾರ್ ಮುಖ್ಯರಸ್ತೆಯಲ್ಲಿ ಎಲೆಕ್ಟ್ರಾನಿಕ್ ಗೇಟ್‌ಗಳನ್ನು ಅಳವಡಿಸಿ ಇಲ್ಲಿನ ನಿವಾಸಿಗಳಿಗೆ ಪಾಸ್‌ಗಳನ್ನು ವಿತರಿಸಿ ಅವರ ವಾಹನ ಮಾತ್ರ ಬರುವಂತೆ ನೋಡಿಕೊಳ್ಳಲಾಗುತ್ತದೆ ಎಂಬ ಮಾಹಿತಿ ಇದೆ. ಇದರಿಂದ ಇಲ್ಲಿನ ನಿವಾಸಿಗಳ ಸ್ವಾತಂತ್ರ್ಯವನ್ನೇ ಹರಣ ಮಾಡಿದಂತಾಗುತ್ತದೆ' ಎಂದರು.

ಪೊಲೀಸ್ ಮಾಜಿ ಕಮಿಷನರ್ ಭಾಸ್ಕರ್ ರಾವ್ ಬೆಂಬಲ ವ್ಯಕ್ತಪಡಿಸಿದರು. ವ್ಯಾಸರಾಜ ಮಠದ ಸ್ವಾಮೀಜಿ, ರಾಮಕೃಷ್ಣಾಶ್ರಮದ ಮಠದ ಸ್ವಾಮೀಜಿ ಜನರ ಪರವಾಗಿ ನಿಂತು ಹೋರಾಟಕ್ಕೆ ಮುಂದಾಗಿರುವುದಾಗಿ ತಿಳಿಸಿದ್ದಾರೆ ಎಂದರು.

ವಿವಿಧ ಸಂಘಟನೆಗಳ ಸದಸ್ಯರಾದ ಆದರ್ಶ ಅಯ್ಯರ್, ನಾಗೇಶ್ವ ಬಾಬು, ವಾಸುದೇವಮೂರ್ತಿ, ಪ್ರಕಾಶ್ ಬಾಬು, ವಿಶ್ವನಾಥ್, ಶಂಕರ್, ಲೋಕೇಶ್, ಸ್ಥಳೀಯ ವ್ಯಾಪಾರಿಗಳ ಒಕ್ಕೂಟ ಮತ್ತು ರೆಸಿಡೆನ್ಶಿಯಲ್ ವೆಲ್‌ಫೇರ್ ಅಸೋಸಿಯೇಷನ್‌ನ ಗುರುಪ್ರಸಾದ್, ವೆಂಕಟೇಶ್, ಬೆಣ್ಣೆ ಸುಧೀಂದ್ರ ಹಾಜರಿದ್ದರು.

ಗಾಂಧಿ ಬಜಾರ್ ಮುಖ್ಯರಸ್ತೆಯಲ್ಲಿ ಬಿಬಿಎಂಪಿ ಕೈಗೊಂಡಿರುವ ಕಾಮಗಾರಿಯನ್ನು 'ಪ್ರಜಾ ನ್ಯಾಯವೇದಿಕೆ'ಯ ಸದಸ್ಯರು ಶುಕ್ರವಾರ ಪರಿಶೀಲಿಸಿದರು. ಶಂಕರ್, ಎಂ.ಜಿ. ವಾಸುದೇವಮೂರ್ತಿ, ಲೋಕೇಶ್, ಗುರುಪ್ರಸಾದ್, ಆದರ್ಶ ಅಯ್ಯರ್, ಎಚ್.ಎಂ. ವೆಂಕಟೇಶ್ ಇದ್ದರು

ಒಂದು ತಿಂಗಳಲ್ಲೇ ಕಳಪೆ ಕಾಮಗಾರಿ ಬಹಿರಂಗ: ಜನರ ಆಕ್ರೋಶ

'ರ‍್ಯಾಪಿಡ್ ರಸ್ತೆ'ಯಲ್ಲಿ ಬಿರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಪ್ರಥಮ 'ರ‍್ಯಾಪಿಡ್ ರಸ್ತೆ' ಎಂದು ಬಿಬಿಎಂಪಿ ಬಿಂಬಿಸಿರುವ ರಸ್ತೆ ಬಿರುಕುಬಿಟ್ಟಿದೆ. ಕಳಪೆ ಕಾಮಗಾರಿಗೆ ಇದು ಮತ್ತೊಂದು ನಿದರ್ಶನ ಎಂಬ ಆರೋಪ ವ್ಯಕ್ತವಾಗಿದೆ.

ಹಳೇ ಮದ್ರಾಸ್ ರಸ್ತೆಯಲ್ಲಿ 337.5 ಮೀಟರ್ ರಸ್ತೆಯನ್ನು 'ಪ್ರೀಕಾಸ್ಟ್ ಪೋಸ್ಟ್ ಟೆನ್ಷನಿಂಗ್ ಕಾಂಕ್ರೀಟ್ ಪೇವ್‌ಮೆಂಟ್' ತಂತ್ರಜ್ಞಾನದ 'ರ‍್ಯಾಪಿಡ್ ರಸ್ತೆ'ಯನ್ನು ಪ್ರಾಯೋಗಿಕವಾಗಿ ನಿರ್ಮಿಸಲಾಗಿದೆ. ಈ 'ರ‍್ಯಾಪಿಡ್ ರಸ್ತೆ' ಮೂರ್ನಾಲ್ಕು ಕಡೆ ಬಿರುಕು ಬಿಟ್ಟಿದೆ. ಪ್ರೀಕಾಸ್ಟ್ ಪ್ಯಾನೆಲ್ ನಿರ್ಮಾಣದಲ್ಲಿ ಗುಣಮಟ್ಟದ ಸಿಮೆಂಟ್ ಮಿಶ್ರಣ ಇಲ್ಲದ್ದೇ ಇದಕ್ಕೆ ಕಾರಣ ಎನ್ನಲಾಗಿದೆ. ಕ್ಷಿಪ್ರವಾಗಿ ರಸ್ತೆ ನಿರ್ಮಾಣವಾಗುತ್ತದೆ ಎಂದು ಸಂತಸದಲ್ಲಿದ್ದ ನಾಗರಿಕರು ಇದೀಗ ಕಳಪೆ ಕಾಮಗಾರಿಗೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

'ಗುತ್ತಿಗೆದಾರರು ತಂತ್ರಜ್ಞಾನವನ್ನು ಸರಿಯಾಗಿ ಅನುಷ್ಠಾನಗೊಳಿಸಿಲ್ಲ. ಹೀಗಾಗಿ ಸಮಸ್ಯೆ ಆಗಿದೆ. 20ರಿಂದ 21 ಪ್ಯಾನೆಲ್‌ಗಳನ್ನು ಜೋಡಿಸುವಾಗ ಹೆಚ್ಚಾಗಿ ಎಳೆದಿರುವುದರಿಂದ ಈ ರೀತಿಯ ಬಿರುಕು ಬಂದಿರಬಹುದು. ಕೆಲವೆಡೆ ಬೇಸ್ ಸರಿಯಾಗಿ ಲೆವೆಲಿಂಗ್ ಆಗದ್ದರಿಂದ ಹೀಗಾಗಿರಬಹುದು' ಎಂದು ಅಲ್ಟ್ರಾಟೆಕ್‌ನ ತಾಂತ್ರಿಕ ತಜ್ಞ ಪಿ.ಎಂ. ಹಿರೇಮಠ ತಿಳಿಸಿದರು.

'ಭಾರತೀಯ ವಿಜ್ಞಾನ ಸಂಸ್ಥೆ ಈ ಪ್ರಾಯೋಗಿಕ ರಸ್ತೆಯನ್ನು ಪರೀಕ್ಷೆ ನಡೆಸಲಿದೆ. ಅವರು ವರದಿ ಕೊಟ್ಟ ಮೇಲೆ ಅದರಂತೆ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗುತ್ತದೆ' ಎಂದರು.

'ಮೂರು ದಿನದಲ್ಲಿ ರಸ್ತೆ ಸಿದ್ಧ' ಎಂಬ ಘೋಷಣೆಯೊಂದಿಗೆ ವೈಟ್ ಟಾಪಿಂಗ್ ಬದಲು 'ರ‍್ಯಾಪಿಡ್ ರಸ್ತೆಯನ್ನು' ನಿರ್ಮಿಸಲಾಗುತ್ತಿದೆ. ಇದರಿಂದ ತಿಂಗಳು ರಸ್ತೆ ನಿರ್ಮಾಣಕ್ಕೆ ಕಾಯಬೇಕಾಗಿಲ್ಲ. ಗುಂಡಿ ಬೀಳಲ್ಲ, ಹಾಳಾಗಲ್ಲ, ನೂರು ವರ್ಷ ಬಾಳಿಕೆ ಬರುತ್ತದೆ' ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಹೇಳಿದ್ದರು.

ನ.22ರಂದು ಕಾಮಗಾರಿ ಆರಂಭವಾಗಿದ್ದ 'ರ‍್ಯಾಪಿಡ್ ರಸ್ತೆ'ಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಡಿ.8ರಂದು ಉದ್ಘಾಟಿಸಿದ್ದರು. 'ಎಂಜಿನಿಯರ್‌ಗಳು ಹೇಳಿದಂತೆ, ವೈಟ್ ಟಾಪಿಂಗ್ ರಸ್ತೆಗಿಂತ ಶೇ 40ರಷ್ಟು ಹೆಚ್ಚು ಹಣ ನೀಡಲು ಸಾಧ್ಯವಿಲ್ಲ. ಮೊದಲು ಇದರ ಸಾಮರ್ಥ್ಯ ಸಾಬೀತಾಗಲಿ. ನಂತರ ಮುಂದುವರಿಸುವ ಬಗ್ಗೆ ಚಿಂತಿಸೋಣ' ಎಂದು ಬೊಮ್ಮಾಯಿ ಹೇಳಿದ್ದರು. ಅವರು ಹೀಗೆ ಹೇಳಿದ್ದ ಒಂದು ತಿಂಗಳೊಳಗೇ 'ರ‍್ಯಾಪಿಡ್ ರಸ್ತೆ' ಅಲ್ಲಲ್ಲಿ ಬಿರುಕುಬಿಟ್ಟಿದೆ.

'ರ‍್ಯಾಪಿಡ್ ರಸ್ತೆ' ಗುಣಮಟ್ಟ ಪರೀಕ್ಷೆ ನಡೆಸಲು ಐಐಎಸ್‌ಸಿಗೆ ವಹಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದ್ದರು. ಪರೀಕ್ಷೆ ಇನ್ನೂ ಆರಂಭವಾಗಿಲ್ಲ. ಇದರೊಳಗೇ ರಸ್ತೆ ಬಿರುಕುಬಿಟ್ಟಿದೆ.

'ಈ ಬಿರುಕು 'ಹೇರ್‌ಲೈನ್ ಕ್ರ್ಯಾಕ್' ಆಗಿದ್ದು, ಆಳವಾಗಿಲ್ಲ. 3ರಿಂದ 4 ಎಂಎಂ ಆಳವಾಗಿದ್ದು, ಇದನ್ನು ಮುಚ್ಚಲು ಕ್ರಮ ಕೈಗೊಳ್ಳಲಾಗಿದೆ. ವಾಹನ ಸಂಚಾರಕ್ಕೆ ತೊಂದರೆ ಇಲ್ಲ' ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಪ್ರತಿಕ್ರಿಯಿಸಿದರು.



ಹಳೇ ಮದ್ರಾಸ್ ರಸ್ತೆಯಲ್ಲಿ ನಿರ್ಮಿಸಲಾಗಿರುವ 'ರ‍್ಯಾಪಿಡ್ ರಸ್ತೆ'ಯಲ್ಲಿ ಕಾಣಿಸಿಕೊಂಡಿರುವ ಬಿರುಕು

ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧಿಕಾರಿ ಬಂಧನ

ಬೆಂಗಳೂರು: ಮಹಿಳಾ ಸ್ವಸಹಾಯ ಗುಂಪುಗಳ ಸದಸ್ಯರಿಗೆ ಕಿರು ಹಣಕಾಸು ಯೋಜನೆಯಡಿ ಸಹಾಯಧನ ನೀಡುವ ಅರ್ಜಿ ನೋಂದಾಯಿಸಲು ₹ 3,000 ಲಂಚ ಪಡೆಯುತ್ತಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿ ನಾರಾಯಣಪ್ಪ ಎಂಬವರನ್ನು ಲೋಕಾಯುಕ್ತ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ರಾಜಾಜಿನಗರ ಕೈಗಾರಿಕಾ ಪ್ರದೇಶದಲ್ಲಿರುವ ನಿಗಮದ ತಾಲ್ಲೂಕು ಕಚೇರಿಗೆ ಮಹಿಳಾ ಸ್ವಸಹಾಯ ಗುಂಪುಗಳ ಸದಸ್ಯರು ಅರ್ಜಿ ಸಲ್ಲಿಸಿದ್ದರು. ಪ್ರತಿ ಅರ್ಜಿಯ ನೋಂದಣಿಗೆ ₹ 100ರಂತೆ ನಾರಾಯಣಪ್ಪ ಲಂಚ ಪಡೆಯುತ್ತಿದ್ದರು. ಮಹಿಳೆಯರ ಪರವಾಗಿ ಗುರುರಾಜ್ ಎಂಬುವವರು ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ವಿಭಾಗಕ್ಕೆ ದೂರು ಸಲ್ಲಿಸಿದ್ದರು.

30 ಅರ್ಜಿಗಳ ನೋಂದಣಿಗೆ ಕಚೇರಿ ಸಮೀಪದ ಬೇಕರಿ ಬಳಿ ಶುಕ್ರವಾರ ₹ 3,000 ಲಂಚ ಪಡೆಯುತ್ತಿದ್ದಾಗ ದಾಳಿ ಮಾಡಿದ ಪೊಲೀಸರು, ನಾರಾಯಣಪ್ಪ ಅವರನ್ನು ಬಂಧಿಸಿದರು. ಆರೋಪಿಯ ವಿಚಾರಣೆ ನಡೆಸಲಾಗುತ್ತಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಎನ್‌ಪಿಎಸ್ ಶಾಲೆಗೆ ಬಾಂಬ್ ಬೆದರಿಕೆ: ಶೋಧ

ಬೆಂಗಳೂರು: ರಾಜಾಜಿನಗರದ ಎನ್‌ಪಿಎಸ್ ಶಾಲೆಗೆ ಬಾಂಬ್ ಬೆದರಿಕೆ ಸಂದೇಶ ಬಂದಿದ್ದು, ಬಸವೇಶ್ವರನಗರ ಠಾಣೆ ಪೊಲೀಸರು ತೀವ್ರ ಶೋಧ ನಡೆಸಿದರು.

ಶಾಲೆಯ ಇ–ಮೇಲ್ ವಿಳಾಸಕ್ಕೆ ಗುರುವಾರ ರಾತ್ರಿ 8.28ಕ್ಕೆ ಸಂದೇಶ ಬಂದಿತ್ತು. ಶುಕ್ರವಾರ ಎಂದಿನಂತೆ ಶಾಲೆಗೆ ಬಂದಿದ್ದ ಸಿಬ್ಬಂದಿ, ಬೆಳಿಗ್ಗೆ 11.30ರ ಸುಮಾರಿಗೆ ಇ–ಮೇಲ್ ಪರಿಶೀಲಿಸಿದ್ದರು. 'ಶಾಲೆ ಆವರಣದಲ್ಲಿ ಜಿಲಿಟಿನ್ ಕಡ್ಡಿ ಇಟ್ಟು ಸ್ಫೋಟಿಸಲಾಗುವುದು' ಎಂಬ ಸಂದೇಶ ನೋಡಿದ್ದರು.

ಗಾಬರಿಗೊಂಡು ಬಸವೇಶ್ವರನಗರ ಠಾಣೆಗೆ ಮಾಹಿತಿ ನೀಡಿದ್ದರು. ಶ್ವಾನ ದಳ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಸಮೇತ ಶಾಲೆಯಲ್ಲಿ ತಪಾಸಣೆ ನಡೆಸಿದ ಪೊಲೀಸರು, ಇದೊಂದು ಹುಸಿ ಬಾಂಬ್ ಬೆದರಿಕೆ ಎಂಬುದಾಗಿ ಘೋಷಿಸಿದರು.

ಎನ್‌ಪಿಎಸ್ ಶಾಲೆಯಲ್ಲಿ ನರ್ಸರಿಯಿಂದ ದ್ವಿತೀಯ ಪಿಯುವರೆಗೆ 950 ವಿದ್ಯಾರ್ಥಿಗಳು ಓದುತ್ತಿದ್ದಾರೆ. ಬಾಂಬ್ ಬೆದರಿಕೆ ಬಂದಿದ್ದರಿಂದ ಮಕ್ಕಳೆಲ್ಲರನ್ನೂ ತರಗತಿಯಿಂದ ಹೊರಗೆ ಕಳುಹಿಸಿ, ಪೊಲೀಸರು ಶೋಧ ನಡೆಸಿದರು.

'ಶಾಲೆಯ ಎಲ್ಲ ಸ್ಥಳಗಳಲ್ಲೂ ಶೋಧ ನಡೆಸಲಾಯಿತು. ಯಾವುದೇ ಅನುಮಾನಾಸ್ಪದ ವಸ್ತು ಪತ್ತೆಯಾಗಲಿಲ್ಲ. ಇದೊಂದು ಹುಸಿ ಬಾಂಬ್ ಬೆದರಿಕೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ತಿಳಿಸಿದರು.

'ಶಾಲೆ ಆಡಳಿತ ಮಂಡಳಿಯವರು ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಸ್ಟೋನ್ ಕ್ರಷರ್ಸ್ ಮಾಲೀಕರ ಮುಷ್ಕರ ಅಂತ್ಯ

ಬೆಂಗಳೂರು: ಸ್ಟೋನ್ ಕ್ರಷರ್ಸ್ ಮತ್ತು ಕ್ವಾರಿ ಮಾಲೀಕರು ಶುಕ್ರವಾರ ಸಂಜೆ ಮುಷ್ಕರ ಅಂತ್ಯಗೊಳಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಗಣಿ ಮತ್ತು ಭೂವಿಜ್ಞಾನ ಸಚಿವ ಹಾಲಪ್ಪ ಆಚಾರ್, ಕಂದಾಯ ಸಚಿವ ಆರ್. ಅಶೋಕ ಮತ್ತು ಅಧಿಕಾರಿಗಳ ಜತೆ ನಡೆದ ಸಭೆಯಲ್ಲಿ ಹಂತ ಹಂತವಾಗಿ ಬೇಡಿಕೆಗಳನ್ನು ಈಡೇರಿಸುವುದಾಗಿ ಆಶ್ವಾಸನೆ ನೀಡಲಾಗಿದೆ. ಹೀಗಾಗಿ, ಮುಷ್ಕರವನ್ನು ವಾಪಸ್ ಪಡೆಯುವ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಕರ್ನಾಟಕ ಕ್ವಾರಿ ಮತ್ತು ಸ್ಟೋನ್ ಕ್ರಷರ್ ಮಾಲೀಕರ ಸಂಘಗಳ ಒಕ್ಕೂಟದ ಪದಾಧಿಕಾರಿಗಳು ತಿಳಿಸಿದ್ದಾರೆ.

ಜಲ್ಲಿ, ಕಲ್ಲು ಮತ್ತು ಎಂ–ಸ್ಯಾಂಡ್ ಉತ್ಪಾದನೆ ಸ್ಥಗಿತಗೊಳಿಸಿ ಕಳೆದ 15 ದಿನಗಳಿಂದ ಮಾಲೀಕರು ಮುಷ್ಕರ ನಡೆಸುತ್ತಿದ್ದರು.

'ಬೇಡಿಕೆಗಳನ್ನು ಈಡೇರಿಸುವ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಬಗೆಹರಿಸುವುದಾಗಿ ಸರ್ಕಾರ ಆಶ್ವಾಸನೆ ನೀಡಿದೆ. ಎರಡು ಕಡೆಗಳಲ್ಲಿ ರಾಜಧನ ಸಂಗ್ರಹ ಮಾಡುವುದಿಲ್ಲ. ಕ್ವಾರಿ ಮತ್ತು ಸ್ಟೋನ್ ಕ್ರಷರ್ಸ್ ಮಾಲೀಕರಿಂದ ಮಾತ್ರವೇ ರಾಜಧನ ಸಂಗ್ರಹಿಸುವ ಕುರಿತು ಭರವಸೆ ನೀಡಲಾಗಿದೆ. 15 ದಿನಗಳಲ್ಲಿ ಬೇಡಿಕೆಗಳು ಈಡೇರಲಿವೆ. ಸರ್ಕಾರದ ಭರವಸೆ ಮೇರೆಗೆ ಮುಷ್ಕರ ಹಿಂಪಡೆಯುತ್ತಿದ್ದೇವೆ' ಎಂದು ಒಕ್ಕೂಟದ ಅಧ್ಯಕ್ಷ ರವೀಂದ್ರ ಶೆಟ್ಟಿ ಸಭೆಯ ನಂತರ ತಿಳಿಸಿದರು.

ಬಾಲಭವನಕ್ಕೆ ಪೂರ್ಣಿಮಾ ಅಧ್ಯಕ್ಷೆ

ಬೆಂಗಳೂರು: ಕರ್ನಾಟಕ ಬಾಲಭವನ ಸೊಸೈಟಿ ಅಧ್ಯಕ್ಷರಾಗಿ ಪದ್ಮನಾಭ ನಗರದ ಪೂರ್ಣಿಮಾ ಪ್ರಕಾಶ್ ಅವರನ್ನು ಸರ್ಕಾರ ನೇಮಿಸಿದೆ.

ಪೂರ್ಣಿಮಾ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧೀನದಲ್ಲಿ ಕರ್ನಾಟಕ ಭಾಲ ಭವನ ಸೊಸೈಟಿ ಕಾರ್ಯ ನಿರ್ವಹಿಸುತ್ತಿದೆ.

ಶಿಕ್ಷಣ ಇಲಾಖೆ: 279 ಹುದ್ದೆಗಳು ರದ್ದು

ಬೆಂಗಳೂರು: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿ ಮಂಜೂರಾಗಿದ್ದ 279 ಹುದ್ದೆಗಳನ್ನು ತಕ್ಷಣ ರದ್ದು ಮಾಡಲು ಸರ್ಕಾರ ಆದೇಶ ಹೊರಡಿಸಿದೆ.

ಶೀಘ್ರ ಲಿಪಿಗಾರರು (50), ಹಿರಿಯ ಬೆರಳಚ್ಚುಗಾರರು (29), ದ್ವಿತೀಯ ದರ್ಜೆ ಸಹಾಯಕರು (100), ದತ್ತಾಂಶ ನಿರ್ವಹಣೆ ಸಿಬ್ಬಂದಿ (50) ಹಾಗೂ ಬೆರಳಚ್ಚುಗಾರರು (50) ಹುದ್ದೆಗಳನ್ನು ರದ್ದು ಮಾಡಲು ಕ್ರಮ ಕೈಗೊಳ್ಳುವಂತೆ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಸೂಚಿಸಲಾಗಿದೆ.

ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಹೊಸದಾಗಿ 58 ಮುಖ್ಯ ಶಿಕ್ಷಕರು/ ಉಪ ಪ್ರಾಂಶುಪಾಲರ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. 500ಕ್ಕೂ ಕಡಿಮೆ ವಿದ್ಯಾರ್ಥಿಗಳಿರುವ 35 ಶಾಲೆಗಳಿಗೆ ಇತರೆ ಶಾಲೆ, ಕಚೇರಿಗಳಲ್ಲಿನ ಮುಖ್ಯ ಶಿಕ್ಷಕರ ಹುದ್ದೆ ಸ್ಥಳಾಂತರಿಸುವಂತೆ ಆದೇಶಿಸಲಾಗಿದೆ.

ಚಿತ್ರಾವಳಿ

1ರಿಂದ 100 ವರೆಗಿನ ಮ್ಯಾಥ್ಸ್ ಟೇಬಲ್‌ಗಳನ್ನು 100 ನಿಮಿಷಗಳ ಒಳಗೆ ಒಪ್ಪಿಸಿದ ಶ್ರೀಚೈತನ್ಯ ಸ್ಕೂಲ್ ವಿದ್ಯಾರ್ಥಿಗಳು ವರ್ಲ್ಡ್ ಬುಕ್ ಆಫ್ ರೆಕಾರ್ಡ್‌ನಲ್ಲಿ ಸ್ಥಾನ ಪಡೆದಿದ್ದು, ಶಿಕ್ಷಣ ಸಂಸ್ಥೆಯ ನಿರ್ದೇಶಕಿ ಸೀಮಾ ಅವರಿಗೆ ಪ್ರಮಾಣ ಪತ್ರವನ್ನು ವರ್ಲ್ಡ್ ಬುಕ್ ಆಫ್ ರೆಕಾರ್ಡ್‌ನ ಉಪಾಧ್ಯಕ್ಷ ರಾಜೇಶ್ ಶ್ರೀವಾತ್ಸವ್ ಹಸ್ತಾಂತರಿಸಿದರು. ಸ್ಪರ್ಧೆಯಲ್ಲಿ 10 ರಾಜ್ಯಗಳ 2 ಸಾವಿರ ವಿದ್ಯಾರ್ಥಿಗಳು 400 ಝೂಮ್ ಲಿಂಕ್ ಮೂಲಕ ಪಾಲ್ಗೊಂಡಿದ್ದರು

ಬೆಂಗಳೂರು ಜಲಮಂಡಳಿ ಎಂಜಿನಿಯರ್ ಸಂಘ ಹೊರತಂದಿರುವ '2023ರ ತಾಂತ್ರಿಕ ದಿನಚರಿ'ಯನ್ನು ಸಾಹಿತಿ ನಾಗತಿಹಳ್ಳಿ ಚಂದ್ರಶೇಖರ್ ಶುಕ್ರವಾರ ಬಿಡುಗಡೆ ಮಾಡಿದರು. ಪ್ರಧಾನ ಎಂಜಿನಿಯರ್ ಸುರೇಶ್, ಸಂಘದ ಕಾರ್ಯದರ್ಶಿ ಬಿ.ಸಿ. ಗಂಗಾಧರ್, ಅಧ್ಯಕ್ಷ ಎಸ್.ವಿ. ರಮೇಶ್, ಅಧ್ಯಕ್ಷ ಜಯರಾಂ, ಆಡಳಿತಾಧಿಕಾರಿ ವೀಣಾ, ಆರ್ಥಿಕ ಸಲಹೆಗಾರ ಪ್ರಶಾಂತ್ ಹಾಜರಿದ್ದರು.

ಲಕ್ಷ್ಮಿ ನರಸಿಂಹ ದೇವಸ್ಥಾನದಲ್ಲಿ ಘಟನೆ • ಆಸ್ಪತ್ರೆಗೆ ಆರೋಪಿ ದಾಖಲು

ದೇವರ ಪತ್ನಿಯೆಂದು ರಂಪಾಟ: ಮಹಿಳೆ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೃತಹಳ್ಳಿಯ ಲಕ್ಷ್ಮಿ ನರಸಿಂಹ ದೇವಸ್ಥಾನದಲ್ಲಿ ದೇವರ ಪತ್ನಿಯೆಂದು ಹೇಳಿಕೊಂಡು ಗರ್ಭಗುಡಿ ಪ್ರವೇಶಿಸಲು ಮುಂದಾಗಿದ್ದ ಮಹಿಳೆ ಮೇಲೆ ಹಲ್ಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ದೇವಸ್ಥಾನ ಆಡಳಿತ ಮಂಡಳಿ ಮುಖ್ಯಸ್ಥ ಮುನಿಕೃಷ್ಣಪ್ಪ (68) ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'2022ರ ಡಿ. 21ರಂದು ನಡೆದಿರುವ ಘಟನೆ ಸಂಬಂಧ 32 ವರ್ಷದ ಮಹಿಳೆ ದೂರು ನೀಡಿದ್ದಾರೆ. ಮುನಿಕೃಷ್ಣಪ್ಪ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಒಂದು ಬಾರಿ ವಿಚಾರಣೆ ನಡೆಸಲಾಗಿದೆ. ಇದರ ನಡುವೆಯೇ ಆರೋಗ್ಯ ಸಮಸ್ಯೆ ಇರುವುದಾಗಿ ಹೇಳಿ ಆತ ಆಸ್ಪತ್ರೆಗೆ ದಾಖಲಾಗಿದ್ದಾನೆ. ವೈದ್ಯರಿಂದ ಮಾಹಿತಿ ಪಡೆಯಬೇಕಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ದೇವಸ್ಥಾನದ ಒಳಗೆ ಮಹಿಳೆಯನ್ನು ಎಳೆದಾಡಿ, ಹಲ್ಲೆ ಮಾಡಲಾಗಿದೆ. ಜಡೆ ಹಿಡಿದು ಎಳೆದೊಯ್ದು ದೇವಸ್ಥಾನದ ಹೊರಗೆ ಹಾಕಲಾಗಿದೆ. ಈ ದೃಶ್ಯ ದೇವಸ್ಥಾನದ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಇದೇ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ' ಎಂದು ಹೇಳಿದರು.

ದೇವರ ಪಕ್ಕ ಕುಳಿತುಕೊಳ್ಳಲು ಯತ್ನ: 'ದೇವಸ್ಥಾನಕ್ಕೆ ಬೆಳಿಗ್ಗೆ ಹೋಗಿದ್ದ ಮಹಿಳೆ, 'ನಾನು ದೇವರ ಪತ್ನಿ. ಗರ್ಭಗುಡಿ ಒಳಗೆ ಹೋಗಿ ದೇವರ ಮೂರ್ತಿ ಪಕ್ಕ ಕುಳಿತುಕೊಳ್ಳುತ್ತೇನೆ' ಎಂಬುದಾಗಿ ಹೇಳಿದ್ದರು. ಬುದ್ದಿವಾದ ಹೇಳಿದ್ದ ಅರ್ಚಕ, 'ಗರ್ಭಗುಡಿ ಒಳಗೆ ಹೋಗಬಾರದು' ಎಂದಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅರ್ಚಕರ ಮಾತು ಕೇಳದೇ ರಂಪಾಟ ಮಾಡಿದ್ದ ಮಹಿಳೆ, ಗರ್ಭಗುಡಿ ಒಳಗೆ ಹೋಗಲು ಮುಂದಾಗಿದ್ದರು. ತಡೆದಿದ್ದಕ್ಕೆ, ಅರ್ಚಕರ ಮೇಲೆ ಹಾಗೂ ದೇವಸ್ಥಾನದಲ್ಲೆಲ್ಲ ಉಗುಳಿ ಶಾಪ ಹಾಕಿದ್ದರು. ಸ್ಥಳಕ್ಕೆ ಬಂದಿದ್ದ ಮುನಿಕೃಷ್ಣಪ್ಪ, ದೇವಸ್ಥಾನದಿಂದ ಹೊರಗೆ ಹೋಗುವಂತೆ ಮಹಿಳೆ ವಿರುದ್ಧ ಹರಿಹಾಯ್ದಿದ್ದ. ಅದಕ್ಕೆ ಮಹಿಳೆ ಒಪ್ಪಿರಲಿಲ್ಲ. ಸಿಟ್ಟಾದ ಆರೋಪಿ, ಮಹಿಳೆ ಮೇಲೆ ಹಲ್ಲೆ ಮಾಡಿದ್ದ. ಜಡೆ ಹಿಡಿದು ಎಳೆದೊಯ್ದು ದೇವಸ್ಥಾನದಿಂದ ಹೊರಗೆ ಹಾಕಿದ್ದ' ಎಂದು ಮೂಲಗಳು ತಿಳಿಸಿವೆ.

'ಘಟನೆ ಬಗ್ಗೆ ಮುನಿಕೃಷ್ಣಪ್ಪ ಪೊಲೀಸರಿಗೆ ಮಾಹಿತಿ ನೀಡಬೇಕಿತ್ತು. ಆದರೆ, ಅವರೇ ಕಾನೂನು ಕೈಗೆತ್ತಿಕೊಂಡು ಮಹಿಳೆಯನ್ನು ಥಳಿಸಿರುವುದು ಅಪರಾಧ. ಮಹಿಳೆ ಗೌರವಕ್ಕೆ ಧಕ್ಕೆ, ಹಲ್ಲೆ, ಜೀವ ಬೆದರಿಕೆ ಆರೋಪದಡಿ ಮುನಿಕೃಷ್ಣಪ್ಪ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ದೇವರ ಪತ್ನಿಯೆಂದು ಹೇಳಿ ಗರ್ಭಗುಡಿ ಒಳಗೆ ಹೋಗಲು ಯತ್ನಿಸಿದ್ದಕ್ಕೆ ಹಲ್ಲೆ ಮಾಡಿದ್ದಾಗಿ ಆರೋಪಿ ಹೇಳಿಕೆ ನೀಡಿದ್ದಾನೆ' ಎಂದು ಮೂಲಗಳು ಹೇಳಿವೆ.

ಬೆಂಗಳೂರು ಅಮೃತಹಳ್ಳಿಯ ಲಕ್ಷ್ಮಿ ನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಮಹಿಳೆಯನ್ನು ಎಳೆದಾಡಿ ಥಳಿಸಿದ ಆರೋಪಿ ಮುನಿಕೃಷ್ಣಪ್ಪ

'ನೀಚ ಕುಲದವಳೆಂದು ದರ್ಶನಕ್ಕೆ ಅಡ್ಡಿ'

'ದೇವಸ್ಥಾನಕ್ಕೆ ಹೋದಾಗ ಮುನಿಕೃಷ್ಣಪ್ಪ ಅಸಭ್ಯವಾಗಿ ವರ್ತಿಸಿದ್ದಾರೆ. ಕಪ್ಪಗಿರುವ ನೀಚ ಕುಲದವಳೆಂದು ಅವಮಾನಿಸಿದ್ದಾರೆ. ಸ್ನಾನ ಮಾಡದೇ ದೇವಸ್ಥಾನಕ್ಕೆ ಬರುತ್ತೀಯಾ, ದರ್ಶನಕ್ಕೆ ಅವಕಾಶ ನೀಡುವುದಿಲ್ಲವೆಂದು ಹೀಯಾಳಿಸಿದ್ದಾರೆ. ಹಲ್ಲೆ ಮಾಡಿ, ಕಬ್ಬಿಣದ ರಾಡ್‌ನಿಂದ ಹೊಡೆದು ಥಳಿಸಿದ್ದಾರೆ. ಜಡೆ ಹಿಡಿದು ಎಳೆದು ದೇವಸ್ಥಾನದಿಂದ ಹೊರಗೆ ತಬ್ಬಿದ್ದಾರೆ' ಎಂದು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಅಸ್ಸಾಂ –ಮೇಘಾಲಯ ಗಡಿ ವಿವಾದ: ಹೈಕೋರ್ಟ್ ಆದೇಶಕ್ಕೆ 'ಸುಪ್ರೀಂ' ತಡೆ

ನವದೆಹಲಿ (ಪಿಟಿಐ): ಅಸ್ಸಾಂ ಮತ್ತು ಮೇಘಾಲಯ ರಾಜ್ಯಗಳ ನಡುವಿನ ಗಡಿ ಒಪ್ಪಂದವನ್ನು ಕಾರ್ಯಗತಗೊಳಿಸುವುದಕ್ಕೆ ಮೇಘಾಲಯ ಹೈಕೋರ್ಟ್ ನೀಡಿದ್ದ ತಡೆಯಾಜ್ಞೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಜೆ.ಬಿ. ಪರ್ದಿವಾಲಾ ಅವರನ್ನೊಳಗೊಂಡ ನ್ಯಾಯಪೀಠವು ಹೈಕೋರ್ಟ್ ಆದೇಶಕ್ಕೆ ತಡೆ ನೀಡಿದೆ.

ಈ ಒಪ್ಪಂದವು ಸಂವಿಧಾನದ 3ನೇ ಪರಿಚ್ಛೇದವನ್ನು ಉಲ್ಲಂಘಿಸಿದೆ ಎಂದು ಆರೋಪಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ ನಾಲ್ವರಿಗೆ ಸುಪ್ರೀಂ ಕೋರ್ಟ್ ನೋಟಿಸ್ ನೀಡಿದೆ.

ಹೊಸ ರಾಜ್ಯಗಳ ರಚನೆ ಮತ್ತು ಅಸ್ತಿತ್ವದಲ್ಲಿರುವ ರಾಜ್ಯಗಳ ಗಡಿಗಳ ಬದಲಾವಣೆಗೆ ಸಂಬಂಧಿಸಿದ ಕಾನೂನು ರಚಿಸಲು 3ನೇ ಪರಿಚ್ಛೇದವು ಸಂಸತ್‌ಗೆ ಅಧಿಕಾರ ನೀಡುತ್ತದೆ.

ಗಡಿ ಒಪ್ಪಂದದ ಬಳಿಕ ಭೌತಿಕ ಗಡಿರೇಖೆ ಗುರುತಿಸುವ ಕಾರ್ಯಕ್ಕೆ ಮೇಘಾಲಯ ಹೈಕೋರ್ಟ್‌ನ ಏಕಸದಸ್ಯ ಪೀಠವು ಡಿಸೆಂಬರ್ 8ರಂದು ಮಧ್ಯಂತರ ತಡೆಯಾಜ್ಞೆ ನೀಡಿತ್ತು.

ಉಭಯ ರಾಜ್ಯಗಳ ನಡುವಿನ ಗಡಿಯಲ್ಲಿ ಉದ್ವಿಗ್ನತೆ ಉಂಟಾಗುವ 12 ಪ್ರದೇಶಗಳ ಪೈಕಿ ಕನಿಷ್ಠ ಆರರಲ್ಲಿ ಗಡಿರೇಖೆ ಗುರುತಿಸುವ ಒಪ್ಪಂದಕ್ಕೆ ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಕೆ. ಸಂಗ್ಮಾ ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಕಳೆದ ವರ್ಷ ಮಾರ್ಚ್‌ನಲ್ಲಿ ಸಹಿ ಹಾಕಿದ್ದರು.

ಜಮ್ಮು ಕಾಶ್ಮೀರ: ಡಿಎಪಿ ತೊರೆದ ಮಾಜಿ ಉಪಮುಖ್ಯಮಂತ್ರಿ ತಾರಾಚಂದ್

ಕಾಂಗ್ರೆಸ್‌ಗೆ ಮರಳಿದ ನಾಯಕರು

ನವದೆಹಲಿ (ಪಿಟಿಐ): ಜಮ್ಮು–ಕಾಶ್ಮೀರದ ಮಾಜಿ ಉಪಮುಖ್ಯಮಂತ್ರಿ ತಾರಾಚಂದ್, ಪ್ರದೇಶ ಕಾಂಗ್ರೆಸ್ ಸಮಿತಿ (ಪಿಸಿಸಿ) ಮಾಜಿ ಮುಖ್ಯಸ್ಥ ಪೀರ್‌ಜಾದಾ ಮೊಹಮ್ಮದ್ ಸಯೀದ್ ಸೇರಿದಂತೆ ಡೆಮಾಕ್ರಟಿಕ್ ಆಜಾದ್ ಪಕ್ಷದ (ಡಿಎಪಿ) 17 ನಾಯಕರು ಶುಕ್ರವಾರ ಕಾಂಗ್ರೆಸ್‌ಗೆ ಮರಳಿದ್ದಾರೆ.

ನಾಯಕರನ್ನು ಬರಮಾಡಿಕೊಂಡ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, 'ಇನ್ನೆರಡು ವಾರಗಳಲ್ಲಿ ಜಮ್ಮು-ಕಾಶ್ಮೀರಕ್ಕೆ ಪ್ರವೇಶಿಸಲಿರುವ 'ಭಾರತ್ ಜೋಡೊ' ಯಾತ್ರೆಗೂ ಮುನ್ನ ಹಳೆಯ ನಾಯಕರು ಪಕ್ಷಕ್ಕೆ ಮರಳುತ್ತಿರುವ ಈ ದಿನ ಸಂತಸದ ದಿನವಾಗಿದೆ' ಎಂದಿದ್ದಾರೆ.

'ಭಾರತ್ ಜೋಡೊ' ಯಾತ್ರೆಯು ದೇಶದಲ್ಲಿ ದೊಡ್ಡ ಆಂದೋಲನವಾಗಿ ಮಾರ್ಪಟ್ಟಿದ್ದು, ಆದ್ದರಿಂದಲೇ ಎಲ್ಲ ನಾಯಕರು ಮತ್ತೆ ಕಾಂಗ್ರೆಸ್ ತೆಕ್ಕೆಗೆ ಮರಳಲು ನಿರ್ಧರಿಸಿದ್ದಾರೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಗುಲಾಂ ನಬಿ ಆಜಾದ್ ಮತ್ತೆ ಕಾಂಗ್ರೆಸ್‌ಗೆ ಮರಳಲಿದ್ದಾರೆಯೇ ಎನ್ನುವ ಪ್ರಶ್ನೆಗೆ, ಅಂತಹ ಯಾವುದೇ ಮಾತುಕತೆ ನಡೆದಿಲ್ಲ ಎಂದೂ ವೇಣುಗೋಪಾಲ್ ಉತ್ತರಿಸಿದ್ದಾರೆ.

ಪಕ್ಷದ ಹಿರಿಯ ನಾಯಕ ಜೈರಾಂ ರಮೇಶ್ ಮಾತನಾಡಿ, 'ಶುಕ್ರವಾರ ಒಟ್ಟು 19 ನಾಯಕರು ಪಕ್ಷಕ್ಕೆ ಸೇರಬೇಕಿತ್ತು. ಆದರೆ 17 ಮಂದಿ ಇಂದು ಸೇರಲು ಸಾಧ್ಯವಾಯಿತು. ಇದು ಮೊದಲ ಹಂತವಾಗಿದ್ದು, ಇತರರು ಕೂಡ ಶೀಘ್ರದಲ್ಲೇ ಸೇರಲಿದ್ದಾರೆ' ಎಂದರು.

ನವದೆಹಲಿಯಲ್ಲಿ ಶುಕ್ರವಾರ ಡಿಎಪಿಯಿಂದ ಕಾಂಗ್ರೆಸ್‌ಗೆ ಮರಳಿ ಬಂದ ಜಮ್ಮು–ಕಾಶ್ಮೀರದ ಮಾಜಿ ಉಪ ಮುಖ್ಯಮಂತ್ರಿ ತಾರಾಚಂದ್, ಪೀರ್‌ಜಾದಾ ಮೊಹಮ್ಮದ್ ಸಯೀದ್ ಹಾಗೂ ಇತರರನ್ನು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಬರಮಾಡಿಕೊಂಡರು –ಪಿಟಿಐ ಚಿತ್ರ

'ಕ್ಷಯರೋಗ ತಡೆಗೆ ಪ್ರಾಯೋಗಿಕ ಲಸಿಕೆ ಶೀಘ್ರ ಆರಂಭ'

ನಾಗ್ಪುರ (ಪಿಟಿಐ): ಕ್ಷಯರೋಗ ತಡೆಗೆ ಬಿಸಿಜಿ (ಬ್ಯಾಸಿಲಸ್ ಕ್ಯಾಲ್ಮೆಟ್-ಗುರಿನ್) ಲಸಿಕೆಯ ಪ್ರಾಯೋಗಿಕ ಪರೀಕ್ಷೆ ಭಾರತದಲ್ಲಿ ಶೀಘ್ರ ಆರಂಭವಾಗಲಿದೆ ಎಂದು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ (ಸಿಎಸ್‌ಐಆರ್) ಮಹಾನಿರ್ದೇಶಕ ಡಾ.ಶೇಖರ್ ಮಂಡೆ ಶುಕ್ರವಾರ ಹೇಳಿದರು.

ಇಲ್ಲಿ ನಡೆಯುತ್ತಿರುವ ವಿಜ್ಞಾನ ಕಾಂಗ್ರೆಸ್ ಸಮಾವೇಶದಲ್ಲಿ 'ಕ್ಷಯರೋಗ ಸಂಶೋಧನೆಯಲ್ಲಿ ಜೈವಿಕ ಭೌತಶಾಸ್ತ್ರದ ವಿಧಾನಗಳು' ಎನ್ನುವ ಕುರಿತು ಪ್ರಾತ್ಯಕ್ಷಿಕೆ ನೀಡಿದ ಅವರು, ಈ ರೋಗವನ್ನು ವೈದ್ಯರು ಮತ್ತು ಸಂಶೋಧಕರು ಅರ್ಥೈಸಿಕೊಳ್ಳಲು ತಂತ್ರಜ್ಞಾನ ಹೇಗೆ ಸಹಾಯಕವಾಗಿದೆ ಎಂಬುದನ್ನು ವಿವರಿಸಿದರು.

ಜನಗಣತಿ ಮತ್ತಷ್ಟು ವಿಳಂಬ ಸಾಧ್ಯತೆ

ನವದೆಹಲಿ (ಪಿಟಿಐ): ದೇಶದಲ್ಲಿ 10 ವರ್ಷಗಳಿಗೊಮ್ಮೆ ನಡೆಯುವ ಜನಗಣತಿ ಇನ್ನಷ್ಟು ವಿಳಂಬವಾಗುವ ಸಾಧ್ಯತೆ ಇದ್ದು, ಸೆಪ್ಟೆಂಬರ್ 30ರ ಬಳಿಕ ಗಣತಿ ಕಾರ್ಯಕ್ಕೆ ಚಾಲನೆ ಸಿಗುವ ಸಾಧ್ಯತೆ ಇದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ದೇಶದಾದ್ಯಂತ ಜನಗಣತಿಯ ಭಾಗವಾಗಿ ಮನೆಗಳ ಪಟ್ಟಿ ಸಿದ್ಧಪಡಿಸುವುದು ಮತ್ತು ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟ್ರಾರ್ (ಎನ್‌ಪಿಆರ್) ಪರಿಷ್ಕರಣಾ ಕಾರ್ಯಕ್ಕೆ 2020ರ ಏಪ್ರಿಲ್ 1ರಿಂದ ಸೆಪ್ಟೆಂಬರ್ 30ರವರೆಗೆ ವೇಳಾಪಟ್ಟಿ ನಿಗದಿ ಮಾಡಲಾಗಿತ್ತು. ಆದರೆ ಕೋವಿಡ್ ಸಾಂಕ್ರಾಮಿಕ ಉಲ್ಬಣಿಸಿದ ಕಾರಣ ಈ ಕಾರ್ಯವನ್ನು ಮುಂದೂಡಲಾಗಿತ್ತು.

ಭಾರತೀಯ ರಿಜಿಸ್ಟ್ರಾರ್ ಜನರಲ್ ಮತ್ತು ಭಾರತೀಯ ಜನಗಣತಿ ಆಯುಕ್ತರ ಕಚೇರಿಯು ಜನಗಣತಿಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಗಡಿಗಳನ್ನು ನಿಗದಿಪಡಿಸುವ ದಿನಾಂಕವನ್ನು ಜೂನ್ 30ರವರೆಗೆ ವಿಸ್ತರಿಸಿರುವುದಾಗಿ ರಾಜ್ಯಗಳಿಗೆ ತಿಳಿಸಿದೆ.

ನಿಯಮಗಳ ಪ್ರಕಾರ ಜಿಲ್ಲೆ, ತಾಲ್ಲೂಕು ಮತ್ತು ಪೊಲೀಸ್ ಠಾಣೆಗಳ ವ್ಯಾಪ್ತಿಯ ಗಡಿಯನ್ನು ಗುರುತಿಸಬೇಕು. ಇದೆಲ್ಲ ಆದ ಬಳಿಕ ಜನಗಣತಿ ಆರಂಭಿಸಬೇಕು. ಗಣತಿ ಕಾರ್ಯಕ್ಕೆ ಮೂರು ತಿಂಗಳು ನಿಗದಿಪಡಿಸಲಾಗಿರುತ್ತದೆ.

ಶಿವಚಿತ್ತಪ್ಪ ವಿರುದ್ಧ ಶಿಸ್ತು ಕ್ರಮಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ತುಮಕೂರು: ತುಮಕೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿದ್ದ(ಆಡಳಿತ) ಸಮಯದಲ್ಲಿ ಅದೇ ಹುದ್ದೆಗೆ ವರ್ಗಾವಣೆಯಾಗಿದ್ದ ಮಹಿಳಾ ತಹಶೀಲ್ದಾರ್ ಅವರನ್ನು ಟೀಕಿಸಿ ವಿವಾದಕ್ಕೆ ಸಿಲುಕಿದ್ದ ಪ್ರೊ.ಕೆ. ಶಿವಚಿತ್ತಪ್ಪ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಆದೇಶಿಸಿದ್ದಾರೆ.

ಮಹಿಳಾ ಅಧಿಕಾರಿಯೂ ಸೇರಿದಂತೆ ಮಹಿಳೆಯರ ಬಗ್ಗೆ ಲಘುವಾಗಿ ಹೇಳಿಕೆ ನೀಡಿದ್ದಾರೆ. ಜತೆಗೆ, ಸರ್ಕಾರದ ನೇಮಕಾತಿ ಆದೇಶ ಹಾಗೂ ಕ್ರಮವನ್ನೂ ಪ್ರಶ್ನಿಸಿದ್ದಾರೆ. ಅವರ ವರ್ತನೆಯು ನಡತೆಯ ನಿಯಮಗಳ ಉಲ್ಲಂಘನೆ ಎಂದೇ ಪರಿಗಣಿಸಲಾಗುತ್ತದೆ. ಆದ್ದರಿಂದ ಶಿಸ್ತುಕ್ರಮ ಕೈಗೊಂಡು ಎರಡು ವಾರದಲ್ಲಿ ವರದಿ ಸಲ್ಲಿಸುವಂತೆ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಿಗೆ ಸೂಚಿಸಲಾಗಿದೆ.

ವಿವಾದಕ್ಕೆ ಸಿಲುಕಿದ ನಂತರ ಶಿವಚಿತ್ತಪ್ಪ ಅವರನ್ನು ಕುಲಸಚಿವ ಹುದ್ದೆಯಿಂದ ಬಿಡುಗಡೆ ಮಾಡಿ, ಮಾತೃ ವಿಶ್ವವಿದ್ಯಾನಿಲಯವಾದ ಮೈಸೂರು ವಿ.ವಿಗೆ ಕಳುಹಿಸಲಾಗಿತ್ತು. ಹಾಗಾಗಿ, ಶಿಸ್ತುಕ್ರಮಕ್ಕೆ ಮೈಸೂರು ವಿಶ್ವವಿದ್ಯಾಲಯಗೆ ಸರ್ಕಾರ ಸೂಚಿಸಿದೆ.

ವಿಶ್ವವಿದ್ಯಾಲಯ ಕುಲಸಚಿವ ಸ್ಥಾನಕ್ಕೆ ಕೊರಟಗೆರೆ ತಹಶೀಲ್ದಾರ್ ನಯಿದಾ ಜಮ್ ಜಮ್ ಅವರನ್ನು ಸರ್ಕಾರ ವರ್ಗಾವಣೆ ಮಾಡಿತ್ತು. ವಿ.ವಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ 'ತಹಶೀಲ್ದಾರ್ ವಿ.ವಿಗೆ ಬಂದು ಜಮೀನಿನ ಪಟ್ಟಾ, ಪಹಣಿ ಮಾಡಿಕೊಡಬಹುದು' ಎಂದು ಹೇಳುವ ಮೂಲಕ ಶಿವಚಿತ್ತಪ್ಪ ವಿವಾದಕ್ಕೆ ಸಿಲುಕಿದ್ದರು. ವಿವಾದ ತೀವ್ರ ಸ್ವರೂಪ ಪಡೆದುಕೊಂಡ ನಂತರ ಅವರನ್ನು ಹುದ್ದೆಯಿಂದ ಬಿಡುಗಡೆ ಮಾಡಲಾಗಿತ್ತು. ಪ್ರಸ್ತುತ ಮೈಸೂರು ವಿ.ವಿ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ@75
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು ಮತ್ತು ನಾಳೆ
ಶ್ರೀ ತ್ಯಾಗರಾಜರ ಆರಾಧನೆ, ಸಂಗೀತೋತ್ಸವ
ಪ್ರಸಿದ್ಧ ಕಲಾವಿದರಿಂದ ಸಂಗೀತ ಕಛೇರಿ.
LIVE
ಬೆಳಿಗ್ಗೆ 10 ರಿಂದ
ಇಂದು
ಮಿಸಳ್ ಹಾಪ್ಚಾ
ಸಾಧನಕೇರಿಯಿಂದ ಸಮ್ಮೇಳನದ ತನಕ
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ್ ಕಾರ್ಯಾಲಯ ಹಾನಗಲ್ಲ–581104

ದೂ : 08379–262236 ಫ್ಯಾಕ್ಸ : 08379–263417 E-Mail : eo-tp-kahvhn@nic.in & eotpkahvhn@gmail.com

ಸಂ:ತಾಪಂಹಾ/ವಾಅಅ/ಇ–ಟೆಂಡರ್/ವಹಿ– /2022–23 ದಿನಾಂಕ : 05–01–2023

ಟೆಂಡರ ಪ್ರಕಟಣೆ (ದ್ವಿ ಲಕೋಟೆ ಪದ್ದತಿ) (ಇ–ಪ್ರಕ್ಯೂರ್‌ಮೆಂಟ್ ಮೂಲಕ)

2022–23 ನೇ ಸಾಲಿನ ತಾಲ್ಲೂಕ ಪಂಚಾಯತಿಯ ವಾರ್ಷಿಕ ಅನಿರ್ಬಂಧಿತ ಅನುದಾನದಡಿ ಹಾನಗಲ್ಲ ತಾಲ್ಲೂಕಿನ ಗ್ರಾಮ ಪಂಚಾಯತಿ ಗ್ರಂಥಾಲಯ, ಸಮುದಾಯ ಆರೋಗ್ಯ ಕೇಂದ್ರ ಅಕ್ಕಿಆಲೂರ ಹಾಗೂ ತಾಲೂಕಾ ಆಸ್ಪತ್ರೆ, ಹಾನಗಲ್ಲಗೆ ವಿವಿಧ ವೈದ್ಯಕೀಯ ಉಪಕರಣ ಹಾಗೂ ಸಾಮಗ್ರಿಗಳನ್ನು ಖರೀದಿಸಲು ಇ–ಪ್ರಕ್ಯೂರ್‌ಮೆಂಟ್ ಮೂಲಕ ಈ ಕೆಳಗಿನಂತೆ ಗ್ರೂಪ್‌ವಾರು ಪ್ರತ್ಯೇಕವಾಗಿ ಇ–ಟೆಂಡರ್ ಆಹ್ವಾನಿಸಲಾಗಿದೆ.

ಅ. ನಂ.	ಕಾಮಗಾರಿ ವಿವರ	ಇಂಡೆಂಟ್ ವಿವರ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ)	ಇ.ಎಂ.ಡಿ. (ರೂ. ಗಳಲ್ಲಿ)
1	ತಾಲೂಕಾ ಆಸ್ಪತ್ರೆ ಹಾನಗಲ್ಲ ಆಸ್ಪತ್ರೆಗೆ ವಿಕಲಚೇತನರಿಗೆ ಅವಶ್ಯಕವಿರುವ ವೈದ್ಯಕೀಯ ಉಪಕರಣ ಹಾಗೂ ಸಾಮಗ್ರಿಗಳನ್ನು ಪೂರೈಸುವುದು.	RDPR/2022-23/ IND3524	12.00	30,000/-
2	ಸಮುದಾಯ ಆರೋಗ್ಯ ಕೇಂದ್ರ ಅಕ್ಕಿಆಲೂರ ಆಸ್ಪತ್ರೆಗೆ ಅವಶ್ಯವಿರುವ ವೈದ್ಯಕೀಯ ಉಪಕರಣ ಹಾಗೂ ಸಾಮಗ್ರಿಗಳನ್ನು ಪೂರೈಸುವುದು.	RDPR/2022-23/ IND3521	19.00	45,000/-
3	ತಾಲ್ಲೂಕಿನ 40 ಗ್ರಾಮ ಪಂಚಾಯತಿ ಗ್ರಂಥಾಲಯಗಳಿಗೆ ಸ್ಪರ್ಧಾತ್ಮಕ ಹಾಗೂ ಇತರೆ ಪುಸ್ತಕಗಳನ್ನು ಪೂರೈಸುವುದು.	RDPR/2022-23/ IND3522	8.00	20,000/-
4	ತಾಲ್ಲೂಕಿನ ಗ್ರಾಮ ಪಂಚಾಯತಿ ಗ್ರಂಥಾಲಯಗಳಿಗೆ ಕಂಪ್ಯೂಟರ್ ಟೇಬಲ್, ಕಂಪ್ಯೂಟರ್ ಚೇರ್, ರಿಡಿಂಗ್ ಟೇಬಲ್, ಪ್ಲಾಸ್ಟಿಕ್ ಚೇರ್, ಮಕ್ಕಳ ಟೇಬಲ್ ಹಾಗೂ ಮಕ್ಕಳ ಚೇರ್‌ಗಳನ್ನು ಪೂರೈಸುವುದು.	RDPR/2022-23/ IND3523	24.98	62,500/-

ಟೆಂಡರ್ ವೇಳಾ ಪಟ್ಟಿ : (1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ದಿನಾಂಕ : **05–01–2023** ರಿಂದ ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ **http://eproc.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ (2) ಟೆಂಡರ ದಾಖಲೆಗಳನ್ನು ಇ–ಪ್ರೋಕ್ಯೂರ್‌ಮೆಂಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ದಿ : **19–01–2023** ಸಂಜೆ 4.00 ರವರೆಗೆ ಟೆಂಡರಗಳನ್ನು ಸಲ್ಲಿಸಬಹುದು. (3) ಇ–ಪ್ರೋಕ್ಯುರಮೆಂಟ್ ಪೋರ್ಟರನಲ್ಲಿ ಟೆಂಡರಗಳ ತಾಂತ್ರಿಕ ಬಿಡ್ ತೆರೆಯುವ ದಿ : **21–01–2023**. 11.00 ಗಂಟೆಯ ನಂತರ (4) ಇ–ಪ್ರೋಕ್ಯುರಮೆಂಟ್ ಪೋರ್ಟರನಲ್ಲಿ ಟೆಂಡರಗಳ ಆರ್ಥಿಕ ಬಿಡ್ ತೆರೆಯುವ ದಿ: 23–01–2023. 11.00 ಗಂಟೆಯ ನಂತರ

ಕೆಲಸದ ಹೆಸರು/ಪೂರೈಕೆದಾರರ ಅರ್ಹತೆ/ಟೆಂಡರ ನಿಯಮಗಳು/ಟೆಂಡರ ಪ್ರೋಸೆಸ್ಸಿಂಗ್ ಫೀ ಇತ್ಯಾದಿ ವಿವರಗಳಿಗೆ http://eproc.karnataka.gov.in ಮೂಲಕ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ, ತಾಲೂಕ ಪಂಚಾಯತ್, ಹಾನಗಲ್ಲ

ವಾಸಾಸಂಇ/ಹಾವೇರಿ/ಎಂ.ಸಿ.ಎ/473/2022–23

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್1/ಎಫ್–466/04/2022.23/4796 ದಿನಾಂಕ: 30.12.2022

ತಿದ್ದುಪಡಿ ಟೆಂಡರ್ ಪ್ರಕಟಣೆ

ವಿಷಯ: ತಿದ್ದುಪಡಿ ಟೆಂಡರ್ ಪ್ರಕಟಣೆ

ಉಲ್ಲೇಖ: ಈಕಛೇರಿ ಟೆಂಡರ್ ಪ್ರಕಟಣೆ ಸಂ.1310/2022–23 ದಿನಾಂಕ: 16.06.2023

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮೇಲಿನ ಉಲ್ಲೇಖದಲ್ಲಿ ಸಲ್ಲಿಸಲಾದ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ, ಸದರಿ ಟೆಂಡರ್ ಪ್ರಕಟಣೆಯಲ್ಲಿ ಹೊರಡಿಸಲಾದ ಕಾಮಗಾರಿಗಳಲ್ಲಿ ಕಾರಣಾಂತರಗಳಿಂದ ಈ ಕೆಳಕಾಣಿಸಿದ ಕಾಮಗಾರಿಗಳ ಇಂಡೆಂಟ್‌ಗಳಲ್ಲಿ ಬದಲಾವಣೆಯಾಗಿದ್ದು ವಿವರಗಳು ಇಂತಿವೆ.

ಕ್ರ ಸಂ	ಈ ಹಿಂದೆ ಪ್ರಕಟಣೆ ಹೊರಡಿಸಿದ ಇಂಡೆಂಟ್ ಸಂ.	ಬದಲಾದ ಇಂಡೆಂಟ್ ಸಂ
1)	KPWD/2022-23/RD/WORK_INDENT152506	KPWD/2022-23/RD/WORK_INDENT162462
02	KPWD/2021-22/RD/WORK_INDENT151659	KPWD/2022-23RD/WORK_INDENT160423

ಕಾರಣ ಗುತ್ತಿಗೆದಾರರು ಇದನ್ನು ಗಮನಿಸಲು ಕೋರಿದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಇನ್ನುಳಿದ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/782/ಎಂಸಿಎ/2022–23

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ

Phone No: 0836–2747944, Email.ID :eepwddha@gmail.com

ಸಂ.ಕ್ರಸಂ ៖ ಕಾನಿಇಂ/ಲೋಇ/ಧಾ/ಪಿಬಿ–1, 2, 3, 4 &5 /ಟೆಂಡರ/2022–23/7887 ದಿನಾಂಕ : 05–01–2023

ಟೆಂಡರ ಪ್ರಕಟಣೆ - KW- 1,2,3 & 4

ಉಲ್ಲೇಖ : (1) ಟೆಂಡರ್ ಪ್ರಕಟಣೆ ಸಂಖ್ಯೆ: 6234 ದಿನಾಂಕ : 18/11/2022 (2) ಟೆಂಡರ್ ಪ್ರಕಟಣೆ ಸಂಖ್ಯೆ: 6235 ದಿನಾಂಕ : 18/11/2022 (2) ಟೆಂಡರ್ ಪ್ರಕಟಣೆ ಸಂಖ್ಯೆ: 7122 ದಿನಾಂಕ : 09/12/2022 (3) ಟೆಂಡರ್ ಪ್ರಕಟಣೆ ಸಂಖ್ಯೆ: 7280 ದಿನಾಂಕ : 15/12/2022

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ ಡಾಕ್ಯೂಮೆಂಟ್ ಕೆ ಡಬ್ಲ್ಯೂ–1, 2, 3 & 4 ರ ನಿಯಮದಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ (e-Procurement) ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ಒಂದು ಮತ್ತು ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರಗಳನ್ನು ಅಹ್ವಾನಿಸಲಾಗಿದೆ. ಧಾರವಾಡ ವಿಭಾಗ ವ್ಯಾಪ್ತಿಯಲ್ಲಿ ಸಂಬಂಧಿಸಿದಂತೆ **ಲೆಕ್ಕ ಶೀರ್ಷಿಕೆ:– 5054–04–337–0–01–** ಅಡಿಯ **ಕಾಮಗಾರಿಗಳು** ಒಟ್ಟು 3 ಕಾಮಗಾರಿಗಳು ಹಾಗೂ 3054 Flood damage ಅಡಿಯ **ಕಾಮಗಾರಿಗಳು** ಒಟ್ಟು 3 ಕಾಮಗಾರಿಗಳು ಹಾಗೂ **ಲೆಕ್ಕ ಶೀರ್ಷಿಕೆ:– 2216–07–053–0–01–200** ಒಟ್ಟು **01 ಲೆಕ್ಕ ಶೀರ್ಷಿಕೆ:– 2059–80–053–4–00–200** ಒಟ್ಟು **01 ಕಾಮಗಾರಿ 8443–ವಿವೇಕ** ಅಡಿ ಒಟ್ಟು **87** ಹಾಗೂ **4059–80–051–0–29–386 ಇಲಾಖಾ ಕಟ್ಟಡಗಳ ಅಡಿ ಅಂಗನವಾಡಿ ಕೇಂದ್ರ ಕಟ್ಟಡಗಳ ನಿರ್ಮಾಣ** ಒಟ್ಟು **16 ಕಾಮಗಾರಿ** ಟೆಂಡರ್‌ಗಳ ದಿನಾಂಕಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

(1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : **16/01/2023** (ಬೆಳಿಗ್ಗೆ 11:30 ಗಂಟೆಯವರೆಗೆ) (2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **18/01/2023** (ಸಾಯಂಕಾಲ 4:00 ಗಂಟೆಯವರೆಗೆ) (3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : **19/01/2023** (ಸಾಯಂಕಾಲ 4:30 ಗಂಟೆಯ ನಂತರ) (4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : **20/01/2023** (ಸಾಯಂಕಾಲ 4:30 ಗಂಟೆಯ ನಂತರ)

WORK_INDENT NO - 160561, 161816 ಒಟ್ಟು = 02

(1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : **12/01/2023** (ಬೆಳಿಗ್ಗೆ 11:30 ಗಂಟೆಯವರೆಗೆ) (2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **13/01/2023** (ಸಾಯಂಕಾಲ 4:00 ಗಂಟೆಯವರೆಗೆ) (3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : **16/01/2023** (ಸಾಯಂಕಾಲ 4:30 ಗಂಟೆಯ ನಂತರ) (4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : **17/01/2023** (ಸಾಯಂಕಾಲ 4:30 ಗಂಟೆಯ ನಂತರ)

ವಿಶೇಷ ಸೂಚನೆ : (1) ಮೀಸಲಾತಿ ಕಾಮಗಾರಿಗಳಿಗೆ ಭಾಗವಹಿಸುವ ಗುತ್ತಿಗೆದಾರರು, ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು. (2) ಮೀಸಲಾತಿ ಕಾಮಗಾರಿಗಳಿಗೆ ಗುತ್ತಿಗೆ ಸಲ್ಲಿಸುವ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ಗುತ್ತಿಗೆದಾರರು, ಕನಿಷ್ಠ 10 ವರ್ಷ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು ಹಾಗೂ ಸಕ್ಷಮ ಪ್ರಾಧಿಕಾರದಿಂದ ಪಡೆದ ನಿವಾಸಿ ಪ್ರಮಾಣ ಪತ್ರ ಲಗತ್ತಿಸತಕ್ಕದ್ದು. (3) ಗುತ್ತಿಗೆದಾರರು ಫರ್ಮ ಗುತ್ತಿಗೆದಾರರಾಗಿದ್ದರೆ, ಎಲ್ಲ ಪಾರ್ಟನರ್ ಅಥವಾ ಸದಸ್ಯರು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರಾಗಿರಬೇಕು.

ಕಾಮಗಾರಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ **http://www.eproc.karnataka,gov.in** ದಲ್ಲಿ ಹಾಗೂ ಲೋಕೋಪಯೋಗಿ ಇಲಾಖೆ ಧಾರವಾಡ ವಿಭಾಗ ಕಛೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ

ವಾಸಾಸಂಇ/ಧಾರವಾಡ/ಎಂಸಿಎ/946/2022–23

ಕರ್ನಾಟಕ ಸರ್ಕಾರ

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ

"ಅಭಿವೃದ್ಧಿ ಭವನ" ಐವನ–ಎ–ಶಾಹಿ, ಕಲಬುರಗಿ–585102, ದೂರವಾಣಿ : 08472–256767, 239556, 255564, ಫ್ಯಾಕ್ಸ: 08472–227527, Email: hkadbgulb@gmail.com

ಸಂಖ್ಯೆ: . KKRDB/TECH/240/2022-23 ದಿನಾಂಕ: 05–01–2023.

ಅಲ್ಪಾವಧಿ ಟೆಂಡರ ಪ್ರಕಟಣೆ

01) ಕಾಮಗಾರಿಯ ಹೆಸರು : "Supply of Printed Practice Papers for improvements towards 10th Standard Results for the Students" 02) ಲೆಕ್ಕ ಶೀರ್ಷಿಕೆ: KKRDB ನಿಧಿ. 03) ಗುತ್ತಿಗೆದಾರರ ಅರ್ಹತೆ : ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನ ದಸ್ತಾವೇಜಿನಲ್ಲಿ. 04) ಟೆಂಡರ್ ದಸ್ತಾವೇಜನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭ ದಿನಾಂಕ: 05.01.2023. 05) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ : 13–01–2023 ಮಧ್ಯಾಹ್ನ 4.00ರ ವರೆಗೆ. 06) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 16–01–2023 ಮಧ್ಯಾಹ್ನ 4.30ಕ್ಕೆ. 07) ಆರ್ಥಿಕ ಬಿಡ್ ತೆರೆಯುವ ದಿನಾಂಕ: 17–01–2023 ಬೆಳಿಗ್ಗೆ 11.00ಕ್ಕೆ. 08) ಟೆಂಡರ್ ಅರ್ಜಿ ಬೆಲೆ : ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇದ್ದಂತೆ. 09) ಇ.ಎಂ.ಡಿ.ಮೊತ್ತ: ರೂ. 2,00,000/–. 10) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ : https://eproc.karnataka.gov.in ಅಥವಾ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಐವಾನ್–ಇ–ಶಾಹಿ, ಕಲಬುರಗಿ ರಲ್ಲಿ ಸಂಪರ್ಕಿಸಬಹುದು 11) ಅಂತರ್‌ಜಾಲ ತಾಣದ ವಿಳಾಸ : https://eproc.karnataka.gov.in 12) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ : ಯಾವುದೇ ಬದಲಾವಣೆ ಹಾಗು ಮಾರ್ಪಾಡುಗಳಿಗಾಗಿ https://eproc.karnataka.gov.in ಕ್ಕೆ ಸಂಪರ್ಕಿಸಬಹುದು

ಸಹಿ/– ಉಪ ಕಾರ್ಯದರ್ಶಿಗಳು, ಕ.ಕ.ಪ್ರ.ಅ.ಮಂಡಳಿ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/1076/ಎಂ.ಸಿ.&ಎ/2022–23

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ), ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು–560 029.

ದೂರವಾಣಿ: 91-80-26560722 / 26560723 / 66697999 E-mail: kidwai@nic.in

No. KMIO/SME(1)/Tender/M. Equip/232/2022-23 Dated: 06.01.2023

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ

ಈ ಕೆಳಗಿನ ವೈದ್ಯಕೀಯ ಸಲಕರಣೆಗಳ ಪೂರೈಕೆಗಾಗಿ ದ್ವಿ–**ಲಕೋಟೆ ಪದ್ಧತಿ**ಯಲ್ಲಿ ಆನ್‌ಲೈನ್ ಮುಖಾಂತರ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

Sl. No.	Tender No. & Date	Name of the Items for KMIO, Bangalore & PCC Kalaburgi
1.	No. KMIO/SME(1)/Tender/M. Equip/232/2022-23 dated: 06.01.2023	Procurement of various Medical Equipments to VTSM PCC Kalburgi / KMIO (Call-2) *
2.	No. KMIO/SME(1)/Tender/T.P. Consultancy/357/ 2022-23 dated: 06.01.2023	Engaging Consultants for Third Party Consultancy Services for Works executed by Contractors / Agencies at KMIO., Bangalore. (Call-2)
3.	No. KMIO/SME(1)/Tender/M. Equip/363/2022-23 dated: 06.01.2023	Procurement of Radiology Contrast (CT & MRI), Interventional Radiology Stents & Automated Contrast Injector (CT & MRI)
4.	No. KMIO/SME(1)/ Tender Service CDC Bus/364/2022-23 dated: 06.01.2023	Service, Repair and Reinstallation of CDC Bus mammography Machine *
5.	No. KMIO/SME(1)/ Tender/DMB Chemicals/358/2022-23 dated: 01.12.2022	Corrigendum Last date extended to 16/01/2023

ಆನ್‌ಲೈನ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ ದಿನಾಂಕ: **09.01.2023 ರಿಂದ 21.01.2023.** ಬಿಡ್ಡರ್‌ಗಳು ಬಿಡ್ ದಾಖಲೆಗಳನ್ನು (*CSR) ವೆಬ್‌ಸೈಟ್: **https://eproc.karnataka.gov.in**ನಲ್ಲಿ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಶುಲ್ಕ **ರೂ.500/–**ನ್ನು ಪಾವತಿಸಿ, ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ **21.01.2023 ರಂದು ಮಧ್ಯಾಹ್ನ 3:00 p.m. ಗಂಟೆಗೆ.** ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ/ತಿರಸ್ಕರಿಸುವ/ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/– ನಿರ್ದೇಶಕರು

DIPR/CP/AAPL/RO3938/22-23

ಸಮಾಜ ಕಲ್ಯಾಣ ಇಲಾಖೆ

ಜಂಟಿ ನಿರ್ದೇಶಕರ ಕಾರ್ಯಾಲಯ, ಧಾರವಾಡ

ಕಚೇರಿ ದೂರವಾಣಿ ಸಂಖ್ಯೆ:0836–2447201 Email:dswo.dharwad@gmail.com

ಸಂ: ಜಂನಿ/ಸಕಇ/ಎಸ್–2/ಹೊ.ಸಂ.ಟೆಂಡರ್/ಸಿಆರ್–2/2022–23 ದಿನಾಂಕ:05–01–2023

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ವಿಷಯ:2022–2023ನೇ ಸಾಲಿಗೆ ಧಾರವಾಡ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಅಡುಗೆಯವರು, ಅಡುಗೆ ಸಹಾಯಕರು, ಸ್ವಚ್ಛತೆಗಾರರು, ರಾತ್ರಿ ಕಾವಲುಗಾರರು ಮತ್ತು ಜವಾನರು, ನಿರಾಶ್ರಿತರ ಪರಿಹಾರ ಕೇಂದ್ರ ರಾಯಾಪೂರ, ಧಾರವಾಡ ಜಿಲ್ಲೆ ಇಲ್ಲಿ ಸ್ಟಾಫ್‌ನರ್ಸ್ ಟೈಪಿಸ್ಟ್, ಹೆಡ್ ವಾರ್ಡರ್, ವಾರ್ಡರ್, ಕ್ಷೌರಿಕ, ಮತ್ತು ಸ್ವೀಪರ್ ಹಾಗೂ ಇಲಾಖೆಯ ಕಛೇರಿಗಳಲ್ಲಿ ಕಾರ್ಯನಿರ್ವಹಿಸಲು ಖಾಲಿ ಇರುವ ಗ್ರೂಪ್–ಡಿ ಜವಾನರು ಹಾಗೂ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಸಂಪನ್ಮೂಲ ಏಜೆನ್ಸಿ ಮೂಲಕ ಪಡೆಯಲು ಆನ್‌ಲೈನ್ ಅಲ್ಪಾವಧಿ ಇ–ಪ್ರೋಕ್ಯೂರಮೆಂಟ್‌ನಲ್ಲಿ ಟೆಂಡರ್‌ನ್ನು ಆಹ್ವಾನಿಸುವ ಕುರಿತು.

ಉಲ್ಲೇಖ :ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ರವರ ಅನುಮೋದಿತ ಕಂಡಿಕೆ (06) ದಿನಾಂಕ : 23–12–2022

ವಿಷಯಕ್ಕೆ ಸಂಬಂಧಿಸಿದಂತೆ 2022–2023ನೇ ಸಾಲಿಗೆ ಧಾರವಾಡ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಅಡುಗೆಯವರು, ಅಡುಗೆ ಸಹಾಯಕರು, ಸ್ವಚ್ಛತೆಗಾರರು, ರಾತ್ರಿ ಕಾವಲುಗಾರರು ಮತ್ತು ಜವಾನರು, ನಿರಾಶ್ರಿತರ ಪರಿಹಾರ ಕೇಂದ್ರ ರಾಯಾಪೂರ, ಧಾರವಾಡ ಜಿಲ್ಲೆ ಇಲ್ಲಿ ಸ್ಟಾಫ್‌ನರ್ಸ್ ಟೈಪಿಸ್ಟ್, ಹೆಡ್ ವಾರ್ಡರ್, ವಾರ್ಡರ್, ಕ್ಷೌರಿಕ, ಮತ್ತು ಸ್ವೀಪರ್ ಹಾಗೂ ಇಲಾಖೆಯ ಕಛೇರಿಗಳಲ್ಲಿ ಕಾರ್ಯನಿರ್ವಹಿಸಲು ಖಾಲಿ ಇರುವ ಗ್ರೂಪ್–ಡಿ ಜವಾನರು ಹಾಗೂ ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳಿಗೆ ಹೊರಸಂಪನ್ಮೂಲ ಸಿಬ್ಬಂದಿಯವರುಗಳನ್ನು ಹೊರಸಂಪನ್ಮೂಲ ಏಜೆನ್ಸಿ ಮೂಲಕ ಸೇವೆ ಪಡೆಯಲು ಕರ್ನಾಟಕ ಪಾರದರ್ಶಕ **(KTPP)**ಅಧಿನಿಯಮ 1999 ಮತ್ತು 2000 ನಿಯಮಗಳ ಪ್ರಕಾರ ಅಲ್ಪಾವಧಿ ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಿದ ಅರ್ಹ ಹಾಗೂ ಅಂಗೀಕೃತ ಏಜೆನ್ಸಿಗಳು ಅಲ್ಪಾವಧಿ ಇ–ಟೆಂಡರಿನಲ್ಲಿ ಭಾಗವಹಿಸಬಹುದು. ಇ–ಟೆಂಡರ್ ಪ್ರಕ್ರಿಯೆ ವಿವರ ಈ ಕೆಳಗಿನಂತಿದೆ.

1	ಇ–ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ	ಸಂ: ಜಂನಿ/ಸಕಇ/ಎಸ್–2/ಹೊ.ಸಿಂ.ಟೆಂಡರ್/ಸಿಆರ್–2/2022–23 ದಿನಾಂಕ: **05–01–2023**
2	ಇ–ಟೆಂಡರ್‌ಗೆ ಇಟ್ಟ ಮೊತ್ತ	**ರೂ.4,61,70,437.49/–**
3	ಟೆಂಡರ್‌ದಾರರು ಆನ್ ಲೈನ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸಲು ಪ್ರಾರಂಭಿಸುವ ದಿನಾಂಕ	**ದಿ:05–01–2023**
4	ಟೆಂಡರ್‌ದಾರರು ಆನ್ ಲೈನ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	**ದಿ: 27–01–2023, ಸಮಯ: 17:30 ಗಂಟೆ ವರೆಗೆ**
5	ಇ–ಟೆಂಡರ್ ಪೂರ್ವಭಾವಿ ಸಭೆ ದಿನಾಂಕ,ಸಮಯ ಮತ್ತು ಸ್ಥಳ	**ದಿ:16–01–2023 ಸಮಯ: 11:30 ಗಂಟೆಗೆ ಸ್ಥಳ: ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಧಾರವಾಡ.**
6	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ, ಸಮಯ ಮತ್ತು ಸ್ಥಳ	**ದಿ:30–01–2023** ಸಮಯ: ಬೆಳಗ್ಗೆ **11:30** ಗಂಟೆಗೆ ಸ್ಥಳ: ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಧಾರವಾಡ (ಬದಲಾವಣೆಗೊಳಪಟ್ಟಂತೆ)
7	ಆರ್ಥಿಕ ಬಿಡ್ ದಿನಾಂಕ, ಸಮಯ ಮತ್ತು ಸ್ಥಳ (Tentative Date&Time ofopening of Commercialbid)	ದಿ:01–02–2023 ಸಮಯ: ಬೆಳಗ್ಗೆ **11:30** ಗಂಟೆಗೆ ಸ್ಥಳ: ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಧಾರವಾಡ (ಬದಲಾವಣೆಗೊಳಪಟ್ಟಂತೆ)
8	ಟೆಂಡರ್‌ದೊಂದಿಗೆ E-procurement cell ಇವರಿಗೆ ಪಾವತಿಸಬೇಕಾದ ಮೊತ್ತ (EMD)	**ರೂ. 6,92,557/–**
9	ಟೆಂಡರ್ ಬಗ್ಗೆ ಮಾಹಿತಿ ಪಡೆಯಬೇಕಾದಲ್ಲಿ ಸಂಪರ್ಕಿಸಬೇಕಾದ ಅಧಿಕಾರಿಯ ವಿಳಾಸ ಮತ್ತು ದೂರವಾಣಿ ಸಂಖ್ಯೆ.	ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಡಿ.ಸಿ ಕಂಪೌಂಡ್, ಧಾರವಾಡ–580001, ಫೋನ್ ನಂ–0836–2447201 email ID-dswo.dharwad@gmail.com
10	ಇ-Tender ಬಗ್ಗೆ ಟೆಕ್ನಿಕಲ್ ಮಾಹಿತಿಗಾಗಿ ಸಂಪರ್ಕಿಸಬಹುದಾದ ವೆಬ್‌ಸೈಟ್ ವಿಳಾಸ.	**http://eproc.karnataka.govt.in**

ಹೆಚ್ಚಿನ ಮಾಹಿತಿಗಾಗಿ :ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಧಾರವಾಡರವರ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಧಾರವಾಡ.

ವಾ.ಸಾ.ಇ/ಧಾ/943/2022–23/ದೇಶಪಾಂಡೆಪಬ್ಲಿಸಿಟಿ

ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

9ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು – 560001.
ದೂರವಾಣಿ ಸಂಖ್ಯೆ: 080–22865747, 22867097, 22865192 ಫ್ಯಾಕ್ಸ್–080–22860396
e-mail:mdadcl2011@gmail.com

ಸಂಖ್ಯೆ: ಡಾಬಿಆರ್‌ಅಂಅನಿ/ಕೈ–ತ/ಅ.ಆ–03/2022–23 ದಿನಾಂಕ:05.01.2023

ಪ್ರಕಟಣೆ

2022–23ನೇ ಸಾಲಿನ ಗುರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಈ ಕೆಳಕಂಡ ಯೋಜನೆಗೆ ಈ ನಿಗಮದ ವ್ಯಾಪ್ತಿಗೆ ಒಳಪಡುವ ಉಪಜಾತಿಗಳ ಅರ್ಹ ಫಲಾಪೇಕ್ಷಿಗಳಿಂದ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. **ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ:**
ಇ.ವಿ ಮತ್ತು ಇತರೆ ದ್ವಿಚಕ್ರ / ತ್ರಿಚಕ್ರ ವಾಹನ ಖರೀದಿ (ಇ–ಕಾಮರ್ಸ್ ಅಡಿಯಲ್ಲಿ ಕಂಪನಿಗಳಿಂದ ಗ್ರಾಹಕರಿಗೆ ಸರಕು / ಸಾಮಗ್ರಿಗಳು ತಲುಪಿಸಲು) ವಾಹನದ ಘಟಕ ವೆಚ್ಚದಲ್ಲಿ ನಿಗಮದಿಂದ ರೂ. 50,000/– ಗಳ ಸಹಾಯಧನ ಹಾಗೂ ರೂ. 20,000/–ಗಳು ಸಾಲ ಮಂಜೂರು ಮಾಡಲಾಗುವುದು.

ಅರ್ಜಿಗಳನ್ನು ಸೇವಾ ಸಿಂಧು ಪೋರ್ಟಲ್ https://sevasindhu.karnataka.gov.in ನ ಗ್ರಾಮ ಒನ್, ಕರ್ನಾಟಕ ಒನ್ ಮತ್ತು ಬೆಂಗಳೂರು ಒನ್ ಕೇಂದ್ರದಲ್ಲಿ ಆನ್‌ಲೈನ್ ಮುಖಾಂತರ ಆಸಕ್ತರು ಮೇಲಿನ ಯೋಜನೆಗಳಿಗೆ ಅರ್ಜಿಗಳನ್ನು ಸಲ್ಲಿಸಿ ಸದುಪಯೋಗಪಡಿಸಿಕೊಳ್ಳಲು ಈ ಮೂಲಕ ಕೋರಲಾಗಿದೆ.

ಸೇವಾ ಸಿಂಧುವಿನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 16.01.2023ಕ್ಕೆ ನಿಗದಿಪಡಿಸಿದೆ.

ಸೌಲಭ್ಯ ಪಡೆಯಲು ಇರಬೇಕಾದ ಸಾಮಾನ್ಯ ಅರ್ಹತೆಗಳು:

1. ಅರ್ಜಿದಾರರು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು ಹಾಗೂ ಕರ್ನಾಟಕ ರಾಜ್ಯದ ವಾಸಿಯಾಗಿರಬೇಕು ಹಾಗೂ ಈ ನಿಗಮದ ವ್ಯಾಪ್ತಿಗೆ ಒಳಪಟ್ಟಿರುವ ಉಪಜಾತಿಯ ಅರ್ಜಿದಾರರು ಮಾತ್ರ ಅರ್ಜಿಗಳನ್ನು ಸಲ್ಲಿಸತಕ್ಕದ್ದು.
2. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಗ್ರಾಮೀಣ ಪ್ರದೇಶದಲ್ಲಿ ರೂ. 1.50,000/– ಮತ್ತು ನಗರ ಪ್ರದೇಶದಲ್ಲಿ ರೂ. 2,00,000/–ಗಳ ಮಿತಿಯಲ್ಲಿರಬೇಕು
3. ಅರ್ಜಿದಾರರು ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆಯಡಿ ಕನಿಷ್ಠ 21 ವರ್ಷಗಳಿಂದ ಗರಿಷ್ಠ 50 ವರ್ಷದೊಳಗಿರಬೇಕು.
4. ಅರ್ಜಿದಾರರು ಅಥವಾ ಅವರ ಕುಟುಂಬದವರು ಈ ಹಿಂದೆ ನಿಗಮದಿಂದ ಯಾವುದೇ ಯೋಜನೆಗಳಲ್ಲಿ ಸಾಲ ಸೌಲಭ್ಯ ಪಡೆದಿರಬಾರದು ಮತ್ತು ಸರ್ಕಾರಿ/ಅರೆ ಸರ್ಕಾರಿ ಸಂಸ್ಥೆಯಲ್ಲಿ ನೌಕರಿಯಲ್ಲಿರಬಾರದು
5. ಅರ್ಜಿದಾರರು ಸಂಬಂಧಿಸಿದ ವಾಹನ ಚಾಲನ ಪರವಾನಗಿ ಹೊಂದಿರಬೇಕು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು

ವಾಸಾಸಂಇ/ವಾಪ್ರ/ಜಿಎ/3922/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಯೋಜನೆ ಕೇಂದ್ರೀಯ–5, ನ.ರಾ.ಚೌಕ, ಬೆಂಗಳೂರು – 560 002.

ಸಂಖ್ಯೆ: ಕಾಅ(ಯೋಕೇಂ–5)/ಟೆಂಡರ್–05/2022–23 ದಿನಾಂಕ: 06.01.2023

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

ಟರ್ನ್‌ಕೀ, ಸ್ಥಿರ ಬೆಲೆ, ಒಟ್ಟಾರೆ ಮೊತ್ತದ ಗುತ್ತಿಗೆ, ವ್ಯತ್ಯಾಸವಿಲ್ಲದ (ಬೃಬೆಂಮಪಾಯಿಂದ ನಿಗಧಿತ ಮಾನದಂಡನೆ) (ದ್ವಿಲಕೋಟೆ ಪದ್ಧತಿ) (ಅಲ್ಪಾವಧಿ ಟೆಂಡರ್ ಪ್ರಕಟಣೆ) (ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಯೋಜನೆ ಕೇಂದ್ರೀಯ– 5), ಬೃಬೆಂಮಪಾ, ಇವರು ಮುಖ್ಯ ಆಯುಕ್ತರು, ಬೃಬೆಂಮಪಾ ಇವರ ಪರವಾಗಿ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಟರ್ನ್‌ಕೀ, ಸ್ಥಿರ ಬೆಲೆ, ಒಟ್ಟಾರೆ ಮೊತ್ತದ ಗುತ್ತಿಗೆ, ವ್ಯತ್ಯಾಸವಿಲ್ಲದ (ಬೃಬೆಂಮಪಾಯಿಂದ ನಿಗಧಿತ ಮಾನದಂಡನೆ) ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರಮ ಸಂಖ್ಯೆ	ಕೆಲಸದ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ. ಕೋಟಿಗಳಲ್ಲಿ)	ಇಎಂಡಿ (ರೂ. ಕೋಟಿಗಳಲ್ಲಿ)
1.	ಈಜೀಪುರ ಮೇನ್ ಇನ್ನರ್ ರಿಂಗ್ ರೋಡ್ ಜಂಕ್ಷನ್, ಸೋನಿ ವರ್ಲ್ಡ್ ಜಂಕ್ಷನ್ ಮತ್ತು ಬೆಂಗಳೂರು, ಕೋರಮಂಗಲ, 100 ಅಡಿ ಇನ್ನರ್ ರಿಂಗ್ ರೋಡ್ ಅಡ್ಡಲಾಗಿರುವುದನ್ನು ಸಂಯೋಜಿಸಿ ಎಲಿವೇಟೆಡ್ ಕಾರಿಡಾರ್ ನಿರ್ಮಿಸುವುದು – ಬಾಕಿ ಭಾಗಗಳು (ಎಲ್ಲಿ ಹೇಗಿದೆಯೋ ಹಾಗೆ ಆಧಾರದಲ್ಲಿ)	143.80	1.44

ಟೆಂಡರ್ ಕಾರ್ಯ ಸೂಚಿ: 1) ಬಿಡ್‌ಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ 07.01.2023 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ 23.01.2023 ರಂದು 17.30 ಗಂಟೆಗೆ ಅಥವಾ ಮುಂಚಿತವಾಗಿ ಸಲ್ಲಿಸಬೇಕು ಮತ್ತು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. 3) ಬಿಡ್ ಪೂರ್ವ ಸಭೆಯನ್ನು 13.01.2023 ರಂದು 16.00 ಗಂಟೆಗೆ ಏರ್ಪಡಿಸಲಾಗಿದೆ. 4) ವಿಚಾರಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 12.01.2023 ರಂದು 17.30 ಗಂಟೆಯವರೆಗೆ 5) ತಾಂತ್ರಿಕ ಬಿಡ್‌ಗಳನ್ನು 25.01.2023 ರಂದು 16.30 ಗಂಟೆಗೆ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರೀಯ – 5

ಸ್ವಲ್ಪ ಹೊತ್ತು ಕಾದು ಹರಪನಹಳ್ಳಿಗೆ ತೆರಳಿದ ಪ್ರಸನ್ನಾನಂದ ಸ್ವಾಮೀಜಿ

ನಡೆಯದ ನಡ್ಡಾ–ವಾಲ್ಮೀಕಿ ಶ್ರೀ ಭೇಟಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನಿಗದಿಗಿಂತ ಮೊದಲೇ ಬರಲು ಸೂಚಿಸಿದ್ದ ಸ್ವಾಮೀಜಿ
- ವಚನಾನಂದ ಸ್ವಾಮೀಜಿ ಆಶೀರ್ವಾದ ಪಡೆದ ನಡ್ಡಾ
- ಸ್ವಾಮೀಜಿ ಇಲ್ಲದಿದ್ದರೂ ನಂತರ ವಾಲ್ಮೀಕಿ ಪೀಠಕ್ಕೆ ಭೇಟಿ

ದಾವಣಗೆರೆ: ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಶುಕ್ರವಾರ ಬೆಳಿಗ್ಗೆ ಜಿಲ್ಲೆಯ ಹರಿಹರ ತಾಲ್ಲೂಕಿನಲ್ಲಿರುವ ವಿವಿಧ ಸಮುದಾಯಗಳ ಮಠಗಳಿಗೆ ತೆರಳಿದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರಿಗೆ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಅವರ ಭೇಟಿ ಸಾಧ್ಯವಾಗಲಿಲ್ಲ.

ವಾಲ್ಮೀಕಿ ಜಾತ್ರೆಯ ಅಂಗವಾಗಿ ಹರಪನಹಳ್ಳಿಯಲ್ಲಿ ಸಮಾಜದ ಸಭೆಯಲ್ಲಿ ಭಾಗವಹಿಸಬೇಕಿರುವುದರಿಂದ ನಿಗದಿಗಿಂತ ಮೊದಲೇ ವಾಲ್ಮೀಕಿ ಪೀಠಕ್ಕೆ ಬರುವಂತೆ ಪ್ರಸನ್ನಾನಂದ ಸ್ವಾಮೀಜಿ ಅವರು ನಡ್ಡಾ ಅವರಿಗೆ ಸಂದೇಶ ರವಾನಿಸಿದ್ದರು. ಆದರೆ, ಹರಿಹರ ತಾಲ್ಲೂಕಿನ ಬೆಳ್ಳೂಡಿಯ ಕನಕಗುರು ಪೀಠದ ನಿರಂಜನಾನಂದ ಪುರಿ ಶ್ರೀಗಳೂ ತಮ್ಮ ಮಠಕ್ಕೆ ಬೇಗನೆ ಬರುವಂತೆ ಕೋರಿದ್ದರಿಂದ ನಡ್ಡಾ ಅವರು ಮೊದಲು ಕನಕ ಗುರುಪೀಠದ ಶಾಖಾ ಮಠಕ್ಕೆ ತೆರಳಿದರು.

ತಾವು ಸೂಚಿಸಿದ ಸಮಯದಿಂದ ಒಂದಷ್ಟು ಹೊತ್ತು ಕಾದರೂ ನಡ್ಡಾ ಅವರು ಮಠಕ್ಕೆ ಬಾರದೇ ಇರುವುದರಿಂದ ಬೇಸತ್ತ ಪ್ರಸನ್ನಾನಂದ ಸ್ವಾಮೀಜಿ, ಹರಪನಹಳ್ಳಿಗೆ ತೆರಳಿದರು. ವಾಲ್ಮೀಕಿ ಪೀಠದಿಂದ ಸ್ವಾಮೀಜಿ ತೆರಳಿದ ಮಾಹಿತಿ ಲಭಿಸಿದ್ದರಿಂದ ನಡ್ಡಾ ಅವರು ಹರಿಹರದ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

ಸ್ವಾಮೀಜಿ ಇಲ್ಲದಿದ್ದರೂ ನಂತರ ವಾಲ್ಮೀಕಿ ಪೀಠಕ್ಕೆ ಭೇಟಿ ನೀಡಿದ ನಡ್ಡಾ, ಲಿಂಗೈಕ್ಯ ಪುಣ್ಯಾನಂದಪುರಿ ಶ್ರೀಗಳ ಗದ್ದುಗೆ ದರ್ಶನ ಪಡೆದು ಪೂಜೆ ಸಲ್ಲಿಸಿ ದಾವಣಗೆರೆಗೆ ವಾಪಸಾದರು.ಜೆ.ಪಿ.ನಡ್ಡಾ ಅವರ ಪ್ರವಾಸದಲ್ಲಿ ಮೊದಲು ಪಂಚಮಸಾಲಿ ಪೀಠ, ನಂತರ ಕಾಗಿನೆಲೆ ಪೀಠ ಹಾಗೂ ಮೂರನೆಯದಾಗಿ ವಾಲ್ಮೀಕಿ ಗುರುಪೀಠಕ್ಕೆ ಭೇಟಿ ನೀಡಲು ಕಾರ್ಯಕ್ರಮ ನಿಗದಿಯಾಗಿತ್ತು. ಇಬ್ಬರೂ ಸ್ವಾಮೀಜಿಗಳ ಮನವಿಯ ಮೇರೆಗೆ ಕಾರ್ಯಕ್ರಮದಲ್ಲಿ ಅಲ್ಪ ಬದಲಾವಣೆ ಆಗಿತ್ತು.

ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ರಾಜನಹಳ್ಳಿ ವಾಲ್ಮೀಕಿ ಗುರುಪೀಠಕ್ಕೆ ಪ್ರಸನ್ನಾನಂದ ಸ್ವಾಮೀಜಿ ಅನುಪಸ್ಥಿತಿಯಲ್ಲೇ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ ಅವರು ಭೇಟಿ ನೀಡಿ ಲಿಂಗೈಕ್ಯ ಪುಣ್ಯಾನಂದಪುರಿ ಶ್ರೀಗಳ ಗದ್ದುಗೆಗೆ ಪೂಜೆ ಸಲ್ಲಿಸಿದರು. ಸಚಿವ ಬೈರತಿ ಬಸವರಾಜ, ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್, ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಸಂಸದ ಜಿ.ಎಂ. ಸಿದ್ದೇಶ್ವರ ಇದ್ದರು. –ಪ್ರಜಾವಾಣಿ ಚಿತ್ರ / ಸತೀಶ ಬಡಿಗೇರ್

ಮಂತ್ರಿಗಳಿಗೆ ನೀಡಲು ತಂದಿರಬಹುದು

ವಿಧಾನಸೌಧದಲ್ಲಿ ಎಂಜಿನಿಯರ್ ಬ್ಯಾಗ್‌ನಲ್ಲಿ ₹10 ಲಕ್ಷ ಪತ್ತೆ ಪ್ರಕರಣ: ಸಿದ್ದರಾಮಯ್ಯ ವ್ಯಂಗ್ಯ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ವಿಧಾನಸೌಧಕ್ಕೆ ಬಂದಿದ್ದ ಲೋಕೋಪಯೋಗಿ ಕಿರಿಯ ಎಂಜಿನಿಯರ್ ಒಬ್ಬರ ಬ್ಯಾಗ್‌ನಲ್ಲಿ ₹10 ಲಕ್ಷ ಪತ್ತೆಯಾಗಿದ್ದು, ಆತ ವರ್ಗಾವಣೆ ಅಥವಾ ಬೇರೆ ಯಾವುದೋ ಕೆಲಸ ಮಾಡಿಸಿಕೊಳ್ಳಲು ಮಂತ್ರಿ ಅಥವಾ ಮುಖ್ಯಮಂತ್ರಿಗೆ ನೀಡಲು ಆ ಹಣವನ್ನು ತಂದಿರಬಹುದು ಎಂಬುದು ನನ್ನ ಅನುಮಾನ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದಲ್ಲಿ ಪೊಲೀಸರು ಲೋಕೋಪಯೋಗಿ ಇಲಾಖೆ ಎಂಜಿನಿಯರ್ ಒಬ್ಬರಿಂದ ₹10 ಲಕ್ಷ ನಗದು ಜಪ್ತಿ ಮಾಡಿ, ಬಂಧಿಸಿರುವ ಪ್ರಕರಣ ಕುರಿತು ಶುಕ್ರವಾರ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿ,‘ಈ ಪ್ರಕರಣದ ತನಿಖೆ ನಡೆಯಲಿ’ ಎಂದರು.

ತನಿಖೆ ಕೈಗೊಳ್ಳಲಿದ್ದಾರೆ: ಹಾವೇರಿಯಲ್ಲಿ ಪ್ರತಿಕ್ರಿಯಿಸಿದ ಶಾಸಕ ಬಿ.ಎಸ್. ಯಡಿಯೂರಪ್ಪ, ‘ಈ ಪ್ರಕರಣ ಕುರಿತು ಸಂಬಂಧಪಟ್ಟವರು, ತನಿಖೆ ಮಾಡಿ ಕ್ರಮ ಕೈಗೊಳ್ಳಲಿದ್ದಾರೆ’ ಎಂದರು.

ಆದರೆ ಈ ಕುರಿತು ಪ್ರತಿಕ್ರಿಯಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಿರಾಕರಿಸಿದರು.

ರಾಜಕೀಯ ಬಳಕೆಗೆ ವಿರೋಧ

2024ರಲ್ಲಿ ರಾಮಮಂದಿರ ನಿರ್ಮಾಣವಾಗಲಿದೆ ಎಂಬ ಅಮಿತ್ ಶಾ ಹೇಳಿಕೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ರಾಮಮಂದಿರ ನಿರ್ಮಾಣಕ್ಕೆ ನಮ್ಮ ವಿರೋಧ ಇಲ್ಲ. ನಾವು ಸಹ ಹಳ್ಳಿಯಲ್ಲಿ ರಾಮಮಂದಿರ ಕಟ್ಟಿದ್ದೇವೆ. ಆದರೆ ಮಂದಿರ ವಿಷಯವನ್ನು ರಾಜಕೀಯಕ್ಕೆ ಬಳಸಿಕೊಳ್ಳುವುದಕ್ಕೆ ಹಾಗೂ ಅದನ್ನು ಇನ್ನೊಂದು ಧರ್ಮದ ವಿರುದ್ಧ ಬಳಸಿಕೊಳ್ಳುವುದಕ್ಕೆ ವಿರೋಧ ಇದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಎಸ್‌ಡಿಪಿಐ ನಿಷೇಧಕ್ಕೆ ಸಂಬಂಧಿಸಿದಂತೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರ ಹೇಳಿಕೆ ಕುರಿತ ಪ್ರಶ್ನೆಗೆ, ‘ಕೋಮುವಾದ ಮಾಡುವ ಯಾವುದೇ ಪಕ್ಷ ಜನರನ್ನು ಆಳಲು ಅನರ್ಹ. ನಾನು ಸ್ವತಃ ಹಿಂದೂ, ಆದರೆ ಹಿಂದುತ್ವಕ್ಕೆ ವಿರೋಧವಿದೆ. ಎಲ್ಲ ಜಾತಿ ಧರ್ಮದವರನ್ನು ಒಟ್ಟಿಗೆ ಕರೆದೊಯ್ಯಬೇಕು ಎಂದು ಸಂವಿಧಾನವೇ ಹೇಳಿದೆ. ಎಲ್ಲರನ್ನೂ ಮನುಷ್ಯರಂತೆ ಕಾಣಬೇಕು’ ಎಂದರು.

‘1925ರಲ್ಲಿ ಆರ್‌ಎಸ್‌ಎಸ್ ಸ್ಥಾಪನೆಯಾಯಿತು, ಅಲ್ಲಿಂದ 1947ರ ವರೆಗೆ ಆ ಸಂಘಟನೆಯ ಯಾರಾದರೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಾರೆಯೇ?’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ವಿಧಾನಸೌಧ ಎಂಬುದು ಶಾಪಿಂಗ್ ಮಾಲ್: ಪ್ರಿಯಾಂಕ್ ಖರ್ಗೆ ವ್ಯಂಗ್ಯ

ಕಲಬುರಗಿ: ‘ವಿಧಾನಸೌಧ ಎಂಬುದು ಶಾಪಿಂಗ್ ಮಾಲ್ ಆಗಿದೆ. ಇಲ್ಲಿ ಪಿಎಸ್‌ಐ, ಸಹಾಯಕ ಎಂಜಿನಿಯರ್ ಹುದ್ದೆಗಳು ಸೇರಿ ಸರ್ಕಾರದ ಹಲವು ಹುದ್ದೆಗಳನ್ನು ಹಣಕ್ಕೆ ಮಾರಲಾಗುತ್ತಿದೆ. ಇದರಲ್ಲಿ ಸ್ಯಾಂಟ್ರೊ ರವಿಯಂತಹ ಸಮಾಜಘಾತುಕ ಶಕ್ತಿಗಳು ಮಧ್ಯವರ್ತಿ ಆಗಿದ್ದಾರೆ’ ಎಂದು ಶಾಸಕ, ಕೆಪಿಸಿಸಿ ವಕ್ತಾರ ಪ್ರಿಯಾಂಕ್ ಖರ್ಗೆ ಆರೋಪಿಸಿದರು.

‘ಪಿಎಸ್‌ಐ ನೇಮಕಾತಿಗೆ ಸಂಬಂಧಿಸಿದಂತೆ ಶಾಸಕರೊಬ್ಬರು ರೋಲ್ ಕಾಲ್ ಮಾಡಿದ್ದಾರೆ. ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ ₹ 10 ಲಕ್ಷ ಹಣದ ಬ್ಯಾಗ್‌ನೊಂದಿಗೆ ಸಿಕ್ಕಿ ಬಿದ್ದಿದ್ದಾರೆ. ಆ ಹಣ ಯಾರಿಗೆ ನೀಡಲು ಒಯ್ಯಲಾಗುತಿತ್ತು ಎಂಬುದರ ಬಗ್ಗೆ ತನಿಖೆ ಆಗಬೇಕು’ ಎಂದು ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು. ‘ಬಿಜೆಪಿ ಹೈಕಮಾಂಡ್‌ಗೆ ಮುಖ್ಯಮಂತ್ರಿ ಮಧ್ಯವರ್ತಿಯಾದರೆ, ಸಚಿವರಿಗೆ ಶಾಸಕರು ಮತ್ತು ಶಾಸಕರಿಗೆ ಅಧಿಕಾರಿಗಳು ಮಧ್ಯವರ್ತಿ ಆಗಿದ್ದಾರೆ. ಸರ್ಕಾರದಲ್ಲೂ ರೌಡಿ ಘಟಕವಿದ್ದು, ಜೈಲಿನಲ್ಲಿ ಇರಬೇಕಿದ್ದ ಸ್ಯಾಂಟ್ರೊ ರವಿ ಎಂಬಾತ ತಾನು ಮುಖ್ಯಮಂತ್ರಿ ಜೊತೆ ನೇರ ಸಂಪರ್ಕದಲ್ಲಿ ಇರುವುದಾಗಿ ಹೇಳುತ್ತಾನೆ’ ಎಂದು ಅವರು ಹರಿಹಾಯ್ದರು.

‘ಇಷ್ಟೆಲ್ಲ ಬೆಳವಣಿಗೆ ನಡೆದರೂ ಆದಾಯ ತೆರಿಗೆ ಇಲಾಖೆ (ಐಟಿ), ಜಾರಿ ನಿರ್ದೇಶನಾಲಯ (ಇಡಿ) ಏನು ಮಾಡುತ್ತಿವೆ? ಅವು ಬರೀ ವಿರೋಧ ಪಕ್ಷಗಳನ್ನು ಹೆದರಿಸಲು ಇವೆಯೇ’ ಎಂದು ಅವರು ಪ್ರಶ್ನಿಸಿದರು.

ವಿಧಾನಸೌಧದಲ್ಲಿ ಹಣ: ಜಾಮೀನು

ಜೆ. ಜಗದೀಶ್

ಬೆಂಗಳೂರು: ವಿಧಾನಸೌಧದ ಒಳಗೆ ಅಕ್ರಮವಾಗಿ ₹ 10.50 ಲಕ್ಷ ಸಾಗಿಸುತ್ತಿದ್ದ ಆರೋಪದಡಿ ಬಂಧಿಸಲಾಗಿದ್ದ ಲೋಕೋಪಯೋಗಿ ಇಲಾಖೆಯ ಕಿರಿಯ ಎಂಜಿನಿಯರ್ ಜೆ. ಜಗದೀಶ್ ಅವರಿಗೆ ಶುಕ್ರವಾರ ಷರತ್ತುಬದ್ಧ ಜಾಮೀನು ಮಂಜೂರಾಗಿದೆ.

ಮಂಡ್ಯದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಜಗದೀಶ್, ಬುಧವಾರ (ಜ. 4) ಸಂಜೆ ಪಶ್ಚಿಮ ಪ್ರವೇಶ ದ್ವಾರದ ಮೂಲಕ ವಿಧಾನ ಸೌಧದ ಒಳಗೆ ಹೊರಟಿದ್ದರು. ಭದ್ರತಾ ಸಿಬ್ಬಂದಿ ತಪಾಸಣೆ ನಡೆಸಿದಾಗ, ಅವರ ಬ್ಯಾಗ್‌ನಲ್ಲಿ ₹ 10.50 ಲಕ್ಷ ಪತ್ತೆಯಾಗಿತ್ತು.

ಜಗದೀಶ್ ಪರ ವಕೀಲರು, ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯ, ಜಾಮೀನು ಮಂಜೂರು ಮಾಡಿದೆ. ಹೀಗಾಗಿ, ಜಗದೀಶ್ ಅವರನ್ನು ಬಿಡುಗಡೆಗೊಳಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ದಾಖಲೆ ಸಲ್ಲಿಕೆ’

‘ಹಣ ಎಲ್ಲಿಂದ ತರಲಾಗಿತ್ತು ? ಹಾಗೂ ಎಲ್ಲಿಗೆ ತೆಗೆದುಕೊಂಡು ಹೋಗಲಾಗುತ್ತಿತ್ತು? ಎಂಬ ಬಗ್ಗೆ ಪೊಲೀಸರಿಗೆ ಈಗಾಗಲೇ ದಾಖಲೆ ನೀಡಲಾಗಿದೆ’ ಎಂದು ಜೆ. ಜಗದೀಶ್ ತಿಳಿಸಿದರು.

ಜಾಮೀನು ಮೇಲೆ ಬಿಡುಗಡೆಗೊಂಡ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕೆಲವರು ಉದ್ದೇಶಪೂರ್ವಕವಾಗಿ ಪ್ರಕರಣದಲ್ಲಿ ಸಿಲುಕಿಸಿದ್ದಾರೆ. ಬಂಧಿಸುವ ಪ್ರಕರಣವಲ್ಲ ಎಂಬ ಕಾರಣಕ್ಕೆ ನ್ಯಾಯಾಲಯವು ಬಿಡುಗಡೆ ಮಾಡಿದೆ’ ಎಂದರು.

‘ಸಂಬಂಧಿಕರಿಂದ ಪಡೆದಿದ್ದ ಹಣವನ್ನು ಬ್ಯಾಂಕ್ ಮೂಲಕ ನ್ಯಾಯಾಲಯಕ್ಕೆ ತುಂಬಲು ಹೊರಟಿದ್ದೆ.’ ಎಂದೂ ಅವರು ತಿಳಿಸಿದರು.

ಹಣಕ್ಕೂ ನನಗೂ ಸಂಬಂಧವಿಲ್ಲ: ಸಿ.ಸಿ. ಪಾಟೀಲ

ಬೆಂಗಳೂರು: ‘ವಿಧಾನಸೌಧದಲ್ಲಿ ಕಿರಿಯ ಎಂಜಿನಿಯರ್ ಜಗದೀಶ್ ಬಳಿ ಪತ್ತೆಯಾದ ಹಣಕ್ಕೂ ನನಗೂ ಸಂಬಂಧವಿಲ್ಲ. ನಾನೇಕೆ ಅದರ ಹೊಣೆ ಹೊತ್ತುಕೊಳ್ಳಬೇಕು’ ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಪ್ರಶ್ನಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಲೋಕೋಪಯೋಗಿ ಸಚಿವರಿಗೆ ಕೊಡಲು ಆ ಹಣ ತರಲಾಗಿತ್ತು ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆ ನೀಡಿದ್ದಾರೆ. ನನಗೆ ಹಣ ಕೊಡುವುದಾದರೆ ವಿಧಾನಸೌಧಕ್ಕೆ ಬರಬೇಕಿತ್ತೆ? ವಿರೋಧ ಪಕ್ಷದ ನಾಯಕರಿಗೆ ತಲುಪಿಸಲು ತಂದಿದ್ದ ಹಣ ಅದು ಎಂದು ನಾನೂ ಹೇಳಬಹುದಲ್ಲವೆ’ ಎಂದು ಕೇಳಿದರು.

‘ಹಣ ತಂದ ಅಧಿಕಾರಿ ಹುಚ್ಚನಿದ್ದಾನೆ. ಆದರೂ, ಚೀಲದಲ್ಲಿ ನಗದು ಇದೆ ಎಂದು ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದಾನೆ. ಸಿದ್ದರಾಮಯ್ಯ ಮತ್ತು ಎಚ್.ಡಿ. ಕುಮಾರಸ್ವಾಮಿ ಚುನಾವಣೆಯನ್ನು ಗುರಿಯಾಗಿಟ್ಟುಕೊಂಡು ನಮ್ಮ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಅವರ ಆರೋಪದಲ್ಲಿ ಹುರುಳಿಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಕರಣದ ಕುರಿತು ತನಿಖೆಗೆ ಆದೇಶಿಸಿದ್ದಾರೆ. ತನಿಖೆ ಮುಗಿದ ಬಳಿಕ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯಾಗಲಿದೆ’ ಎಂದರು.

ದೀರ್ಘ ಕಾಲದಿಂದ ಬಾಕಿ ಇದೆ: ಕಾಂಗ್ರೆಸ್ ಸರ್ಕಾರದಲ್ಲಿ ಡಾ.ಎಚ್.ಸಿ. ಮಹದೇವಪ್ಪ ಅವರು ಲೋಕೋಪಯೋಗಿ ಸಚಿವರಾದ ಅವಧಿಯಿಂದಲೂ ಗುತ್ತಿಗೆದಾರರಿಗೆ ಬಿಲ್ ಪಾವತಿಸುವುದು ಬಾಕಿ ಇದೆ. ಈಗ ಜ್ಯೇಷ್ಠತೆ ಆಧಾರದಲ್ಲಿ ಬಿಲ್ ಪಾವತಿಸಲಾಗುತ್ತಿದೆ. ಶೇಕಡ 20ರಷ್ಟು ಬಿಲ್ ಮೊತ್ತವನ್ನು ಆದ್ಯತೆಯಲ್ಲಿ ಪಾವತಿಸಲು ನಿರ್ಧಾರ ಕೈಗೊಳ್ಳಲು ಅವಕಾಶವಿರುವ ಸಚಿವರ ವಿವೇಚನಾ ಕೋಟಾವನ್ನು ತಾವು ಬಳಸಿಲ್ಲ ಎಂದರು.

ಎಂಜಿನಿಯರ್ ಬಿಟ್ಟು ಕಳುಹಿಸುವಂತೆ ಸಚಿವರ ಕರೆ: ಕಾಂಗ್ರೆಸ್

‘₹10 ಲಕ್ಷ ತಂದಿದ್ದ ಕಿರಿಯ ಎಂಜಿನಿಯರ್ ಜಗದೀಶ್ ಅವರನ್ನು ಬಿಟ್ಟು ಕಳುಹಿಸುವಂತೆ ಕರೆ ಮಾಡಿದ ಸಚಿವರು ಯಾರು’ ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

‘ಹಣದೊಂದಿಗೆ ಜಗದೀಶ್ ಸಿಕ್ಕಿಬಿದ್ದ ವೇಳೆಯಲ್ಲಿ ಅವರ ಮೊಬೈಲ್‌ನಿಂದ ಮೂರು ಬಾರಿ ಹೊರಗೆ ಹೋದ, ಎರಡು ಬಾರಿ ಒಳಗೆ ಬಂದ ಕರೆ ಸಚಿವರೊಬ್ಬರ ಆಪ್ತ ಸಹಾಯಕರದ್ದು ಎಂಬ ಮಾಹಿತಿ ಇದೆ. ಅವರು ಯಾವ ಸಚಿವರ ಆಪ್ತ ಸಹಾಯಕರು. ಕಮಿಷನ್ ಸರ್ಕಾರಕ್ಕೆ ಇನ್ನೆಷ್ಟು ಬ್ರೋಕರ್‌ಗಳಿದ್ದಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಕರ್ನಾಟಕ ಕಾಂಗ್ರೆಸ್ ಕೇಳಿದೆ.

‘ಬೊಮ್ಮಾಯಿ ಅವರೇ, ಕಮಿಷನ್ ಹಣದ ರಹಸ್ಯವನ್ನು ಸರ್ಕಾರ ಕಾಪಾಡುತ್ತಿರುವುದೇಕೆ? ಇದು ಸಚಿವರ ಪಾಲೇ ಅಥವಾ ನಿಮ್ಮ ಪಾಲೇ’ ಎಂದೂ ಕಾಂಗ್ರೆಸ್ ಕುಟುಕಿದೆ.

ಸ್ಯಾಂಟ್ರೊ ರವಿ ಜೇಬಿನಲ್ಲಿ ಸಚಿವರು: ಕಾಂಗ್ರೆಸ್ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಅತಿಥಿ ಗೃಹ ಕುಮಾರಕೃಪಾ ಸ್ಯಾಂಟ್ರೊ ರವಿ ಕೇಂದ್ರ ಕಚೇರಿ ಆಗಿದ್ದು ಹೇಗೆ? ಯಾರ ಕೃಪೆಯಿಂದ ಆತ ಅಲ್ಲಿ ಮೊಕ್ಕಾಂ ಮಾಡಿ ವ್ಯವಹಾರ ನಡೆಸುತ್ತಿದ್ದಾರೆ’ ಎಂದು ಪ್ರಶ್ನಿಸಿರುವ ಕಾಂಗ್ರೆಸ್, ಸಚಿವರು, ಅಧಿಕಾರಿಗಳೆಲ್ಲ ಆತನ ಜೇಬಿನಲ್ಲಿದ್ದಾರೆ ಎಂದು ಟೀಕಿಸಿದೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಕಾಂಗ್ರೆಸ್, ‘ಸ್ಯಾಂಟ್ರೋ ರವಿ ನನಗೆ ಪರಿಚಯವೇ ಇಲ್ಲ ಎನ್ನುವ ಬೊಮ್ಮಾಯಿಯವರೇ, ‘ಸಿಎಂ ನೇರ ಪರಿಚಯ ನನಗೆ’ ಎಂದು ರವಿ ಹೇಳುತ್ತಾರೆ. ನಿಮ್ಮ ಪುತ್ರ ಆತನಿಗೆ ಸ್ವೀಟ್ ಬ್ರದರ್ ಆಗಿರುವುದು ಹೇಗೆ’ ಎಂದು ಮುಖ್ಯಮಂತ್ರಿಯವರನ್ನು ಕೆಣಕಿದೆ. ‘ಪೊಲೀಸ್ ಅಧಿಕಾರಿಗಳೆಲ್ಲ ನನ್ನ ಕೈಯೊಳಗೆ ಇದ್ದಾರೆ ಎನ್ನುತ್ತಾರೆ ಸ್ಯಾಂಟ್ರೋ ರವಿ. ತನಿಖೆಗೆ ಕರೆದ ಪೊಲೀಸರಿಗೇ ಆವಾಜ್ ಹಾಕುತ್ತಾರೆ. ವರ್ಗಾವಣೆ ಮಾಡಿಸುವುದು ನನಗೆ ಲೀಲಾಜಾಲ ಎನ್ನುತ್ತಾರೆ. ಗೃಹ ಸಚಿವರೇ ಈ ಆತ್ಮವಿಶ್ವಾಸದ ಹಿಂದಿನ ಶಕ್ತಿಯಾಗಿದ್ದಾರಾ? ಕಂತೆ ಕಂತೆ ನೋಟುಗಳೊಂದಿಗೆ ಪೋಸ್ ಕೊಡುತ್ತಿರುವ ಸ್ಯಾಂಟ್ರೋ ರವಿಯ ಮಾಹಿತಿ ಇನ್ನೂ ಐಟಿ, ಇ.ಡಿ ಕಚೇರಿಗಳಿಗೆ ತಲುಪಿಲ್ಲವೇ? ಸರ್ಕಾರದ ಬುಡಕ್ಕೆ ಬರುವ ಸಂಗತಿಯನ್ನು ಮುಟ್ಟದಂತೆ ಯಜಮಾನರ ಆಜ್ಞೆಯಾಗಿದೆಯೇ? ಇ.ಡಿ ದಾಳಿ ಯಾವಾಗ’ ಎಂದೂ ಪ್ರಶ್ನಿಸಿದೆ.

‘ಅನೇಕ ಸಚಿವರು ಸ್ಯಾಂಟ್ರೋ ರವಿಯೊಂದಿಗೆ ಆಪ್ತ ಸಂಬಂಧ ಹೊಂದಿದ್ದಾರೆ. ಸಿ.ಡಿಗೆ ತಡೆಯಾಜ್ಞೆ ತಂದಿರುವುದಕ್ಕೂ ರವಿಗೂ ಸಂಬಂಧ ಇದೆಯಾ’ ಎಂದು ಕಾಂಗ್ರೆಸ್ ಹಂಗಿಸಿದೆ.

ಸ್ಯಾಂಟ್ರೋ ರವಿ ಸಚಿವ ಸೋಮಶೇಖರ್ ಜೊತೆಯಲ್ಲಿರುವ ವಿಡಿಯೋವನ್ನು ಎಚ್‌.ಡಿ. ಕುಮಾರಸ್ವಾಮಿ ಬಿಡುಗಡೆ ಮಾಡಿದರು

ಹೇಳಲು ಹಲವು ವಿಷಯಗಳಿವೆ, ಎಚ್ಚರ: ಎಚ್‌.ಡಿ.ಕುಮಾರಸ್ವಾಮಿ

ಬೀದರ್: ‘ಸ್ಯಾಂಟ್ರೊ ರವಿ ಜೊತೆ ರಾಜ್ಯ ಸರ್ಕಾರದ ಸಚಿವರು ಸಂಬಂಧವೇನು? ವರ್ಗಾವಣೆ ಬಗ್ಗೆ ಚರ್ಚಿಸುತ್ತಾರಾ? ಹೇಳಲು ಬಹಳ ವಿಷಯಗಳಿವೆ. ಎಚ್ಚರದಿಂದ ಇರಿ’ ಎಂದು ಜೆಡಿಎಸ್ ಶಾಸಕಾಂಗ ನಾಯಕ ಎಚ್‌.ಡಿ.ಕುಮಾರಸ್ವಾಮಿ ತಿಳಿಸಿದರು.

ಪಂಚರತ್ನ ಯಾತ್ರೆ ಹಿನ್ನೆಲೆಯಲ್ಲಿ ಚಿಟಗುಪ್ಪ ತಾಲ್ಲೂಕಿನ ಚಾಂಗಲೇರಾ ಗ್ರಾಮದಲ್ಲಿ ಶುಕ್ರವಾರ ಮೊಬೈಲ್‌ನಲ್ಲಿ ಸ್ಯಾಂಟ್ರೊ ರವಿಯ ಜೊತೆ ಸಚಿವ ಎಸ್‌.ಟಿ.ಸೋಮಶೇಖರ ಮಾತನಾಡುತ್ತಿರುವ ವಿಡಿಯೊವೊಂದನ್ನು ತೋರಿಸಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸರ್ಕಾರವು ಹಣದ ದಂಧೆ ನಡೆಸುತ್ತಿದೆ. ನನ್ನನ್ನು ಕೆಣಕಿದ್ದಕ್ಕೆ ಈ ವಿಡಿಯೊ ಬಿಟ್ಟಿರುವೆ’ ಎಂದರು.

‘ನಾನು ಮುಖ್ಯಮಂತ್ರಿಯಾಗಿದ್ದ ವೇಳೆ ಫೈವ್ ಸ್ಟಾರ್ ಹೋಟೆಲ್‌ನಲ್ಲಿ ಉಳಿಯುತ್ತಿದ್ದೆ ಎಂದು ಕೆಲವರು ವ್ಯಂಗ್ಯವಾಡಿದ್ದಾರೆ. ಆ ದಿನಗಳಲ್ಲಿ ಸರ್ಕಾರಿ ವಸತಿ ಗೃಹ ಸಿಗದ ಕಾರಣ ವಿಶ್ರಾಂತಿ ಪಡೆಯಲು ನಾನು ಫೈವ್ ಸ್ಟಾರ್ ಹೋಟೆಲ್‌ನಲ್ಲಿ ಉಳಿಯುತ್ತಿದ್ದೆ’ ಎಂದರು.

4 ದಿನವಾದರೂ ರವಿ ಬಂಧನವಿಲ್ಲ

ಮೈಸೂರು: ಪರಿಶಿಷ್ಟ ಜಾತಿಯ ಮಹಿಳೆಯನ್ನು ವಂಚಿಸಿ, ಹಲ್ಲೆ ನಡೆಸಿ, ವರದಕ್ಷಿಣೆ ಕಿರುಕುಳ ನೀಡಿದ ಆರೋಪದ ಮೇರೆಗೆ ಕೆ.ಎಸ್.ಮಂಜುನಾಥ ಅಲಿಯಾಸ್ ಸ್ಯಾಂಟ್ರೊ ರವಿ ವಿರುದ್ಧ ಇಲ್ಲಿನ ವಿಜಯನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದರೂ, ಇದುವರೆಗೂ ಬಂಧಿಸಿಲ್ಲ.

> **ಪ್ರಕರಣದ ಬಗ್ಗೆ ತನಿಖೆ ನಡೆಯುತ್ತಿದೆ. ಮಾಹಿತಿ ಕಲೆ ಹಾಕಲಾಗುತ್ತಿದೆ. ಇನ್ನೆರಡು ದಿನಗಳಲ್ಲಿ ಎಲ್ಲವೂ ಸ್ಪಷ್ಟವಾಗಲಿದೆ**
> **ರಮೇಶ್ ಬಾನೋತ್**
> ನಗರ ಪೊಲೀಸ್ ಆಯುಕ್ತ

ಸಂತ್ರಸ್ತ ಮಹಿಳೆಯು ‘ಒಡನಾಡಿ’ ಸೇವಾ ಸಂಸ್ಥೆಯ ಆಶ್ರಯದಲ್ಲಿದ್ದು, ಪೊಲೀಸರು ಅವರಿಂದ ಮಾಹಿತಿ ಕಲೆ ಹಾಕಿದ್ದಾರೆ. ಈ ನಡುವೆ, ‘ನಿವೃತ್ತ ಐಎಎಸ್ ಅಧಿಕಾರಿ, ವಕೀಲರ ಬಗ್ಗೆಯೂ ದೂರಿನಲ್ಲಿ ತಿಳಿಸಲಾಗಿದ್ದು, ಅವರನ್ನು ಬಂಧಿಸಬೇಕು’ ಎಂದು ಒಡನಾಡಿ ಸೇವಾ ಸಂಸ್ಥೆ ಒತ್ತಾಯಿಸಿದೆ.

ಪ್ರಕರಣ ದಾಖಲಾಗಿ (ಜ.2ರಂದು) ನಾಲ್ಕು ದಿನಗಳಾದರೂ ಆರೋಪಿಯನ್ನು ಬಂಧಿಸದಿರುವುದಕ್ಕೆ ದಲಿತ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿವೆ.

‘ಆರೋಪಿಯು ಪ್ರಭಾವಿ ರಾಜಕಾರಣಿಗಳು, ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ನಿಕಟ ಸಂಪರ್ಕವಿಟ್ಟುಕೊಂಡಿದ್ದಾನೆ. ಹಿರಿಯ ಅಧಿಕಾರಿಗಳು ಎದುರು ಹಾಕಿಕೊಂಡು, ಕೆಳಹಂತದ ಅಧಿಕಾರಿಗಳು ತನಿಖೆ ನಡೆಸಲು ಹಿಂದೇಟು ಹಾಕುತ್ತಿದ್ದಾರೆ. ಹೀಗಾಗಿ, ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಸಬೇಕು’ ಎಂದು ‘ಒಡನಾಡಿ’ ಸಂಸ್ಥಾಪಕ ಸ್ಟ್ಯಾನ್ಲಿ ಒತ್ತಾಯಿಸಿದರು. ‘ತನಿಖೆ ನೆಪದಲ್ಲಿ ಪ್ರಕರಣದ ದಿಕ್ಕು ತಪ್ಪಿಸಲಾಗುತ್ತಿದೆ. ಆರೋಪಿಯನ್ನು ಬಂಧಿಸಿ, ಸಂತ್ರಸ್ತೆಗೆ ನ್ಯಾಯ ಕೊಡಿಸಬೇಕು’ ಎಂದು ಆಗ್ರಹಿಸಿದರು.

ನೋವು ತೋಡಿಕೊಂಡ ಸಂತ್ರಸ್ತೆ

‘ಜಾಹೀರಾತು ನೋಡಿ ಸ್ಯಾಂಟ್ರೊ ರವಿ ಬಳಿ ಕೆಲಸ ಕೇಳಲು ಹೋದಾಗ, ಕೆಲಸಕ್ಕೆ ಸೇರಿಸಿಕೊಂಡು ಅತ್ಯಾಚಾರ ಮಾಡಿದ್ದ’ ಎಂದು ಸಂತ್ರಸ್ತೆ ನೋವು ತೋಡಿಕೊಂಡರು.

ಮಾಧ್ಯಮ ಪ್ರತಿನಿಧಿಗಳೊಂದಿಗೆ ಶುಕ್ರವಾರ ಮಾತನಾಡಿದ ಅವರು, ‘ಮದುವೆಯಾದ ನಂತರ ದೈಹಿಕ ಕಿರುಕುಳ ನೀಡಲು ಆರಂಭಿಸಿದರು. ನಿವೃತ್ತ ಐಎಎಸ್ ಅಧಿಕಾರಿಯೊಬ್ಬರು ಮನೆಗೆ ಬಂದಿದ್ದ ವೇಳೆ, ಅವರೊಂದಿಗೆ ಹಾಸಿಗೆ ಹಂಚಿಕೊಳ್ಳುವಂತೆ ಹೇಳಿದ್ದ. ಅದರಿಂದ ನನಗೆ ದೊಡ್ಡ ಮೊತ್ತ ಸಿಗುತ್ತದೆ ಎಂದು ನಂಬಿಸಿದ್ದ. ಅದನ್ನು ಕೇಳದಿದ್ದ ಕಾರಣಕ್ಕೆ ಇಲ್ಲಸಲ್ಲದ ಕೇಸ್ ಹಾಕಿಸಿ ಜೈಲಿಗೆ ಕಳುಹಿಸಿದ್ದ’ ಎಂದು ದೂರಿದರು.

‘ಐಪಿಎಸ್, ಐಎಎಸ್ ಅಧಿಕಾರಿಗಳೊಂದಿಗೆ ಸಂಪರ್ಕ ಹೊಂದಿದ್ದ. ಆತ ಈಗಾಗಲೇ ಮದುವೆಯಾಗಿದ್ದ ಎನ್ನುವ ವಿಚಾರ ನವೆಂಬರ್‌ನಲ್ಲಿ ಗೊತ್ತಾಯಿತು. ಇದೆಲ್ಲವನ್ನೂ ಸಹಿಸಲಾರದೆ ನಾನು ಆತನಿಂದ ದೂರ ಬಂದೆ’ ಎಂದು ಅಳಲು ತೋಡಿಕೊಂಡರು.

‘ಆತ ಹಲವು ರಾಜಕಾರಣಿಗಳೊಂದಿಗೆ ಸಂಪರ್ಕದಲ್ಲಿದ್ದಾನೆ. ವರ್ಗಾವಣೆ ದಂಧೆಯಿಂದ ಸಾಕಷ್ಟು ಹಣ ಸಂಪಾದಿಸಿದ್ದಾನೆ’ ಎಂದರು.

ಅವರನ್ನು ಪೊಮೇರಿಯನ್ ಅನ್ನಲು ಆಗುತ್ತದೆಯೇ: ಕಟೀಲ್

ದಾವಣಗೆರೆ: ‘ಸೋನಿಯಾ ಗಾಂಧಿ ಮುಂದೆ ಕೈಕಟ್ಟಿ ಕುಳಿತುಕೊಳ್ಳುತ್ತಿದ್ದ ಸಿದ್ದರಾಮಯ್ಯ ಅವರನ್ನು ಪೊಮೇರಿಯನ್ ನಾಯಿ ಅನ್ನೋಕೆ ಆಗುತ್ತಾ’ ಎಂದು ನಳಿನ್‌ಕುಮಾರ್ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲು ಪ್ರಶ್ನಿಸಿದರು.

ಬಿಜೆಪಿಯಿಂದ ಶುಕ್ರವಾರ ನಡೆದ ವೃತ್ತಿಪರರು ಮತ್ತು ಕೀ ವೋಟರ್ಸ್ ಸಮಾವೇಶದ ಬಳಿಕ ಮಾತನಾಡಿದ ಅವರು, ‘ಸಮಾಜವಾದಿ ಚಿಂತಕರು ಬಾಲಿಶ ಹೇಳಿಕೆ ನೀಡುವ ಮೂಲಕ ರಾಜಕೀಯಕ್ಕೆ ಹಾಗೂ ಮುಖ್ಯಮಂತ್ರಿಗೆ ಅಪಮಾನ ಮಾಡಿದ್ದಾರೆ. ಹಿಂದೂ ಸಮಾಜವನ್ನು ಅವಮಾನ ಮಾಡಿರುವುದು ಅವರ ಬೌದ್ಧಿಕ ದಿವಾಳಿತನ ತೋರಿಸುತ್ತದೆ’ ಎಂದು ತಿಳಿಸಿದರು.

‘ಸಿದ್ದರಾಮಯ್ಯ ಅವರಿಗೆ ಮಾನಸಿಕ ಸಮಸ್ಯೆಗಳು ಶುರುವಾಗಿವೆ. ಸನಾತನ ಧರ್ಮ ಭಾರತೀಯರ ಪ್ರತೀಕವಾಗಿದೆ’ ಎಂದು ಹೇಳಿದರು.

‘ಇಡೀ ರಾಜ್ಯವನ್ನೇ ಶಾಪಿಂಗ್ ಮಾಲ್ ಮಾಡಿದ್ದು, ಭ್ರಷ್ಟಾಚಾರ, ಕಮಿಷನ್ ಏಜೆಂಟ್‌ಗಿರಿ ತಂದಿದ್ದು ಕಾಂಗ್ರೆಸ್’ ಎಂದು ಲೇವಡಿ ನಳಿನ್‌ಕುಮಾರ್ ಟೀಕಿಸಿದರು.

‘ಹೀಗೆಲ್ಲ ಮಾತನಾಡಬಾರದಿತ್ತು’

ಮೈಸೂರು: ‘ನಾಯಿಗಿರುವ ನಿಯತ್ತು ಮನುಷ್ಯರಿಗಿಲ್ಲ. ವಿಧಾನಸಭೆಯ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಮುತ್ಸದ್ದಿ. ಅವರಿಂದ ಇಂಥ ಮಾತು ಬರಬಾರದಿತ್ತು’ ಎಂದು ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಧಾನಿ ನರೇಂದ್ರ ಮೋದಿ ಮುಂದೆ ನಾಯಿ ಮರಿ’ ಎಂಬ ಸಿದ್ದರಾಮಯ್ಯ ಹೇಳಿಕೆ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಅವರು, ‘ನಾಯಿಯನ್ನು ನಾರಾಯಣಸ್ವಾಮಿ ಎಂದೂ ಕರೆಯುತ್ತಾರೆ. ಅದಕ್ಕೆ ಯಾವುದೂ ಸಮವಿಲ್ಲ’ ಎಂದರು.

‘ವಿವಿಧ ಪಕ್ಷಗಳ ಮುಖಂಡರು ತಮ್ಮ ಇತಿಮಿತಿ ಅರ್ಥ ಮಾಡಿಕೊಳ್ಳದೇ ಎಲ್ಲರನ್ನೂ ಟೀಕಿಸುತ್ತಿದ್ದಾರೆ. ಅವರ ಕ್ಷೇತ್ರವನ್ನೇ ನೋಡಿಕೊಳ್ಳಲಾಗದವರು ರಾಜ್ಯ, ರಾಷ್ಟ್ರದ ಬಗ್ಗೆ ಮಾತನಾಡುತ್ತಿದ್ದಾರೆ. ಹೀಗಾಗಿಯೇ ಅವರ ಮಾತುಗಳನ್ನು ಜನರೂ ಆಲಿಸುತ್ತಿಲ್ಲ’ ಎಂದು ವ್ಯಂಗ್ಯವಾಡಿದರು.

‘ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಜನರು ಪ್ರಾದೇಶಿಕ ಪಕ್ಷ ಜೆಡಿಎಸ್ ಬೆಂಬಲಿಸಲಿದ್ದಾರೆ. ಹೀಗಾಗಿಯೇ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಆರಂಭಿಸಿರುವ ಪಂಚರತ್ನ ಯಾತ್ರೆಗೆ ನಿರೀಕ್ಷೆಗೂ ಮೀರಿ ಜನರು ಸೇರುತ್ತಿದ್ದಾರೆ. 45ರಿಂದ 50 ಕ್ಷೇತ್ರಗಳಲ್ಲಿ ಗೆಲ್ಲಲಿದ್ದೇವೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು

ರಂಗ ನಿರ್ದೇಶಕ ಗೋಪಾಲಕೃಷ್ಣ ನಾಯರಿ ನಿಧನ

ಮಂಗಳೂರು: ರಂಗ ನಿರ್ದೇಶಕ, ನಟ ಗೋಪಾಲಕೃಷ್ಣ ನಾಯರಿ (68) ಅವರು ಶುಕ್ರವಾರ ಬೆಳಿಗ್ಗೆ ಇಲ್ಲಿ ನಿಧನ ಹೊಂದಿದರು.

ಅನಾರೋಗ್ಯದಿಂದ ಬಳಲುತ್ತಿದ್ದ ನಾಯರಿ, ನಗರದ ಮಂಗಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ ಪತ್ನಿ ಹಾಗೂ ಮಗಳು ಇದ್ದಾರೆ. ಉಡುಪಿ ಜಿಲ್ಲೆಯ ಸಾಲಿಗ್ರಾಮದ ಕಾರ್ಕಡದಲ್ಲಿ ಶುಕ್ರವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಿತು.

ನಾಯರಿ ಅವರು ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯಲ್ಲಿ (ಎನ್.ಎಸ್.ಡಿ) ತರಬೇತಿ ಪಡೆದು ಮರಳಿದ ಬಳಿಕ ರಂಗಕರ್ಮಿ ನಾಗೇಶ್ ನಿರ್ದೇಶನದ ತಾಮ್ರಪತ್ರ ನಾಟಕದಲ್ಲಿ ಮುಖ್ಯಪಾತ್ರದಲ್ಲಿ ಅಭಿನಯಿಸಿದ್ದರು. ನಂತರ ಗಂಗಾಧರ ಸ್ವಾಮಿ ನಿರ್ದೇಶನದಲ್ಲಿ ಸಮುದಾಯದಲ್ಲಿ ‘ಕೊಂದು ಕೂಗಿತ್ತು ನೋಡಾ’ ನಾಟಕದಲ್ಲಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದರು.

ಬೆಂಗಳೂರು ಮತ್ತು ತುಮಕೂರಿನ ‘ನಾಟಕ ಮನೆ’ ಜೊತೆಗೆ ಒಡನಾಟ ಹೊಂದಿದ್ದರು. ಸಂಸ್ಕೃತ ನಾಟಕಗಳನ್ನು ಆಧುನಿಕತೆಗೆ ಒಗ್ಗಿಸಿಕೊಂಡು ಪ್ರಯೋಗಗಳನ್ನು ನಡೆಸಿದ್ದ ನಾಯರಿ, ಆ ಮೂಲಕ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ್ದರು.

ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿಯೂ (1997ರಲ್ಲಿ) ಸೇರಿ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಕಾರ್ಮಿಕರ ರಾಜ್ಯ ವಿಮಾ ಯೋಜನೆ
ವೈದ್ಯಕೀಯ ಸೇವೆಗಳ ನಿರ್ದೇಶನಾಲಯ
ಎಸ್. ನಿಜಲಿಂಗಪ್ಪ ರಸ್ತೆ, ರಾಜಾಜಿನಗರ 2ನೇ ಬ್ಲಾಕ್, ಬೆಂಗಳೂರು–560010

E.S.I.S.M. SERVICES KARNATAKA

ಪ್ರಕಟಣೆ ಸಂಖ್ಯೆ: ವೈದ್ಯರು/361/2020–21 ದಿನಾಂಕ: 05.01.2023

ಅಧಿಸೂಚನೆ

ನೇರ ಸಂದರ್ಶನದ ಮೂಲಕ 43 ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಬಗ್ಗೆ

ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ಇಲಾಖೆಯ ಆಸ್ಪತ್ರೆ ಹಾಗೂ ಚಿಕಿತ್ಸಾಲಯಗಳಲ್ಲಿ ಖಾಲಿ ಇರುವ 43 ವಿಮಾ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಮಾಸಿಕ ರೂ. 40,000/–ಗಳ ಸಂಚಿತ ವೇತನದಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ನಿಗದಿಪಡಿಸಿದ ದಿನಾಂಕ ಮತ್ತು ಸಮಯದಲ್ಲಿ ನೇರ ಸಂದರ್ಶನಕ್ಕಾಗಿ ಆಹ್ವಾನಿಸಲಾಗಿದೆ. ಈ ಹುದ್ದೆಗೆ ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆ ಎಂ.ಬಿ.ಬಿ.ಎಸ್. ಪದವಿಯಾಗಿದ್ದು, ಅದಕ್ಕಿಂತ ಹೆಚ್ಚಿನ ವ್ಯಾಸಂಗ ಮಾಡಿರುವ ತಜ್ಞ ವೈದ್ಯರು ಸಹ ಭಾಗವಹಿಸಬಹುದಾಗಿದೆ. ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ನೇರ ನೇಮಕಾತಿಗೆ ನಿಗದಿಪಡಿಸಿದ ಮೀಸಲಾತಿಯಾನುಸಾರ ಸಾಮಾನ್ಯ ಅಭ್ಯರ್ಥಿಗಳಿಗೆ 35 ವರ್ಷ, ಪ್ರವರ್ಗ – 2ಎ, 2ಬಿ, 3ಎ ಮತ್ತು 3ಬಿ ಅಭ್ಯರ್ಥಿಗಳಿಗೆ 38 ವರ್ಷ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ, ಮಾಜಿ ಸೈನಿಕ ಮತ್ತು ಅಂಗವಿಕಲರಿಗೆ 40 ವರ್ಷಗಳ ಗರಿಷ್ಠ ವಯೋಮಿತಿಯನ್ನು ನಿಗದಿಪಡಿಸಲಾಗಿದೆ. ಎಲ್ಲಾ ವರ್ಗಕ್ಕೂ ಕನಿಷ್ಠ ವಯೋಮಿತಿ 18 ವರ್ಷಗಳಾಗಿರುತ್ತದೆ. ಈ ಮೇಲಿನ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಗರಿಷ್ಠ 65 ವರ್ಷದೊಳಗಿನ ವಯೋಮಾನದವರಿಗೆ ಅರ್ಹ ವೈದ್ಯರನ್ನು ಆಯ್ಕೆ ಮಾಡಿಕೊಳ್ಳಲಾಗುವುದು. 40ರಿಂದ 65 ವರ್ಷದೊಳಗಿನ ಅಭ್ಯರ್ಥಿಗಳನ್ನು ಅವರ ದೈಹಿಕ ದೃಢತೆಯ ಮೇರೆಗೆ (ಕೇಂದ್ರ / ರಾಜ್ಯ ಸರ್ಕಾರದ ಸೇವೆಯಿಂದ ಯಾವುದೇ ಪ್ರಕರಣವಿಲ್ಲದೆ ನಿವೃತ್ತಿಹೊಂದಿರುವ ವೈದ್ಯರುಗಳಿಗೆ ಆದ್ಯತೆ ನೀಡಲಾಗುವುದು) ನೇಮಿಸಲಾಗುವುದು. ಈ ಮೇಲಿನ ಒಪ್ಪಂದದ ನೇಮಕಾತಿಯು ಕ್ರಮಬದ್ಧ (ಕೆ.ಪಿ.ಎಸ್.ಸಿ.) ನೇಮಕಾತಿ ಆದ ತಕ್ಷಣವೇ ಮುಕ್ತಾಯವಾಗುತ್ತದೆ. ಇದನ್ನು ಖಾಯಂ ನೌಕರಿಯೆಂದು ಪರಿಗಣಿಸುವಂತಿಲ್ಲ. ಈ ಬಗ್ಗೆ ಆಸಕ್ತಿ ಉಳ್ಳವರು ಸೂಚಿತ ದಿನಾಂಕದಂದು ನೇರ ಸಂದರ್ಶನಕ್ಕೆ ಹಾಜರಾಗಬಹುದು.

ಮೀಸಲಾತಿ ಸಮತಳ	ಸಾಮಾನ್ಯ (ಇತರೆ)	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಕನ್ನಡ ಮಾಧ್ಯಮ ಅಭ್ಯರ್ಥಿ	ಮಾಜಿ ಸೈನಿಕ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ತೃತೀಯ ಲಿಂಗ	ಒಟ್ಟು
ಸಾಮಾನ್ಯ ಅಭ್ಯರ್ಥಿ	5	6	5	1	2	1	1	21
ಪರಿಶಿಷ್ಟ ಜಾತಿ	2	2	2	0	0	1	0	7
ಪರಿಶಿಷ್ಟ ಪಂಗಡ	1	1	0	0	0	0	0	2
ಪ್ರವರ್ಗ–1	1	1	0	0	0	0	0	2
ಪ್ರವರ್ಗ–2(ಎ)	1	2	2	0	0	1	0	6
ಪ್ರವರ್ಗ–2(ಬಿ)	1	1	0	0	0	0	0	2
ಪ್ರವರ್ಗ–3(ಎ)	1	0	0	0	0	0	0	1
ಪ್ರವರ್ಗ–3(ಬಿ)	1	1	0	0	0	0	0	2
ಒಟ್ಟು	13	14	9	1	2	3	1	43

ನೇರ ಸಂದರ್ಶನ (Walk in Interview) ನಡೆಯುವ ಸ್ಥಳಗಳು:

ದಾವಣಗೆರೆ ವಲಯ: ದಿನಾಂಕ: 16.01.2023
ಸಮಯ: ಬೆಳಿಗ್ಗೆ 10:30ರಿಂದ 2:00ರ ವರೆಗೆ
ಸ್ಥಳ: ಕಾರಾವಿ ಆಸ್ಪತ್ರೆ, ನಿಟ್ಟುವಳ್ಳಿ, ದಾವಣಗೆರೆ

ಕ್ರ. ಸಂ.	ಕಾರಾವಿ ಆಸ್ಪತ್ರೆ / ಚಿಕಿತ್ಸಾಲಯ	ಖಾಲಿ ಹುದ್ದೆಗಳ ಸಂಖ್ಯೆ
1	ಕಾರಾವಿ ಚಿಕಿತ್ಸಾಲಯ ಕೆ.ಬಿ. ಎಕ್ಸ್‌ಟೇಷನ್	1
2	ಕಾರಾವಿ ಚಿಕಿತ್ಸಾಲಯ, ಸಂಡೂರು N	1
3	ಕಾರಾವಿ ಚಿಕಿತ್ಸಾಲಯ, ರಾಣಿಬೆನ್ನೂರುN	1
	ಒಟ್ಟು	3

ಬೆಳಗಾವಿ ವಲಯ: ದಿನಾಂಕ 16.01.2023
ಸಮಯ: ಬೆಳಗ್ಗೆ 10:30ರಿಂದ 2:00ರ ವರೆಗೆ
ಸ್ಥಳ: ಕಾರಾವಿ ಆಸ್ಪತ್ರೆ, ಬೆಳಗಾವಿ

ಕ್ರ. ಸಂ.	ಕಾರಾವಿ ಆಸ್ಪತ್ರೆ / ಚಿಕಿತ್ಸಾಲಯ	ಖಾಲಿ ಹುದ್ದೆಗಳ ಸಂಖ್ಯೆ
1	ಕಾರಾವಿ ಚಿಕಿತ್ಸಾಲಯ, ಗೋಕಾಕ್	1
2	ಕಾರಾವಿ ಚಿಕಿತ್ಸಾಲಯ, ಕೋಣ್ಣೂರ್	1
3	ಕಾರಾವಿ ಚಿಕಿತ್ಸಾಲಯ, ಯಮುನಾಪುರ	1
4	ಕಾರಾವಿ ಚಿಕಿತ್ಸಾಲಯ, ಉದ್ಯಾಮಭಾಗ್	1
	ಒಟ್ಟು	4

ಮೈಸೂರು ವಲಯ: ದಿನಾಂಕ 17.01.2023
ಸಮಯ: ಬೆಳಗ್ಗೆ 10:30ರಿಂದ 2:00ರ ವರೆಗೆ
ಸ್ಥಳ: ಕಾರಾವಿ ಆಸ್ಪತ್ರೆ, ಕೆ.ಆರ್.ಎಸ್. ರಸ್ತೆ, ಮೈಸೂರು

ಕ್ರ. ಸಂ.	ಕಾರಾವಿ ಆಸ್ಪತ್ರೆ / ಚಿಕಿತ್ಸಾಲಯ	ಖಾಲಿ ಹುದ್ದೆಗಳ ಸಂಖ್ಯೆ
1	ಕಾರಾವಿ ಚಿಕಿತ್ಸಾಲಯ, ಹುಣಸೂರು	1
2	ಕಾರಾವಿ ಚಿಕಿತ್ಸಾಲಯ, ಟಿ. ನರಸೀಪುರ	1
	ಒಟ್ಟು	2

ಹುಬ್ಬಳ್ಳಿ ವಲಯ: ದಿನಾಂಕ 17.01.2023
ಸಮಯ: ಬೆಳಗ್ಗೆ 10:30ರಿಂದ 2:00ರ ವರೆಗೆ
ಸ್ಥಳ: ಕಾರಾವಿ ಆಸ್ಪತ್ರೆ, ಹುಬ್ಬಳ್ಳಿ

ಕ್ರ. ಸಂ.	ಕಾರಾವಿ ಆಸ್ಪತ್ರೆ / ಚಿಕಿತ್ಸಾಲಯ	ಖಾಲಿ ಹುದ್ದೆಗಳ ಸಂಖ್ಯೆ
1	ಕಾರಾವಿ ಆಸ್ಪತ್ರೆ, ಕೊಪ್ಪಳ N	10
2	ಕಾರಾವಿ ಚಿಕಿತ್ಸಾಲಯ, ಮುಧೋಳ N	1
3	ಕಾರಾವಿ ಚಿಕಿತ್ಸಾಲಯ, ಚಿಂಚೋಳಿ N	1
4	ಕಾರಾವಿ ಚಿಕಿತ್ಸಾಲಯ, ಕೊಪ್ಪಳ	1
5	ಕಾರಾವಿ ಚಿಕಿತ್ಸಾಲಯ, ಬಾಗಲಕೋಟೆ	1
6	ಕಾರಾವಿ ಚಿಕಿತ್ಸಾಲಯ, ಶಿರಸಿ	1
	ಒಟ್ಟು	15

ಮಂಗಳೂರು ವಲಯ: ದಿನಾಂಕ 18.01.2023
ಸಮಯ: ಬೆಳಗ್ಗೆ 10:30ರಿಂದ 2:00ರ ವರೆಗೆ
ಸ್ಥಳ: ಕಾರಾವಿ ಆಸ್ಪತ್ರೆ, ಮಂಗಳೂರು

ಕ್ರ. ಸಂ.	ಕಾರಾವಿ ಆಸ್ಪತ್ರೆ / ಚಿಕಿತ್ಸಾಲಯ	ಖಾಲಿ ಹುದ್ದೆಗಳ ಸಂಖ್ಯೆ
1	ಕಾರಾವಿ ಚಿಕಿತ್ಸಾಲಯ, ಕರಂಗಲ್‌ಪಾಡಿ	1
2	ಕಾರಾವಿ ಚಿಕಿತ್ಸಾಲಯ, ಪಣಂಬೂರು	1
3	ಕಾರಾವಿ ಚಿಕಿತ್ಸಾಲಯ, ಕುಲಶೇಖರ	1
4	ಕಾರಾವಿ ಚಿಕಿತ್ಸಾಲಯ, ಮೋರ್ಗನ್ಸ್ ಗೇಟ್	1
5	ಕಾರಾವಿ ಚಿಕಿತ್ಸಾಲಯ, ಪುತ್ತೂರು	1
6	ಕಾರಾವಿ ಚಿಕಿತ್ಸಾಲಯ, ಕುಂದಾಪುರ	1
7	ಕಾರಾವಿ ಚಿಕಿತ್ಸಾಲಯ, ಉಡುಪಿ	1
8	ಕಾರಾವಿ ಚಿಕಿತ್ಸಾಲಯ, ಮಣಿಪಾಲ್	1
9	ಕಾರಾವಿ ಚಿಕಿತ್ಸಾಲಯ, ಕಾರ್ಕಳ	1
10	ಕಾರಾವಿ ಚಿಕಿತ್ಸಾಲಯ, ಬಂಟ್ವಾಳ (N)	1
	ಒಟ್ಟು	10

ಬೆಂಗಳೂರು ವಲಯ: ದಿನಾಂಕ 18.01.2023
ಸಮಯ: ಬೆಳಗ್ಗೆ 10:30ರಿಂದ 2:00ರ ವರೆಗೆ
ಸ್ಥಳ: ಕಾರಾವಿ ನಿರ್ದೇಶನಾಲಯ, ರಾಜಾಜಿನಗರ, ಬೆಂಗಳೂರು

ಕ್ರ. ಸಂ.	ಕಾರಾವಿ ಆಸ್ಪತ್ರೆ / ಚಿಕಿತ್ಸಾಲಯ	ಖಾಲಿ ಹುದ್ದೆಗಳ ಸಂಖ್ಯೆ
1	ಕಾರಾವಿ ಚಿಕಿತ್ಸಾಲಯ, ಅತ್ತಿಬೆಲೆ	1
2	ಕಾರಾವಿ ಚಿಕಿತ್ಸಾಲಯ, ಪೀಣ್ಯ	1
3	ಕಾರಾವಿ ಚಿಕಿತ್ಸಾಲಯ, ದೊಡ್ಡಬಳ್ಳಾಪುರ	1
4	ಕಾರಾವಿ ಚಿಕಿತ್ಸಾಲಯ, ವಸಂತನರಸಾಪುರ –ತುಮಕೂರು N	1
5	ಕಾರಾವಿ ಚಿಕಿತ್ಸಾಲಯ, ಗೌರಿಬಿದನೂರು, ಚಿಕ್ಕಬಳ್ಳಾಪುರ –N	1
6	ಕಾರಾವಿ ಚಿಕಿತ್ಸಾಲಯ, ಅರಸೀಕೆರೆ (N)	1
7	ಕಾರಾವಿ ಚಿಕಿತ್ಸಾಲಯ, ಕನಕಪುರ (N)	1
8	ಕಾರಾವಿ ಚಿಕಿತ್ಸಾಲಯ, ಕೋಲಾರ – N	1
9	ಕಾರಾವಿ ಚಿಕಿತ್ಸಾಲಯ, ನರಸಾಪುರ, ಕೋಲಾರ – N	1
	ಒಟ್ಟು	9

ಅರ್ಜಿಯೊಂದಿಗೆ ಒದಗಿಸಬೇಕಾದ ದಾಖಲೆಗಳು:

- ಜನ್ಮದಿನಾಂಕವನ್ನು ಸಮರ್ಥಿಸುವ ಎಸ್.ಎಸ್.ಎಲ್.ಸಿ. ಅಂಕಪಟ್ಟಿ
- ಕ್ಯುಮಿಲೇಟಿವ್ ದಾಖಲೆ ಪ್ರತಿ
- ಶೈಕ್ಷಣಿಕ ದಾಖಲೆಗಳು
- ಮೀಸಲಾತಿ ಬಯಸುವವರು ಸರ್ಕಾರಿ ಆದೇಶದನ್ವಯ ಸಕ್ಷಮ ಪ್ರಾಧಿಕಾರದಿಂದ ಪಡೆದ ನಿಗಧಿತ ಜಾತಿ ಪ್ರಮಾಣ ಪತ್ರಗಳ (ದೃಢೀಕೃತ ಒಂದು ಸೆಟ್ ಅನ್ನು ಅರ್ಜಿಯೊಂದಿಗೆ ಒದಗಿಸಬೇಕು)
- 3.5 x 4.5 ಅಳತೆಯ ಇತ್ತೀಚಿನ 02 ಭಾವಚಿತ್ರಗಳ ಪೈಕಿ ಒಂದನ್ನು ಅರ್ಜಿಗೆ ಅಂಟಿಸಿ ಮತ್ತೊಂದನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.
- ಆಯ್ಕೆಯಾದ ಅಭ್ಯರ್ಥಿಗಳು ನಿಗದಿಪಡಿಸಿದ ಕಾರಾವಿ ಆಸ್ಪತ್ರೆ / ಚಿಕಿತ್ಸಾಲಯಗಳ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸಲು ಸಿದ್ಧರಿರಬೇಕು.

ಸಂದರ್ಶನದಲ್ಲಿ ಅಭ್ಯರ್ಥಿಗಳ ಆಯ್ಕೆ ಪಟ್ಟಿ ಸಿದ್ಧಪಡಿಸುವಾಗ ಎಂ.ಬಿ.ಬಿ.ಎಸ್. ಪದವಿಯಲ್ಲಿ ಹೆಚ್ಚಿನ ಅಂಕಗಳಿಸಿದ ಅಭ್ಯರ್ಥಿಗಳಿಗೆ ಆಧ್ಯತೆ ನೀಡಿ ಕಡಿಮೆ ಅಂಕ ಗಳಿಸಿರುವ ಅಭ್ಯರ್ಥಿಗಳು ರಾಜ್ಯದ ಯಾವುದೇ ಭಾಗದಲ್ಲಾದರೂ ಸೇವೆ ಮಾಡಲು ಸಹಮತ ವ್ಯಕ್ತಪಡಿಸಿದಲ್ಲಿ ಅಂತಹವರನ್ನು ಕಾಯ್ದಿರಿಸಿದ ಪಟ್ಟಿಯಲ್ಲಿರಿಸಿ (Waiting List) ಖಾಲಿ ಉಳಿದ ಸ್ಥಳಗಳ ನೇಮಕ ಮಾಡಲಾಗುವುದು ಅರ್ಜಿ ನಮೂನೆ ಮತ್ತು ವಿವರಗಳನ್ನು ಇಲಾಖೆಯ ವೆಬ್‌ಸೈಟ್ https://esisms.karnataka.gov.in ಮೂಲಕ ಪಡೆಯಬಹುದು.

ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂಪೂರ್ಣ ಅಧಿಕಾರವನ್ನು ಆಯ್ಕೆ ಸಮಿತಿಯು ಹೊಂದಿರುತ್ತದೆ. ಈ ವಿಷಯದ ಕುರಿತು ಪ್ರಾಧಿಕಾರಿ ತೀರ್ಮಾನವನ್ನು ಪ್ರಶ್ನಿಸುವ ಅಧಿಕಾರವು ಬೆಂಗಳೂರು ನಗರ ವ್ಯಾಪ್ತಿಗೊಳಪಡುತ್ತದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080–23324218 / 23324216 ಸಂಪರ್ಕಿಸಬಹುದು.

ಸಹಿ/–
(ಡಾ. ಎನ್.ಜಿ. ರವಿಕುಮಾರ್)
ನಿರ್ದೇಶಕರು (ಪ್ರ)
ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು

ವಾಸಾಸಂಇ/ವಾಪ್ರ/ಎಲ್‌ಸಿ/3918/2022–23

ಸಮ್ಮೇಳನಾಧ್ಯಕ್ಷರ ಅದ್ಧೂರಿ ಮೆರವಣಿಗೆ: ಕನ್ನಡದ ಕಂಪು ಬೀರಿದ ಕಲಾತಂಡಗಳು

ಕನಕನ ನಾಡಿನಲ್ಲಿ ಕನ್ನಡದ ನಗಾರಿ

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: 'ಏಲಕ್ಕಿ ಕಂಪಿನ ನಗರಿ'ಯಲ್ಲಿ ಕನ್ನಡದ ಕಂಪು ಸೂಸುತ್ತಾ, ಕನ್ನಡಿಗರ ಎದೆಯಲ್ಲಿ ಸುಪ್ತವಾಗಿರುವ ಕನ್ನಡಾಭಿಮಾನವನ್ನು ಪುಟಿದೇಳಿಸುತ್ತಾ, ಸಾಮರಸ್ಯದ ಭಾವ– ಕನ್ನಡಿಗರ ಜೀವ ಎಂಬುದನ್ನು ಮನದಟ್ಟು ಮಾಡುತ್ತಾ, ನಗರದ ರಾಜಬೀದಿಯಲ್ಲಿ ಗಜ ಗಾಂಭೀರ್ಯದಿಂದ ಸಮ್ಮೇಳನಾಧ್ಯಕ್ಷರ ಮೆರವಣಿಗೆ ರಥ ಸಾಗಿತು.

86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ನಗರದ ಪುರಸಿದ್ಧೇಶ್ವರ ದೇವಸ್ಥಾನದ ಮುಂಭಾಗ ಶುಕ್ರವಾರ ಬೆಳಿಗ್ಗೆ 7.30ಕ್ಕೆ 'ಕನ್ನಡ ರಥ'ದ ಭುವನೇಶ್ವರಿ ದೇವಿಗೆ ಪೂಜೆ ಸಲ್ಲಿಸಿ, ಚಾಲನೆ ನೀಡಲಾಯಿತು.

ಸಮ್ಮೇಳನಾಧ್ಯಕ್ಷ ಡಾ.ದೊಡ್ಡರಂಗೇಗೌಡರು ಅಲ್ಲಿ ನೆರೆದಿದ್ದ ಕನ್ನಡಿಗರಿಗೆ ಕೈ ಮುಗಿದು ನಮಿಸಿ, 'ಅರಮನೆ ದರ್ಬಾರ್' ಮಾದರಿಯಲ್ಲಿ ಸಿದ್ಧಪಡಿಸಿದ್ದ ವಿಶೇಷ ರಥದಲ್ಲಿ ಹಸನ್ಮುಖಿಯಾಗಿ ಆಸೀನರಾದರು. ಮೆರವಣಿಗೆಯುದ್ದಕ್ಕೂ ಜನಸಮೂಹದತ್ತ ಕೈಬೀಸುತ್ತಾ ಮುಗುಳ್ನಕ್ಕರು. ಪುಟ್ಟ ಮಕ್ಕಳಿಬ್ಬರು ರಥವನ್ನೇರಿ ಸಮ್ಮೇಳನಾಧ್ಯಕ್ಷರಿಗೆ ಸಾಥ್ ನೀಡಿದರು.

ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕಿನ ಭುವನಗಿರಿಯ ಭುವನೇಶ್ವರಿ ದೇಗುಲದಿಂದ ತಂದಿದ್ದ ದೀಪವನ್ನು ಕನ್ನಡ ರಥದಲ್ಲಿ ಮೆರವಣಿಗೆ ಮಾಡಿ, ಅದೇ ಜ್ಯೋತಿಯಿಂದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟನೆ ಮಾಡಿದ್ದು ವೈಶಿಷ್ಟ್ಯಪೂರ್ಣವಾಗಿತ್ತು.

ಕನ್ನಡ ಬಾವುಟ ಹಿಡಿದ ಸ್ಥಳೀಯ ವಿದ್ಯಾರ್ಥಿಗಳು ಮುಂಚೂಣಿಯಲ್ಲಿ ನಡೆಯುವ ಮೂಲಕ 6 ಕಿ.ಮೀ. ಉದ್ದದ ಮೆರವಣಿಗೆ ಮಾರ್ಗಕ್ಕೆ ದಿಕ್ಸೂಚಿಯಾದರು. ಅವರ ಹಿಂದೆ ವೈವಿಧ್ಯಮಯ ಕಲಾತಂಡಗಳು ಮೆರವಣಿಗೆಗೆ ಕಲಾಶ್ರೀಮಂತಿಕೆ ತಂದುಕೊಟ್ಟವು. ಸಮ್ಮೇಳನಾಧ್ಯಕ್ಷರ ಮೆರವಣಿಗೆ ರಥವನ್ನು ಭುವನೇಶ್ವರಿ ದೇವಿಯ ಕನ್ನಡ ರಥ ಹಿಂಬಾಲಿಸಿತು. ರಾಜ್ಯದ 31 ಜಿಲ್ಲೆಗಳ ಕಸಾಪ ಜಿಲ್ಲಾ ಘಟಕಗಳ ಅಧ್ಯಕ್ಷರ 12 ಸಾರೋಟುಗಳು ಮೆರವಣಿಗೆಯಲ್ಲಿ ಸಾಗಿದ್ದು ಈ ಸಮ್ಮೇಳನದ ವಿಶೇಷ.

ನುಡಿಜಾತ್ರೆಯ ಅಂಗವಾಗಿ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಸಹಸ್ರಾರು ಜನರ ಸಮ್ಮುಖದಲ್ಲಿ ಅದ್ಧೂರಿಯಾಗಿ ನಡೆಯಿತು
– ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಧರೆಗಿಳಿದ ಗಂಧರ್ವ ಲೋಕ: ಕರಗ, ಕಂಸಾಳೆ, ಪುರವಂತಿಕೆ, ಸಮಾಳ, ಡೊಳ್ಳು ಕುಣಿತ, ಝಾಂಜ್ ಮೇಳ, ಖಾಸಾ ಬೇಡರ ಕುಣಿತ, ಸೋಮನ ಕುಣಿತ, ಪೂಜಾ ಕುಣಿತ, ಹಾಲಕ್ಕಿಸುಗ್ಗಿ, ಹಗಲುವೇಷ, ಗೊರವರ ಕುಣಿತ, ಕರಡಿ ಮಜಲು, ಭಜನಾ ತಂಡ, ಕೀಲು ಕುದುರೆ, ನಂದಿಕೋಲು ಹಾಗೂ ಗಾರುಡಿ ಗೊಂಬೆ ಕಲಾವಿದರ ಪ್ರದರ್ಶನಗಳು ಗಂಧರ್ವ ಲೋಕವೇ ಧರೆಗಿಳಿದಿದೆಯೇನೋ ಎಂಬಂತೆ ನೋಡುಗರಿಗೆ ಭಾಸವಾಯಿತು.

ಕೊಂಬು ಕಹಳೆ, ಚೆಂಡೆ, ಕರಡಿ ವಾದ್ಯ, ತಮಟೆ, ಡೊಳ್ಳು, ಖಣಿ ಹಲಿಗೆಯ ಸದ್ದು ದಾರಿಯುದ್ದಕ್ಕೂ ಕನ್ನಡದ ಡಿಂಡಿಮವನ್ನು ಬಾರಿಸಿತು. ಚಿಲಿಪಿಲಿ ಗೊಂಬೆ, ಮೋಜು ಗೊಂಬೆ, ಪಟ ಕುಣಿತ, ಕರಡಿ ವೇಷ, ಮರಗಾಲು ಕುಣಿತಗಳು ಮಕ್ಕಳಿಗೆ ಮುದ ನೀಡಿದವು.

ನಾರಿಶಕ್ತಿ ಪ್ರದರ್ಶನ: ಉಡುಪಿಯ ಚೆಂಡೆ ವಾದನ, ಜೋಗತಿ ನೃತ್ಯ, ಮಹಿಳಾ ವೀರಗಾಸೆ, ಭಜನೆ, ಡೊಳ್ಳು ಕುಣಿತ, ದೇವಿ ನೃತ್ಯ, ಲಂಬಾಣಿ ನೃತ್ಯಗಳ ಮೂಲಕ ಮಹಿಳಾ ಕಲಾವಿದರು 'ನಾರಿಶಕ್ತಿ' ಪ್ರದರ್ಶಿಸಿದರು. ಸಮ್ಮೇಳನಾಧ್ಯಕ್ಷರ ಭಾವಚಿತ್ರವನ್ನೊಳಗೊಂಡ ಛತ್ರಿ, ಚಾಮರಗಳು ಮೆರವಣಿಗೆಗೆ ರಾಜವೈಭವದ ಕಳೆ ತಂದುಕೊಟ್ಟವು. ಮೆರವಣಿಗೆ ಮಾರ್ಗದ ಇಕ್ಕೆಲಗಳಲ್ಲಿ ನಿಂತಿದ್ದ ಜನರು ಸೆಲ್ಫಿ, ವಿಡಿಯೊ ಮಾಡುತ್ತ ಸಂಭ್ರಮಿಸಿದರು. ನಿಗದಿತ ಸಮಯದಂತೆ ಬೆಳಿಗ್ಗೆ 10.30ಕ್ಕೆ ಸಮ್ಮೇಳನದ ವೇದಿಕೆಯನ್ನು ಮೆರವಣಿಗೆ ತಲುಪಿತು.

ಮೆರವಣಿಗೆಯಲ್ಲಿ ಜಿಲ್ಲಾ ಉಸ್ತುವಾರಿ ಶಿವರಾಮ ಹೆಬ್ಬಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸುನಿಲ್‌ಕುಮಾರ್, ಶಾಸಕ ನೆಹರು ಓಲೇಕಾರ, ಮಾಜಿ ಸಚಿವ ರುದ್ರಪ್ಪ ಲಮಾಣಿ, ಬಸವರಾಜ ಶಿವಣ್ಣನವರ, ನಗರಸಭೆ ಅಧ್ಯಕ್ಷ ಸಂಜೀವಕುಮಾರ ನೀರಲಗಿ ಇದ್ದರು.

ಮೆರವಣಿಗೆಯಲ್ಲಿ ಅಪಸ್ವರ

'ಹಾವೇರಿ ನಗರದ ಪುರಸಿದ್ಧೇಶ್ವರ ದೇವಸ್ಥಾನದಿಂದ 6 ಕಿ.ಮೀ.ದೂರದ ಸಮ್ಮೇಳನದ ವೇದಿಕೆ ತಲುಪಲು 3 ಗಂಟೆ ಮೀಸಲಿಟ್ಟಿದ್ದರೂ, ತರಾತುರಿಯಲ್ಲಿ ಮೆರವಣಿಗೆಯನ್ನು ಕರೆದೊಯ್ಯುವ ಮೂಲಕ ಜನರಿಗೆ ನಿರಾಸೆ ಉಂಟು ಮಾಡಿದ್ದಾರೆ. ಕಲಾವಿದರು ಕಲಾಪ್ರದರ್ಶನ ನೀಡಲು ಅವಕಾಶ ನೀಡಲಿಲ್ಲ' ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ಹೊಸಮನಿ ಸಿದ್ದಪ್ಪ ವೃತ್ತದವರೆಗೂ ಲಯಬದ್ಧವಾಗಿ ಸಾಗಿದ ಮೆರವಣಿಗೆ, ಸೂತ್ರ ಹರಿದ ಗಾಳಿಪಟದಂತೆ ಕಲಾತಂಡಗಳು ಚದುರಿ ಹೋದವು. ಮೆರವಣಿಗೆಯನ್ನು ಸಮನ್ವಯತೆಯಿಂದ ಕರೆದೊಯ್ಯಬೇಕಾದ ಸೂತ್ರದಾರರ ಕೊರತೆ ಎದ್ದು ಕಾಣುತ್ತಿತ್ತು.

ಸಮ್ಮೇಳನಾಧ್ಯಕ್ಷರ ಮೆರವಣಿಗೆಯಲ್ಲಿ ಮಹಿಳೆಯರ ಚಂಡೆ ವಾದನ ಗಮನಸೆಳೆಯಿತು –ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ (ಎಡಚಿತ್ರ). ಕನ್ನಡ ನಾಡುನುಡಿ, ಸಂಸ್ಕೃತಿಗೆ ಕರ್ನಾಟಕ ಬ್ಯಾಂಕ್ ಸಲ್ಲಿಸಿದ ಸೇವೆಯನ್ನು ಗುರುತಿಸಿ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ ಮಾಡಲಾಯಿತು. ಬ್ಯಾಂಕ್‌ನ ಆಡಳಿತ ನಿರ್ದೇಶಕ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ ಮಹಾಬಲೇಶ್ವರ ಎಂ. ಎಸ್‌. ಅವರು ಬ್ಯಾಂಕಿನ ಪರವಾಗಿ ಸನ್ಮಾನ ಸ್ವೀಕರಿಸಿದರು. ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ, ಆದಿಚುಂಚನಗಿರಿ ಮಹಾಸಂಸ್ಥಾನದ ನಿರ್ಮಲಾನಂದನಾಥ ಸ್ವಾಮೀಜಿ, ನಿವೃತ್ತ ಲೋಕಾಯುಕ್ತ ಸಂತೋಷ್ ಹೆಗ್ಡೆ ಇದ್ದರು

'ನಾಡು–ನುಡಿ–ಗಡಿ ಹಿತ ಚಿಂತನೆಗೆ ಸಮ್ಮೇಳನ ಅಗತ್ಯ'

ಕನಕ–ಶರೀಫ–ಸರ್ವಜ್ಞ ವೇದಿಕೆ (ಹಾವೇರಿ): 'ಸಾಹಿತ್ಯ ಸಮ್ಮೇಳನ ಕನ್ನಡ ನಾಡು ನುಡಿಯ ಹಿತ ಚಿಂತನೆಯ ಸಮಾವೇಶವಾಗಿದೆ. ಒಂದೇ ವೇದಿಕೆಯಲ್ಲಿ ರಾಜಕೀಯ ಕ್ಷಾತ್ರ ಶಕ್ತಿ, ಸಾಹಿತ್ಯದ ಚಿಂತನ ದ್ರವ್ಯ, ಕನ್ನಡ ಸಮುದಾಯದ ಅಭಿಮಾನದ ಅಸ್ಮಿತೆ ಒಟ್ಟುಗೂಡುವ ಅಪೂರ್ವ ಸಮ್ಮಿಲನವಾಗಿದೆ' ಎಂದು 85ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಡಾ.ಎಚ್.ಎಸ್.ವೆಂಕಟೇಶಮೂರ್ತಿ ಅವರು ಕನ್ನಡ ನುಡಿ ಹಬ್ಬಕ್ಕೆ ಜಾತ್ರೆ ಎಂದು ಕರೆಯುವವರಿಗೆ ಪ್ರತ್ಯುತ್ತರ ನೀಡಿದರು.

'ಪ್ರಜೆಗಳ ಧ್ವನಿಯನ್ನು ಪ್ರಭುತ್ವಕ್ಕೆ ತಲುಪಿಸುವ ಕೆಲಸ ಆಗುತ್ತದೆ' ಎಂದು ಹೇಳಿದರು.

ಸಮ್ಮೇಳನ ಉದ್ಘಾಟನೆ ವಿಳಂಬ

ಹಾವೇರಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಡವಾಗಿ ಬಂದಿದ್ದರಿಂದ, ಸಮ್ಮೇಳನದ ಉದ್ಘಾಟನೆ ಒಂದೂ ಕಾಲು ಗಂಟೆ ತಡವಾಗಿ ನೆರವೇರಿತು. ನಿಗದಿಯಂತೆ ಬೆಳಿಗ್ಗೆ 10.30ಕ್ಕೆ ಉದ್ಘಾಟನೆಯಾಗಬೇಕಿತ್ತು. ಆದರೆ ಮುಖ್ಯಮಂತ್ರಿ 11.15ರ ಸುಮಾರಿಗೆ ಹೆಲಿಕಾಪ್ಟರ್‌ನಲ್ಲಿ ಕೊಳ್ಳಿ ಪಾಲಿಟೆಕ್ನಿಕ್ ಕಾಲೇಜಿನ ಮೈದಾನದಲ್ಲಿ ಹೆಲಿಪ್ಯಾಡ್‌ಗೆ ಬಂದಿಳಿದರು. ಅವರೊಂದಿಗೆ ಶಾಸಕ ಬಿ.ಎಸ್. ಯಡಿಯೂರಪ್ಪ ಸಹ ಇದ್ದರು.

ಸಮ್ಮೇಳನದ ಗೌರವಾಧ್ಯಕ್ಷ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸುನಿಲ್ ಕುಮಾರ್, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಅವರನ್ನು ಸ್ವಾಗತಿಸಿದರು. ಕಾಲೇಜಿನಲ್ಲಿ 15 ನಿಮಿಷ ಇದ್ದ ಅವರು, 11.45 ಸುಮಾರಿಗೆ ಪ್ರಧಾನ ವೇದಿಕೆಗೆ ಬಂದರು.

ಮುಖ್ಯಮಂತ್ರಿ ನಿಗದಿತ ಸಮಯಕ್ಕೆ ಬರಲಿದ್ದಾರೆ ಎಂದುಕೊಂಡು, ಸಮ್ಮೇಳನಾಧ್ಯಕ್ಷರ ಮೆರವಣಿಗೆ ತರಾತುರಿಯಲ್ಲಿ ನಡೆಯಿತು. 10.30ರ ಹೊತ್ತಿಗೆ ದೊಡ್ಡರಂಗೇಗೌಡ ಅವರು ವೇದಿಕೆಗೆ ಬಂದು ಕಾದು ಕುಳಿತಿದ್ದರು. ಕಲಾತಂಡಗಳ ಮೆರವಣಿಗೆ ಮಾತ್ರ ಸಿ.ಎಂ ಬರುವವರೆಗೆ ಮಂದಗತಿಯಲ್ಲಿ ಸಾಗಿತು.

ನಿಲ್ಲದ ಗಾಯನ, ಬಂದ್ ಆಗದ ಮೈಕ್!

ಹಾವೇರಿ: 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಯುಕ್ತ ಹಮ್ಮಿಕೊಂಡ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಲಾ ತಂಡಗಳು ಸಮಯದ ಎಚ್ಚರಿಕೆಗೆ ಕಿವಿಗೊಡದೆ, ಪ್ರದರ್ಶನ ನೀಡಿದವು. ಇದರಿಂದ ಕಲಾ ತಂಡಗಳ ಸಮಯವನ್ನು ಕಡಿತ ಮಾಡಲಾಯಿತು.

ಸಮ್ಮೇಳನದ ಉದ್ಘಾಟನೆಗೂ ಮೊದಲು ಪ್ರಧಾನ ವೇದಿಕೆಯಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮ ನೆರೆದಿದ್ದವರನ್ನು ರಂಜಿಸಿತು. 10ಕ್ಕೂ ಅಧಿಕ ಕಲಾ ತಂಡಗಳು ಇದ್ದಿದ್ದರಿಂದ ಪ್ರತಿ ತಂಡಕ್ಕೆ 10 ನಿಮಿಷ ನೀಡಲಾಗಿತ್ತು. ಕಲಾವಿದರು ತಮ್ಮ ಸಮಯ ಮುಗಿದಿದ್ದರೂ ಮತ್ತೊಂದು ಗೀತೆಯನ್ನು ಹಾಡಲು ಮುಂದಾದಾಗ, ಆಯೋಜಕರು ಮೈಕ್ ಬಂದ್ ಮಾಡುವುದಾಗಿ ಎಚ್ಚರಿಕೆ ನೀಡಿದರು. ಆದರೆ, ಮೈಕ್ ಬಂದಾಗದಿದ್ದರಿಂದ ಕಲಾವಿದರು ಗಾಯನ ಮುಂದುವರಿಸಿದರು. ಇದರಿಂದ ಆಯೋಜಕರು ಪೇಚಿಗೆ ಸಿಲುಕಿ, ಪರಿ ಪರಿಯಾಗಿ ಮನವಿ ಮಾಡಿಕೊಂಡರು.

ಷರೀಫ ಮಾಕಪ್ಪನವರ, ತಿಪ್ಪೇಸ್ವಾಮಿ ವಿವಿಧ ಕಲಾವಿದರ ತಂಡಗಳು ಸೂಚನೆಗೆ ಎಚ್ಚೆತ್ತುಕೊಳ್ಳದಿದ್ದರಿಂದ ಆಯೋಜಕರು ವೇದಿಕೆಗೆ ಬಂದು, ಮೈಕ್ ಕಸಿದರು. ಬಳಿಕ ನಂತರದ ತಂಡಗಳಿಗೆ 8 ನಿಮಿಷ ನೀಡಲಾಯಿತು. ಇಷ್ಟಾಗಿಯೂ ಕೆಲವರು ತಮಗೆ ನೀಡಿದ ಸಮಯಕ್ಕಿಂತ ಹೆಚ್ಚಿನ ಅವಧಿ ತೆಗೆದುಕೊಂಡಿದ್ದರಿಂದ ಸಮಯವನ್ನು ಮತ್ತಷ್ಟು ಕಡಿತ ಮಾಡಿ, 5 ನಿಮಿಷ ಮಾತ್ರ ನೀಡಲಾಯಿತು. ಇದು ಕಲಾವಿದರ ಅಸಮಾಧಾನಕ್ಕೂ ಕಾರಣವಾಯಿತು.

ಸಿಗದ ಒಓಡಿ: ಧರಣಿ

ಹಾವೇರಿ: ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನೋಂದಣಿ ಮಾಡಿಕೊಂಡು ಶುಕ್ರವಾರ ಆಗಮಿಸಿದ್ದ ಸಮ್ಮೇಳನದ ಪ್ರತಿನಿಧಿಗಳಿಗೆ ಒಒಡಿ ಸಿಗುತ್ತಿಲ್ಲ ಎಂದು ಆರೋಪಿಸಿ ತುಮಕೂರು ಮತ್ತು ಧಾರವಾಡ ಜಿಲ್ಲೆಗಳ ಕೌಂಟರ್‌ಗಳ ಮುಂಭಾಗ ಕೆಲವು ಸರ್ಕಾರಿ ನೌಕರರು ಧರಣಿ ನಡೆಸಿದರು.

ಧಾರವಾಡ ಜಿಲ್ಲೆಯಲ್ಲಿ 450 ಮಂದಿ ನೋಂದಣಿ ಮಾಡಿಕೊಂಡಿದ್ದರು. ಸಮ್ಮೇಳನದ ಕೌಂಟರ್‌ನಲ್ಲಿ 350 ಕಿಟ್‌ಗಳು ಮಾತ್ರ ಲಭ್ಯವಿತ್ತು. ಇನ್ನೂ 100 ಮಂದಿಗೆ 'ಕಿಟ್ ಬ್ಯಾಗ್' ಸಿಗಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ 10 ಸಾವಿರ ಪ್ರತಿನಿಧಿಗಳು ನೋಂದಣಿ ಮಾಡಿಕೊಂಡಿದ್ದಾರೆ. ನೋಂದಣಿ ಮಾಡಿಕೊಂಡ ಮೊಬೈಲ್ ಸಂಖ್ಯೆಗೆ ಕ್ಯೂ.ಆರ್. ಕೋಡ್ ಬರುತ್ತದೆ ಎಂದು ಕಸಾಪ ತಿಳಿಸಿತ್ತು. ಕೆಲವರಿಗೆ ಕ್ಯೂ.ಆರ್. ಕೋಡ್ ಬಾರದೆ ಗೊಂದಲ ಸೃಷ್ಟಿಯಾಗಿತ್ತು. ಕಿಟ್ ಸಿಗದ ಸರ್ಕಾರಿ ನೌಕರರು ಪರದಾಡಿದರು.

ಒಒಡಿ ಪಡೆದು ಓಡಿದರು!: ಸಮ್ಮೇಳನದ ಮೊದಲ ದಿನವಾದ ಶುಕ್ರವಾರ ಒಒಡಿ ಪಡೆದ ಕೆಲವು ಸರ್ಕಾರಿ ನೌಕರರು, ಮೊದಲೇ ಯೋಜನೆ ಹಾಕಿಕೊಂಡಂತೆ ಸಾಹಿತ್ಯ ಸಮ್ಮೇಳನಕ್ಕೆ ಗುಡ್ ಬೈ ಹೇಳಿ ಹಾವೇರಿ ಜಿಲ್ಲೆಯ ಸುತ್ತಮುತ್ತಲಿನ ಪ್ರವಾಸಿ ತಾಣಗಳನ್ನು ನೋಡಲು ದೌಡಾಯಿಸಿದರು. ಜ.8ರವರೆಗೆ ಇನ್ನೂ ಎರಡು ದಿನ ಸಮ್ಮೇಳನ ನಡೆಯಲಿದೆ.

ಶಾಸ್ತ್ರೀಯ ಸ್ಥಾನ: ತರಾಟೆ

ಒಂದನೇ ಪುಟದಿಂದ...

ಬೆಳಗಾವಿಯ ಒಂದಂಗುಲವನ್ನೂ ಕನ್ನಡಿಗರು ಬಿಡೆವು. ಕನ್ನಡ, ಕನ್ನಡಿಗ ಮತ್ತು ಕರ್ನಾಟಕ ಒಂದೇ ತಂತಿಯಲ್ಲಿರುವಂಥವು. ಈ ತಂತು ಮೂರಾಗದಂತೆ ಶ್ರಮಿಸಲಾಗುವುದು. ಕಾಸರಗೋಡಿನ ಕನ್ನಡಿಗ ಮಕ್ಕಳು ಮಲಯಾಳಂ ಕಲಿಯಬೇಕಾಗಿದೆ. ಅಲ್ಲಿ ಕನ್ನಡ ಶಾಲೆಗಳನ್ನು ತೆರೆಯಬೇಕು. ಕರ್ನಾಟಕದಲ್ಲಿ ಮುಚ್ಚಿರುವ ನೂರು ಕನ್ನಡ ಮಾಧ್ಯಮದ ಶಾಲೆಗಳನ್ನು ಮತ್ತೆ ತೆರೆಯಬೇಕು. ತಮ್ಮ ಶಾಲೆಯೆಂಬ ಮಮತೆ ಇರುವ ಸಾಕಷ್ಟು ಕನ್ನಡಿಗರಿದ್ದಾರೆ. ಜನಪ್ರತಿನಿಧಿಗಳೂ ಮೂರು ಶಾಲೆಗಳನ್ನು ದತ್ತು ಪಡೆದರೂ ಈ ಸಮಸ್ಯೆ ನಿವಾರಣೆಯಾಗುತ್ತದೆ.

ಕನ್ನಡ ಪರ ಹೋರಾಟಗಾರರ ಕುರಿತು ಕರುಣೆ ಇರಲಿ: ಸರ್ಕಾರವು ಕನ್ನಡ ಪರ ಹೋರಾಟಗಾರರನ್ನು ಜೈಲಿಗಟ್ಟುವ ಕ್ರಮ ಕೈಬಿಡಬೇಕು. ಅವರೇನು ಉಗ್ರವಾದಿಗಳಲ್ಲ, ಕನ್ನಡಮ್ಮನ ಹಿತಕ್ಕಾಗಿ, ಭುವನೇಶ್ವರಿಯ ಕಾಳಜಿಗಾಗಿ ಹೋರಾಟಕ್ಕೆ ಇಳಿದವರು. ಅಭಿಮಾನದಿಂದ ವ್ಯಗ್ರರಾದವರು. ಅವರ ಕುರಿತು ಅಂತಃಕರುಣೆಯಿಂದ ನೋಡಬೇಕು. ಅವರ ಮೇಲಿನ ಪ್ರಕರಣಗಳನ್ನೆಲ್ಲ ವಾಪಸು ಪಡೆಯಿರಿ ಎಂದು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರಲ್ಲಿ ಕೋರಿದರು.

ಎದೆಎದೆಯ ದುಡಿ ಕನ್ನಡ ನುಡಿ; ನಮ್ಮ ಕನ್ನಡ ನುಡಿನಾಡಿನ ಗುಡಿ; ಬಿಡುಕೊಡೆವು ನಮ್ಮ ಗಡಿ,ಆಕ್ರಮಿಸಿದರೆ ಹೊತ್ತಿ ಕೊಳ್ಳುವುದು ಅಭಿಮಾನದ ಬೆಂಕಿ ಕಿಡಿ
ದೊಡ್ಡರಂಗೇಗೌಡ, ಅಧ್ಯಕ್ಷರು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಪ್ರಗತಿಪರರಿಗೆ ಪ್ರತ್ಯುತ್ತರ: 'ಕನ್ನಡ ಸಾಹಿತ್ಯ ಸಮ್ಮೇಳನವನ್ನು ಜಾತ್ರೆಯೆಂದು ಕರೆದರು, ಜರೆದರು. ಅಂಥವರಿಗೆಲ್ಲ ಗೊತ್ತಿರಲಿ, ಸಂತೆಯಿರದೆ ಬದುಕು ಸಾಗದು, ಜಾತ್ರೆಗಳಿರದೆ ಸಹಬಾಳ್ವೆ ಕಲಿಯಲಾಗದು. ಇದು ಜಾತ್ರೆಯೇ ಹೌದು. ಕನ್ನಡದ ಹಿತಚಿಂತನೆಗೆ ನೆರೆದ ಜಾತ್ರೆ ಇದು. ಕನ್ನಡ ನುಡಿ, ಗಡಿಗಾಗಿ ಮಥಿಸುವ ಜಾತ್ರೆ ಇದು. ಇದನ್ನು ಬಹಿಷ್ಕರಿಸುವುದು ಕನ್ನಡತನವಲ್ಲ' ಎಂದೂ ಹೇಳಿದರು.

ಪುಸ್ತಕೋದ್ಯಕ್ಕೆ ಪ್ರೋತ್ಸಾಹ: ಕನ್ನಡವನ್ನು ಬೆಳೆಸಲು ಪುಸ್ತಕೋದ್ಯಮಕ್ಕೆ ಸಾಕಷ್ಟು ಪ್ರೋತ್ಸಾಹ ನೀಡಬೇಕು. ಕೇವಲ 300 ಪುಸ್ತಕಕೊಳ್ಳುವ ಬದಲು ಐನೂರು ಪುಸ್ತಕಗಳನ್ನು ಕೊಳ್ಳಬೇಕು. ಅದೇ ವರ್ಷ ಪ್ರಕಾಶಕರಿಗೆ ಹಣ ಪಾವತಿಯಾಗುವಂತೆ ಆಗಬೇಕು ಎಂದು ಅಧ್ಯಕ್ಷ ದೊಡ್ಡರಂಗೇಗೌಡರು ಮುಖ್ಯಮಂತ್ರಿ ಬೊಮ್ಮಾಯಿ ಅವರಲ್ಲಿ ಮನವಿ ಮಾಡಿಕೊಂಡರು.

ಸಮ್ಮೇಳನದ ಅಧ್ಯಕ್ಷರ ಆಶಯಗಳು

ಕನಕ–ಶರೀಫ–ಸರ್ವಜ್ಞ ವೇದಿಕೆ (ಹಾವೇರಿ): ಸರ್ವಾಧ್ಯಕ್ಷರ ಭಾಷಣದಲ್ಲಿ ದೊಡ್ಡರಂಗೇಗೌಡರು ತಮ್ಮ ಆಶಯಗಳನ್ನು ಕೆಲವೇ ಅಂಶಗಳಲ್ಲಿ ಪ್ರತಿಪಾದಿಸಿದ್ದಾರೆ.

- ಕನ್ನಡ ಶಾಸ್ತ್ರೀಯ ಭಾಷೆಯಾಗಿ ಅಧ್ಯಯನಕ್ಕೆ ಹೆಚ್ಚಿನ ಅನುದಾನ ತರಬೇಕು
- ಕನ್ನಡ ಮತ್ತು ಸಂಸ್ಕೃತಿ ಸಚಿವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ಆಗಬೇಕು
- ಕೇಂದ್ರದ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರ ಸ್ವಾಯತ್ತ ಸಂಸ್ಥೆಯಾಗಬೇಕು
- ಶಾಸ್ತ್ರೀಯ ಭಾಷಾ ಅಧ್ಯಯನದ ಉಪಕೇಂದ್ರಗಳ ಸ್ಥಾಪನೆ ಆಗಲಿ
- ಕನ್ನಡ ಸಂಸ್ಕೃತಿ ಇಲಾಖೆಯಲ್ಲಿ ಶಾಸ್ತ್ರೀಯ ಭಾಷೆಗೆ ಸಂಬಂಧಿಸಿದ ಪ್ರತ್ಯೇಕ ವಿಭಾಗ ಆಗಲಿ
- ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗದಲ್ಲಿ ಶಾಸ್ತ್ರೀಯ ಭಾಷೆ ಅಧ್ಯಯನಕ್ಕೆ ಪ್ರತ್ಯೇಕ ವಿಭಾಗ ಆಗಲಿ
- ಶಾಸನಾತ್ಮಕ ಮಾನ್ಯತೆ ಸಿಗಲಿ
- ತಮಿಳುನಾಡಿನ ಯೋಜನೆಗಳ ಮಾದರಿ ಅಧ್ಯಯನ ಆಗಲಿ

ಹಾಡಿನಿಂದಲೇ ಆರಂಭ

ಕನಕ–ಶರೀಫ–ಸರ್ವಜ್ಞ ವೇದಿಕೆ (ಹಾವೇರಿ): ಶರಣೆಂಬೆ ಗುರುವಿಗೆ/ ಶರಣೆಂಬೆ ಅರಿವಿಗೆ/ ಶರಣೆಂಬೆ ಸಾಹಿತ್ಯ ಸರಸ್ವತಿಗೆ ಎಂದು ಸುಶ್ರಾವ್ಯವಾಗಿ ಜನಪದ ತ್ರಿಪದಿ ಶೈಲಿಯಲ್ಲಿ ಹಾಡುತ್ತಲೇ ದೊಡ್ಡರಂಗೇಗೌಡರು ಅಧ್ಯಕ್ಷೀಯ ಭಾಷಣವನ್ನು ಆರಂಭಿಸಿದರು.

ತಮ್ಮ ಮಾತಿನುದ್ದಕ್ಕೂ ಜನಪದೀಯ ತ್ರಿಪದಿಗಳನ್ನು ಬಳಸುತ್ತ, 'ಸತ್ಯವೆಂಬುದು ಕಹಿಯಾಗಿರುತ್ತದೆ. ಬಡತನ, ಬರ,.ಅತಿವೃಷ್ಟಿ ಹಿಂಗೆಲ್ಲ ಎಂಥದನ್ನೇ ಅನುಭವಿಸಿದರೂ ಬದುಕಿನ ಪಾಡನ್ನು. ಅಕ್ಕಿ ಕೊಳ್ಳಲು ಮಕ್ಕಳ ಮಾರ್ಯಾಯ ಎಂದು ಜನಪದದ ತಾಯಿ ಹಾಡುತ್ತ ಸಂಕಟ ಹೇಳಿಕೊಳ್ಳುತ್ತಾಳೆ. ಬದುಕಿನ ಕ್ರೌರ್ಯವನ್ನೂ ಸಾಹಿತ್ಯ ಸಹನೀಯಗೊಳಿಸುತ್ತದೆ' ಎಂದರು.

ಕನ್ನಡ ಮಸೂದೆಗೆ ಕಾನೂನು ರೂಪ ಶೀಘ್ರ: ಬೊಮ್ಮಾಯಿ

ಒಂದನೇ ಪುಟದಿಂದ...

'ಕನ್ನಡ ಭಾಷೆಯ ಸುತ್ತ ನಡೆಯುತ್ತಿರುವ ಬೆಳವಣಿಗೆಗಳು ಗಮನದಲ್ಲಿವೆ. ಕನ್ನಡ ಭಾಷೆಗೆ ಕಾನೂನು ಬೆಂಬಲ ನೀಡಲು ಬದ್ಧವಾಗಿದ್ದೇವೆ. ಈ ಮಸೂದೆಯ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತಿನ ಶಿಫಾರಸುಗಳನ್ನೂ ಅಳವಡಿಕೊಳ್ಳಲಾಗಿದೆ. ಇದೀಗ ಮಸೂದೆಯನ್ನು ಸಾರ್ವಜನಿಕ ಚರ್ಚೆಗೆ ಬಿಡಲಾಗಿದೆ. ವ್ಯಾಪಕ ಚರ್ಚೆಯಾದ ಬಳಿಕ ಕಾನೂನು ರೂಪ ನೀಡಲಾಗುವುದು. ಕನ್ನಡ ಹಾಗೂ ಕನ್ನಡಿಗರನ್ನು ರಕ್ಷಣೆ ಮಾಡಲಾಗುವುದು. ಕರ್ನಾಟಕದಲ್ಲಿ ಸ್ಥಾಪನೆಯಾಗುವ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ' ಎಂದು ಅವರು ಹೇಳಿದರು.

ಸರ್ಕಾರ ಈಗಾಗಲೇ ಗಡಿನಾಡು ಕನ್ನಡಿಗರ ಅಭಿವೃದ್ಧಿಗೆ ಪ್ಯಾಕೇಜ್ ಘೋಷಣೆ ಮಾಡಿದ್ದು, ಸಮ್ಮೇಳನದ ಸಮಾರೋಪ ಸಮಾರಂಭದವರೆಗೆ ಕಾಯಿರಿ
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಪರ್ಯಾಯ ಸಮ್ಮೇಳನದ ಅಂಶಗಳ ಗಂಭೀರ ಪರಿಗಣನೆ: ಮುಖ್ಯಮಂತ್ರಿ

'ಸರ್ಕಾರದಿಂದ ಮಾಡುವ ಸಾಹಿತ್ಯ ಸಮ್ಮೇಳನಕ್ಕೆ ಪರ್ಯಾಯವಾಗಿ ಸಮ್ಮೇಳನ ಮಾಡುವುದು ಯಾವಾಗಲೂ ಇದ್ದೇ ಇರುತ್ತದೆ. ಈ ಬೆಳವಣಿಗೆಯನ್ನು ನಾನು ಕ್ರೀಡಾ ಮನೋಭಾವದಿಂದ ಸ್ವೀಕರಿಸುತ್ತೇನೆ. ಅಲ್ಲಿ ಚರ್ಚೆಯಾಗುವ ಅಂಶಗಳನ್ನು ಸಹ ಸರ್ಕಾರ ಗಂಭೀರವಾಗಿ ಪರಿಗಣಿಸಲಿದೆ' ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ಒಳ್ಳೆಯ ಬೆಳವಣಿಗೆ ಅಲ್ಲ: 'ಪರ್ಯಾಯ ಸಮ್ಮೇಳನದ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆ ಅಲ್ಲ. ಸಾಹಿತ್ಯಾಸಕ್ತರಿಗೆ ಮತ್ತು ನಮ್ಮ ಜನರಿಗೆ ನೆನಪಿನಲ್ಲಿ ಉಳಿಯುವಂತಹ ಸಮ್ಮೇಳನ ಹಾವೇರಿಯದ್ದಾಗಲಿದೆ' ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸುನಿಲ್ ಕುಮಾರ್ ಹೇಳಿದರು.

'ಅಶ್ಲೀಲವು ಪ್ರೇಕ್ಷಕ–ನಿರ್ಮಾಪಕನಿಗೆ ಸಂಬಂಧಿಸಿದ್ದು'

ಹಾವೇರಿ: 'ಕಿರುತೆರೆ ಇರಲಿ, ಬೆಳ್ಳಿತೆರೆ ಇರಲಿ ಅಲ್ಲಿ ಮೂಡಿಬರುವ ಅಶ್ಲೀಲ ವಿಚಾರಗಳು ಪ್ರೇಕ್ಷಕ ಹಾಗೂ ನಿರ್ಮಾಪಕನಿಗೆ ಸಂಬಂಧಿಸಿದ್ದಾಗಿದೆ. ಒಳ್ಳೆಯ ಪ್ರೇಕ್ಷಕ ಇರುವವರೆಗೆ ಒಳ್ಳೆಯ ಅಭಿರುಚಿಯುಳ್ಳ ಸಿನಿಮಾಗಳು ಬಂದೇ ಬರುತ್ತವೆ. ಅದು ಚಿತ್ರ ನಿರ್ಮಾಪಕನಿಗೂ ಅನ್ವಯಿಸುತ್ತದೆ. ಪ್ರೇಕ್ಷಕನ ಮನಃಸ್ಥಿತಿ ಅವಲಂಬಿಸಿ ನಿರ್ಮಾಪಕ ಸಿನಿಮಾ ಮಾಡುತ್ತಾನೆ ಹೊರತು ಆತನಿಗೆ ಬೇರೆ ಉದ್ದೇಶ ಇರುವುದಿಲ್ಲ. ಆದರೆ, ಕೆಲವೊಮ್ಮೆ ಲಾಭಕ್ಕಾಗಿಯೂ ಆ ತರಹದ ಚಿತ್ರಗಳನ್ನು ಮಾಡಲಾಗುತ್ತದೆ' ಎಂದು ಹಿರಿಯ ನಟ ಎಚ್.ಜಿ. ದತ್ತಾತ್ರೇಯ (ದತ್ತಣ್ಣ) ಸಭಿಕರೊಬ್ಬರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ಬೆಳ್ಳಿತೆರೆ–ಕಿರುತೆರೆ' ಗೋಷ್ಠಿಯಲ್ಲಿ ಅಧ್ಯಕ್ಷತೆವಹಿಸಿದರು.

'ಸಿನಿಮಾ ವಾಣಿಜ್ಯ ಉದ್ದೇಶ ಹೊಂದಿದೆ. ಐಟಂ ಸಾಂಗ್, ಫೈಟ್ ಎಲ್ಲವೂ ಇರುತ್ತೆ. ಆದರೆ, ಅದಷ್ಟೇ ಸಿನಿಮಾವಲ್ಲ. ಅದರಲ್ಲಿ ಸಾಂಸ್ಕೃತಿಕ, ಸಾಹಿತ್ಯಿಕ ವಿಷಯ ಇದ್ದರೆ ಜನರಿಗೆ ಹೆಚ್ಚು ಹತ್ತಿರವಾಗುತ್ತದೆ' ಎಂದು ಅಭಿಪ್ರಾಯ ಪಟ್ಟರು.

ಸಾಮಾನ್ಯರ ಸಾಲಿನಲ್ಲಿ ದತ್ತಣ್ಣ: ಹಿರಿಯ ನಟ ದತ್ತಣ್ಣ ಅವರು, ಸಾಮಾನ್ಯರಂತೆ ಪ್ರೇಕ್ಷಕರ ಸಾಲಿನಲ್ಲಿ ಕುಳಿತು ಗೋಷ್ಠಿಯನ್ನು ಆಲಿಸಿ ಗಮನ ಸೆಳೆದರು. ವೇದಿಕೆಯ ಹಿಂಭಾಗದಿಂದ ಬಂದ ಅವರು, ಮುಂಭಾಗದ ಆಸನಗಳನ್ನು ಬಿಟ್ಟು, ಹಿಂಭಾಗಕ್ಕೆ ಹೋಗಿ ಕುಳಿತರು.

ನಟಿ ಸುಧಾ ನರಸಿಂಹರಾಜುಗೆ ಪೊಲೀಸರಿಂದ ದಿಗ್ಬಂಧನ

ಸುಧಾ ನರಸಿಂಹರಾಜು

ಹಾವೇರಿ: ಹಾನಗಲ್ ಕುಮಾರ ಶಿವಯೋಗಿಗಳ ವೇದಿಕೆಯಲ್ಲಿ 'ಶತಮಾನ ಪುರುಷರು' ಗೋಷ್ಠಿಗೆ ತಮ್ಮ ತಂದೆ ಖ್ಯಾತ ನಟ ನರಸಿಂಹರಾಜು ಕುರಿತು ಮಾತನಾಡಲು ಬಂದಿದ್ದ ಅವರ ಪುತ್ರಿ ಹಾಗೂ ನಟಿ ಸುಧಾ ನರಸಿಂಹರಾಜು ಅವರಿಗೆ, ಪೊಲೀಸರು ಪ್ರಧಾನ ವೇದಿಕೆ ಬಳಿ ಒಂದು ತಾಸು ದಿಗ್ಬಂಧನ ಹಾಕಿದರು.

'ಮಧ್ಯಾಹ್ನ 2ಕ್ಕೆ ನಿಗದಿಯಾಗಿದ್ದ ಗೋಷ್ಠಿಗೆ ಬಂದಿದ್ದ ನನ್ನನ್ನು ಪೊಲೀಸರು ಬ್ಯಾರಿಕೇಡ್ ಹಾಕಿ ತಡೆದರು. ನರಸಿಂಹರಾಜು ಅವರ ಕುರಿತು ಮಾತನಾಡಲು ಸಂಪನ್ಮೂಲ ವ್ಯಕ್ತಿಯಾಗಿ ಬಂದಿರುವೆ ದಯವಿಟ್ಟು ಬಿಡಿ ಎಂದರೂ ಕೇಳಲಿಲ್ಲ. ಸಂಘಟಕರ ಮೊಬೈಲ್ ಸಂಖ್ಯೆಗೆ ಕರೆ ಮಾಡಿದರೂ ಸ್ವೀಕರಿಸಲಿಲ್ಲ. ವಿಧಿ ಇಲ್ಲದೆ ಒಂದು ತಾಸು ಅಲ್ಲೇ ನಿಂತಿದ್ದೆ. ಕಡೆಗೆ ಸಂಘಟಕರೇ ವಾಪಸ್ ಕರೆ ಮಾಡಿ, ಸ್ಥಳಕ್ಕೆ ಬಂದು ಕರೆದೊಯ್ದರು' ಎಂದು ಗೋಷ್ಠಿ ಬಳಿಕ ಸುಧಾ ಅವರು ಸುದ್ದಿಗಾರರೊಂದಿಗೆ ಅಸಮಾಧಾನ ವ್ಯಕ್ತಪಡಿಸಿದರು.

ಮಧ್ಯಾಹ್ನ 2 ಗಂಟೆಯ ಗೋಷ್ಠಿಗೆ ಸಂಜೆ 4.10ರ ಸುಮಾರಿಗೆ ಬಂದಾಗ ವಂದನಾರ್ಪಣೆ ಕಾರ್ಯಕ್ರಮ ನಡೆಯುತ್ತಿತ್ತು. ಗೋಷ್ಠಿಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಸುಧಾ ಅವರು ಮಾತನಾಡಿದರು.

ಕಸಾಪ ಅಧ್ಯಕ್ಷರಿಗೆ ಸಿಗದ ನಿವಾಸ!

ಹಾವೇರಿ: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಅವರಿಗೆ ಸ್ಥಳೀಯರ ಮನೆಯಲ್ಲಿ ವಾಸ್ತವ್ಯ ಹೂಡಲು ಸೂಕ್ತ ನಿವಾಸ ದೊರೆಯಲಿಲ್ಲ. ಅವರು ಲಾಡ್ಜ್‌ನಲ್ಲಿಯೇ ವಾಸ್ತವ್ಯ ಹೂಡಿದ್ದಾರೆ.

ಸಮ್ಮೇಳನದ ಪ್ರಯುಕ್ತ ಸ್ಥಳೀಯರ ಮನೆಯಲ್ಲಿ ವಾಸ್ತವ್ಯ ಮಾಡುವುದಾಗಿ ಈ ಹಿಂದೆ ಅವರು ಘೋಷಿಸಿದ್ದರು. ಅಷ್ಟೇ ಅಲ್ಲ, ಸಮ್ಮೇಳನ ನಡೆಯುವ ಸ್ಥಳದ ಹತ್ತಿರ ಇರುವ ಅಜ್ಜಯ್ಯನ ದೇವಸ್ಥಾನದ ಸುತ್ತಮುತ್ತಲಿನಲ್ಲಿ ಇರುವ ಯಾವುದಾದರೂ ಮನೆಯಲ್ಲಿ ವಾಸ್ತವ್ಯಕ್ಕೆ ಅನುಕೂಲ ಮಾಡಿಕೊಡಲು ಇಚ್ಛಿಸುವವರು ಸಂಪರ್ಕಿಸುವಂತೆ ಕೇಳಿಕೊಂಡಿದ್ದರು. ಆದರೆ, ಸಮ್ಮೇಳನ ನಡೆಯುವ ಸ್ಥಳದ ಹತ್ತಿರ ಮನೆ ಸಿಗದಿದ್ದರಿಂದ, ಕೆಲಸದ ಒತ್ತಡದಿಂದ ಸ್ಥಳೀಯರ ಮನೆ ವಾಸ್ತವ್ಯ ನಿರ್ಧಾರದಿಂದ ಈಗ ಹಿಂದೆ ಸರಿದಿದ್ದಾರೆ.

'ಸಮ್ಮೇಳನದ ಕೆಲಸ ಮುಗಿಸಿ, ತೆರಳುವುದು ತಡರಾತ್ರಿ ಆಗುತ್ತದೆ. ಆದ್ದರಿಂದ ವಾಸ್ತವ್ಯ ಮಾಡಲಿಲ್ಲ. ಮುಂದಿನ ದಿನಗಳಲ್ಲಿ ವಾಸ್ತವ್ಯ ಮಾಡುತ್ತೇನೆ. ಇದು ನನ್ನ ತವರು ಜಿಲ್ಲೆ. ಹಲವರು ಮನೆಗೆ ಬಂದು ವಾಸ್ತವ್ಯ ಮಾಡುವಂತೆ ಸಂಪರ್ಕಿಸಿದ್ದರು' ಎಂದು ಜೋಶಿ ತಿಳಿಸಿದರು.

ಕವಿಗೋಷ್ಠಿ ಅವ್ಯವಸ್ಥೆಯ ಆಗರ • ಸಂಘಟಕರಿಂದಲೂ ಸಭಾ ಮರ್ಯಾದೆಯ ಅವಗಣನೆ

ಗಾಂಭೀರ್ಯವಿಲ್ಲದ ಗೋಷ್ಠಿ, ಕವಿತೆಗಳಿಗೆ ಕಿವಿಯಾಗದ ಜನತೆ

• ನಾಗರಾಜ್ ಬಿ.ಎನ್

ಹಾವೇರಿ: ವೇದಿಕೆಯ ಮೇಲೆ ಸೆಲ್ಫಿ, ಕವಿತೆ ಓದುವಾಗ, ಕವಿಗಳಿಗೆ ಅಧ್ಯಕ್ಷರಿಂದ ಸನ್ಮಾನ, ಕರೆಯುವ ಮೊದಲೆ ಪುಟ್ಟ ಕವಿತೆ ಓದಿ, ಬೇಗ ಮುಗಿಸಿ ಎಂಬ ಸೂಚನೆ, ವೇದಿಕೆಯ ಮೇಲಿನ ಕುರ್ಚಿಗಳನ್ನು ತೆಗೆಯುವುದು, ವೇದಿಕೆ ಮುಂದಿನ ಅಂಗಳದಿಂದ ಬೇರೆ ಪೀಠೋಪಕರಣಗಳನ್ನು ಎತ್ತಿ ಕೊಡುವುದು..

ಇವೆಲ್ಲವೂ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಧಾನ ವೇದಿಕೆಯಲ್ಲಿ ಜರುಗಿದ ಕವಿಗೋಷ್ಠಿಯ ಚಿತ್ರಗಳು.

ಒಬ್ಬೊಬ್ಬ ಕವಿಗೆ ಮೂರು ನಿಮಿಷದ ಅವಧಿ ನೀಡಿದ್ದು, 75 ನಿಮಿಷದಲ್ಲಿ ಕವನ ವಾಚನ ಮುಕ್ತಾಯವಾಗಿತ್ತು. ಆಶಯ ನುಡಿ, ಅಧ್ಯಕ್ಷರ ಭಾಷಣ, ವಂದನಾರ್ಪಣೆ, ನಿರೂಪಣೆ ಎಂದು ಎರಡು ತಾಸು ನಡೆಯಿತು. ಸಂಘಟಕರು ಸಹ ವೇದಿಕೆ ಹಿಂಭಾಗದಲ್ಲಿ ಗುಂಪು ಗುಂಪಾಗಿ ಮಾತಾಡುತ್ತಿದ್ದರು.

ಕೆಲವು ಕವಿಗಳು ವೇದಿಕೆಯಲ್ಲಿಯೇ ಸೆಲ್ಫಿ ತೆಗೆಯುತ್ತ ಸಂಭ್ರಮಿಸುತ್ತಿದ್ದರೆ, ಮತ್ತೆ ಕೆಲವರು ತಾವು ತಂದಿದ್ದ ಪುಸ್ತಕಗಳ ಹಾಳೆಗಳನ್ನು ತಿರುವುತ್ತಿದ್ದರು. ಇನ್ನೂ ಕೆಲವರು ಅಕ್ಕ–ಪಕ್ಕದವರ ಜೊತೆ ಗಹನವಾದ ಚರ್ಚೆಯಲ್ಲಿ ಮುಳುಗಿದ್ದರು. ಕವಿಗಳೂ ಇನ್ನೊಬ್ಬರ ಕವಿತೆಗೆ ಕಿವಿಯಾಗಲಿಲ್ಲ. ಅವರ ಕವಿತೆ ಕೇಳಿಸಿಕೊಳ್ಳಲಿ ಎಂಬ ಸಹಜ ಆಸೆಯೂ ಇರಲಿಲ್ಲ.

ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಕವಿ ಸರಜೂ ಕಾಟ್ಕರ್ ಮಾತನಾಡಿದರು
– ಪ್ರಜಾವಾಣಿ ಚಿತ್ರ

ಕವಯತ್ರಿ ರೇಣುಕಾ ರಮಾನಂದ 'ಭತ್ತ ಬೆಳೆವುದೆಂದರೆ...' ಕವನ ವಾಚಿಸಿ ಗೋಷ್ಠಿಗೆ ನಾಂದಿ ಹಾಡಿದರು. ಕೃಷಿ ಕುಟುಂಬ ಆಧುನಿಕತೆಗೆ ಮಾರುಹೋಗಿ ವ್ಯವಸಾಯವನ್ನೇ ಮರೆತು ಬದುಕುತ್ತಿದೆ. ಮಕ್ಕಳಿಗೆ ಕೃಷಿಯೆಡೆಗೆ ಒಲವು ತೋರಿಸಿದರೆ ಮತ್ತೆ ಕೃಷಿ ಪ್ರಧಾನ ಕುಟುಂಬ ಆಗಬಹುದು ಎನ್ನುವ ಸೂಕ್ಷ್ಮತೆಯನ್ನು ಕವನದಲ್ಲಿ ತಿಳಿಸಿದರು. ರಂಜನಾ ನಾಯಕ ಅವರ 'ನೆರಿಗೆ' ಕವನ ಸಹ ಗಮನ ಸೆಳೆಯಿತು. ಕೇಳಿಯೂ ಕೇಳಿಸದಂತೆ, ಹತ್ತಿರ ಇದ್ದೂ ದೂರ ಸರಿದಂತೆ, ಆಗೊಮ್ಮೆ ಈಗೊಮ್ಮೆ ಮೇಲೆದ್ದು ಬರುವ ಸಿಹಿ, ಕಹಿಯಂತೆ. ಇವನ್ನೆಲ್ಲ ನೆನಪಿಸುವ ನೆರಿಗೆಗಳನ್ನು ಪ್ರೀತಿಸುತ್ತೇನೆ ಎಂಬ ಸಾಲುಗಳ ಕವನ ಮೆಚ್ಚುಗೆಗೆ ಪಾತ್ರವಾಯಿತು!

ಈಚೆಗೆ ಲಿಂಗೈಕ್ಯರಾದ ವಿಜಯಪುರದ ಜ್ಞಾನಯೋಗಾಶ್ರಮದ ಸಿದ್ಧೇಶ್ವರ ಸ್ವಾಮೀಜಿ ಕುರಿತು ಕೆ. ಸುನಂದ ಅವರು, 'ಅವತಾರಿ ಸಿದ್ಧೇಶ್ವರ ಶ್ರೀ', ನಟ ಪುನೀತ್ ರಾಜ್‌ಕುಮಾರ್ ಬಗ್ಗೆ ಧಮ್ಮೂರು ಮಲ್ಲಿಕಾರ್ಜುನ ಅವರು, 'ಪುನೀತನೆಂಬ ಪುಣ್ಯಾತ್ಮ', ಗೆಳೆತನದ ಮಹತ್ವದ ಬಗ್ಗೆ ಚಂದಪ್ಪ ಬಾರಗಿ ಅವರು 'ಗೆಳೆತನ', ಅತಿವೃಷ್ಟಿಯಿಂದಾಗುವ ಸಂಕಷ್ಟದ ಬಗ್ಗೆ ವಿ.ಕೆ. ಸಂಕನಗೌಡ ಅವರು 'ನಿನಗೆ ಮಳೆ ಎನ್ನುವುದಿಲ್ಲ' ಕವನ ವಾಚಿಸಿದರು.

ಕವಿ ಹಾ.ತಿ. ಜಯಪ್ರಕಾಶ ಅವರ, 'ನಮ್ಮವರು ಬೆಂಗಳೂರಿಗೆ ಹೋಗವ್ರೆ' ಕವನ ಹಾಸ್ಯ ಪ್ರಧಾನವಾಗಿ, ಕೇಳುಗರನ್ನು ನಗೆಗಡಲಲ್ಲಿ ತೇಲಿಸಿತ್ತು. ಕವನದ ಕೊನೆಗೆ 'ಕವಿಯ ಜೋಳಿಗೆ ಒಳಗೆ, ಸವಿಯ ಜೇನಿದೆ...' ಎಂದು ದ್ವಂದ್ವಾರ್ಥಕ್ಕೆ ನೂಕಿ, ಜೋಳಿಗೆಯಲ್ಲಿದ್ದ ಬಾಟಲನ್ನು ಗೋಷ್ಠಿಯ ಅಧ್ಯಕ್ಷ ಸರಜೂ ಕಾಟ್ಕರ್ ಅವರಿಗೆ ನೀಡಿದರು. ಅದು ಜೇನಲ್ಲ ಮದ್ಯವೆಂದೇ ತಿಳಿದು, ಕೇಳುಗರು ಅಬ್ಬಬ್ಬ.. ಎಂದು ಹುಬ್ಬೇರಿಸಿದರು. ಅದೇ ವೇಳೆ ಕಸಾಪ ಅಧ್ಯಕ್ಷ ಮಹೇಶ ಜೋಶಿ ವೇದಿಕೆಯತ್ತ ಬಂದು, 'ಇದೆಲ್ಲ ಸರಿಯಲ್ಲ' ಎಂದು ಕೈ ಸನ್ನೆ ಮಾಡಿ ಹೋದರು. ಕೊನೆಗೆ, 'ಅದು ಮದ್ಯವಲ್ಲ ಜೇನು ತುಪ್ಪ' ಎಂದು ನಿರೂಪಕರು ಹೇಳಿದ್ದರಿಂದ, ಎಲ್ಲೆಡೆ ಕರತಾಡನ.

'ಕವಿಗೆ ಪಾಂಡಿತ್ಯ ಬೇಕಿಲ್ಲ...'

ಗೋಷ್ಠಿಯ ಆಶಯ ನುಡಿಯಾಡಿದ ಹಿರಿಯ ಕವಿಯತ್ರಿ ವಿಜಯಶ್ರೀ ಸಬರದ, ಕಾವ್ಯ ಮತ್ತು ಸಾಹಿತ್ಯದ ಬಗ್ಗೆ ನವಿರಾಗಿ ತಿಳಿಸಿದರು. 'ಪದಗಳಲ್ಲಿ ವಿವಿಧ ಅರ್ಥ ಹುಟ್ಟಿಕೊಂಡಾಗ ಕಾವ್ಯರಚನೆಯಾಗುತ್ತದೆ. ಕವಿಗೆ ಪಾಂಡಿತ್ಯಕ್ಕಿಂತ, ನುಡಿಗಟ್ಟಿನ ಸಾಲು, ಪಡೆನುಡಿಗಳು ಹಾಗೂ ಭಾಷಾ ವಿನ್ಯಾಸದ ಒಳನೋಟ ಅರಿವು ಇರಬೇಕು. ಭಾವವನ್ನು ಸಮರ್ಥವಾಗಿ ಅಭಿವ್ಯಕ್ತ ಪಡಿಸಿದಾಗ ಓದುಗನ ಅಥವಾ ಕೇಳುಗನಿಗೆ ಹೃದಯ ಸ್ಪರ್ಶಿಯಾಗುತ್ತದೆ. ಪದ ಕಸಿ ಮಾಡುವುದರಿಂದ ಹೊಸ ಪದಗಳು ಹುಟ್ಟಿಕೊಳ್ಳುತ್ತವೆ' ಎಂದರು.

ಅಧ್ಯಕ್ಷರ ಮಾತಿಗೆ ಕತ್ತರಿ

ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಸರಜೂ ಕಾಟ್ಕರ್ ಅವರು ಮಾತನಾಡಲು ಆರಂಭಿಸಿ, ಕೆಲ ನಿಮಿಷಗಳಾದಾಗ, ಮಾತುಮುಗಿಸುವಂತೆ ಸಂಘಟಕರು ಸೂಚಿಸಿದರು. 'ನಾನು ಗೋಷ್ಠಿಯ ಅಧ್ಯಕ್ಷ. ನನಗೂ ಕಾಲಮಿತಿ ಹೇರ್ತೀರಲ್ಲ, ನೀಡಿರುವಷ್ಟು ಸಮಯವನ್ನೂ ನೀಡದೆ, ಮಾತನಾಡಲು ಬಿಡುತ್ತಿಲ್ಲವಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, ತಮ್ಮದೊಂದು ಕವನ ವಾಚಿಸಿ, ಗೋಷ್ಠಿಯನ್ನು ಮುಕ್ತಾಯಗೊಳಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ
ವ್ಯಕ್ತಿಯ ಮಾಗುವಿಕೆಯೇ ಸಂಸ್ಕೃತಿ.
-ಕೆ.ಎಸ್.ನಿಸಾರ್ ಅಹಮದ್

ಕನ್ನಡದ ನಾಳೆಗಳಿಗೆ ಹತ್ತಾರು ಸೂತ್ರ ಸರ್ಕಾರಕ್ಕೆ ಸಂಕಲ್ಪಶಕ್ತಿಯ ಪಾಠ

ಹಾವೇರಿಯಲ್ಲಿ ನಡೆಯುತ್ತಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಪ್ರೊ. ದೊಡ್ಡರಂಗೇಗೌಡ ಅವರು ಪ್ರಸ್ತಾಪಿಸಿರುವ ಹಲವು ಸಂಗತಿಗಳು ಕನ್ನಡ ನಾಡು-ನುಡಿ ಹಿತಾಸಕ್ತಿಯ ದೃಷ್ಟಿಯಿಂದ ಮಹತ್ವದ್ದಾಗಿವೆ. ಶಿಕ್ಷಣ, ಜ್ಞಾನ ಹಾಗೂ ಕನ್ನಡ ಭಾಷೆಯನ್ನು ಕನ್ನಡವನ್ನು ರೂಪಿಸುವ ಅಗತ್ಯದ ಬಗ್ಗೆ ವಿಸ್ತೃತವಾಗಿ ಮಾತನಾಡಿರುವ ಅವರು, ಆ ದಿಸೆಯಲ್ಲಿ ಆಗಬೇಕಾದ ಕೆಲಸಗಳೇನು ಎನ್ನುವುದನ್ನೂ ಸೂಚಿಸಿದ್ದಾರೆ. ಅವರು ಪ್ರಸ್ತಾಪಿಸಿರುವ, ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಶಿಕ್ಷಣವನ್ನು ಕನ್ನಡ ಭಾಷೆಯಲ್ಲಿಯೇ ನೀಡುವ ತಲಾ ಒಂದೊಂದು ಕಾಲೇಜನ್ನಾದರೂ ಮುಂದಿನ ಮೂರು ವರ್ಷದ ಅವಧಿಯಲ್ಲಿ ಆರಂಭಿಸುವುದು, 'ಕನ್ನಡ ಜ್ಞಾನ-ವಿಜ್ಞಾನ-ತಂತ್ರಜ್ಞಾನ ಕಾಯಿದೆ' ರಚನೆ, 'ಕನ್ನಡ ಸಮಗ್ರ ಪಾರಿಭಾಷಿಕ ಶಬ್ದಕೋಶ' ರೂಪಿಸುವುದು, 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ-2022' ಶಾಸನ ರೂಪ ಪಡೆಯುವುದು, ಖಾಸಗಿ ಕ್ಷೇತ್ರಗಳಲ್ಲಿ ಕನ್ನಡವನ್ನು ಪ್ರೋತ್ಸಾಹಿಸಲು ವಿಶೇಷ ಸರ್ಕಾರಿ ನೀತಿ ರೂಪಿಸುವುದು, ಕನ್ನಡದ ಎಲ್ಲ ಪ್ರಾಚೀನ ಹಾಗೂ ಕ್ಲಾಸಿಕ್ ಕೃತಿಗಳು ಉಚಿತವಾಗಿ ಲಭಿಸುವ ಆನ್‌ಲೈನ್ ಕೋಶ ರಚನೆ, ಇವೆಲ್ಲವೂ ಕನ್ನಡವನ್ನು ಸಶಕ್ತವಾಗಿಸುವ ನಿಟ್ಟಿನಲ್ಲಿ ಆಗಬೇಕಾದ ಕೆಲಸಗಳಾಗಿವೆ. ಉನ್ನತ ಶಿಕ್ಷಣದಲ್ಲಿ ಕನ್ನಡವನ್ನು ಮಾಧ್ಯಮವಾಗಿ ರೂಪಿಸಲು ಸ್ಪಷ್ಟ ಕಾರ್ಯಸೂಚಿಯ ಅಗತ್ಯವನ್ನು ಪ್ರತಿಪಾದಿಸಿರುವ ಅವರು, ಐದನೇ ತರಗತಿವರೆಗೆ ಕನ್ನಡ ಕಲಿಕೆ ಕಡ್ಡಾಯ ಮಾಡುವಂತೆ ಆಗ್ರಹಿಸಿದ್ದಾರೆ. ಬೆಳಗಾವಿ ಗಡಿ ನೀತಿಯ ಕುರಿತು ಸಮ್ಮೇಳನಾಧ್ಯಕ್ಷರು ಸ್ಪಷ್ಟ ನಿಲುವನ್ನು ಪ್ರಕಟಿಸಿದ್ದಾರೆ. ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಮಹಾಜನ್ ವರದಿಯೇ ಅಂತಿಮ ಎಂದು ಹೇಳಿರುವುದು ಸರಿಯಾಗಿದೆ. ಪುಸ್ತಕೋದ್ಯಮದ ನಿರ್ಲಕ್ಷ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ನೆರವಿಗೆ ಸರ್ಕಾರ ಕಡಿವಾಣ ಹಾಕಿರುವುದರ ಬಗ್ಗೆ ಸಮ್ಮೇಳನಾಧ್ಯಕ್ಷರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಗ್ರಂಥಾಲಯಗಳಿಗೆ ಪುಸ್ತಕ ಖರೀದಿ ಮಾಡದಿರುವ ಕುರಿತು ಹಾಗೂ ಸಾಂಸ್ಕೃತಿಕ ಸಂಸ್ಥೆಗಳು ಧನ ಸಹಾಯ ಪಡೆಯಲು ಅನುಸರಿಸಬೇಕಾದ ಕ್ಲಿಷ್ಟಕರ ಮಾರ್ಗಗಳನ್ನು ಬದಲಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಒತ್ತಾಯಿಸಿದ್ದಾರೆ.

ಪ್ರಸಕ್ತ ಜಾಗತಿಕ ಸಂದರ್ಭದಲ್ಲಿ ಕನ್ನಡ ನುಡಿ ಎದುರಿಸುತ್ತಿರುವ ಸವಾಲುಗಳನ್ನು ದೊಡ್ಡರಂಗೇಗೌಡ ಅವರು ಜನರ ಗಮನಕ್ಕೆ ತರುವ ಪ್ರಯತ್ನ ಮಾಡಿದ್ದಾರೆ. ಅಂತೆಯೇ ಕನ್ನಡ ಕಟ್ಟುವ ಕೆಲಸಗಳಲ್ಲಿ ಸರ್ಕಾರದ ನಿರ್ಲಕ್ಷ್ಯ ಹಾಗೂ ಇಚ್ಛಾಶಕ್ತಿಯ ಕೊರತೆಯನ್ನು ಟೀಕಿಸಲು ಅವರು ಹಿಂಜರಿದಿಲ್ಲ

ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣವನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಕನ್ನಡದ ಸಾಮಾಜಿಕ-ಸಾಂಸ್ಕೃತಿಕ ಪರಂಪರೆಯ ಸ್ವರೂಪವನ್ನು ಕಟ್ಟಿಕೊಡುವುದರ ಜೊತೆಗೆ, ಆಯಾ ಕಾಲದಲ್ಲಿ ನಾಡು-ನುಡಿ ಎದುರಿಸುತ್ತಿರುವ ಬಿಕ್ಕಟ್ಟುಗಳನ್ನೂ ಚರ್ಚಿಸುವ ಕಾರಣದಿಂದಾಗಿ, ಸಮ್ಮೇಳನ ಅಧ್ಯಕ್ಷರ ಭಾಷಣಗಳು ಚಾರಿತ್ರಿಕ ದಾಖಲೆಗಳಾಗಿ ಮತ್ತೆ ಮತ್ತೆ ಓದಿಸಿಕೊಳ್ಳುತ್ತವೆ. ಆ ಪರಂಪರೆಗೆ ಹಾವೇರಿ ಸಮ್ಮೇಳನಾಧ್ಯಕ್ಷರ ಭಾಷಣ ಉತ್ತಮ ಸೇರ್ಪಡೆಯಾಗಿದ್ದು, ಪ್ರಸಕ್ತ ಜಾಗತಿಕ ಸಂದರ್ಭದಲ್ಲಿ ಕನ್ನಡ ನುಡಿ ಎದುರಿಸುತ್ತಿರುವ ಸವಾಲುಗಳನ್ನು ದೊಡ್ಡರಂಗೇಗೌಡ ಅವರು ಜನರ ಗಮನಕ್ಕೆ ತರುವ ಪ್ರಯತ್ನ ಮಾಡಿದ್ದಾರೆ. ಕನ್ನಡ ಕಟ್ಟುವ ಕೆಲಸಗಳಲ್ಲಿ ಸರ್ಕಾರದ ನಿರ್ಲಕ್ಷ್ಯ ಹಾಗೂ ಇಚ್ಛಾಶಕ್ತಿಯ ಕೊರತೆಯನ್ನು ಟೀಕಿಸಲು ಅವರು ಹಿಂಜರಿದಿಲ್ಲ. ಶಾಸ್ತ್ರೀಯ ಭಾಷಾ ಸ್ಥಾನಮಾನದ ಹಿನ್ನೆಲೆಯಲ್ಲಿ ನೀಡುವ ಅನುದಾನದಲ್ಲಿ ಕೇಂದ್ರ ಸರ್ಕಾರ ಮಾಡುತ್ತಿರುವ ತಾರತಮ್ಯವನ್ನು ಅಂಕಿಅಂಶಗಳೊಂದಿಗೆ ವಿಶ್ಲೇಷಿಸಿರುವ ಅವರು, ಕನ್ನಡಕ್ಕೆ ದೊರೆಯಬೇಕಾದ ಹಕ್ಕಿನ ಹಣವನ್ನು ತರುವ ರಾಜ್ಯ ಸರ್ಕಾರದ ಜವಾಬ್ದಾರಿಯನ್ನು ನೆನಪಿಸಿದ್ದಾರೆ. ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನವನ್ನು ಕಲ್ಪಿಸುವ ತಂತ್ರಜ್ಞಾನದಲ್ಲಿಯೂ ಹೊರತು ಭಾಷೆ, ಸಂಶೋಧನೆಯ ದೃಷ್ಟಿಯಿಂದ ಮಹತ್ವದ್ದೇನನ್ನೂ ಸಾಧಿಸಲು ಸಾಧ್ಯವಾಗಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. 'ಡಬಲ್ ಎಂಜಿನ್ ಸರ್ಕಾರ'ದ ಅನುಕೂಲಗಳ ಬಗ್ಗೆ ಪದೇ ಪದೇ ಹೇಳುವ ಕೇಂದ್ರ ಸರ್ಕಾರವು ಕನ್ನಡಕ್ಕೆ ಮಾಡಿರುವ ಅನುಕೂಲ 'ಇದೇ ಏನು' ಎಂದು ನೇರವಾಗಿಯೇ ಪ್ರಶ್ನಿಸಿದ್ದಾರೆ. ನಮ್ಮ ಹೆಮ್ಮೆಯ ಗುರುತಾಗಿದ್ದ ಅನೇಕ ಬ್ಯಾಂಕುಗಳ ವಿಲೀನದ ನಂತರ ಚತುರ ಬದಲಿಸಿಕೊಂಡಿರುವುದನ್ನು ವಿಷಾದದಿಂದ ನೆನಪಿಸಿಕೊಂಡಿರುವ ಅವರು, ಗ್ರಾಹಕನ ಭಾಷೆಯನ್ನಾಡದ ಬ್ಯಾಂಕುಗಳು ಕರ್ನಾಟಕದಲ್ಲಿ ಏಕಾದರೂ ಇರಬೇಕು ಹೇಳಿ ಎಂದು ಪ್ರಶ್ನಿಸಿರುವುದು ಹಾಗೂ ನಮ್ಮ ಭಾಷೆಯಲ್ಲಿ ಸೇವೆ ನೀಡದ ಬ್ಯಾಂಕುಗಳು, ಸರ್ಕಾರಿ ಉದ್ದಿಮೆಗಳು, ಖಾಸಗಿ ಸಂಸ್ಥೆಗಳನ್ನು ಜನ ಮುಲಾಜಿಲ್ಲದೆ ಧಿಕ್ಕರಿಸಬೇಕು ಎಂದು ಕರೆ ನೀಡಿರುವುದು ಸಮಂಜಸವಾಗಿದೆ.

ಪಠ್ಯಕ್ರಮ ಮತ್ತು ಪಠ್ಯವಿವಾದಗಳಿಗೆ ಸಂಬಂಧಿಸಿದಂತೆ ಕನ್ನಡದಲ್ಲಿ ಇರುವ ಸಹಿಷ್ಣು ಗುಣವನ್ನು ಸಮ್ಮೇಳನಾಧ್ಯಕ್ಷರು ನೆನಪಿಸಿಕೊಂಡಿದ್ದಾರೆ. ಶಿಶುನಾಳ ಶರೀಫ, ನಿಸಾರ್ ಅಹಮದ್, ಕಲೀಂಖಾನ್ ಅವರನ್ನು ಸ್ಮರಿಸಿಕೊಂಡಿದ್ದಾರೆ. 'ಸರ್ವ ಜನಾಂಗದ ಶಾಂತಿಯ ತೋಟವಾಗಿ ನಾಡು ನಳನಳಿಸಲಿ' ಎನ್ನುವ ಆಶಯದೊಂದಿಗೆ ಭಾಷಣವನ್ನು ಕೊನೆಗೊಳಿಸಿದ್ದಾರೆ. ಆದರೆ, ಆ ಬಹುಳ್ಳಿಯಾಗಿಯ ಹಾವೇರಿ ಸಮ್ಮೇಳನದಲ್ಲಿ ಎಷ್ಟರಮಟ್ಟಿಗೆ ಸಾಕಾರಗೊಂಡಿದೆ ಎನ್ನುವ ಪ್ರಶ್ನೆಗೆ ಸಮ್ಮೇಳನಾಧ್ಯಕ್ಷರು ಉತ್ತರಿಸುವ ಗೋಜಿಗೆ ಹೋಗಿಲ್ಲ. ಸಾಂಸ್ಕೃತಿಕ, ತಾಂತ್ರಿಕ, ಶೈಕ್ಷಣಿಕ, ಔದ್ಯಮಿಕ ಸೇರಿದಂತೆ ಕನ್ನಡದ ಬಹುಮುಖಿ ಸಾಧ್ಯತೆಗಳ ಬಗ್ಗೆ ಚರ್ಚಿಸಿದ್ದಾರೆ. ಆದರೆ ನೈತಿಕತೆ ಕಳೆದುಕೊಂಡಿರುವ ರಾಜಕಾರಣವನ್ನು ವಿಮರ್ಶೆಗೆ ಒಳಪಡಿಸಿಲ್ಲ. ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ ರಾಜಕಾರಣದ ಅನೈತಿಕ ನಡೆಗಳು ರಾಷ್ಟ್ರಮಟ್ಟದಲ್ಲಿ ಚರ್ಚೆಗೊಳಗಾಗಿದ್ದು, ಅದರ ಪರಿಣಾಮ ಕನ್ನಡ ಸಮಾಜ ಮತ್ತು ಸಂಸ್ಕೃತಿಯ ಮೇಲೂ ಆಗಿರುವುದನ್ನು ಗಮನಿಸಬೇಕು.

ದಿನದ ಟ್ವೀಟ್

ಸಾಧನೆಯ ಹಿಂದೆ...

ಕಪಿಲ್ ದೇವ್ ಅವರು 1983ರ ವಿಶ್ವಕಪ್ ಎತ್ತಿ ಹಿಡಿದಿದ್ದುದನ್ನು ಹತ್ತು ವರ್ಷದ ಹುಡುಗನೊಬ್ಬ ನೋಡಿದ, ಭಾರತಕ್ಕಾಗಿ ಅಂತಹ ಇನ್ನೊಂದು ವಿಶ್ವಕಪ್ ಅನ್ನು ಗೆದ್ದು ತರುವ ಕನಸು ಕಾಣಲಾರಂಭಿಸಿದ. ಆ ಹುಡುಗ ನಾನೇ. ಜನ್ಮದಿನದ ಶುಭಾಶಯಗಳು ಕಪಿಲ್‌ಜಿ! ಲಕ್ಷಾಂತರ ಜನರಿಗೆ ನೀವು ಸ್ಫೂರ್ತಿ ತುಂಬಿದ್ದೀರಿ, ಹೀಗೇ ಮುಂದುವರಿಯಿರಿ.

ಸಚಿನ್ ತೆಂಡೂಲ್ಕರ್, ಕ್ರಿಕೆಟಿಗ

ಕಿಡಿನುಡಿ

ಮದ್ಯ ಸರಬರಾಜು ಮಾಡುವ ಯಾವುದೇ ವಿಮಾನದಲ್ಲಿ ಮಿತಿಮೀರಿ ಕುಡಿಯಬೇಕೆಂದು ಭಾರತೀಯ ಪುರುಷರು ಏಕೆ ಬಯಸುತ್ತಾರೆ ಎನ್ನುವುದು ನಿಜಕ್ಕೂ ಗಮನಹರಿಸಬೇಕಾದ ಸಾಮಾಜಿಕ-ಮಾನಸಿಕ ಸಮಸ್ಯೆಯೇ ಸರಿ.

ವೈಷ್ಣಾ ರಾಯ್, ಪತ್ರಕರ್ತೆ

25 ವರ್ಷಗಳ ಹಿಂದೆ
ಬುಧವಾರ, 7-1-1998

• ಲಖನೌ ಸಮೀಪ ರೈಲು ದುರಂತ: 51 ಸಾವು

ನವದೆಹಲಿ, ಜ. 6 (ಯುಎನ್ಐ, ಪಿಟಿಐ)– ರೋಜಾ- ಲಖನೌ ಪ್ರದೇಶದಲ್ಲಿ ಸೋಮವಾರ ರಾತ್ರಿ ಸಂಭವಿಸಿದ ರೈಲು ದುರಂತದಲ್ಲಿ ಸತ್ತವರ ಸಂಖ್ಯೆ 51ಕ್ಕೆ ಏರಿದೆ.

ಈ ಘಟನೆಯಲ್ಲಿ 14 ಮಂದಿ ಪ್ರಯಾಣಿಕರು ತೀವ್ರವಾಗಿ ಗಾಯಗೊಂಡಿದ್ದು, ಇತರ 48 ಮಂದಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಮುರಾದಾಬಾದ್ ವಿಭಾಗದ ಕರನಾ ರೈಲು ನಿಲ್ದಾಣದ ಬಳಿ ದುರಂತ ಸಂಭವಿಸಿತು. ಈ ಪ್ರದೇಶದಲ್ಲಿ ದಟ್ಟವಾಗಿ ಮಂಜು ಕವಿದಿದ್ದರಿಂದ ರೈಲ್ವೆ ಸಿಗ್ನಲ್‌ಗಳನ್ನು ಗ್ರಹಿಸಲು ಚಾಲಕನಿಗೆ ಸಾಧ್ಯವಾಗಲಿಲ್ಲ. ಇದು ದುರಂತಕ್ಕೆ ಕಾರಣವಾಯಿತು ಎನ್ನಲಾಗಿದೆ.

• ಕೆ.ಪಿ.ಎಸ್. ಗಿಲ್‌ಗೆ ಶಿಕ್ಷೆ ಕಾಯಂ

ಚಂಡೀಗಢ, ಜ. 6 (ಪಿಟಿಐ)– ಐಎಎಸ್ ಅಧಿಕಾರಿ ರೂಪನ್ ಡಿಯೋಲ್ ಬಜಾಜ್ ಅವರ ಜತೆ ಮಾಜಿ ಹಿರಿಯ ಪೊಲೀಸ್ ಅಧಿಕಾರಿ ಕೆ.ಪಿ.ಎಸ್. ಗಿಲ್ ಅವರು ಅಸಭ್ಯವಾಗಿ ವರ್ತಿಸಿದರು ಎನ್ನಲಾದ ಪ್ರಕರಣವನ್ನು ಚಂಡೀಗಢ ಕೋರ್ಟ್ ಇಂದು ಎತ್ತಿ ಹಿಡಿಯಿತು.

ಗಿಲ್ ಅವರು ಬಜಾಜ್ ಅವರಿಗೆ 2 ಲಕ್ಷ ರೂಪಾಯಿ ಪರಿಹಾರ ನೀಡಬೇಕು ಎಂದು ಈ ಹಿಂದೆ ಕೆಳ ಕೋರ್ಟ್ ನೀಡಿದ್ದ ತೀರ್ಪನ್ನು ಚಂಡೀಗಢ ಜಿಲ್ಲಾ ಕೋರ್ಟ್‌ನ ನ್ಯಾ. ಅಮರ್ ದತ್ತ ಅವರು ಊರ್ಜಿತಗೊಳಿಸಿದರು.

50 ವರ್ಷಗಳ ಹಿಂದೆ
ಭಾನುವಾರ, 7-1-1973

• ಭಾಷೆ, ಕೋಮು, ಸೋಗಿನ ಶಕ್ತಿಗಳ ದಮನಕ್ಕೆ ಇಂದಿರಾ ಕರೆ

ಮಣಿಪಾಲ್, ಜ. 6– ದೇಶವನ್ನು ಛಿದ್ರಗೊಳಿಸಲೆತ್ನಿಸುವ ಸಮಾಜವಾದಿ ಶತ್ರುಗಳ 'ಭಾಷೆ ಮತ್ತು ಕೋಮು' ಘೋಷಣೆಗಳಿಗೆ ಬಲಿಯಾಗಬಾರದೆಂದು ಪ್ರಧಾನಿ ಇಂದಿರಾ ಗಾಂಧಿಯವರು ಜನತೆಗೆ ಮನವಿ ಮಾಡಿಕೊಂಡಿದ್ದಾರೆ.

ಬದಲಾಗಿ ವಿಚ್ಛಿದ್ರಕಾರಕ ಶಕ್ತಿಗಳ ವಿರುದ್ಧ ಹೋರಾಡುವ ಕಾರ್ಯಕ್ಕೆ ಹೆಚ್ಚು ಗಮನ ನೀಡಿ, ಬಡತನ ತೊಲಗಿಸುವ ತುರ್ತು ಕಾರ್ಯ ಕೈಗೊಳ್ಳಬೇಕಾಗಿದೆ ಎಂದಿದ್ದಾರೆ.

• ಗಂಗಾ–ಕಾವೇರಿ ಸಂಪರ್ಕ ಕಾರ್ಯಸಾಧ್ಯವಲ್ಲದ ಯೋಜನೆ: ತಜ್ಞರ ಅಭಿಮತ

ನವದೆಹಲಿ, ಜ. 6– ಗಂಗಾ- ಕಾವೇರಿ ಸಂಪರ್ಕ ಯೋಜನೆ ಬಗ್ಗೆ ದೇಶದ ಸುಮಾರು ಹದಿನೈದು ಮಂದಿ ತಜ್ಞರು ಸಂದೇಹ ವ್ಯಕ್ತಪಡಿಸಿದ್ದಾರೆ.

ಆರ್ಥಿಕ, ತಾಂತ್ರಿಕ, ಪರಿಸರ ದೃಷ್ಟಿಯಿಂದ 2,265 ಕಿ.ಮೀ. ಕಾಲುವೆ ಮೂಲಕ ಕಾವೇರಿ ಜೊತೆ ಗಂಗಾ ನದಿಗೆ ಸಂಪರ್ಕ ಕಲ್ಪಿಸುವ ಈ ಬೃಹತ್ ಯೋಜನೆ ಸಾಧುವಾದುದಲ್ಲ ಎಂದು ಅವರುಗಳು ಅಭಿಪ್ರಾಯಪಟ್ಟಿದ್ದಾರೆ.

ಆಡಳಿತಾರೂಢರಿಗೆ ರುಚಿಸುತ್ತಿಲ್ಲ ಪರಿಣತರ ಅಭಿಪ್ರಾಯ

ವರ್ಗೀಕರಿಸದ ಅರಣ್ಯದ ಮೇಲೆ ಸರ್ಕಾರದ ಕಣ್ಣು

ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

2021ರ 'ಭಾರತದ ಅರಣ್ಯ ಪರಿಸ್ಥಿತಿ ವರದಿ' ನಮ್ಮ ದೇಶದ ಅರಣ್ಯಗಳನ್ನು ಕಾಯ್ದಿಟ್ಟ (ರಿಸರ್ವ್), ರಕ್ಷಿತ (ಪ್ರೊಟೆಕ್ಟೆಡ್) ಮತ್ತು ವರ್ಗೀಕರಿಸದ (ಅನ್‌ಕ್ಲಾಸ್ಡ್) ಅರಣ್ಯಗಳೆಂದು ಮೂರು ಭಾಗಗಳಾಗಿ ವಿಂಗಡಿಸಿದೆ. ಕಾಯ್ದಿಟ್ಟ ಅರಣ್ಯದಲ್ಲಿ ಗರಿಷ್ಠ ಮಟ್ಟದ ರಕ್ಷಣೆ. ಅರಣ್ಯ ಇಲಾಖೆಯ ಅನುಮತಿಯಿಲ್ಲದೆ ಯಾವ ಚಟುವಟಿಕೆಗೂ ಅಲ್ಲಿ ಅವಕಾಶವಿಲ್ಲ. ರಕ್ಷಿತ ಅರಣ್ಯದಲ್ಲಿ ಅರಣ್ಯ ಇಲಾಖೆ ನಿಷೇಧಿಸದಿರುವ ಕೆಲಸಗಳಿಗೆ ಅವಕಾಶವುಂಟು. ರಾಷ್ಟ್ರೀಯ ಉದ್ಯಾನ, ಅಭಯಾರಣ್ಯಗಳು ಈ ಎರಡರ ವ್ಯಾಪ್ತಿಯಲ್ಲಿ ಬರುತ್ತವೆ. ಈ ಎರಡೂ ಗುಂಪಿಗೆ ಸೇರದ ಪ್ರದೇಶವೇ ವರ್ಗೀಕರಿಸದ ಅರಣ್ಯ. ಇಂಥ ಅರಣ್ಯಭೂಮಿಯ ಒಡೆತನ ಸರ್ಕಾರದಲ್ಲಿರಬಹುದು, ಸಮುದಾಯ, ಬುಡಕಟ್ಟು ಪಂಗಡ ಅಥವಾ ವ್ಯಕ್ತಿಗಳಲ್ಲಿ ಇರಬಹುದು.

ಅರಣ್ಯ ಪರಿಸ್ಥಿತಿಯ ವರದಿಯಂತೆ, ದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅರಣ್ಯಗಳನ್ನು ಹೊಂದಿರುವ ರಾಜ್ಯಗಳೆಂದರೆ ಮಿಜೊರಾಂ (ರಾಜ್ಯದ ಭೂಭಾಗದ ಶೇ 84ರಷ್ಟು ಅರಣ್ಯ), ಅರುಣಾಚಲ ಪ್ರದೇಶ (ಶೇ 79), ಮೇಘಾಲಯ (ಶೇ 76), ಮಣಿಪುರ ಮತ್ತು ನಾಗಾಲ್ಯಾಂಡ್ (ಶೇ 74). ಆದರೆ ಈ ಅರಣ್ಯಗಳ ಬಹುತೇಕ ಭಾಗ ಆಯಾ ರಾಜ್ಯ ಸರ್ಕಾರಗಳ ಅರಣ್ಯ ಇಲಾಖೆಗೆ ಸೇರಿಲ್ಲ. ನಾಗಾಲ್ಯಾಂಡ್‌ನಲ್ಲಿ ಅರಣ್ಯದ ಶೇ 97ರಷ್ಟು ಭಾಗ, ಮೇಘಾಲಯ ಅರಣ್ಯದ ಶೇ 88ರಷ್ಟು, ಮಣಿಪುರ ಅರಣ್ಯದ ಶೇ 75ರಷ್ಟು ಮತ್ತು ಅರುಣಾಚಲ ಪ್ರದೇಶದ ಶೇ 53ರಷ್ಟು ಭಾಗ ವರ್ಗೀಕರಿಸದ ಅರಣ್ಯವಾಗಿದ್ದು, ಸಂಪೂರ್ಣವಾಗಿ ಸಮುದಾಯದ ಒಡೆತನದಲ್ಲಿವೆ. ಈ ಅರಣ್ಯಗಳ ಮೇಲೆ ಇಲಾಖೆಗೆ ಯಾವುದೇ ರೀತಿಯ ಅಧಿಕಾರವಿಲ್ಲ.

ಈಶಾನ್ಯ ಭಾರತದ ಎಂಟು ರಾಜ್ಯಗಳಲ್ಲಿ ಇಲಾಖೆಯ ಸುಪರ್ದಿಯಲ್ಲಿರುವ ಒಟ್ಟು ಅರಣ್ಯದ ಪ್ರಮಾಣ ಶೇ 10ಕ್ಕಿಂತ ಕಡಿಮೆ ಎಂಬ ಅಂದಾಜಿದೆ. ಇಲ್ಲಿನ ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಸಾಂಪ್ರದಾಯಿಕ ವಿಧಿವಿಧಾನಗಳ ಮೂಲಕ ಐತಿಹಾಸಿಕವಾಗಿ ಅರಣ್ಯ ಮತ್ತು ಜೀವವೈವಿಧ್ಯವನ್ನು ಸಂರಕ್ಷಿಸಿಕೊಂಡು ಬಂದಿವೆ. ಜಿಲ್ಲಾ, ಗ್ರಾಮ ಅಥವಾ ಸಮುದಾಯ ಮಟ್ಟದ ಮಂಡಳಿಗಳು ಅರಣ್ಯ ಪ್ರದೇಶದ ನಿರ್ದಿಷ್ಟ ಭಾಗವನ್ನು 'ಸಮುದಾಯ ಸಂರಕ್ಷಿತ ಪ್ರದೇಶ'ವೆಂದು ಘೋಷಿಸುತ್ತವೆ. ಅಲ್ಲಿ ಮುಂದಿನ ನಾಲ್ಕೈದು ವರ್ಷಗಳ ಕಾಲ ಕೃಷಿ, ಬೇಟೆ, ಮೀನುಗಾರಿಕೆ, ಅರಣ್ಯ ಉತ್ಪನ್ನ ಸಂಗ್ರಹದಂತಹ ಸರ್ವ ಸಮಸ್ತ ಚಟುವಟಿಕೆಗಳನ್ನೂ ನಿಷೇಧಿಸಲಾಗುತ್ತದೆ. ಅಲ್ಲಿ ಪ್ರಕೃತಿಯದೇ ಕಾರುಬಾರು. ಆ ಅವಧಿ ಮುಗಿದ ನಂತರ ನಿಷೇಧವನ್ನು ತೆಗೆದು, ಬೆಳೆದುನಿಂತ ಅರಣ್ಯದಿಂದ ಪ್ರಯೋಜನಗಳನ್ನು ಪಡೆಯುವ ಅವಕಾಶವನ್ನು ಸಮುದಾಯದ ಸದಸ್ಯರಿಗೆ ಕಲ್ಪಿಸಲಾಗುತ್ತದೆ. ಮುಂದೆ ಅರಣ್ಯದ ಮತ್ತೊಂದು ಭಾಗವನ್ನು ಸಮುದಾಯ ಸಂರಕ್ಷಿತ ಪ್ರದೇಶವೆಂದು ಘೋಷಿಸಲಾಗುತ್ತದೆ.

ಈಶಾನ್ಯ ಭಾರತದ ಎಂಟು ರಾಜ್ಯಗಳಲ್ಲಿ, ಯಾವುದೇ ಗಂಭೀರ ಸಮಸ್ಯೆ, ಘರ್ಷಣೆಗಳಿಲ್ಲದೇ ಸಮುದಾಯದ ಒಡೆತನ, ನಿರ್ವಹಣೆಯಲ್ಲಿರುವ ವರ್ಗೀಕರಿಸದ ಅರಣ್ಯಗಳ ಮೇಲೆ ಸರ್ಕಾರಗಳ ಕಣ್ಣುಬಿದ್ದಿದೆ. ಅಂತಹ ಅರಣ್ಯಗಳನ್ನು ಜಾಣತನದಿಂದ ತಮ್ಮ ಸುಪರ್ದಿಗೆ ತೆಗೆದುಕೊಳ್ಳುವ ಪ್ರಯತ್ನಗಳು ಪ್ರಾರಂಭವಾದದ್ದು 2002ರಲ್ಲಿ. 2022ರ ಅಂತ್ಯದ ವೇಳೆಗೆ 1,300 ಚದರ ಕಿ.ಮೀ. ಗಳಷ್ಟು ಸಮುದಾಯ ಅರಣ್ಯದ ಮೇಲೆ ಸರ್ಕಾರಗಳು ಜಂಟಿ ಒಡೆತನವನ್ನು ಸ್ಥಾಪಿಸಿ, ನಿರ್ವಹಣೆಯನ್ನು ನಿಯಂತ್ರಿಸುತ್ತಿವೆ.

ಈಶಾನ್ಯ ರಾಜ್ಯಗಳಲ್ಲಿ ಸ್ಥಳೀಯ ಸಮುದಾಯದ ಒಡೆತನದಲ್ಲಿರುವ ಅರಣ್ಯವನ್ನು ಸಮುದಾಯದ ಒಪ್ಪಿಗೆ ಇಲ್ಲದೇ ಸರ್ಕಾರ ತನ್ನ ಅಧೀನಕ್ಕೆ ತೆಗೆದುಕೊಳ್ಳುವಂತಿಲ್ಲ. ಈ ಕಾನೂನಾತ್ಮಕ ಅಡಚಣೆಯನ್ನು ನಿವಾರಿಸಲು ಕೇಂದ್ರ ಸರ್ಕಾರವು 2002ರಲ್ಲಿ, 1972ರ ವನ್ಯಜೀವಿ ಸಂರಕ್ಷಣಾ ಅಧಿನಿಯಮಕ್ಕೆ ತಿದ್ದುಪಡಿಯೊಂದನ್ನು ತಂದು, 'ಕಾಯ್ದಿಟ್ಟ ಸಮುದಾಯ ಅರಣ್ಯ'ದ ಪರಿಕಲ್ಪನೆಯನ್ನು ಪರಿಚಯಿಸಿತು. ಅದರಂತೆ ಜಿಲ್ಲಾ, ಗ್ರಾಮ ಮಂಡಳಿ, ಗ್ರಾಮ ಸಭೆಯಂತಹ ಸ್ಥಳೀಯ ಸರ್ಕಾರಿ ಸಂಸ್ಥೆಗಳು, ಸಮುದಾಯಗಳೊಡನೆ ಐದು ವರ್ಷಗಳ ಅವಧಿಗೆ ಒಪ್ಪಂದವೊಂದನ್ನು ಮಾಡಿಕೊಂಡು, ಸಮುದಾಯದ ಒಡೆತನದ ಅರಣ್ಯವನ್ನು 'ಕಾಯ್ದಿಟ್ಟ ಸಮುದಾಯ ಅರಣ್ಯ'ವೆಂದು ಘೋಷಿಸುತ್ತವೆ. ಹೀಗೆ ಸೃಷ್ಟಿಯಾದ ಅರಣ್ಯ ಪ್ರದೇಶದಲ್ಲಿ ಸರ್ಕಾರ 'ಜಂಟಿ ಅರಣ್ಯ ಯೋಜನೆ'ಯನ್ನು ಜಾರಿಗೆ ತರುತ್ತದೆ. ಇದಾದ ಕೂಡಲೇ ಅಂತಹ ಅರಣ್ಯ ಪ್ರದೇಶದ ಮೇಲೆ ಇಲಾಖೆಗೆ ಸಹ ಒಡೆತನ ಲಭಿಸುತ್ತದೆ. ಸಂರಕ್ಷಣೆ, ನಿರ್ವಹಣೆಯಲ್ಲೂ ಇಲಾಖೆಯ ಅಭಿಪ್ರಾಯವನ್ನು ಕಡೆಗಣಿಸುವಂತಿಲ್ಲ. ಒಪ್ಪಂದದಲ್ಲಿ ಇರುವಂತೆ, ಅರಣ್ಯ ಇಲಾಖೆಯು ಸಮುದಾಯದ ಸದಸ್ಯರಿಗೆ ಜೀವನೋಪಾಯದ ಮಾರ್ಗಗಳನ್ನು ಕಲ್ಪಿಸಬೇಕು. ಅಂತಹ ಚಟುವಟಿಕೆಗಳಿಗೆ ಕೇಂದ್ರ ಸರ್ಕಾರದಿಂದ ಧನಸಹಾಯ ದೊರೆಯುತ್ತದೆ.

1972ರ ವನ್ಯಜೀವಿ ಸಂರಕ್ಷಣಾ ಅಧಿನಿಯಮದಡಿಯಲ್ಲಿನ ಕಾನೂನುಗಳು, ಒಪ್ಪಂದದ ನಂತರ ಕಾಯ್ದಿಟ್ಟ ಸಮುದಾಯ ಅರಣ್ಯಕ್ಕೆ ಅನ್ವಯವಾಗುವುದರಿಂದ, ಸ್ಥಳೀಯ ಸಮುದಾಯದ ಜನ ಅಲ್ಲಿ ಕೃಷಿ ಮಾಡುವಂತಿಲ್ಲ. ಬೇಟೆ, ಮೀನುಗಾರಿಕೆಗೆ ಅವಕಾಶವಿಲ್ಲ. ಸೊಪ್ಪು, ನಾರು, ಬೇರಿನಂತಹ ಲಘು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವಂತಿಲ್ಲ. ಈ ನಿಷೇಧಗಳಿಂದ ತಮ್ಮ ಜೀವನೋಪಾಯ ಮಾರ್ಗಗಳನ್ನು ಕಳೆದುಕೊಂಡವರಿಗೆ ಕೇಂದ್ರ ಸರ್ಕಾರದಿಂದ ನೆರವು ದೊರೆಯುತ್ತದೆ. ಆದರೆ ಅದು ಅತ್ಯಲ್ಪ. ನಾಗಾಲ್ಯಾಂಡ್‌ನ ಜುನ್‌ಹೆಬಾಟೋ ಜಿಲ್ಲೆಯ ಅಶುಖೋಮಿ ಸಮುದಾಯ ರಕ್ಷಿಸುತ್ತಿದ್ದ 2.8 ಚದರ ಕಿ.ಮೀ. ಅರಣ್ಯವನ್ನು 2019ರಲ್ಲಿ ಒಪ್ಪಂದದ ನಂತರ ಕಾಯ್ದಿಟ್ಟ ಸಮುದಾಯ ಅರಣ್ಯವನ್ನಾಗಿ ಘೋಷಿಸಲಾಯಿತು. ಇದರಿಂದ ತಮ್ಮ ಬದುಕಿಗೆ ಆಸರೆಯಾಗಿದ್ದ ಅರಣ್ಯದ ಮೇಲಿನ ಒಡೆತನವನ್ನು ಕಳೆದುಕೊಂಡ ಹಳ್ಳಿಯ 240 ಕುಟುಂಬಗಳಿಗೆ ಸರ್ಕಾರದಿಂದ ದೊರೆತ ಹಣ, ವರ್ಷಕ್ಕೆ ತಲಾ ₹ 840.



ಅನುಕೂಲಕ್ಕಿಂತ ಅನನುಕೂಲಗಳೇ ಹೆಚ್ಚಾಗಿರುವ ಈ ಒಪ್ಪಂದಕ್ಕೆ ಗುಡ್ಡಗಾಡು ಸಮುದಾಯಗಳು ಹೇಗೆ ಒಪ್ಪಿಗೆ ನೀಡುತ್ತವೆ ಎಂಬುದು ಬಹುದೊಡ್ಡ ಪ್ರಶ್ನೆ. ಸರ್ಕಾರೇತರ ಸಂಘಟನೆಗಳು ನಡೆಸಿರುವ ಅಧ್ಯಯನಗಳಂತೆ, ಒಪ್ಪಂದ ತರುವ ಬದಲಾವಣೆಗಳ ಬಗ್ಗೆ ಸ್ಥಳೀಯ ಸಮುದಾಯಕ್ಕೆ ಸಂಪೂರ್ಣ ಮಾಹಿತಿಯೇ ಇರುವುದಿಲ್ಲ. ಸರ್ಕಾರ ಮತ್ತು ಸಮುದಾಯಗಳ ನಡುವಿನ ಒಪ್ಪಂದ ಒಂದು ಸಂಕೀರ್ಣ ಕಾನೂನಾತ್ಮಕ ದಾಖಲೆಯಾಗಿದ್ದು, ಅದರ ಒಳಾರ್ಥಗಳು ಸಮುದಾಯಕ್ಕೆ ಸ್ಪಷ್ಟವಾಗಿ ಅರ್ಥವಾಗದ ಅನೇಕ ಪ್ರಕರಣಗಳಿವೆ.

ಇಲಾಖೆಯ ಆಶ್ವಾಸನೆಗಳನ್ನು ಜನ ಸುಲಭವಾಗಿ ನಂಬುತ್ತಾರೆ. ಅನೇಕ ಪ್ರಕರಣಗಳಲ್ಲಿ ಸಮುದಾಯದ ನಾಯಕರು ಉಳಿದವರನ್ನು ಬಲವಂತದಿಂದ ಒಪ್ಪಿಸುತ್ತಾರೆ. ಅಪವಾದವೆನ್ನುವಂತೆ ಅಲ್ಲಲ್ಲಿ ಕಾಣುವ ಯಶಸ್ಸಿನ ಪ್ರಕರಣಗಳನ್ನೇ ಎತ್ತಿ ತೋರಿ ಸಮುದಾಯಗಳನ್ನು ನಂಬಿಸುವುದೂ ಉಂಟು. ಈ ಎಲ್ಲ ಪ್ರಯತ್ನಗಳ ಫಲವಾಗಿ ನಾಗಾಲ್ಯಾಂಡ್‌ನಲ್ಲಿ 114, ಮೇಘಾಲಯದಲ್ಲಿ 74 ಕಾಯ್ದಿಟ್ಟ ಸಮುದಾಯ ಅರಣ್ಯಗಳಿವೆ. ಕೇಂದ್ರ ಪರಿಸರ ಸಚಿವಾಲಯದ ಮೂಲಗಳಂತೆ, ಕರ್ನಾಟಕದ ಏಕಮಾತ್ರ ಕಾಯ್ದಿಟ್ಟ ಸಮುದಾಯ ತಾಣವೆಂದರೆ ಮಂಡ್ಯ ಜಿಲ್ಲೆಯ ಕೊಕ್ಕರೆ ಬೆಳ್ಳೂರು.

ಸ್ಥಳೀಯ ಸಮುದಾಯ ಮತ್ತು ಸರ್ಕಾರದ ನಡುವಿನ ಒಪ್ಪಂದದ ಅವಧಿ ಐದು ವರ್ಷಗಳು. ನಂತರ ಅರಣ್ಯ ಪ್ರದೇಶವು ಸಮುದಾಯಕ್ಕೆ ಹಿಂದಿರುಗಬೇಕು. ಆದರೆ ಸರ್ಕಾರಕ್ಕೆ ಒಪ್ಪಂದದ ಈ ಅಂಶವನ್ನು ಪಾಲಿಸುವ ಆಸಕ್ತಿಯಿಲ್ಲ. ಒಪ್ಪಂದದ ಅವಧಿ ಮುಗಿದ ಮೇಲೆ ಸರ್ಕಾರದಿಂದ ಸಮುದಾಯದ ಸದಸ್ಯರಿಗೆ ದೊರೆಯುತ್ತಿದ್ದ ಅಲ್ಪಸ್ವಲ್ಪ ಆರ್ಥಿಕ ನೆರವೂ ನಿಲ್ಲುತ್ತದೆ. ಅರಣ್ಯದ ಮೇಲಿನ ಒಡೆತನವನ್ನು ಕಳೆದುಕೊಂಡ ಸಮುದಾಯಗಳು, ಒಪ್ಪಂದದ ಅವಧಿ ಮುಗಿದ ನಂತರವೂ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ಅರಣ್ಯಗಳನ್ನು ಸಂರಕ್ಷಿಸಬೇಕೆಂಬುದು ಸರ್ಕಾರದ ನಿರೀಕ್ಷೆ. ಇದು ತೀವ್ರ ಅಸಮಾಧಾನಕ್ಕೆ ಎಡೆಮಾಡಿಕೊಟ್ಟಿದೆ. ಮೇಘಾಲಯ ಮತ್ತು ನಾಗಾಲ್ಯಾಂಡ್‌ನ ಸ್ಥಳೀಯ ಸಮುದಾಯಗಳು ಅರಣ್ಯದ ಮೇಲಿನ ಒಡೆತನವನ್ನು ಹಿಂಪಡೆಯಲು ಚಳವಳಿಯನ್ನು ಪ್ರಾರಂಭಿಸಿವೆ.

ಅರಣ್ಯ ಸಂರಕ್ಷಣೆ ಮತ್ತು ಸಂಪನ್ಮೂಲಗಳ ವಿವೇಕಯುತ ಬಳಕೆಯೇ ಸರ್ಕಾರದ ಪ್ರಾಮಾಣಿಕ ಉದ್ದೇಶವಾಗಿದ್ದಲ್ಲಿ, ಈಶಾನ್ಯ ರಾಜ್ಯಗಳ ಸಮುದಾಯಗಳಲ್ಲಿ ಪ್ರಚಲಿತವಾಗಿರುವ ಸಮುದಾಯ ಸಂರಕ್ಷಿತ ಪ್ರದೇಶಗಳನ್ನು ಅಧಿಕೃತವಾಗಿ ಮಾನ್ಯ ಮಾಡಿ, ಆರ್ಥಿಕ ನೆರವು ನೀಡಬೇಕು. ನಿರ್ವಹಣೆಯನ್ನು ಸಮುದಾಯಗಳ ಜಾಣ್ಮೆ, ವಿವೇಚನೆಗಳಿಗೇ ಬಿಡಬೇಕು ಎನ್ನುವುದು ಪರಿಣತರ ನಿಲುವು. ಆದರೆ ಈಶಾನ್ಯ ರಾಜ್ಯಗಳಲ್ಲಿ ತನ್ನ ಸುಪರ್ದಿಯಲ್ಲಿರುವ ಅತಿ ಕಡಿಮೆ ಅರಣ್ಯದ ವ್ಯಾಪ್ತಿಯನ್ನು ಭರದಿಂದ ವಿಸ್ತರಿಸುವ ಪ್ರಯತ್ನದಲ್ಲಿರುವ ಸರ್ಕಾರಕ್ಕೆ ಪರಿಣತರ ಅಭಿಪ್ರಾಯ ರುಚಿಸುತ್ತಿಲ್ಲ.

ಚುರುಮುರಿ

ಗುಂಡಿ- ಚರಂಡಿ!

• ಬಿ.ಎನ್.ಮಲ್ಲೇಶ್

ಜನನಾಯಕರ ಜನತಾ ದರ್ಶನದಲ್ಲಿ ಸಮಸ್ಯೆ ಹೇಳಿಕೊಳ್ಳಲು ಜನರ ದಂಡೇ ಸೇರಿತ್ತು. ನಾಯಕರು ಜನರ ಕೈಯಿಂದ ಅರ್ಜಿಗಳನ್ನು ಕಿತ್ತುಕೊಳ್ಳುತ್ತ ತಮ್ಮ ಪಿ.ಎ. ಕೈಗೆ ತುರುಕುತ್ತಿದ್ದರು.

ಒಬ್ಬ ಮಹಿಳೆ 'ಸ್ವಾಮಿ ನಂಗೆ ಮನೆ ಇಲ್ಲ, ಗುಡಿಕಟ್ಟೆ ಮೇಲೆ ಮಲಗ್ತಾ ಇದೀನಿ' ಎಂದಳು.

'ಅಯ್ಯೋ ಇರಮ್ಮ, ಗ್ರಾಮವಾಸ್ತವ್ಯದಲ್ಲಿ ನಾನೂ ಸ್ಕೂಲು, ಅವರಿವರ ಮನೇಲಿ ಮಲಗ್ತಾ ಇಲ್ವಾ?' ರೇಗಿದರು ನಾಯಕರು.

'ಸ್ವಾಮಿ, ನಂಗೆ ವೃದ್ಧಾಪ್ಯ ವೇತನ ಕೊಡ್ಸಿ' ವಯೋವೃದ್ಧರೊಬ್ಬರು ಕೇಳಿದರು.

'ವೇತನ ಬಿಡ್ರೀ, ಅಲ್ಲಿ ದೇಶದ ಗಡಿ ನೋಡ್ರೀ, ಉಗ್ರರನ್ನ ನೋಡ್ರೀ...' ಪಟ್ ಅಂತ ಬಂತು ಉತ್ತರ.

'ಸಾಹೇಬ್ರೆ... ನಮ್ಮ ಬೆಳೆಗೆ ಬೆಂಬಲ ಬೆಲೆ ಬೇಕು'.

'ಬೆಂಬಲ ಬೆಲೆ ಕೇಳ್ತೀರಿ, ಟ್ಯಾಕ್ಸ್ ಕಟ್ಟಿದೀರೇನ್ರಿ? ಜಿಡಿಪಿ ಏನಾಗಿದೆ ಗೊತ್ತಿದೆಯೇನ್ರಿ?'

'ಸಾರ್, ನಮ್ ಪಂಪ್‌ಸೆಟ್‌ಗಳಿಗೆ ಕರೆಂಟಿಲ್ಲ'.

'ಕರೆಂಟ್ ಹಂಗಿರ್ಲಿ, ಮೊದ್ಲು ಕೊರೊನಾ ಓಡಿಸ್ರಿ, ಮಾಸ್ಕ್ ಹಾಕ್ಕಳಿ'.

'ಊರು... ರಸ್ತೆ, ಗುಂಡಿ, ಚರಂಡಿ...'

'ರೀ... ರಸ್ತೆ, ಗುಂಡಿ, ಚರಂಡಿ ಅಂತ ಜುಜುಬಿ ವಿಷಯ ನನ್ನತ್ರ ತರಬೇಡಿ, ನಿಮ್ ಮಕ್ಕಳು ಲವ್ ಮಾಡದಂಗೆ ನೋಡ್ಕಳಿ, ಹುಷಾರಾಗಿರಿ'.

'ಅಲ್ಲ ಸಾರ್, ಗುಂಡೀಲಿ, ಚರಂಡೀಲಿ...'

'ಒಂದ್ಸಲ ಹೇಳಿದ್ರೆ ಅರ್ಥ ಆಗಲ್ವಾ? ಗುಂಡಿ ಚರಂಡಿ ಬಿಟ್ಟು ಬೇರೆ ಮಾತಾಡಿ'. ನಾಯಕರಿಗೆ ಸಿಟ್ಟು ಬಂತು. 'ಥೋ... ಹಂಗಲ್ಲ ಸಾರ್'.

'ಹಂಗೂ ಇಲ್ಲ, ಹಿಂಗೂ ಇಲ್ಲ, ಮೊದ್ಲು ನಿಮ್ ಮಕ್ಕಳನ್ನ ಕಾಪಾಡ್ಕಳಿ. ಇಲ್ಲಾಂದ್ರೆ ನಮಗೆ ವೋಟ್ ಹಾಕಿ, ನಾವೇ ನೋಡ್ಕೊತೀವಿ'.

'ಸಾರ್ ಒಂದ್ನಿಮಿಷ, ಅಲ್ಲಿ ಆ್ಯಕ್ಸಿಡೆಂಟ್ ಆಗಿದೆ, ನಿಮ್ ಮಗನ ಬೈಕು ಗುಂಡಿ ಎಗರಿ ಚರಂಡಿಗೆ ಬಿದ್ದಿದೆಯಂತೆ'.

ಜನನಾಯಕರು ಎಲ್ಲ ಅಲ್ಲೇ ಬಿಟ್ಟು ಗುಂಡಿ, ಚರಂಡಿ ಕಡೆಗೆ ಓಡಿದರು.

ಸಂಗತ

ಕಾವ್ಯ ಹಾಡಾಗುವ ಭಾವತರಂಗ

ಓದಬಹುದಾದ ಕವಿತೆಯನ್ನು ಹಾಡುವುದು ಹೇಗೆ ಸರಿಯಲ್ಲವೊ ಹಾಗೆಯೇ ಹಾಡಬಹುದಾದ ಕವಿತೆಯನ್ನು ಓದುವುದು ಕೂಡಾ ಸರಿಯಾದುದಲ್ಲ

• ಡಾ. ಸರ್ಫ್ರಾಜ್ ಚಂದ್ರಗುತ್ತಿ

ಹಾವೇರಿಯಲ್ಲಿ ಕನ್ನಡದ ಹಬ್ಬ ನಡೆಯುತ್ತಿದೆ. ಈ ನುಡಿಜಾತ್ರೆಯ ಕವಿಗೋಷ್ಠಿಯಲ್ಲಿ 'ಕವಿತೆಗಳನ್ನು ವಾಚಿಸಬೇಕೆ ವಿನಾ ಹಾಡುವಂತಿಲ್ಲ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹೇಳಿದ್ದಾರೆ. ಈ ನೆಲೆಯಲ್ಲಿ, ಕವಿತೆಯನ್ನು ಹಾಡುವ ನಮ್ಮ ಪರಂಪರೆಯ ಬಗೆಗಿನ ಒಂದು ಅವಲೋಕನ ಈ ಸಂದರ್ಭದಲ್ಲಿ ಪ್ರಸ್ತುತ ಎನಿಸಬಲ್ಲದು.

ನಾದದಿಂದ ಸಮೃದ್ಧವಾಗಿರುವ ಭಾವಗೀತೆಗಳನ್ನು ರಚಿಸಿದ ದ.ರಾ.ಬೇಂದ್ರೆಯವರು ತಮ್ಮ ಹಲವು ಕವಿತೆಗಳನ್ನು ಹಾಡುತ್ತಿದ್ದರು. ನೂರಾರು ಸ್ವರ ಪದಗಳನ್ನು ರಚಿಸಿದ ನಿಜಗುಣ ಶಿವಯೋಗಿಗಳು, ಆನು ಒಲಿದಂತೆ ಹಾಡುವೆ ಎನ್ನುವ ವಚನಕಾರರು, ಹಾಡು ಹಾಗೂ ಕವಿತೆಯನ್ನು ಒಂದಾಗಿ ಭಾವಿಸಿದ ಕೀರ್ತನಕಾರರು, ತತ್ವಪದಕಾರರು, ರಾಗ ತಾಳಗಳನ್ನು ನಿರ್ದೇಶಿಸಿ ಭಾವಗೀತೆಗಳನ್ನು ರಚಿಸಿದ ನವೋದಯರು, ಭಾವಗೀತೆಯಲ್ಲಿಯೇ ಭಿನ್ನ ಮಾದರಿಯ ಹಾಡುಗಳನ್ನು ಬರೆದು ಕಾವ್ಯ ಹಾಗೂ ಸಂಗೀತದ ಸಂಬಂಧವನ್ನು ಇನ್ನಷ್ಟು ಹತ್ತಿರಕ್ಕೆ ಬೆಸೆದ ನವ್ಯೋತ್ತರ ಕವಿಗಳು, ಸಾಮಾಜಿಕ ತಾರತಮ್ಯಗಳ ವಿರುದ್ಧ ಬಂಡೆದ್ದು ಹೋರಾಟದ ಹಾಡುಗಳನ್ನು ಬರೆದ ಸಿದ್ಧಲಿಂಗಯ್ಯ, ಬರಗೂರು ರಾಮಚಂದ್ರಪ್ಪ, ಕೋಟಿಗಾನಹಳ್ಳಿ ರಾಮಯ್ಯನವರವರೆಗೂ ಕವಿತೆಯನ್ನು ಹಾಡುವ ಪರಂಪರೆ ಬೆಳೆದುಬಂದಿದೆ.

ಜನಪದರಲ್ಲಿ ಹಾಡಿನ ಹಂಗನ್ನು ಹರಿದುಕೊಂಡ ಒಂದಾದರೂ ಉದಾಹರಣೆ ದೊರೆಯುವುದಿಲ್ಲ. ಕನ್ನಡದ ಆದಿಕವಿ ಪಂಪ ಸ್ವತಃ ಗಮಕಿಯಾಗಿದ್ದ. ಕನ್ನಡ ಸಾಹಿತ್ಯದೊಂದಿಗೆ ಕಾವ್ಯ ಹಾಗೂ ಹಾಡುಗಾರಿಕೆಯ ಸಂಬಂಧವೂ ಅಷ್ಟೇ ಸುದೀರ್ಘ ಚರಿತ್ರೆಯನ್ನು ಹೊಂದಿದೆ. ಕನ್ನಡ ಕಾವ್ಯವು ನವ್ಯಕಾವ್ಯ ಪರಿಸರಕ್ಕೆ ಪಕ್ಕಾಗದಿದ್ದರೂ ಎಪ್ಪತ್ತರ ದಶಕದಲ್ಲಿ ಅನೇಕರು ಆಂಗ್ಲಕವಿಗಳನ್ನು ಅನುಕರಿಸಿ ಕನ್ನಡದಲ್ಲಿ ನವ್ಯಕವಿತೆಗಳನ್ನು ರಚಿಸತೊಡಗಿದರು. ಮೇಲಾಗಿ ನವ್ಯಕವಿಗಳು ಕನ್ನಡದಲ್ಲಿ ಸಹಜವಾಗಿ ಅರಳತೊಡಗಿದ್ದ ಭಾವಗೀತೆಗಳನ್ನು, ನವೋದಯ ಹಾಗೂ ದಲಿತ, ಬಂಡಾಯ ಕವಿಗಳನ್ನು ಲೇವಡಿ ಮಾಡಿದ್ದು ಕೂಡಾ ನಡೆಯಿತು. ಎಲ್ಲವನ್ನೂ ಶ್ರೇಷ್ಠತೆಯ ಮಾನದಂಡದಿಂದ ನೋಡಿದ ನವ್ಯ ಬರಹಗಾರರು ಹಾಗೂ ವಿಮರ್ಶಕರು ಜನಪದ ಸಾಹಿತ್ಯ ಮತ್ತು ಕನ್ನಡದ ಭಾವಗೀತೆಯ ಹಾಡುಗಾರಿಕೆಯನ್ನು ಇಂದಿಗೂ ಒಪ್ಪಿಕೊಳ್ಳಲು ಸಿದ್ಧರಿಲ್ಲದಿರುವುದನ್ನು ಗಮನಿಸಬಹುದು.

ಕನ್ನಡದ ಹೆಚ್ಚುಗಾರಿಕೆಗೆ ಕಾರಣವಾಗಿರುವ ಸುಗಮ ಸಂಗೀತದಂತಹ ಕಾವ್ಯಸಂಗೀತದ ಮಾದರಿಗಳು ನಮ್ಮ ನೆರೆಯ ಬೇರಾವ ರಾಜ್ಯಭಾಷೆಗಳಲ್ಲಿಯೂ ಇಲ್ಲ ಎಂಬುದನ್ನು ಗಮನಿಸಬೇಕು. ಬಂಗಾಳಿಯಲ್ಲಿ ರವೀಂದ್ರ ಸಂಗೀತ, ನಜರುಲಿ ಸಂಗೀತ ಹುಟ್ಟಿ ಬೆಳೆದಿವೆ. ರಾಷ್ಟ್ರೀಯ ಚಳವಳಿ, ಕನ್ನಡ ಏಕೀಕರಣ ಚಳವಳಿ ಸಂದರ್ಭಗಳಲ್ಲಿ ಕನ್ನಡದ ಹಾಡುಗಳು ಹೋರಾಟದ ಕಿಚ್ಚು ಹೊತ್ತಿಸಿದ್ದನ್ನು ಮರೆಯಲಾಗದು. ವಿಮರ್ಶಕ ಕಿ.ರಂ.ನಾಗರಾಜ ಅವರು ಸಿದ್ಧಲಿಂಗಯ್ಯ ಅವರ 'ಹೊಲೆಮಾದಿಗರ ಹಾಡು' ಕೃತಿಗೆ ಮುನ್ನುಡಿ ಬರೆಯುತ್ತ, 'ಕಾವ್ಯವನ್ನು ಮೌನವಾಗಿ ಓದಿಕೊಳ್ಳುವ ಪದ್ಧತಿಗೆ ಬದಲಾಗಿ ಗಟ್ಟಿಯಾಗಿ ಹಾಡಿಕೊಳ್ಳಬೇಕು' ಎಂದಿದ್ದರು. ಡಿ.ಆರ್.ನಾಗರಾಜ್ ಕೂಡಾ ದಲಿತ, ಬಂಡಾಯ ಕವಿತೆಗಳ ಹಾಡುಗಾರಿಕೆಯ ಅಗತ್ಯವನ್ನು ಸಮರ್ಥಿಸಿದ್ದರು. ಕವಿತೆಯನ್ನು ಮೌನವಾಗಿ ಓದಿಕೊಳ್ಳಬೇಕು ಎಂಬ ವಾದ ತಪ್ಪೇನಲ್ಲ. ಆದರೂ ಗೇಯಲಯದ ಕವಿತೆಗಳನ್ನು ಒಳಗೊಂಡಂತೆ ಯಾವ ಕವಿತೆಯನ್ನೂ ಹಾಡಬಾರದು ಎಂಬ ಮಾತಿಗೆ ಅರ್ಥವಿಲ್ಲ. ಕನ್ನಡ ಕಾವ್ಯವು ಜನಮಾನಸಕ್ಕೆ ಹತ್ತಿರವಾದದ್ದು ಗಮಕ ಮೊದಲಾದ ಗಾಯನ ಪದ್ಧತಿಯಿಂದ. ಸುಗಮಸಂಗೀತದ ಹೆಸರಿನಲ್ಲಿ ಜನಪ್ರಿಯವಾಗಿರುವ ಇಂದಿನ ಭಾವಗೀತೆಯ ಗಾಯನ ಪದ್ಧತಿಯು ಗಮಕದ ಆಧುನಿಕ ರೂಪವಾಗಿದ್ದು, ಅನಕ್ಷರಸ್ಥ ಸಮುದಾಯಕ್ಕೂ ಕವಿ ರಚನೆಗಳು ಮನೆ ಮನ ತಲುಪಲು ಸಾಧ್ಯವಾಯಿತು.

'ನಿಮ್ಮ ರಚನೆಗಳಲ್ಲಿ ನಿಮಗಿಷ್ಟವಾದ ಭಾವಗೀತೆ ಯಾವುದು' ಎಂಬ ಅಭಿಮಾನಿಯೊಬ್ಬನ ಪ್ರಶ್ನೆಗೆ ಬೇಂದ್ರೆ, 'ಕವಿಯಾಗಿ ನನಗೆ ಎಲ್ಲವೂ ಇಷ್ಟವೆ, ಆದರೂ ಏನಾದರೂ ಅನಾಹುತ ಸಂಭವಿಸಿ ನನ್ನ ಕವಿತೆಗಳು ನಾಶವಾಗುವ ಸನ್ನಿವೇಶ ಬಂದರೆ, ಜನರ ಬಾಯಲ್ಲಿ ಹಾಡಾಗಿ ಉಳಿದಿರುತ್ತದಲ್ಲ, ಅದೇ ನನ್ನ ಪ್ರಿಯ ಕವಿತೆ' ಎಂದಿದ್ದರು. ಒಲವಿನ ಕವಿ ಕೆ.ಎಸ್.ನರಸಿಂಹಸ್ವಾಮಿಯವರು ತಾವು ಪ್ರಯಾಣಿಸುತ್ತಿದ್ದ ಬಸ್ಸಿನಲ್ಲಿ ಭಿಕ್ಷುಕನೊಬ್ಬ 'ಒಂದಿರುಳು ಕನಸಿನಲಿ' ಭಾವಗೀತೆಯನ್ನು ಹಾಡಿಕೊಂಡು ಬಂದಾಗ ರೋಮಾಂಚಿತರಾಗಿ, 'ನಿಜಕ್ಕೂ ನನ್ನ ಕವಿತೆ ಸಾರ್ಥಕವಾಯಿತು, ಧನ್ಯನಾದೆ' ಎಂದು ಉದ್ಗರಿಸಿದ್ದರು.

ಕನ್ನಡ ಸಾಹಿತ್ಯದ ಮೇರು ಪ್ರತಿಭೆಗಳಾದ ಎಂ. ಗೋಪಾಲಕೃಷ್ಣ ಅಡಿಗ ಹಾಗೂ ಚಂದ್ರಶೇಖರ ಕಂಬಾರ ಅವರ ನಡುವೆ ನಡೆದ ಒಂದು ಪುಟ್ಟ ಜಗಳ ಸಾಹಿತ್ಯದ ಓದುಗರಿಗೆ ಪರಿಚಿತವಾದದ್ದೆ. ಸಮಾರಂಭವೊಂದರಲ್ಲಿ ಕಂಬಾರರು ತಮ್ಮದೊಂದು ಕವಿತೆಯನ್ನು ಹಾಡಲು ಉತ್ಸುಕರಾದಾಗ ಅಡಿಗರು 'ಕವಿತೆ ಇರುವುದು ಖಾಸಗಿಯಾಗಿ ಓದಿಕೊಳ್ಳಲು, ನೀವು ಹಾಡಬಾರದು' ಎಂದರಂತೆ. ಇದನ್ನು ಒಪ್ಪದ ಕಂಬಾರರು 'ನನ್ನ ಕವಿತೆ ಇರುವುದೇ ಹಾಡಲು' ಎಂದು ಹಾಡಿದರಂತೆ. ಪ್ರೇಕ್ಷಕರು ಕಂಬಾರರ ಗಾಯನವನ್ನು ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಿದರು ಕೂಡಾ.

ವಿಪರ್ಯಾಸವೆಂದರೆ, ಅಡಿಗರ ನವ್ಯಕವಿತೆಗಳು ಸಾಹಿತ್ಯಾಸಕ್ತರಲ್ಲಿ ಎಲ್ಲರನ್ನೂ ತಲುಪುವಲ್ಲಿ ಯಶಸ್ವಿಯಾಗಲಿಲ್ಲ. ಆದರೆ ಅವರು ಆರಂಭಿಕ ದಿನಗಳಲ್ಲಿ ಬರೆದ ಹತ್ತಾರು ಭಾವಗೀತೆಗಳು ಇಂದಿಗೂ ಜನಸಾಮಾನ್ಯರ ನಾಲಗೆಯಲ್ಲಿ ಪ್ರತಿದಿನ ಹಾಡಾಗಿ ನಲಿಯುತ್ತಿವೆ.

ವಾಚಕರ ವಾಣಿ

ವಿಮಾನ ಸಂಸ್ಥೆ ಎಚ್ಚೆತ್ತುಕೊಳ್ಳಲಿ

ವಿಮಾನದಲ್ಲಿ ಪ್ರಯಾಣಿಸುವವರು ಸಾಮಾನ್ಯವಾಗಿ ವಿದ್ಯಾವಂತ ಸುಸಂಸ್ಕೃತ ನಾಗರಿಕರು ಎಂದು ಭಾವಿಸಿದ್ದ ನನಗೆ, 'ವಿಮಾನದಲ್ಲಿ ಮಹಿಳೆಯ ಮೇಲೆ ಮೂತ್ರ ವಿಸರ್ಜನೆ' ಎಂಬ ಸುದ್ದಿಯನ್ನು ಓದಿ ಏರ್ ಇಂಡಿಯಾದ ಕಾರ್ಯವೈಖರಿಯ ಬಗ್ಗೆ ನಖಶಿಖಾಂತ ಕೋಪ ಉಂಟಾಯಿತು. ಅದರಲ್ಲೂ ಈ ಕೃತ್ಯವನ್ನು ಎಸಗಿದ ವ್ಯಕ್ತಿ ಅಮೆರಿಕದ ಪ್ರತಿಷ್ಠಿತ ಕಂಪನಿಯೊಂದರ ಉಪಾಧ್ಯಕ್ಷ ಎಂಬುದನ್ನು ತಿಳಿದ ಮೇಲಂತೂ ಆ ವ್ಯಕ್ತಿಯ ಬಗ್ಗೆ ಹೇಸಿಗೆ ಉಂಟಾಯಿತು. ಆತನಿಗೆ ಮಹಿಳೆಯರ ಬಗ್ಗೆ ಇರುವ ಕೀಳು-ಭಾವನೆಯನ್ನು ಅರಿತು ಸಂಬಂಧಪಟ್ಟ ಕಂಪನಿಯವರು ಉನ್ನತ ಸ್ಥಾನದಿಂದ ಕೆಳಗಿಳಿಸಬೇಕು.

ಈತ ಅಂತಹ ಕೃತ್ಯ ಎಸಗುತ್ತಿದ್ದರೂ ಸಹಪ್ರಯಾಣಿಕರು ಹಾಗೂ ಗಗನಸಖಿಯರು ಮೂಕಪ್ರೇಕ್ಷಕರಾಗಿದ್ದುದೇಕೆ? ಅದನ್ನು ವಿರೋಧಿಸಲಾರದಷ್ಟು ಬಲಹೀನರೇ ಅವರು ಅಥವಾ ಆತ ಆ ಸಂದರ್ಭದಲ್ಲಿ ಭಯೋತ್ಪಾದಕನ ರೀತಿ ವರ್ತಿಸಿದನೇ ಎಂಬ ಅನುಮಾನ ಮೂಡುತ್ತದೆ. ಸಂತ್ರಸ್ತ ಮಹಿಳೆಯ ಹೇಳಿಕೆಯ ಮೇರೆಗೆ, ವಿಮಾನ ನಿಲ್ದಾಣದಲ್ಲಿ ಇಳಿದ ತಕ್ಷಣ ಆತನನ್ನು ಬಂಧಿಸದೆ ತಪ್ಪಿಸಿಕೊಂಡು ಹೋಗಲು ಬಿಟ್ಟಿರುವುದು ಕೂಡ ಭದ್ರತಾ ಸಿಬ್ಬಂದಿಯ ಮತ್ತೊಂದು ವೈಫಲ್ಯವಾಗಿದೆ. ಪ್ರಕರಣ ಘಟಿಸಿದ ಒಂದೂವರೆ ತಿಂಗಳ ಬಳಿಕ ದೆಹಲಿ ಪೊಲೀಸರು ಆರೋಪಿಯನ್ನು ಬಂಧಿಸಲು ಮುಂಬೈಗೆ ತೆರಳಿರುವುದು ಹಾಸ್ಯಾಸ್ಪದ ಸಂಗತಿ. ಬಿಗಿ ಭದ್ರತೆ ಇರುವ ವಿಮಾನಗಳಲ್ಲೇ ಇಂತಹ ಅಹಿತಕರ ಘಟನೆಗಳು ಪುನರಾವರ್ತನೆಯಾಗುತ್ತಿರುವುದು ವಿಷಾದಕರ. ಏರ್ ಇಂಡಿಯಾ ಎಚ್ಚೆತ್ತುಕೊಂಡು ಜನರ ವಿಶ್ವಾಸ ಗಳಿಸುವ ರೀತಿಯಲ್ಲಿ ಕ್ರಮಗಳನ್ನು ಕೈಗೊಳ್ಳಬೇಕಿದೆ.

ಪ.ಚಂದ್ರಕುಮಾರ ಗೌನಹಳ್ಳಿ, ಹಿರಿಯೂರು

ಡೋರ್ ಡೆಲಿವರಿ!

ಅಮೆಜಾನ್ ಕಂಪನಿಯು
ತನ್ನ ವಸ್ತುಗಳನ್ನು
ಸಿಬ್ಬಂದಿ ಮೂಲಕ
ಗ್ರಾಹಕರ ಮನೆಗೇ
ಕಳಿಸುತ್ತಿದೆ,
ಈಗ ನೋಡಿ ಗ್ರಹಚಾರ,
ಸಿಬ್ಬಂದಿಯನ್ನೇ
'ಮನೆಗೆ' ಕಳಿಸುತ್ತಿದೆ!

(18 ಸಾವಿರ ಸಿಬ್ಬಂದಿಯನ್ನು ಕೆಲಸದಿಂದ ತೆಗೆಯುವ ಅಮೆಜಾನ್ ಕಂಪನಿಯ ನಿರ್ಧಾರಕ್ಕೆ ಪ್ರತಿಕ್ರಿಯೆ)

ನಗರ ಗುರುದೇವ್ ಭಂಡಾರ್ಕರ್
ಹೊಸನಗರ

ಜನೋಪಕಾರಿ ಪ್ರಾಣಿಗಳ ಹೆಸರಿನ ದುರ್ಬಳಕೆ ಸಲ್ಲ

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ 'ನಾಯಿಮರಿ' ಎಂಬ ಪದ ಬಳಸಿದ್ದಾರೆ ಎನ್ನಲಾಗಿದ್ದು, ಇದನ್ನು ಬಿಜೆಪಿಯ ಅನೇಕ ನಾಯಕರು ಖಂಡಿಸಿದ್ದಾರೆ. ಬಿಜೆಪಿ ನಾಯಕರು ಸಹ ಈ ಹಿಂದೆ ಇಂತಹ ಕೀಳು ಅಭಿರುಚಿಯ ಭಾಷೆಯನ್ನು ಬಳಸಿರುವುದರಿಂದ, ಈಗ ಮಾಡಿದ್ದುಣ್ಣೋ ಮಹರಾಯ ಎಂಬ ಪರಿಸ್ಥಿತಿ ತಲೆದೋರಿದೆ. ಜನಸ್ನೇಹಿಯಷ್ಟೇ ಅಲ್ಲ ಜನೋಪಕಾರಿಯೂ ಆಗಿರುವ ಪ್ರಾಣಿಗಳ ಹೆಸರನ್ನು ಯಾವುದೇ ನಾಯಕರು ರಾಜಕೀಯಕ್ಕೆ ಬಳಸಿಕೊಳ್ಳುವುದು ತಪ್ಪು.

ಕೆ.ವಿ.ವಾಸು, ಮೈಸೂರು

ಬ್ಯಾಂಕುಗಳ ಲಾಭ- ಠೇವಣಿದಾರರಿಗೆ ನಷ್ಟ

ಕೇಂದ್ರ ಸರ್ಕಾರ ಕೈಗೊಂಡ ಕಠಿಣ ಕ್ರಮಗಳಿಂದ ರಾಷ್ಟ್ರೀಕೃತ ಬ್ಯಾಂಕುಗಳು ಈಗ ₹ 1 ಲಕ್ಷ ಕೋಟಿ ಲಾಭ ಮಾಡುವ ನಿರೀಕ್ಷೆ ಇದೆ ಎಂದು ವರದಿಯಾಗಿದೆ (ಪ್ರ.ವಾ., ಜ. 5). 2015- 16ರಿಂದ 2019- 20ರವರೆಗಿನ ಅವಧಿಯಲ್ಲಿ ಈ ಬ್ಯಾಂಕುಗಳು ₹ 2.07 ಲಕ್ಷ ಕೋಟಿ ನಷ್ಟ ಅನುಭವಿಸಿದವು, ಹಿಂದಿನ ಐದು ಹಣಕಾಸು ವರ್ಷಗಳಲ್ಲಿ ಕೇಂದ್ರವು ರಾಷ್ಟ್ರೀಕೃತ ಬ್ಯಾಂಕುಗಳಿಗೆ ₹ 3.10 ಲಕ್ಷ ಕೋಟಿ ಬಂಡವಾಳ ನೆರವು ನೀಡಿದೆ ಎಂದೂ ವರದಿಯಲ್ಲಿದೆ. ಸರ್ಕಾರ ನೀಡಿದ ಬಂಡವಾಳದ ನೆರವಿನಲ್ಲಿ ಬ್ಯಾಂಕುಗಳ ಒಟ್ಟಾರೆ ನಷ್ಟವಾದ ₹ 2.07 ಲಕ್ಷ ಕೋಟಿಯನ್ನು ಕಳೆದರೆ ಉಳಿಯುವುದು ₹ 1.03 ಲಕ್ಷ ಕೋಟಿ.

ಈಗ ಬ್ಯಾಂಕುಗಳು ಗಳಿಸಲಿರುವ ₹ 1 ಲಕ್ಷ ಕೋಟಿ ಲಾಭವು ಸರ್ಕಾರದ ನೆರವಿನಲ್ಲಿ ನಷ್ಟ ಕಳೆದು ಉಳಿದ ಮೊತ್ತವೇ ಅಲ್ಲವೇ? ಇದರಲ್ಲಿ ಬ್ಯಾಂಕುಗಳ ಹೆಗ್ಗಳಿಕೆ ಏನು ಎನ್ನುವುದು ಅರ್ಥವಾಗದ ಸಂಗತಿ. ಮತ್ತೊಂದು ವಿಚಾರವನ್ನು ಈ ವರದಿ ಮರೆಮಾಚುತ್ತಿದೆ. ಆರ್‌ಬಿಐ ಇತ್ತೀಚೆಗೆ ರೆಪೊ ದರಗಳನ್ನು ಹೆಚ್ಚಿಸಿದ ಕಾರಣ ಬ್ಯಾಂಕುಗಳು ತಾವು ನೀಡುವ ಸಾಲದ ಬಡ್ಡಿ ದರಗಳನ್ನು ಹೆಚ್ಚಿಸಿವೆ. ಆದರೆ ಅವು ತಾವು ಹೊಂದಿರುವ ನಿಶ್ಚಿತ ಠೇವಣಿಯ ಮೇಲಿನ ಬಡ್ಡಿ ದರವನ್ನು ಸಾಲದ ಬಡ್ಡಿ ದರಕ್ಕೆ ಅನುಗುಣವಾಗಿ ಅನುಪಾತೀಯವಾಗಿ ಹೆಚ್ಚಿಸಿಲ್ಲ ಎನ್ನುವುದನ್ನು ಗಮನಿಸಬೇಕು. ಸಾಮಾನ್ಯವಾಗಿ ಸಾಲದ ಬಡ್ಡಿ ದರ ಮತ್ತು ಠೇವಣಿಯ ಬಡ್ಡಿ ದರದ ನಡುವೆ ಶೇ 1- 2ರಷ್ಟು ವ್ಯತ್ಯಾಸವಿರಬೇಕು. ಠೇವಣಿದಾರರಿಗೆ ನ್ಯಾಯಯುತವಾಗಿ ನೀಡಬೇಕಾದ ಬಡ್ಡಿ ದರ ಹೆಚ್ಚಳದ ಪ್ರಯೋಜನವನ್ನು ಬ್ಯಾಂಕುಗಳು ನೀಡದೆ, ಲಾಭ ಗಳಿಸುತ್ತಿವೆ ಎಂದು ಹೇಳುವುದು ಠೇವಣಿದಾರರಿಗೆ ಮಾಡುವ ವಂಚನೆಯಲ್ಲವೇ?

ಟಿ.ಸುರೇಂದ್ರ ರಾವ್, ಬೆಂಗಳೂರು

ಅಂತ್ಯಸಂಸ್ಕಾರ: ವೈಜ್ಞಾನಿಕ ಚಿಂತನೆ ಬೇಕು

'ದೇಹ ಚಿಗುರಲಿ ಎಲೆ ಎಲೆಯಲ್ಲಿ!' ಎಂಬ ಸದಾಶಿವ್ ಸೊರಟೂರು ಅವರ ಲೇಖನ (ಸಂಗತ, ಜ. 6) ಅರ್ಥವತ್ತಾಗಿದೆ. ಆದರೆ 'ನ್ಯಾಚುರಲ್ ಆರ್ಗ್ಯಾನಿಕ್ ರಿಡಕ್ಷನ್' ಪ್ರಕ್ರಿಯೆಯನ್ನು ಅಮೆರಿಕದ ನ್ಯೂಯಾರ್ಕ್ ಆಡಳಿತವು ಈಚೆಗೆ ಕಾನೂನುಬದ್ಧಗೊಳಿಸಿದಂತೆ ನಮ್ಮ ದೇಶದಲ್ಲಿ ಮಾಡಲಾದೀತೆ? ಮತ್ತು ಅಂತಹ ತಂತ್ರಜ್ಞಾನ ಭಾರತಕ್ಕೆ ಎಂದು ಬಂದೀತೊ ಗೊತ್ತಿಲ್ಲ! ಆದ್ದರಿಂದ ಅಲ್ಲಿಯವರೆಗೆ, ಅಪರಕರ್ಮಗಳಲ್ಲಿ ನಂಬಿಕೆಯಿಲ್ಲದ ವಿಚಾರವಂತರು ತಮ್ಮ ದೇಹವನ್ನು ಸಾವಿನ ನಂತರ ಆಸ್ಪತ್ರೆಗಳಿಗೆ ಒಪ್ಪಿಸಿಬಿಡುವಂತಹ ಮರಣಪತ್ರವನ್ನು (ಉಯಿಲನ್ನು) ಬರೆದು ಆಸ್ಪತ್ರೆಗಳಲ್ಲಿ ನೋಂದಾಯಿಸುವುದು ಸೂಕ್ತ ಎನಿಸುತ್ತದೆ. ಅದರಿಂದ ವೈದ್ಯಕೀಯ ಶಿಕ್ಷಣ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ದೇಹದ ಅಂಗಾಂಗಗಳ ಅಧ್ಯಯನ ಸುಲಭಸಾಧ್ಯವಾದೀತು.

ಈಗಾಗಲೇ ಕೆಲವರು ಈ ರೀತಿ ಮಾಡಿ ಮರಣಾನಂತರವೂ ತಮ್ಮ ದೇಹವನ್ನು ಸದುಪಯೋಗಗೊಳಿಸಿದ್ದಾರೆ. ಆದರೆ ಅರ್ಥಹೀನ 'ಸಂಸ್ಕಾರ'ವೆಂಬ ಬಲಿಷ್ಠ ಮೌಢ್ಯದ ಗಾಢಾಲಿಂಗನದಲ್ಲಿ ಸಿಲುಕಿ ನರಳುತ್ತಿರುವ, ವಂಚನೆಗೆ ಒಳಗಾಗಿರುವ ಮಾನವ ಜನಾಂಗವು ಈ ರೀತಿಯ ವೈಜ್ಞಾನಿಕ ಚಿಂತನೆಯನ್ನು ರೂಢಿಸಿಕೊಳ್ಳುತ್ತದೆಂಬುದು ಗಗನ ಕುಸುಮವಷ್ಟೆ!

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಿನಿಮಾ ಸಂಸ್ಕೃತಿ... ಅಸ್ಮಿತೆಯ ಛಾಪು

ಸಿನಿಮಾ ಕ್ಷೇತ್ರವನ್ನು ಮನೋರಂಜನೆಯ ದೃಷ್ಟಿಯಿಂದ ಅಷ್ಟೇ ನೋಡದೆ, ಅದನ್ನು ಒಂದು ಸಾಂಸ್ಕೃತಿಕ ವಿದ್ಯಮಾನವಾಗಿ 'ಪ್ರಜಾವಾಣಿ' ಮೊದಲಿನಿಂದಲೂ ಪರಿಭಾವಿಸುತ್ತಾ ಬಂದಿದೆ. ಭಾಷಾತೀತವಾಗಿ ಚಲನಚಿತ್ರರಂಗದ ಆಗುಹೋಗುಗಳನ್ನು ದಾಖಲಿಸುತ್ತಾ, ನಿಷ್ಪಕ್ಷಪಾತವಾದ ವಿಮರ್ಶೆ–ವಿಶ್ಲೇಷಣೆಗಳಿಂದ ಘನತೆಯನ್ನು ಕಾಪಾಡಿಕೊಂಡು ಬಂದಿದೆ

ಉತ್ತರ ಕರ್ನಾಟಕದ ನೆರೆ ಸಂತ್ರಸ್ತರಿಗೆ ಪರಿಹಾರ ಸಂಗ್ರಹಿಸಲು 1961ರಲ್ಲಿ ಪ್ರಜಾವಾಣಿ ಮುಂದಾದಾಗ ರಾಜ್‌ಕುಮಾರ್ ನೇತೃತ್ವದಲ್ಲಿ ಚಿತ್ರರಂಗದ ಅನೇಕರು ಜತೆಗೂಡಿದ್ದರು. ಮದ್ರಾಸ್‌ನಲ್ಲಿ ಇದ್ದ ಸಿನಿಮಾ ಚಟುವಟಿಕೆ ಬೆಂಗಳೂರಿಗೆ ಸ್ಥಳಾಂತರಗೊಳ್ಳಲು ಇದೂ ಕಾರಣವಾಯಿತು

1985ರ ಸಿನಿಮಾ ರಂಜನೆಯ ಪುಟ

ಭಾನುವಾರದ ಪುರವಣಿಯ ಹಳೆಯ ಸಿನಿಮಾ ಪುಟ

1985ರಲ್ಲಿ ಪ್ರಕಟವಾದ ಸಿನಿಮಾ ವಿಮರ್ಶೆ

ಚಿತ್ರಗಳು: ಪ್ರಜಾವಾಣಿ ಆರ್ಕೈವ್ಸ್

• ವಿಶಾಖ ಎನ್.

ಚಲನಚಿತ್ರೋದ್ಯಮದ ನಾಡಿಮಿಡಿತಗಳನ್ನು ಸೂಕ್ಷ್ಮವಾಗಿ ಕೇಳಿಸುತ್ತಾ, ಅಲ್ಲಿನ ಪಲ್ಲಟಗಳನ್ನು ಹೊಣೆಗಾರಿಕೆಯಿಂದ ದಾಟಿಸುತ್ತಾ ಬಂದಿರುವ 'ಪ್ರಜಾವಾಣಿ', ಅದನ್ನು ಯಃಕಶ್ಚಿತ್ ಮನೋರಂಜನೆಯ ಮಾಧ್ಯಮ ಎಂದು ಯಾವತ್ತೂ ಭಾವಿಸಿಯೇ ಇಲ್ಲ. ಬದಲಾಗಿ, ಸಾಂಸ್ಕೃತಿಕ ದೃಷ್ಟಿಯಲ್ಲಿಯೇ ಸಿನಿಮಾಗಳನ್ನು ಬಗೆದು ನೋಡುವಂತಹ ಗಾಂಭೀರ್ಯವನ್ನು ಕಾಪಾಡಿಕೊಂಡು ಬಂದಿದೆ.

ಪತ್ರಿಕೆಯು ಎಪ್ಪತ್ತೈದು ವರ್ಷಗಳ ತನ್ನ ಪಯಣದಲ್ಲಿ ಚಿತ್ರರಂಗದ ಆಗು-ಹೋಗುಗಳನ್ನು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ದಾಖಲಿಸುತ್ತಾ ಬಂದಿರುವುದಕ್ಕೆ ಅಸಂಖ್ಯ ಉದಾಹರಣೆಗಳು ಸಿಗುತ್ತವೆ. ಉದ್ಯಮವಾಗಿ ಸಿನಿಮಾ ಬೆಳೆದ ಬಗೆ, ಚಳವಳಿಗಳಲ್ಲಿ ಚಿತ್ರ-ರಂಗದವರ ಪಾತ್ರ, ಮದ್ರಾಸ್‌ನಲ್ಲಿ ಕನ್ನಡ ಚಿತ್ರರಂಗ ನೆಲೆಗೊಂಡಿದ್ದಾಗ ನಡೆಯುತ್ತಿದ್ದ ಚಟುವಟಿಕೆಗಳ ದಾಖಲಾತಿ, ಸಿನಿಮಾದ ದಿಗ್ಗಜರಿಗೆ ಸಮ್ಮಾನ–ಗೌರವಗಳು ಪ್ರಾಪ್ತಿಯಾದ ಸಂದರ್ಭಗಳ ಬರಹಗಳು, ಅಗಲಿದವರಿಗೆ ಅಕ್ಷರ ನಮನ ಸಲ್ಲಿಕೆ... ಈ ಎಲ್ಲ ವಿಷಯಗಳಲ್ಲೂ ಪತ್ರಿಕೆಯು ಜವಾಬ್ದಾರಿಯುತವಾದ ಹಾಗೂ ಗಂಭೀರವಾದ ಧೋರಣೆಯನ್ನು ರೂಢಿಸಿಕೊಂಡು ಬಂದಿದೆ. ಯಾವುದೇ ಮುಲಾಜಿಗೆ ಒಳಗಾಗದ ಚಲನಚಿತ್ರ ವಿಮರ್ಶೆ ಹಾಗೂ ತಲಸ್ಪರ್ಶಿ ವಿಶ್ಲೇಷಣೆಗಳು ಪತ್ರಿಕೆಯ ಈ ನಿಲುವನ್ನು ಕಾಲಾಂತರದಲ್ಲಿ ಇನ್ನಷ್ಟು ಗಟ್ಟಿಗೊಳಿಸಿದೆ.



1982ರ ಪ್ರಕಟಣೆ

'ಪ್ರಜಾವಾಣಿ' ಮೊದಲಿನಿಂದಲೂ ಚಲನಚಿತ್ರರಂಗದ ಸುದ್ದಿಯನ್ನು ಭಾಷಾತೀತವಾಗಿ ದಾಖಲಿಸುತ್ತಾ ಬಂದಿದೆ. ಹಿಂದಿ ಚಿತ್ರರಂಗವಷ್ಟೆ ಅಲ್ಲದೆ, ಅಂತರರಾಷ್ಟ್ರೀಯ ಸಿನಿಮೋತ್ಸವಗಳಿಗೆ ಸಂಬಂಧಿಸಿದ ಸುದ್ದಿಗಳಿಗೂ 1950ರ ದಶಕದಿಂದಲೇ ಆದ್ಯತೆ ನೀಡಿದೆ.

ಬೋಲ್ಡ್ ಅಂಡ್ ಬ್ಯೂಟಿಫುಲ್

1985ರಿಂದಲೇ ನಾಯಕಿಯರ 'ಗ್ಲಾಮರಸ್' ಹಾಗೂ 'ಬೋಲ್ಡ್' ಸಿನಿಮಾ ಪೋಸ್ಟರ್‌ಗಳನ್ನು ಪುರವಣಿ ಪ್ರಕಟಿಸಿತು. ಆ ವರ್ಷದ ಸಂಚಿಕೆಯೊಂದರ ಒಂದೇ ಪುಟದಲ್ಲಿ 'ಎರಡು ದಂಡೆಯ ಮೇಲೆ' ಸಿನಿಮಾದ ಜಯಮಾಲಿನಿ ಹಾಗೂ 'ಮನ ಗೆದ್ದ ಮಗ' ಸಿನಿಮಾದ ಅನುರಾಧಾ ಫೋಟೊಗಳು ಪ್ರಕಟವಾಗಿದ್ದವು. ಈ ಇಬ್ಬರೂ ನಟಿಯರು ತಮ್ಮ ಕ್ಯಾಬರೆ ನೃತ್ಯದ ಮೂಲಕವೇ ಆಗ ಚಿತ್ರ ರಸಿಕರನ್ನು ಹಿಡಿದಿಟ್ಟಿದ್ದವರು.

ಬಾಲಿವುಡ್ ನಟಿ ಮಂದಾಕಿನಿ. 'ಸೌಂದರ್ಯ ಪ್ರದರ್ಶನ ಅಶ್ಲೀಲವಲ್ಲ' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದ ವಿಸ್ತೃತವಾದ ಸಂದರ್ಶನ ಆಗ ಮುದ್ರಿತವಾಗಿತ್ತು. ಅದನ್ನು ಮುಂಬೈನ ವರದಿಗಾರರು ಬರೆದಿದ್ದರು.

1954ರಲ್ಲಿ ಭಾರತದ ಸಿನಿಮಾರಂಗ ದವರ ನಿಯೋಗವು ಸೋವಿಯತ್ ರಷ್ಯಾಗೆ ಭೇಟಿ ನೀಡಿತ್ತು. ವಿಜಯ್ ಭಟ್, ಸಲೀಲ್ ಚೌಧರಿ, ರಾಜ್‌ಕಪೂರ್, ನರ್ಗೀಸ್, ಬಿಮಲ್‌ರಾಯ್, ಬಲರಾಜ್ ಸಹಾನಿ, ನಿರೂಪಾರಾಯ್, ಬಲರಾಜ್ ಸಹಾನಿ, ಹೃಷಿಕೇಶ್ ಮುಖರ್ಜಿ ತರಹದ ಘಟಾನುಘಟಿಗಳಿದ್ದ ನಿಯೋಗ ಅದು. ಅಲ್ಲಿಗೆ ಭೇಟಿ ನೀಡಿದ ಎಲ್ಲರ ಸಂಕ್ಷಿಪ್ತ ಅನುಭವವನ್ನು ಒಂದು ಪ್ಯಾಕೇಜ್ ರೂಪದಲ್ಲಿ 'ಪ್ರಜಾವಾಣಿ' ದಾಖಲಿಸಿತ್ತು. ದೇಶದ ವಿವಿಧ ನಗರಗಳಲ್ಲಿ ಚಿತ್ರೋತ್ಸವ, ಸಿನಿಮೋತ್ಸವಗಳು ಪ್ರಾರಂಭವಾದಾಗಲೂ ಪತ್ರಿಕೆ ಅದನ್ನು ಮುಖ್ಯವಾದ ವಿದ್ಯಮಾನವೆಂದೇ ಪರಿಗಣಿಸಿ, ವರದಿ-ಗಾರರನ್ನು ಕಳುಹಿಸಿ, ಬರೆಯಿಸಿ, ಪ್ರಕಟಿಸಿತು. ಕೆಲವು ಪ್ರಮುಖ ಸುದ್ದಿಗಳಂತೂ ಮುಖಪುಟದಲ್ಲಿಯೇ ಸ್ಥಳಾವಕಾಶ ಪಡೆದಿದ್ದವು. ಗೋವಾದಲ್ಲಿ ಭಾರತೀಯ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವ ಶುರುವಾದಾಗ, ಅದು ನಡೆಯುವ ಹತ್ತೂ ದಿನ ವರದಿಗಾರರನ್ನು ಕಳುಹಿಸಿದ ಉದಾಹರಣೆಗಳೂ ಇವೆ. ಸಿನಿಮಾ–ಸಂಸ್ಕೃತಿ ಹಾಗೂ ವಿಶ್ವ ಸಿನಿಮಾಗಳ ಕುರಿತ ಬರಹಗಳನ್ನು ಸ್ವಾನುಭವದಿಂದ ಬರೆಯುವ ವರದಿಗಾರಿಕೆಗೆ ಅದು ಸದವಕಾಶವೇ ಆಗಿತ್ತು.

ಸಿನಿಮಾಗಳಲ್ಲಿ ಮಹಿಳೆಯರ ಅಭಿನಯ ಹಾಗೂ ಅವರನ್ನು ಈ ಮಾಧ್ಯಮದ ಕಥಾವಸ್ತು ಒಳಗೊಳ್ಳುತ್ತಿರುವ ಬಗೆ ಎರಡೂ ವಿಷಯಗಳನ್ನು ಆಧರಿಸಿದ, ಚಿತ್ರೋದ್ಯಮದ ಗಣ್ಯರ ಅಭಿಪ್ರಾಯ ಸಂಗ್ರಹದ ಪ್ಯಾಕೇಜ್ ಕೂಡ ಪ್ರಕಟವಾಗಿತ್ತು. 'ಮಹಿಳೆ–ಪ್ರದರ್ಶನ: ಪ್ರಪಂಚದ ಪ್ರಮುಖರ ದೃಷ್ಟಿ' ಎಂಬ ಶೀರ್ಷಿಕೆಯ ಆ ಪ್ಯಾಕೇಜ್‌ನಲ್ಲಿ ಗುಲ್ಶನ್ ನಂದಾ, ಅನಿಲ್ ಕಪೂರ್, ರೋಹಿಣಿ ಹಟ್ಟಂಗಡಿ, ಶರ್ಮಿಳಾ ಟ್ಯಾಗೋರ್, ವಿಜಯ್ ತೆಂಡೂಲ್ಕರ್, ವಿಮಲಾ ಪಾಟೀಲ್, ಶಮ್ಮಿ ಕಪೂರ್, ಸ್ಮಿತಾ ಪಾಟೀಲ್, ಉತ್ಪಲ್ ದತ್, ಜಾಕಿ ಶ್ರಾಫ್ ಮೊದಲಾದವರ ಅಭಿಪ್ರಾಯಗಳಿದ್ದವು.

ಭಾರತೀಯ ಚಿತ್ರರಂಗದಲ್ಲೇ ಕರ್ನಾಟಕದ ಹೊಸ ಅಲೆಯ ಸಿನಿಮಾಗಳು ಸದ್ದು ಮಾಡತೊಡಗಿದ್ದು 1970ರ ದಶಕದ ಕೊನೆಯಲ್ಲಿ. 'ಸಂಸ್ಕಾರ', 'ಘಟಶ್ರಾದ್ಧ' ತರಹದ ಸಿನಿಮಾಗಳು ಆ ಸಂದರ್ಭದಲ್ಲಿ ಗಳಿಸಿದ್ದ ಜನಮೆಚ್ಚುಗೆ ಉಲ್ಲೇಖನೀಯ. ಇಂತಹ ಕಾಲ-ಘಟ್ಟದಲ್ಲಿನ ಪಲ್ಲಟಗಳ ಸುದ್ದಿಗಳಿಗೂ ಪತ್ರಿಕೆಯಲ್ಲಿ ಮಹತ್ವ ದೊರೆತಿದೆ. ಗಿರೀಶ ಕಾರ್ನಾಡರ 'ಆಡಾಡತಾ ಆಯುಷ್ಯ' ಆತ್ಮಕಥೆಯ ಕೆಲವು ಅಧ್ಯಾಯಗಳು 'ಸಾಪ್ತಾಹಿಕ ಪುರವಣಿ'ಯಲ್ಲಿ ಪ್ರಕಟವಾಗಿದ್ದವು. ಅವುಗಳಲ್ಲಿ 'ಸಂಸ್ಕಾರ' ಸಿನಿಮಾ ಆದ ಬಗೆಯ ಅಧ್ಯಾಯ ಕೂಡ ಮುಖ್ಯವಾದುದು.

ಈ ಸಹಸ್ರಮಾನದ ಪಲ್ಲಟ

ಹೊಸ ಸಹಸ್ರಮಾನದಲ್ಲಿ ಸಹ 'ಪ್ರಜಾವಾಣಿ' ಸಿನಿಮಾ ಚಟುವಟಿಕೆ, ಗಾಸಿಪ್, ಸುದ್ದಿ ಎಲ್ಲಕ್ಕೂ ಸ್ಥಳಾವಕಾಶವನ್ನು ವಿಪುಲವಾಗಿಯೇ ಒದಗಿಸಿತು. ಆ ಕಾಲಘಟ್ಟದಲ್ಲಿ ಕಿರುತೆರೆ ಧಾರಾವಾಹಿಗಳು ಜನಪ್ರಿಯವಾಗತೊಡಗಿದ್ದೇ, ಸಿನಿಮಾ ರಂಜನೆಯ ಒಂದು ಪುಟವನ್ನು ಕಿರುತೆರೆಗೆ ಸಂಬಂಧಿಸಿದ ಬರಹ-ಗಳಿಗಾಗಿಯೇ ಮೀಸಲಿಟ್ಟಿತು. ಅದರಲ್ಲಿ ಕಿರುತೆರೆಯ ನಟ-ನಟಿಯರಲ್ಲದೆ, ನಿರ್ದೇಶಕರ ಸಂದರ್ಶನಗಳೂ ಪ್ರಕಟಗೊಂಡವು. ಛಾಪು ಮೂಡಿಸುತ್ತಿದ್ದ ಧಾರಾವಾಹಿಗಳ ಕಟ್ಟುವಿಕೆಯ ಮೇಲೆ ಬೆಳಕು ಚೆಲ್ಲುವ ಇಂತಹ ಪರಿಕಲ್ಪನೆ ದಿನಪತ್ರಿಕೆಗಳ ಮಟ್ಟಿಗೆ 'ಪ್ರಜಾವಾಣಿ'ಯದ್ದೇ ಮೊದಲ ಆಲೋಚನೆ.

ಸಿನಿಮಾಗೆಂದೇ ಪ್ರತ್ಯೇಕ ಪುರವಣಿ ಆರಂಭಗೊಂಡರೂ 'ಪ್ರಜಾವಾಣಿ'ಯು ತನ್ನ ನಿತ್ಯದ ಪುಟಗಳಲ್ಲಿ ಹಾಗೂ 'ಸಾಪ್ತಾಹಿಕ ಪುರವಣಿ'ಯಲ್ಲಿ ಚಿತ್ರೋದ್ಯಮದ ಬಗೆಗಿನ ವಿಶ್ಲೇಷಣೆ, ಗಾಸಿಪ್‌ಗಳಿಗೆ ಆಗೀಗ ಸ್ಥಳಾವಕಾಶ ಕಲ್ಪಿಸುತ್ತಲೇ ಬಂದಿದೆ. 'ಸಿನಿಮಾ ರಂಜನೆ'ಯು ಹೊಸ ಸಹಸ್ರಮಾನದಲ್ಲಿ 'ಸಿನಿಮಾ ಕಿರುತೆರೆ ರಂಜನೆ' ಎಂದು ಮಾಸ್ಟ್‌ಹೆಡ್ ಬದಲಿಸಿಕೊಂಡಿದ್ದು, ಮನೋರಂಜನೆಯ ಪಲ್ಲಟಗಳಿಗೆ ಪತ್ರಿಕೆ ಕೊಡುತ್ತಾ ಬಂದಿರುವ ಆದ್ಯತೆಗೆ ಹಿಡಿದ ಕನ್ನಡಿ.

'ಫಿಲ್ಮ್ ಡೈರಿ', 'ಗಾಳಿಮಾತು', 'ಕನಸು ಕನ್ನಡಿ', ಬಾಲಿವುಡ್ ಸಾರವನ್ನು ಒಳಗೊಂಡಂತಹ 'ಥಳುಕು ಬಳುಕು' ಪತ್ರಿಕೆಯಲ್ಲಿ ಜನಮೆಚ್ಚುಗೆ ಪಡೆದಂತಹ ಅಂಕಣಗಳು. 'ಥಳುಕು ಬಳುಕು' ಸ್ಥಿರಶೀರ್ಷಿ-ಕೆಯ ಬರಹಗಳು 'ಸಾಪ್ತಾಹಿಕ ಪುರವಣಿ'ಯ ಕೊನೆಯ ಪುಟದಲ್ಲಿ ಹಲವು ಸಂಚಿಕೆಗಳಲ್ಲಿ ಪ್ರತಿ ಭಾನುವಾರ ಪ್ರಕಟವಾದವು. ಬೆಂಗಳೂರು, ಹುಬ್ಬಳ್ಳಿ–ಧಾರವಾಡ ಹಾಗೂ ಮೈಸೂರು ನಗರಗಳನ್ನು ಕೇಂದ್ರೀಕರಿಸಿಕೊಂಡ 'ಮೆಟ್ರೊ' ಪುರವಣಿಗಳೂ ಪತ್ರಿಕೆಯ ಹೊಸ ಸಹಸ್ರಮಾನದ ಕೊಡುಗೆಗಳು. ಅವುಗಳಲ್ಲಿಯೂ ಸಿನಿಮಾ ಚಟುವಟಿಕೆಗಳ ಹಾಗೂ ಚಿತ್ರರಂಗ ದವರನ್ನು ಒಳಗೊಂಡಂತಹ ಲವಲವಿಕೆಯ ಬರವಣಿಗೆಗಳು ಬೆಳಕು ಕಂಡವು.

1985ರಲ್ಲಿ ಸಿನಿಮಾ ರಂಜನೆ ಪುರವಣಿ ಪ್ರಾರಂಭವಾದ ನಂತರ 'ನಾವು ನೋಡಿದ ಚಿತ್ರ' ಎನ್ನುವ ಸ್ಥಿರ ಶೀರ್ಷಿಕೆಯಡಿ ಸಿನಿಮಾ ವಿಮರ್ಶೆಗಳನ್ನು ಪತ್ರಿಕೆ ಪ್ರಕಟಿಸುತ್ತಾ ಬಂದಿದೆ. ಈಗಲೂ ಇದೇ ಶೀರ್ಷಿಕೆಯಲ್ಲಿ ಚಲನಚಿತ್ರ ವಿಮರ್ಶೆಗಳು ಮೂಡಿಬರುತ್ತಿವೆ. 'ಪ್ರಜಾವಾಣಿ'ಯ ಸಿನಿಮಾ ವಿಮರ್ಶೆಗಳು ಅಕಡೆಮಿಕ್ ವಲಯದಲ್ಲಿಯೂ ಅನೇಕರ ಮೆಚ್ಚುಗೆಗೆ ಕಾರಣವಾಗಲು ಅವುಗಳ ನಿಷ್ಪಕ್ಷಪಾತ ಧೋರಣೆಯೇ ಕಾರಣ.

ಪ್ರವಾಹ ಸಂತ್ರಸ್ತರಿಗೆ ನಿಧಿ ಸಂಗ್ರಹಿಸುವುದು, ಗೋಕಾಕ್ ಚಳವಳಿ, ಕಾವೇರಿ ಹೋರಾಟ, ಹೊಗೇನಕಲ್ ವಿವಾದದ ಸಂದರ್ಭದ ಹೋರಾಟ, ಡಬ್ಬಿಂಗ್ ಕುರಿತ ಅಲೆಗಳ ಏರಿಳಿತ...ಇವೆಲ್ಲ ಸಾಂಸ್ಕೃತಿಕ ಸಂದರ್ಭಗಳಲ್ಲಿ ಸಿನಿಮಾ ರಂಗದವರ ಕದಲಿಕೆಗಳಿಗೆ ಪತ್ರಿಕೆಯು ಕನ್ನಡಿಯಾಗಿದೆ. 2006ರ ನಂತರ 'ಸಾಪ್ತಾಹಿಕ ಪುರವಣಿ'ಯ ಕೆಲವು ಸಂಚಿಕೆಗಳಲ್ಲಿ ಸಿನಿಮಾ ಸಮಕಾಲೀನ ವಿಷಯಗಳನ್ನು ಒಳಗೊಂಡ ಮಂಥನ–ವಿಶ್ಲೇಷಣೆ ಸ್ವರೂಪದ ಗಟ್ಟಿ ಬರಹಗಳು ಪ್ರಕಟಗೊಂಡವು.

ಡಿಜಿಟಲ್ ವೇದಿಕೆಗೆ ಪತ್ರಿಕೆ ಪ್ರವೇಶಿಸಿದ ಮೇಲೆ prajavani.net ವೆಬ್‌ಸೈಟ್‌ನಲ್ಲಿ ಸಿನಿಮಾ ಸುದ್ದಿಗಳು ಪುಂಖಾನುಪುಂಖವಾಗಿ ಪ್ರಕಟಗೊಳ್ಳುತ್ತಿವೆ. ವಿಡಿಯೊ ಸಾಧ್ಯತೆಗೂ ಸಂಸ್ಥೆ ತೆರೆದುಕೊಂಡಿದ್ದು, ಪತ್ರಿಕಾ ಬರಹಗಳೊಟ್ಟಿಗೆ ಕ್ಯೂಆರ್ ಕೋಡ್ ಮೂಲಕ ಪ್ರಮುಖ ಸಿನಿಮಾ ಸುದ್ದಿಗಳ ವಿಡಿಯೊ ತುಣುಕುಗಳನ್ನೂ ಒದಗಿಸುತ್ತಿದೆ.

ಚಿತ್ರೋದ್ಯಮದ ಪರವಾದ ಪತ್ರಿಕೆ ಎನಿಸಿಕೊಳ್ಳದೆ, ಅದನ್ನು ಎಚ್ಚರಿಸುವ ಹಾಗೂ ವಿಶ್ವಾಸಾರ್ಹತೆಯ ಅಸ್ಮಿತೆಯ ಛಾಪನ್ನು 'ಪ್ರಜಾವಾಣಿ' ಕಾಲದುದ್ದಕ್ಕೂ ಮೂಡಿಸಿದೆ.

ಒಂದು ಪುಟದಿಂದ ಹಲವು ಪುಟಗಳಿಗೆ...

ಸಿನಿಮಾ ಸುದ್ದಿಗೆ 'ಪ್ರಜಾವಾಣಿ'ಯ 'ಸಾಪ್ತಾಹಿಕ ಪುರವಣಿ'ಯ ಪುಟವೊಂದರಲ್ಲಿ ಸ್ಥಳಾವಕಾಶ ಕಲ್ಪಿಸಲಾಗಿತ್ತು. 'ಸಾಪ್ತಾಹಿಕ ಪುರವಣಿ' ಅಧಿಕೃತವಾಗಿ ಆರಂಭವಾದದ್ದು 1956ರಲ್ಲಿ. ಈ ಪುರವಣಿ ಪ್ರಾರಂಭವಾಗುವ ಮುಂಚೆ ದಿನಪತ್ರಿಕೆಯ ಪ್ರತಿ ಭಾನುವಾರದ ಸಂಚಿಕೆಯಲ್ಲಿಯೇ ಸಿನಿಮಾ ಸುದ್ದಿಗಳು ಪ್ರಕಟವಾಗಿದ್ದವು.

1951ರ ಮಾರ್ಚ್ 25ರ ಸಂಚಿಕೆಯ ನಾಲ್ಕನೇ ಪುಟದಲ್ಲಿ ನಟ, ನಿರ್ದೇಶಕ ಹಾಗೂ ಕಲಾಪ್ರೇಮಿ ಕಿಶೋರ್ ಸಾಹು ಅವರನ್ನು ಕುರಿತ ವ್ಯಕ್ತಿಚಿತ್ರವೊಂದು ಪ್ರಕಟವಾಗಿತ್ತು. ದೇವಿಕಾರಾಣಿ ಅವರ ಸಮಕಾಲೀನರಾದ ಕಿಶೋರ್, ನವತಾರೆಯರನ್ನು ಹುಟ್ಟುಹಾಕಿದ ಸಿನಿಮಾ ನಿರ್ಮಾತೃ. 22 ಸಿನಿಮಾಗಳಲ್ಲಿ ನಟನಾಗಿದ್ದೇ ಅಲ್ಲದೆ, 20 ಸಿನಿಮಾಗಳನ್ನು 1937ರಿಂದ 1980ರ ಅವಧಿಯಲ್ಲಿ ನಿರ್ದೇಶಿಸಿದ್ದ ದಿಗ್ಗಜ. ಕನ್ನಡ ಪತ್ರಿಕೆಯು ಹಿಂದಿ ಸಿನಿಮಾದ ಅಗ್ರಗಣ್ಯರ ವಿಷಯದಲ್ಲಿಯೂ ತೋರಿದ ಅಕ್ಷರ ಪ್ರೀತಿಗೆ ಇದು ಸಾಕ್ಷಿ.

ಸಿನಿಮಾದ ಸ್ಥಿರಶೀರ್ಷಿಕೆಗಳನ್ನು ಸಂಗ್ರಹಿಸಿ ಪ್ರಕಟಿಸುವುದೇ ಕಷ್ಟವಾಗಿದ್ದ 1950ರ ದಶಕದಲ್ಲಿ 'ಪ್ರಜಾವಾಣಿ'ಯ ಪ್ರತಿನಿಧಿಗಳು ಮೈಸೂರಿಗೆ ಹೋಗಿ, ಅಲ್ಲಿಂದ ಕನ್ನಡ ಸಿನಿಮಾಗಳ ಮಾಹಿತಿ ಹಾಗೂ ಚಿತ್ರಗಳನ್ನು ಪಡೆದು, ತಂದು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತಿದ್ದ ಸಂದರ್ಭವನ್ನು ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ನೆನಪಿಸಿಕೊಳ್ಳುತ್ತಾರೆ.

1956ರ ಜೂನ್ 17ರ 'ಸಾಪ್ತಾಹಿಕ ಪುರವಣಿ'ಯ 8ನೇ ಪುಟದಲ್ಲಿ 'ಟಾಂಗಾವಾಲಿ' ಹಿಂದಿ ಸಿನಿಮಾದ ವಿಮರ್ಶೆ ಪ್ರಕಟವಾಗಿತ್ತು. ನಿರೂಪಾರಾಯ್, ಬಲರಾಜ್ ಸಹಾನಿ ಜೋಡಿ ಇದ್ದ ಆ ಸಿನಿಮಾದ ವಿಮರ್ಶೆಗೆ ಪೂರಕವಾದ ಸ್ಥಿರಚಿತ್ರ ಇರಲಿಲ್ಲ. ಅದಕ್ಕೆ ಪ್ರಮುಖ ನಟ–ನಟಿಯರ ರೇಖಾಚಿತ್ರವನ್ನು ಬರೆಸಿ, ಸಿನಿಮಾ ವಿಮರ್ಶೆಯೊಟ್ಟಿಗೆ ಪ್ರಕಟಿಸಲಾಗಿತ್ತು. ಬೆಂಗಳೂರಿನಲ್ಲಿ ಯಾವ ಚಿತ್ರ-ಮಂದಿರದಲ್ಲಿ ಆ ಸಿನಿಮಾ ಎಂದು ತೆರೆಕಂಡಿತು ಎನ್ನುವ ಮಾಹಿತಿಯನ್ನು ಕೂಡ ವಿಮರ್ಶೆ ಒಳಗೊಂಡಿತ್ತು.

ಮದ್ರಾಸ್‌ನಲ್ಲಿ ದಕ್ಷಿಣ ಭಾರತದ ಸಿನಿಮಾ ಚಟುವಟಿಕೆ ನಡೆಯುತ್ತಿದ್ದ ಕಾಲಘಟ್ಟದಲ್ಲಿ 'ಪ್ರಜಾವಾಣಿ'ಯು ತನ್ನ ಸಿನಿಮಾ ವರದಿಗಳಿಗೆ ಅಧಿಕೃತತೆ ದಕ್ಕಿಸಿ-ಕೊಡಲೆಂದೇ 'ಮದ್ರಾಸ್ ಚಿತ್ರವಾರ್ತೆ' ಎಂಬ ಉಪಶೀರ್ಷಿಕೆಯಡಿ ಅಲ್ಲಿನ ಸುದ್ದಿ ಪ್ರಕಟಿಸಿತು. 'ಪ್ರಜಾವಾಣಿ ಪ್ರತಿನಿಧಿಯಿಂದ' ಎನ್ನುವ ಒಕ್ಕಣಿಕೆ ಕೂಡ ಸಿನಿಮಾ ಸುದ್ದಿಗೆ ಪತ್ರಿಕೆಯು ನೀಡಿದ್ದ ಮನ್ನಣೆಯನ್ನು ಬಿಂಬಿಸುತ್ತದೆ. ಕೆಲವು ನಿರ್ಮಾಣ ಸಂಸ್ಥೆಗಳವರು ಮದ್ರಾಸ್‌ಗೆ ವರದಿಗಾರರನ್ನು ಕರೆದುಕೊಂಡು ಹೋಗಿ, ಸಿನಿಮಾಗೆ ಸಂಬಂಧಿಸಿದ ಮಾಹಿತಿಯನ್ನು ಹಂಚಿಕೊಳ್ಳುತ್ತಿದ್ದುದೂ ಉಂಟು. ಒಂದು ಬದಿಯಲ್ಲಿ 'ಮದ್ರಾಸ್ ಚಿತ್ರವಾರ್ತೆ', ಇನ್ನೊಂದು ಬದಿಯಲ್ಲಿ 'ಮುಂಬೈ ಚಿತ್ರವಾರ್ತೆ' ಎನ್ನುವ ಸ್ಥಿರಶೀರ್ಷಿಕೆ-ಗಳಡಿ ಚಲನಚಿತ್ರ ಚಟುವಟಿಕೆಯ ವರದಿಗಳು ಪ್ರಕಟವಾಗಿವೆ.

'ಪ್ರಜಾವಾಣಿ' ಪತ್ರಿಕೆಯಲ್ಲಿ 'ಸಿನಿಮಾ ರಂಜನೆ' ಎನ್ನುವ 'ಮಾಸ್ಟ್ ಹೆಡ್' ಸಹಿತ ಪ್ರತ್ಯೇಕ ಸಿನಿಮಾ ಪುಟ ಮೊದಲು ಪ್ರಕಟವಾಗಿದ್ದು 1982, ಏಪ್ರಿಲ್ 8ರಂದು. 1985ರಲ್ಲಿ ಅದು ಪ್ರತ್ಯೇಕ ಪುರವಣಿಯ ಸ್ವರೂಪ ಪಡೆದುಕೊಂಡಿತು. ಪ್ರತಿ ಶುಕ್ರವಾರ ಸಿನಿಮಾಗೇ ಮೀಸಲಾದ ಎಂಟು, ಆರು, ನಾಲ್ಕು ಪುಟಗಳ ಪುರವಣಿಯನ್ನು ಪತ್ರಿಕೆ ನೀಡುತ್ತಾ ಬಂದಿತು.

ಸಿನಿಮಾ ಚಿತ್ರೀಕರಣದ ಚಟುವಟಿಕೆ, ಹೊಸದಾಗಿ ಸೆಟ್ಟೇರಿದ ಸಿನಿಮಾಗಳ ಮಾಹಿತಿ, ಗಾಸಿಪ್, ಸಂದರ್ಶನಗಳು, 'ಚಿತ್ರದರ್ಶಿ' ಹೆಸರಿನಲ್ಲಿ ಬಿಡುಗಡೆಯಾದ ಸಿನಿಮಾಗಳ ಮಾಹಿತಿ ಎಲ್ಲವೂ ಅದರಲ್ಲಿ ಇದ್ದವು. ಆಗಲೂ ಹಿಂದಿ ಹಾಗೂ ಬೇರೆ ಭಾಷೆಗಳ ಸಿನಿಮಾ ಸಂಬಂಧಿ ಸುದ್ದಿಗಳಿಗೂ ಜಾಗ ಮೀಸಲಿತ್ತು.

'ಪ್ರಜಾವಾಣಿ' ಹಾಗೂ ಕನ್ನಡ ಚಿತ್ರರಂಗ ಜೋಡೆತ್ತುಗಳಂತೆ. ಎರಡೂ ಒಂದನ್ನೊಂದು ಮೇಲೆತ್ತುತ್ತಾ ಬಂದಿವೆ. 'ಪ್ರಜಾವಾಣಿ'ಯಲ್ಲಿ ಹಾಗೂ ಅದರ ನಿಯತಕಾ-ಲಿಕಗಳಲ್ಲಿ ಯಾವುದಾದರೂ ನಟಿಯ ಫೋಟೊ ಪ್ರಕಟವಾದರೆ ಸಾಕು, ಅವಳು ಬದುಕು ಕಟ್ಟಿಕೊಳ್ಳುವುದು ನಿಶ್ಚಿತ ಎನ್ನುವ ಅಭಿಪ್ರಾಯವಿತ್ತು. ಅದು ನಿಜವೂ ಹೌದು. ಘನತೆಯನ್ನು ಇಷ್ಟು ಕಾಲವೂ ಕಾಪಾಡಿಕೊಂಡು ಬಂದಿರುವ ಪತ್ರಿಕೆಯಲ್ಲಿ ನನ್ನ ಬಗೆಗಿನ ವರದಿಗಳನ್ನೂ ಓದಿ ಎಷ್ಟೋ ಸಲ ಪುಳಕಗೊಂಡಿರುವೆ

ಜಯಮಾಲಾ, ನಟಿ



ನನ್ನ ತಂದೆ ಶಂಕರ್ ಸಿಂಗ್ ಮಹಾತ್ಮ ಪಿಕ್ಚರ್ಸ್ ಮೂಲಕ ಸಿನಿಮಾಗಳನ್ನು ನಿರ್ಮಿಸಿದರು. ಆಗ 'ಪ್ರಜಾವಾಣಿ' ಪ್ರತಿನಿಧಿ ಮೈಸೂರಿಗೆ ಬಂದು ವರದಿ–ಚಿತ್ರಗಳನ್ನು ಪಡೆದುಕೊಂಡು ಹೋಗುತ್ತಿದ್ದರು. ನಮಗೆಲ್ಲ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾದಾಗಲೆಲ್ಲ ಖುಷಿ-ಯಾಗುತ್ತಿತ್ತು. ನಿಜಲಿಂಗಪ್ಪನವರು ಮುಖ್ಯಮಂತ್ರಿ ಆಗಿದ್ದಾಗ ಸಿನಿಮಾಗಳಿಗೆ ಸಬ್ಸಿಡಿ ನೀಡಬೇಕೆಂಬ ಸುದ್ದಿ ಹೊರಬಿತ್ತು. ಅದನ್ನು 'ಪ್ರಜಾವಾಣಿ' ಆದ್ಯತೆ ನೀಡಿ ಪ್ರಕಟಿಸಿದ್ದು ಇನ್ನೂ ನೆನಪಿದೆ. ನನ್ನ ಅಂಕಣ 'ನೂರೊಂದು ನೆನಪು' ಪತ್ರಿಕೆಯಲ್ಲಿ ಪ್ರಕಟವಾದಾಗಲೂ ಹರಿದುಬಂದ ಜನಮೆಚ್ಚುಗೆ ಮರೆಯಲಾಗದು

ಎಸ್.ವಿ. ರಾಜೇಂದ್ರ ಸಿಂಗ್ ಬಾಬು, ನಿರ್ದೇಶಕ



ನಾವೆಲ್ಲ 'ಪ್ರಜಾವಾಣಿ'ಯ ಜತೆಗೇ ಬೆಳೆದೆವು. ಒಂದು ಫೋಟೊ, ವರದಿ ಪ್ರಕಟವಾದರೂ ನಮಗೆ ಖುಷಿಯಾಗು-ತ್ತಿತ್ತು. ಅದರಲ್ಲಿ ನನ್ನ ಹೆಸರನ್ನು ನೋಡಿ ಎಷ್ಟೋ ಜನರಿಗೆ ತೋರಿಸುತ್ತಿದ್ದೆ. ಪತ್ರಿಕೆಯ ಸುದ್ದಿ ಎಂದರೆ ನಮಗೆಲ್ಲ ಒಂಥರಾ ಸರ್ಟಿಫಿಕೇಟ್ ಇದ್ದಂತಿತ್ತು

ಬಿ.ಎಸ್. ದ್ವಾರಕೀಶ್, ನಟ, ನಿರ್ದೇಶಕ

'ಪ್ರಜಾವಾಣಿ'ಯಲ್ಲಿನ ಸಿನಿಮಾ ಬರವಣಿಗೆ ನಮ್ಮ ಪಾಲಿಗೆ ಮೌಲ್ಯ ವ್ಯವಸ್ಥೆಯಂತೆ. ಸಿನಿಮಾ ಪಠ್ಯವು ಸಾಂಸ್ಕೃತಿಕ ಶಕ್ತಿಯಾಗಿ ಅನಾವರಣಗೊಳ್ಳುತ್ತಿತ್ತು. ಅಲ್ಲಿ ಏನು ಬರೆದಿದ್ದಾರೆ ಎನ್ನುವ ತಹತಹ ಇರುತ್ತಿತ್ತು. 'ಚಿನ್ನಾರಿಮುತ್ತ', 'ಸಂತ ಶಿಶುನಾಳ ಶರೀಫ' ತರಹದ ಸಿನಿಮಾ ಮಾಡಿದಾಗ ಪತ್ರಿಕೆ ಬರೆದ ರೀತಿಯಿಂದ ಸಿಕ್ಕ ಮನ್ನಣೆ ನೆನಪಿನಲ್ಲಿದೆ

ಟಿ.ಎಸ್. ನಾಗಾಭರಣ, ನಿರ್ದೇಶಕ

ಪದಬಂಧ 5192

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪುರದ ಹತ್ತಿರದಲ್ಲೇ ರಾಣಿವಾಸವಿದೆ (4)
3.ಸೊಟ್ಟಗಿರುವ ಸೊಂಡಿಲುಳ್ಳವನು (4)
5.ವಾರಾಂತ್ಯಕ್ಕೆ ಬಂದಿಳಿದ ಆರೋಹಿ! (3)
6.ನೀರಿನಲ್ಲಿಯೇ ಹುಟ್ಟಿರುವುದು (3)
8.ಜರೂರಿದ್ದಾಗ ಬಾರಿಸಿರುವ ಚರ್ಮವಾದ್ಯ (3)
9.ರಾಷ್ಟ್ರದ ಮುಖ್ಯಮಂತ್ರಿ (3)
10.ಎರಡು ವ್ಯಕ್ತಿಗಳ ನಡುವೆ ಸಂಧಾನ ನಡೆಸುವವ (3)
11.ಕಸ್ತೂರಿ ಕಂಪಿನ ನಮ್ಮ ಭಾಷೆ (3)
12. ನಯ ನಾಜೂಕನ್ನು ರೂಢಿಸಿಕೊಂಡಿರುವ ಮಗ (3)
14.ಆಸ್ತಿಯಲ್ಲಿ ಭಾಗ ಪಡೆಯುವವ ಜ್ಞಾತಿ (3)
16.ಮಲಗುವ ಕೋಣೆಯಿದು (4)
17.ಉಗುರಿನಿಂದಾದ ಪೆಟ್ಟು (4)

ಮೇಲಿಂದ ಕೆಳಕ್ಕೆ

1.ತತ್ತಿಯೊಡೆದು ಹುಟ್ಟುವ ಪ್ರಾಣಿ (3)
2.ನೀರು ಹಾಲು ಮುಂತಾದ ದ್ರವ ಪದಾರ್ಥ (2)
3.ವಠಾರದಲ್ಲಿರುವ ಮದುವೆ ಗಂಡು (2)
4.ಅಗಲ ಬಾಯುಳ್ಳ ಪಾತ್ರೆ (3)
7.ಜನರಿಂದ ಕಿಕ್ಕಿರಿದು ತುಂಬಿದುದು (5)
8.ಜನನಕ್ಕೆ ಕಾರಣನಾದ ತಂದೆ (5)
11.ಗೋಪುರಕ್ಕೆ ಹಾಕುವ ಶಿಖರ (3)
13.ದೇವಯಾನಿ ಮತ್ತು ಶರ್ಮಿಷ್ಠೆಯ ಪತಿ (3)
14.ಹರಿದಾರಿಯಲ್ಲಿ ಸಾಗುತ್ತಿರುವಾಗಿನ ತೃಷೆ (2)
15.ಇಪ್ಪತ್ತು ನಾಲ್ಕು ಗಂಟೆಗಳ ಕಾಲ (2)



5191ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬತ್ತಳಿಕೆ 3.ಮಧುಕರ
5.ರಪಣ 7.ಮಂದಿ
8.ಗತಿ 11.ಸಮ
13.ಚೌತಿ 14.ಮುಕ್ತಕ
16.ಸರಕಾರ
17.ಡಕಾಯಿತ

ಮೇಲಿಂದ ಕೆಳಕ್ಕೆ:
1.ಬಹಿರಂಗ 2.ಕೆರ
3.ಮಣ 4.ರಸೀದಿ
6.ಪಲ್ಲಟ 7.ಮಂದಹಾಸ
9.ತಿರುಪತಿ 10.ಆಯುಕ್ತ
12.ಮಡಿವಂತ
13.ಚೌರಸ 14.ಮುರ
15.ಕಡ

ಸುಡೊಕು 5578

	6				7		1	
8		7	6		4			
	2			8			5	6
	4			1		9		
		1	8	4	5		7	
7	5			9		3		
	8			7		4		3
			4		8		9	
9		4			2		6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5577 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜನವರಿ 7, 2023

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ಪ್ರತಿಪದ್ ಅಹೋರಾತ್ರ ನಕ್ಷತ್ರ: ಪುನರ್ವಸು ಗಂ. 27-08 ಯೋಗ: ಐಂದ್ರ ಗಂ. 08-54, ಕರಣ: ಬಾಲವ ಗಂ. 17-52, ಧನುರ್ ಮಾಸದ 22 ನೇ ದಿನ.
ರಾಹುಕಾಲ: ಬೆಳಿಗ್ಗೆ 09-00 – 10-30
ಸೂರ್ಯೋದಯ: 06-59 ಸೂರ್ಯಾಸ್ತ: 06-14
ಮುಸ್ಲಿಂ ದಿನಾಂಕ: 14 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ: 10, 12

ಮೇಷ: ಹಲವು ದಿನಗಳಿಂದ ಇರುವ ಕಷ್ಟಕರ ಪರಿಸ್ಥಿತಿಯು ಆಹ್ಲಾದಕರ ರೀತಿಯಲ್ಲಿ ಮುಗಿದು ಹೋಗುವುದು. ಸಾಧು ಸಂತರ ದರ್ಶನ ಭಾಗ್ಯದಿಂದ ಇಂದಿನ ನಿಮ್ಮ ಎಲ್ಲಾ ಕೆಲಸಗಳು ಗುರಿ ತಲುಪಲಿವೆ.

ವೃಷಭ: ಸ್ನೇಹಿತರ ಸಹಕಾರದಿಂದ ಕೈಗೊಂಡ ಕಾರ್ಯಗಳಲ್ಲಿ ಜಯ ಪ್ರಾಪ್ತಿಯಾಗುವುದು. ರೈತರು ಬೆಳೆದ ತರಕಾರಿ ಮತ್ತು ಹಣ್ಣಿನ ಬೆಳೆಗೆ ನಿರೀಕ್ಷಿತ ಲಾಭ ದೊರೆಯುತ್ತದೆ.

ಮಿಥುನ: ಖಾಸಗಿ ಕಾಗದದ ಕಾರ್ಖಾನೆ ಮಾಲೀಕರಿಗೆ ಹೆಚ್ಚಿನ ಲಾಭ ದೊರೆಯುತ್ತದೆ. ಕಾನೂನಿಗೆ ಸಂಬಂಧಿಸಿದ ಕೆಲಸಗಳಲ್ಲಿ ಜಯ ಸಿಗುವುದು. ಮಗಳಿಂದ ಸಂತೋಷದ ಸುದ್ದಿ ಕೇಳಲಿರುವಿರಿ.

ಕರ್ಕಾಟಕ: ಬಹುನಿರೀಕ್ಷಿತ ಧನ ಕೈ ಸೇರುವುದು. ಆತ್ಮಗೌರವ ಕಾಪಾಡಿಕೊಳ್ಳಲು ಅಥವಾ ಹೆಚ್ಚಿಸಲು ಒಡಹುಟ್ಟಿದವರ ಸಹಾಯ ದೊರೆಯಲಿದೆ. ವಿವಾಹಕ್ಕೆ ಸಂಬಂಧಿಸಿದ ಮಾತುಕತೆಗಳಿಂದ ಭಿನ್ನಾಭಿಪ್ರಾಯಗಳು ದೂರ.

ಸಿಂಹ: ಮಗನ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನ ಹರಿಸಿ. ದಿನಕೂಲಿ ನೌಕರರಿಗೆ ಸಂಬಳದಲ್ಲಿ ಹೆಚ್ಚಳ ಕಂಡುಬರಲಿದೆ. ಹಿತಶತ್ರುಗಳು ನಿಮ್ಮ ಜೊತೆಯಲ್ಲೇ ಇದ್ದಂತಹ ಅನುಭವ ಈ ದಿನ ನಿಮಗಾಗುವುದು.

ಕನ್ಯಾ: ಟಿಂಬರ್ ವ್ಯಾಪಾರ ಮಾಡುವವರಿಗೆ ಮತ್ತು ಮನೆಕಟ್ಟಲು ಬೇಕಾದ ಮರದ ಸಾಮಗ್ರಿಗಳನ್ನು ಖರೀದಿಸುವವರಿಗೆ ಲಾಭ ಉಂಟಾಗುವುದು. ವಿದ್ಯಾ-ಭ್ಯಾಸದಲ್ಲಿನ ಪ್ರಗತಿಯ ಫಲವಾಗಿ ವಿದ್ಯಾ ಸಂಸ್ಥೆಗಳಿಂದ ಮನ್ನಣೆ ಪಡೆಯುವಿರಿ.

ತುಲಾ: ಖಾಸಗಿ ಸಂಸ್ಥೆಗಳ ಆಡಳಿತಾಧಿಕಾರಿಗಳೊಡನೆ ಫಲಪ್ರದ ಮಾತುಕತೆಗಳು ನಡೆಸುವಂತಾಗುವುದು. ಉಲ್ಲಾಸ ಹಾಗೂ ಕಾರ್ಯಪ್ರವೃತ್ತಿ-ಯನ್ನು ಹೊಂದುತ್ತೀರಿ. ಹೊಸ ಉದ್ಯೋಗಕ್ಕಾಗಿ ತೀವ್ರ ಪ್ರಯತ್ನ ನಡೆಸಬಹುದು.

ವೃಶ್ಚಿಕ: ನಿಮ್ಮ ರಾಜಕೀಯ ಭವಿಷ್ಯದಲ್ಲಿ ಜನಪ್ರಿಯತೆ ಹೆಚ್ಚಿಸಿಕೊಳ್ಳಲು ಬೇಕಾದ ಪ್ರಯತ್ನಗಳನ್ನು ನಡೆಸಿ. ಅನಾವಶ್ಯಕವಾಗಿ ಮಕ್ಕಳಿಂದ ಖರ್ಚು ಹೆಚ್ಚಾಗುವ ಸಂಭವ ಇದೆ. ಸಾಧು ಸಂತರ ದರ್ಶನದಿಂದ ಮನಸ್ಸಿಗೆ ಸಮಾಧಾನ ಸಿಗುತ್ತದೆ.

ಧನು: ಅಧಿಕವಾಗಿ ಲಭ್ಯವಿರುವ ಸಮಯವನ್ನು ಕೆಲಸಕ್ಕಾಗಿ ಸದುಪಯೋಗಿಸಿಕೊಳ್ಳುವುದು ಲಾಭದಾಯಕ. ಹಣಕಾಸಿನ ವಿಚಾರದಲ್ಲಿ ಪ್ರಬಲರಾಗಿರುವಿರಿ.

ಮಕರ: ಸಾಮಾಜಿಕ ಜೀವನದಲ್ಲಿ ಕಾರ್ಯಪ್ರವೃತ್ತರಾಗಿರಿ. ಇತರರೊಂದಿಗೆ ಸಾಧ್ಯವಾದಷ್ಟು ಬೆರೆಯಲು ಪ್ರಯತ್ನಿಸಿ. ಅದರಿಂದಾಗಿ ಪ್ರಾಪಂಚಿಕ ಜ್ಞಾನ ಅಭಿವೃದ್ಧಿಯಾಗಲಿದೆ.

ಕುಂಭ: ಅಪವಾದದ ಭೀತಿಗೆ ಒಳಗಾಗದಿರಿ. ಮುಖ್ಯವಾಗಿ ನಿಮ್ಮದಲ್ಲದ ವಸ್ತು, ವಿಚಾರಗಳನ್ನು ನೀವು ಅಪೇಕ್ಷಿಸುವುದು ನಿಮ್ಮ ಸಣ್ಣತನವಾಗುವುದು.

ಮೀನ: ಈ ದಿನದ ನಿಮ್ಮ ಕನಸುಗಳು ಮತ್ತು ಗುರಿಗಳು ಸೂಕ್ತ ಸಮಯದಲ್ಲಿ ಪೂರ್ಣಗೊಳ್ಳಲಿವೆ. ಅಧಿಕ ವೆಚ್ಚಕ್ಕೆ ಕಡಿವಾಣ ಹಾಕುವುದರಿಂದ ಆರ್ಥಿಕ ಪ್ರಗತಿ ಕಾಣುವಿರಿ. ಸರ್ಕಾರಿ ಅಧಿಕಾರಿಗಳಿಗೆ ಉನ್ನತ ಸ್ಥಾನ ಲಭಿಸಲಿದೆ.

ಸಲಿಂಗ ವಿವಾಹ: ಎಲ್ಲ ಬಾಕಿ ಪ್ರಕರಣಗಳು 'ಸುಪ್ರೀಂ'ಗೆ ವರ್ಗ

ನವದೆಹಲಿ (ಪಿಟಿಐ): ಸಲಿಂಗ ವಿವಾಹಗಳಿಗೆ ಕಾನೂನು ಮಾನ್ಯತೆ ನೀಡುವ ವಿಷಯದ ಕುರಿತು ದೇಶದಾದ್ಯಂತ ವಿವಿಧ ಹೈಕೋರ್ಟ್‌ಗಳಲ್ಲಿ ಬಾಕಿ ಉಳಿದಿರುವ ಎಲ್ಲಾ ಅರ್ಜಿಗಳನ್ನು ಸುಪ್ರೀಂಕೋರ್ಟ್ ಶುಕ್ರವಾರ ಒಟ್ಟುಗೂಡಿಸಿ ತನಗೆ ವರ್ಗಾಯಿಸಿಕೊಂಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಹಾಗೂ ಜೆ.ಬಿ. ಪರ್ದಿವಾಲಾ ಅವರನ್ನೊಳಗೊಂಡ ನ್ಯಾಯಪೀಠವು, ಫೆ. 15ರೊಳಗೆ ಎಲ್ಲ ಅರ್ಜಿಗಳಿಗೆ ಜಂಟಿ ಉತ್ತರವನ್ನು ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿತು ಮತ್ತು ಎಲ್ಲಾ ಅರ್ಜಿಗಳನ್ನು ಮಾರ್ಚ್‌ನಲ್ಲಿ ವಿಚಾರಣೆಗೆ ಪಟ್ಟಿ ಮಾಡಲಾಗುವುದು ಎಂದು ಹೇಳಿದೆ.

ಒಂದು ವೇಳೆ ಯಾವುದೇ ಅರ್ಜಿದಾರರು ವಿಚಾರಣೆಗೆ ನ್ಯಾಯಾಲಯಕ್ಕೆ ಭೌತಿಕವಾಗಿ ಹಾಜರಾಗಲು ಸಾಧ್ಯವಾಗದಿದ್ದರೆ, ವರ್ಚುವಲ್ ವೇದಿಕೆಯ ಮೂಲಕವೂ ಹಾಜರಾಗಬಹುದು ಎಂದೂ ನ್ಯಾಯಪೀಠವು ತಿಳಿಸಿದೆ.

2022ರ ನವೆಂಬರ್ 25ರಂದು 'ಇಬ್ಬರು ಸಲಿಂಗಕಾಮಿ ದಂಪತಿ ತಮ್ಮ ವಿವಾಹದ ಹಕ್ಕನ್ನು ಜಾರಿಗೊಳಿಸಲು ಮತ್ತು ವಿಶೇಷ ವಿವಾಹ ಕಾಯ್ದೆಯಡಿಯಲ್ಲಿ ತಮ್ಮ ವಿವಾಹವನ್ನು ನೋಂದಾಯಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ಗೆ ಪ್ರತ್ಯೇಕ ಮನವಿ ಸಲ್ಲಿಸಿದ್ದರು. ಈ ಸಂಬಂಧ ಕೇಂದ್ರ ಸರ್ಕಾರವು ತನ್ನ ಪ್ರತಿಕ್ರಿಯೆ ನೀಡಬೇಕೆಂದು ಸುಪ್ರೀಂ ಕೋರ್ಟ್ ಸೂಚಿಸಿತ್ತು.

ಸಾಕು ಮಕ್ಕಳೊಂದಿಗೆ ನ್ಯಾಯಾಲಯಕ್ಕೆ ಬಂದ ಸಿಜೆಐ

ನವದೆಹಲಿ (ಪಿಟಿಐ): ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ತಮ್ಮ ಇಬ್ಬರು ಅಂಗವಿಕಲ ಸಾಕು ಹೆಣ್ಣುಮಕ್ಕಳೊಂದಿಗೆ ಶುಕ್ರವಾರ ಸುಪ್ರೀಂಕೋರ್ಟ್‌ಗೆ ಬಂದಿದ್ದರು.

ಬೆಳಿಗ್ಗೆ 10 ಗಂಟೆಗೆ ನ್ಯಾಯಾಲಯಕ್ಕೆ ಬಂದ ಚಂದ್ರಚೂಡ್ ಅವರು, ತಮ್ಮ ಹೆಣ್ಣುಮಕ್ಕಳನ್ನು ವೀಕ್ಷಕರ ಗ್ಯಾಲರಿಯಿಂದ ನ್ಯಾಯಾಲಯದ ಮೊದಲ ಸಭಾಂಗಣಕ್ಕೆ ಕರೆದೊಯ್ದರು. 'ನೋಡಿ, ಇಲ್ಲಿ ನಾನು ಕೆಲಸ ಮಾಡುತ್ತೇನೆ' ಎಂದು ತಾವು ಕೆಲಸ ಮಾಡುವ ಜಾಗವನ್ನು ತೋರಿಸಿದರು.

'ನೀವು ಕೆಲಸ ಮಾಡುವ ಸ್ಥಳವನ್ನು ನೋಡುವ ಇಚ್ಛೆ ಇದೆ ಎಂದು ಇಬ್ಬರು ಹೆಣ್ಣುಮಕ್ಕಳು ಚಂದ್ರಚೂಡ್ ಅವರಿಗೆ ಹೇಳಿದ್ದರಂತೆ. ಈ ಕಾರಣಕ್ಕಾಗಿಯೇ ಅವರು ಶುಕ್ರವಾರ ಇಬ್ಬರನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದರು' ಎಂದು ಮೂಲಗಳು ತಿಳಿಸಿವೆ.

'ನ್ಯಾಯಾಲಯದಲ್ಲಿ ಕಲಾಪಗಳು ಹೇಗಾಗುತ್ತವೆ, ನ್ಯಾಯಮೂರ್ತಿಗಳು ಎಲ್ಲಿ ಕೂರುತ್ತಾರೆ, ವಕೀಲರು ಎಲ್ಲಿ ನಿಂತು ತಮ್ಮ ವಾದ ಮಂಡಿಸುತ್ತಾರೆ ಎಂದೆಲ್ಲಾ ತಮ್ಮ ಮಕ್ಕಳಿಗೆ ತಿಳಿಸಿದರು. ಜೊತೆಗೆ ತಮ್ಮ ಕೊಠಡಿಗೆ ಇಬ್ಬರನ್ನೂ ಕರೆದೊಯ್ದ ಚಂದ್ರಚೂಡ್ ಅವರು ತಮ್ಮ ಕಾರ್ಯವೈಖರಿಯ ಬಗ್ಗೆ ವಿವರಿಸಿದರು' ಎಂದು ಹೇಳಿವೆ.

ನಾಮನಿರ್ದೇಶಿತರಿಗೆ ಬಿಜೆಪಿ ಮಣೆ, ಎಎಪಿ ಆಕ್ಷೇಪ • ಸದಸ್ಯರಿಂದ 'ಬಲ' ಪ್ರದರ್ಶನ

ದೆಹಲಿ: ಗದ್ದಲ, ನಡೆಯದ ಮೇಯರ್ ಆಯ್ಕೆ

ನವದೆಹಲಿ (ಪಿಟಿಐ): ಬಿಜೆಪಿ ಮತ್ತು ಎಎಪಿ ಸದಸ್ಯರಿಂದ ಪರಸ್ಪರ ವಾಗ್ವಾದ, ಬಲಪ್ರಯೋಗಿಸಲು ಯತ್ನ, ಕುರ್ಚಿಯನ್ನು ಎತ್ತಿ ಬಿಸಾಡಿದ ನಡೆ ಸೇರಿದಂತೆ ತೀವ್ರ ಕೋಲಾಹಲ, ವಾಗ್ಯುದ್ಧದ ಪರಿಸ್ಥಿತಿ ಶುಕ್ರವಾರ ದೆಹಲಿ ಮಹಾನಗರಪಾಲಿಕೆಯ ಮೊದಲ ಸಭೆ ಸಾಕ್ಷಿಯಾಯಿತು. ನಿಗದಿಯಂತೆಯೇ ಮೇಯರ್ ಆಯ್ಕೆ ನಡೆಯದೇ ಸಭೆಯನ್ನು ಮುಂದೂಡಲಾಯಿತು.

ಪಾಲಿಕೆಗೆ 10 ಸದಸ್ಯರನ್ನು ನಾಮ ನಿರ್ದೇಶನ ಮಾಡಿದ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ನಿಲುವು ಮತ್ತು ನಾಮಕರಣ ಸದಸ್ಯರನ್ನೇ ಮೊದಲಿಗೆ ಪ್ರತಿಜ್ಞಾವಿಧಿ ಸ್ವೀಕರಿಸಲು ಆಹ್ವಾನಿಸಿದ ಹಂಗಾಮಿ ಅಧ್ಯಕ್ಷರ ಧೋರಣೆ ಆಮ್ ಆದ್ಮಿ ಪಕ್ಷದ (ಎಎಪಿ) ಸದಸ್ಯರ ಆಕ್ರೋಶಕ್ಕೆ ಕಾರಣವಾಯಿತು.

ಬಿಜೆಪಿ ಸದಸ್ಯರು ಎಎಪಿ ಮುಖ್ಯಸ್ಥ, ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರನ್ನು ಗುರಿಯಾಗಿಸಿ ಧಿಕ್ಕಾರದ ಘೋಷಣೆಗಳನ್ನು ಕೂಗಿದರೆ, ಪ್ರತಿಯಾಗಿ ಎಎಪಿ ಸದಸ್ಯರು ಪ್ರಧಾನಿ ಮೋದಿ ಅವರನ್ನೇ ನೇರ ಗುರಿಯಾಗಿಸಿ ಧಿಕ್ಕಾರ ಕೂಗಿದರು. ಎಎಪಿ -ಬಿಜೆಪಿ ಸದಸ್ಯರ ನೇರ ಸಂಘರ್ಷ, ವಾಗ್ವಾಳಿ, ಗದ್ದಲಕ್ಕೆ ಇಡೀ ಸಭೆ ವೇದಿಕೆಯಾಯಿತು.

ಹಂಗಾಮಿ ಅಧ್ಯಕ್ಷರ ಮೈಕ್ರೊಫೋನ್ ಕಸಿದುಕೊಳ್ಳಲಾಯಿತು ಎಂದು ಬಿಜೆಪಿ, ಚೇರ್‌ಗಳನ್ನು ಎತ್ತಿ ಬಿಸಾಡಿದರು ಎಂದು ಎಎಪಿ ಆರೋಪಿಸಿದೆ. ಗದ್ದಲದಲ್ಲಿ ನಮ್ಮ ಸದಸ್ಯರು ಗಾಯಗೊಂಡರು ಎಂದು ಬಿಜೆಪಿ ಆರೋಪಿಸಿದೆ. ಮೇಯರ್ ಆಯ್ಕೆ ಇಲ್ಲದೇ ಸಭೆ ಬರಖಾಸ್ತುಗೊಂಡಿದ್ದು ಇತಿಹಾಸದಲ್ಲೇ ಇದೇ ಮೊದಲು ಎನ್ನುತ್ತಾರೆ ಅಧಿಕಾರಿಗಳು.

ಮೇಯರ್, ಉಪಮೇಯರ್ ಆಯ್ಕೆ ಉದ್ದೇಶದ ಸಭೆಯ ಹಂಗಾಮಿ ಅಧ್ಯಕ್ಷರಾಗಿ ಬಿಜೆಪಿಯ ಸತ್ಯ ಶರ್ಮಾ ಪ್ರತಿಜ್ಞಾವಿಧಿ ಸ್ವೀಕರಿಸಿದರು. ನಂತರ ನಾಮನಿರ್ದೇಶನ ಸದಸ್ಯರನ್ನು ಆಹ್ವಾನಿಸಿದರು. ಇದು, ಎಎಪಿ ಸದಸ್ಯರನ್ನು ಕೆರಳಿಸಿತು.

ಎಎಪಿ ಸದಸ್ಯರು ಅಧ್ಯಕ್ಷರ ಪೀಠದ ಮುಂದಿನ ಅಂಗಳಕ್ಕೆ ಧಾವಿಸಿದರು. ಪ್ರಧಾನಿ ಮೋದಿ, ಬಿಜೆಪಿ ವಿರುದ್ಧ ಘೋಷಣೆಗಳನ್ನು ಕೂಗಿದರು. ಪ್ರತಿಯಾಗಿ ಬಿಜೆಪಿಯ ಸದಸ್ಯರು ಧಾವಿಸಿದ್ದು, ಕೇಜ್ರಿವಾಲ್ ವಿರುದ್ಧ ದನಿ ಎತ್ತಿದರು. ಉಭಯ ಪಕ್ಷಗಳ ಸದಸ್ಯರ ನಡುವೆ ಜೋರು ದನಿಯಲ್ಲಿ ವಾಗ್ವಾದ ನಡೆಯಿತು. ಟೀಕೆ, ಪ್ರತಿ ಟೀಕೆಗಳು ವ್ಯಕ್ತವಾದವು.

ಗೊಂದಲ, ಕೋಲಾಹಲದ ಸ್ಥಿತಿ ನಿಯಂತ್ರಣ ತಪ್ಪಿದಾಗ ಸಭೆಯನ್ನು ಹಂಗಾಮಿ ಅಧ್ಯಕ್ಷ ಸತ್ಯಶರ್ಮಾ ಮುಂದೂಡಿದರು. ನಾಲ್ವರು ನಾಮನಿರ್ದೇಶಿತ ಸದಸ್ಯರು ಪ್ರತಿಜ್ಞಾವಿಧಿ ಸ್ವೀಕರಿಸಿದ್ದಾರೆ. ಒಂದು ಗಂಟೆ ಸಭೆ ಮುಂದೂಡಿದ್ದು, ಮತ್ತೆ ಸಭೆ ಸೇರಿದಾಗ ಉಳಿದ ನಾಮನಿರ್ದೇಶಿತರು ಪ್ರತಿಜ್ಞಾವಿಧಿ ಸ್ವೀಕರಿಸುವರು ಎಂದು ಸುದ್ದಿಗಾರರಿಗೆ ತಿಳಿಸಿದರು.

ಅ ನಂತರವೂ ಸಭೆ ನಿಯಂತ್ರಣಕ್ಕೆ ಬರದಿದ್ದಾಗ ಮೇಯರ್ ಆಯ್ಕೆ ಇಲ್ಲದೇ ಸಭೆ ಮುಂದೂಡಿದರು. ಸಭೆಯ ಮುಂದಿನ ದಿನಾಂಕವನ್ನು ಲೆಫ್ಟಿನಂಟ್ ಗವರ್ನರ್ ಕಚೇರಿ ಪ್ರಕಟಿಸಲಿದೆ ಎಂದೂ ಹೇಳಿದರು.

ಬಿಜೆಪಿ ಸಂಸದ ಮನೋಜ್ ತಿವಾರಿ, 'ಗದ್ದಲದಲ್ಲಿ ಬಿಜೆಪಿ ಇಬ್ಬರು ಸದಸ್ಯರು ಗಾಯಗೊಂಡಿದ್ದಾರೆ. ಗಾಯಾಳು ಸದಸ್ಯರ ಪ್ರಕಾರ, ಎಎಪಿ ಸದಸ್ಯರು ಮದ್ಯಪಾನ ಮಾಡಿದ್ದರು. ಬಿಜೆಪಿ ಸದಸ್ಯರ ಮೇಲಿನ ಹಲ್ಲೆ ಕುರಿತು ಪೊಲೀಸರಿಗೆ ದೂರು ನೀಡಲಾಗುವುದು' ಎಂದು ಸುದ್ದಿಗಾರರಿಗೆ ತಿಳಿಸಿದರು. ದೆಹಲಿಯ ನಾಗರಿಕ ಸಮಸ್ಯೆಗಳ ಅರಿವೇ ಇಲ್ಲದವರನ್ನು ನಾಮನಿರ್ದೇಶನ ಮಾಡಲಾಗಿದೆ ಎಂದು ಎಎಪಿ ಸದಸ್ಯರು ದೂರಿದರು. ಈ ಸಂಬಂಧ ಕೇಜ್ರಿವಾಲ್ ಅವರು ಲೆಫ್ಟಿನಂಟ್ ಗವರ್ನರ್ ಅವರಿಗೂ ಪತ್ರ ಬರೆದು ವಿರೋಧ ದಾಖಲಿಸಿದ್ದರು.

ಮೇಯರ್ ಆಯ್ಕೆಗಾಗಿ ಶುಕ್ರವಾರ ಸೇರಿದ್ದ ದೆಹಲಿ ಮಹಾನಗರಪಾಲಿಕೆಯ ಸಭೆಯಲ್ಲಿ ಎಎಪಿ ಮತ್ತು ಬಿಜೆಪಿ ಸದಸ್ಯರು ಪರಸ್ಪರ ಘರ್ಷಣೆ, ವಾಗ್ಯುದ್ಧ ನಡೆಸಿದರು —ಪಿಟಿಐ ಚಿತ್ರ

ದೆಹಲಿ ಪಾಲಿಕೆ ಸದಸ್ಯರ ಬಲ

ನಿಗದಿಯಂತೆ ಮೇಯರ್, ಉಪ ಮೇಯರ್ ಮತ್ತು ಸ್ಥಾಯಿ ಸಮಿತಿಗಳ ಸದಸ್ಯ ಸ್ಥಾನಗಳಿಗೆ ಚುನಾವಣೆ ನಡೆಯಬೇಕಿತ್ತು. 250 ಸದಸ್ಯ ಬಲದ ಪಾಲಿಕೆಯಲ್ಲಿ ಈಚೆಗೆ ನಡೆದ ಚುನಾವಣೆಯಲ್ಲಿ ಎಎಪಿ 134 ಸ್ಥಾನ ಗೆದ್ದು, ಸ್ಪಷ್ಟ ಬಹುಮತ ಹೊಂದಿದೆ. ಸಂಸತ್ ಸದಸ್ಯರು, ವಿಧಾನಸಭೆ ಸದಸ್ಯರು, ವಿಧಾನಸಭೆ ಸ್ಪೀಕರ್ ನಾಮನಿರ್ದೇಶನ ಮಾಡಿರುವ 15 ಸದಸ್ಯರು ಸೇರಿ 274 ಜನರಿಗೆ ಮತದಾನದ ಹಕ್ಕಿದೆ. ಒಟ್ಟಾರೆ ಎಎಪಿ 150, ಬಿಜೆಪಿ 113 ಸದಸ್ಯ ಬಲ ಹೊಂದಿದೆ. ಕಾಂಗ್ರೆಸ್ 9, ಇಬ್ಬರು ಪಕ್ಷೇತರ ಅಭ್ಯರ್ಥಿಗಳಿದ್ದಾರೆ. ಸದಸ್ಯರ ಬಲದ ಅನುಸಾರ ಬಿಜೆಪಿಗೆ ಮೇಯರ್, ಉಪ ಮೇಯರ್ ಸ್ಥಾನ ಗೆಲ್ಲಲಾಗದಿದ್ದರೂ ನಿರ್ಣಾಯಕ ಸ್ಥಾಯಿ ಸಮಿತಿಗಳಲ್ಲಿ ಕನಿಷ್ಠ ಮೂರು ಸದಸ್ಯ ಸ್ಥಾನವನ್ನು ಗೆದ್ದುಕೊಳ್ಳುವ ಇರಾದೆಯನ್ನು ಆ ಪಕ್ಷ ಹೊಂದಿದೆ ಎಂದು ಹೇಳಲಾಗಿದೆ.

ಸಂವಿಧಾನದ ವಿಧಿ 243ಆರ್ ಪ್ರಕಾರ ಎಂಸಿಡಿಯ ನಾಮನಿರ್ದೇಶಿತ ಸದಸ್ಯರಿಗೆ ಮತದಾನದ ಹಕ್ಕಿಲ್ಲ. ಅವರಿಗೆ ಮತದಾನದ ಹಕ್ಕು ಒದಗಿಸುವುದು ಕಾನೂನುಬಾಹಿರ ಕ್ರಮ.
ಅರವಿಂದ್ ಕೇಜ್ರಿವಾಲ್, ಮುಖ್ಯಮಂತ್ರಿ

ಮತದಾನದ ಹಕ್ಕಿಲ್ಲ ಎಂದರೆ ನಾಮನಿರ್ದೇಶಿತರು ಪ್ರತಿಜ್ಞಾವಿಧಿ ಸ್ವೀಕರಿಸಬಾರದು ಎಂದಲ್ಲ. ವಲಯ ಸಮಿತಿಗಳ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕು ಅವರಿಗಿದೆ.
ಪ್ರವೀಣ್ ಶಂಕರ್ ಕಪೂರ್
ಬಿಜೆಪಿ ವಕ್ತಾರ

ಮಧ್ಯಪ್ರದೇಶದಲ್ಲಿ ವಿಮಾನ ಅಪಘಾತ: ಪೈಲಟ್ ಸಾವು

ರೇವಾ, (ಪಿಟಿಐ); ಮಧ್ಯಪ್ರದೇಶದ ರೇವಾ ಜಿಲ್ಲೆಯಲ್ಲಿ ತರಬೇತಿ ವಿಮಾನವು ಗುರುವಾರ ಬೆಳಿಗ್ಗೆ ದೇವಾಲಯವೊಂದರ ಗೋಪುರ ಮತ್ತು ವಿದ್ಯುತ್ ತಂತಿಗೆ ತಗುಲಿ, ಚೋರ್ಹಟ್ಟಾ ವಾಯುನೆಲೆಯಿಂದ ಮೂರು ಕಿ.ಮೀ ದೂರದಲ್ಲಿ ಪತನಗೊಂಡಿದ್ದು, ಘಟನೆಯಲ್ಲಿ ಪೈಲಟ್ ಕ್ಯಾಪ್ಟನ್ ವಿಮಲ್ ಕುಮಾರ್ (50) ಮೃತಪಟ್ಟಿದ್ದಾರೆ.

'ಸುಪ್ರೀಂ ಕಾಲಮಿತಿಗೆ ಸರ್ಕಾರ ಬದ್ಧ'

ನ್ಯಾಯಮೂರ್ತಿಗಳ ನೇಮಕ– ಶೀಘ್ರ 44 ಶಿಫಾರಸುಗಳಿಗೆ ಅನುಮತಿ: ಕೇಂದ್ರ

ನವದೆಹಲಿ (ಪಿಟಿಐ): ನ್ಯಾಯಮೂರ್ತಿಗಳ ನೇಮಕಕ್ಕೆ ಕೊಲಿಜಿಯಂ ಶಿಫಾರಸು ಮಾಡಿದ ಹೆಸರುಗಳ ಕುರಿತು ಕಾಲಮಿತಿಯೊಳಗೆ ಪ್ರಕ್ರಿಯೆ ಪೂರ್ಣಗೊಳಿಸಲು ಸರ್ಕಾರ ಬದ್ಧವಾಗಿದೆ. ಅಲ್ಲದೆ ಎರಡು– ಮೂರು ದಿನಗಳಲ್ಲಿ 44 ಶಿಫಾರಸುಗಳಿಗೆ ಅನುಮತಿ ನೀಡುವುದಾಗಿ ಕೇಂದ್ರ ಸರ್ಕಾರ ಶುಕ್ರವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಕೊಲಿಜಿಯಂ ಶಿಫಾರಸುಗಳ ಪ್ರಕ್ರಿಯೆ ಪೂರ್ಣಗೊಳಿಸುವಲ್ಲಿ ಕೇಂದ್ರ ಸರ್ಕಾರ ವಿಳಂಬ ಮಾಡುತ್ತಿದೆ ಎಂದು ಆರೋಪಿಸಿ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸಿದ ವೇಳೆ ಈ ಭರವಸೆ ನೀಡಲಾಗಿದೆ.

'ಹೈಕೋರ್ಟ್ ನ್ಯಾಯಮೂರ್ತಿಗಳ ನೇಮಕಕ್ಕೆ ಸಂಬಂಧಿಸಿದ ಕೊಲಿಜಿಯಂ ಶಿಫಾರಸು ಮಾಡಿರುವ 104 ಹೆಸರುಗಳು ಸರ್ಕಾರದಲ್ಲಿ ಬಾಕಿ ಇದ್ದು, ಈ ಪೈಕಿ 44 ಹೆಸರುಗಳ ಪ್ರಕ್ರಿಯೆಯನ್ನು ಈ ವಾರಾಂತ್ಯದಲ್ಲಿ ಪೂರ್ಣಗೊಳಿಸಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸುವ ಸಾಧ್ಯತೆಯಿದೆ' ಎಂದು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ನ್ಯಾಯಪೀಠಕ್ಕೆ ತಿಳಿಸಿದರು.

ಈ ಕುರಿತು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ಕೌಲ್ ಮತ್ತು ಎ.ಎಸ್.ಓಕಾ ಅವರ ಪೀಠವು, ಐವರ ಹೆಸರನ್ನು ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಗಳಾಗಿ ಬಡ್ತಿ ನೀಡುವ ಕುರಿತು ಮಾಡಿದ್ದ ಶಿಫಾರಸಿನ ಬಗ್ಗೆ ಅಟಾರ್ನಿ ಜನರಲ್ ಅವರನ್ನು ಕೇಳಿತು.

'ಈ ವಿಷಯವನ್ನು ಸ್ವಲ್ಪ ಸಮಯ ಮುಂದೂಡಬಹುದೇ? ಈ ಕುರಿತು ನನಗೆ ಕೆಲ ಮಾಹಿತಿ ನೀಡಲಾಗಿದೆ. ಅದರ ಬಗ್ಗೆ ನನ್ನಲ್ಲಿ ಭಿನ್ನಾಭಿಪ್ರಾಯಗಳಿವೆ' ಎಂದು ಅಟಾರ್ನಿ ಜನರಲ್ ಪೀಠಕ್ಕೆ ತಿಳಿಸಿದರು.

ಸುಪ್ರೀಂಕೋರ್ಟ್ ನಿಗದಿಪಡಿಸಿದ ಕಾಲಮಿತಿಯ ಉಲ್ಲಂಘನೆ ಆಗದಂತೆ ಪ್ರಕ್ರಿಯೆ ಪೂರ್ಣಗೊಳಿಸಲು ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಅವರು ಹೇಳಿದರು. ನ್ಯಾಯಪೀಠವು ಈ ಕುರಿತ ವಿಚಾರಣೆಯನ್ನು ಫೆ. 3ಕ್ಕೆ ಮುಂದೂಡಿತು. 2022ರ ಡಿಸೆಂಬರ್‌ನಲ್ಲಿ ಕೊಲಿಜಿಯಂ, ನ್ಯಾಯಮೂರ್ತಿ ಪಂಕಜ್ ಮಿಥಾಲ್ (ಪ್ರಸ್ತುತ ರಾಜಸ್ಥಾನ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ), ನ್ಯಾಯಮೂರ್ತಿ ಸಂಜಯ್ ಕರೋಲ್ (ಸಿಜೆ, ಪಟ್ನಾ ಹೈಕೋರ್ಟ್), ನ್ಯಾಯಮೂರ್ತಿ ಪಿ.ವಿ. ಸಂಜಯಕುಮಾರ್ (ಸಿಜೆ, ಮಣಿಪುರ ಹೈಕೋರ್ಟ್), ನ್ಯಾಯಮೂರ್ತಿ ಅಹ್ಸಾನುದ್ದೀನ್ ಅಮಾನುಲ್ಲಾ (ನ್ಯಾಯಮೂರ್ತಿ ಪಟ್ನಾ ಹೈಕೋರ್ಟ್) ಹಾಗೂ ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಮನೋಜ್ ಮಿಶ್ರಾ ಅವರ ಹೆಸರುಗಳನ್ನು ಸುಪ್ರೀಂಕೋರ್ಟ್‌ಗೆ ಬಡ್ತಿ ನೀಡುವಂತೆ ಶಿಫಾರಸು ಮಾಡಿತ್ತು.

ಕಳೆದ ತಿಂಗಳು ವಿಚಾರಣೆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್, 'ನ್ಯಾಯಮೂರ್ತಿಗಳ ನೇಮಕಕ್ಕಾಗಿ ಕೊಲಿಜಿಯಂ ವ್ಯವಸ್ಥೆ ರೂಪಿಸಿರುವುದು ಈ ನೆಲದ ಕಾನೂನು. ಇದರ ವಿರುದ್ಧ ಮಾಡಿರುವ ಟೀಕೆಗಳು ಹಿತಕರವಲ್ಲ' ಎಂದು ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿತ್ತು. ಕೊಲಿಜಿಯಂ ವ್ಯವಸ್ಥೆಯು ಸುಪ್ರೀಂ ಕೋರ್ಟ್ ಮತ್ತು ಕೇಂದ್ರ ಸರ್ಕಾರದ ನಡುವೆ ತಿಕ್ಕಾಟಕ್ಕೆ ಕಾರಣವಾಗಿದೆ.

ಏರ್ ಇಂಡಿಯಾ ಮೂತ್ರ ಪ್ರಕರಣ: ಆರೋಪಿ ಕೆಲಸದಿಂದ ವಜಾ

ನವದೆಹಲಿ (ಪಿಟಿಐ): ಏರ್ ಇಂಡಿಯಾ ವಿಮಾನದಲ್ಲಿ ಮಹಿಳೆ ಮೇಲೆ ಮೂತ್ರ ವಿಸರ್ಜನೆ ಮಾಡಿದ ಆರೋಪ ಎದುರಿಸುತ್ತಿರುವ ಮುಂಬೈ ಮೂಲದ ಶಂಕರ್ ಮಿಶ್ರಾ ಅವರನ್ನು ಅಮೆರಿಕದ ವೆಲ್ಸ್ ಫ್ರಾರ್ಗೋ ಸಂಸ್ಥೆ ಕೆಲಸದಿಂದ ವಜಾ ಮಾಡಿದೆ.

ಸಂಸ್ಥೆಯಲ್ಲಿ ಮಿಶ್ರಾ ವಿಷಯ ಬಹಳ ಚರ್ಚೆಗೆ ಗ್ರಾಸವಾಗಿದ್ದು, ಇದರಿಂದ ಕೆಲಸಕ್ಕೆ ತೊಂದರೆ ಆಗುತ್ತಿದೆ ಎಂದು ಸಂಸ್ಥೆ ಹೇಳಿದೆ.

ಬೆಂಗಳೂರಿನಲ್ಲಿ ತಲೆ ಮರೆಸಿಕೊಂಡಿದ್ದ: ಆರೋಪಿ ಪತ್ತೆಗಾಗಿ ಪೊಲೀಸರ ಎರಡು ತಂಡ ಹುಡುಕಾಟ ನಡೆಸುತ್ತಿದೆ. ಒಂದು ಬೆಂಗಳೂರಿನಲ್ಲಿರುವ ಮಿಶ್ರಾ ಸಹೋದರಿ ಮನೆಗೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿದರೆ, ಇನ್ನೊಂದು ತಂಡ, ಮುಂಬೈನಲ್ಲಿರುವ ಮಿಶ್ರಾ ತಂದೆ ಮನೆಗೆ ಭೇಟಿ ನೀಡಿ ವಿಚಾರಣೆ ನಡೆಸಿದೆ. ಅಲ್ಲದೇ ಮಿಶ್ರಾ ವಿದೇಶ ಪ್ರಯಾಣ ಮಾಡದಂತೆ ಪೊಲೀಸರು ಲುಕ್ ಔಟ್ ಆದೇಶ ಹೊರಡಿಸಿದ್ದಾರೆ.

ಎಚ್ಚರಿಕೆ: ಅಶಿಸ್ತು ಅಥವಾ ಅನುಚಿತವಾಗಿ ವರ್ತಿಸುವ ಪ್ರಯಾಣಿಕರ ವಿರುದ್ಧ ಕ್ರಮ ಕೈಗೊಳ್ಳಲು ವಿಫಲವಾದರೆ ವಿಮಾನಯಾನ ಸಿಬ್ಬಂದಿ ಕ್ರಮ ಎದುರಿಸಬೇಕಾಗುತ್ತದೆ ಎಂದು ನಾಗರಿಕ ವಿಮಾನ ಯಾನ ಮಹಾನಿರ್ದೇಶನಾಲಯ ತಿಳಿಸಿದೆ.

ಏರ್ ಇಂಡಿಯಾ ವಿಮಾನದ ಬಿಜಿನೆಸ್ ಕ್ಲಾಸ್‌ನಲ್ಲಿ ನ.26ರಂದು ಮಹಿಳೆ ಮೇಲೆ ಮೂತ್ರ ವಿಸರ್ಜಿಸಿದ ಘಟನೆ ನಡೆದ 10 ದಿನದಲ್ಲೇ ಪ್ಯಾರಿಸ್–ದೆಹಲಿ ವಿಮಾನದಲ್ಲಿ ಮದ್ಯಪಾನ ಸೇವಿಸಿದ ವ್ಯಕ್ತಿಯೊಬ್ಬ ಮಹಿಳೆಯ ಹೊದಿಕೆ ಮೇಲೆ ಮೂತ್ರ ವಿಸರ್ಜಿಸಿದ ಘಟನೆ ನಡೆದ ಬೆನ್ನಲ್ಲೇ ಡಿಜಿಸಿಎ ಈ ಕ್ರಮ ಕೈಗೊಂಡಿದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಅನುಚಿತವಾಗಿ ವರ್ತಿಸುವ ಪ್ರಯಾಣಿಕರನ್ನು ನಿಯಂತ್ರಿಸಲು ಎಲ್ಲಾ ಮಾರ್ಗಗಳನ್ನು ಬಳಸಿಯೂ ಪ್ರಯೋಜನವಾಗದಿದ್ದಾಗ ನಿರ್ಬಂಧಿತ ಪರಿಕರಗಳನ್ನು ಬಳಸಬಹುದು. ಕೆಲ ಸಂದರ್ಭದಲ್ಲಿ ಕಟ್ಟುನಿಟ್ಟಿನ ಕ್ರಮ ಜಾರಿಗೊಳಿಸಬೇಕು. ಇಲ್ಲದಿದ್ದರೆ ಪ್ರಯಾಣಿಕರಿಗೆ ತಪ್ಪು ಕಲ್ಪನೆ ಬರುವ ಸಾಧ್ಯತೆ ಇರುತ್ತದೆ. ಪರಿಸ್ಥಿತಿಯನ್ನು ನಿರ್ಣಯಿಸುವುದು ಪೈಲಟ್ ಜವಾಬ್ದಾರಿಯಾಗಿದ್ದು, ಮುಂದಿನ ಕ್ರಮಕ್ಕಾಗಿ ಏರ್‌ಲೈನ್ ಕೇಂದ್ರ ನಿಯಂತ್ರಣಕ್ಕೆ ಮಾಹಿತಿ ರವಾನಿಸಬೇಕು. ವಿಮಾನ ಲ್ಯಾಂಡ್ ಆದ ಬಳಿಕ ಪ್ರತಿನಿಧಿಯು ಏರೋಡ್ರೋಮ್‌ನಲ್ಲಿ ಸಂಬಂಧಿಸಿದ ಭದ್ರತಾ ಏಜೆನ್ಸಿಯೊಂದಿಗೆ ಎಫ್‌ಐಆರ್ ದಾಖಲಿಸಬೇಕು ಎಂದುಡಿಜಿಸಿಎ ಸೂಚಿಸಿದೆ.

30 ದಿನ ಬ್ಯಾನ್: ಘಟನೆ ನಡೆದ ನಂತರ ಮಿಶ್ರಾ ವಿಮಾನಯಾನ ಮಾಡುವುದನ್ನು 30 ದಿನ ನಿಷೇಧಿಸಿ ಏರ್‌ಲೈನ್ ಆದೇಶಿಸಿದೆ.

ವಾಟ್ಸ್‌ಆ್ಯಪ್ ಚಾಟ್ ಬಹಿರಂಗ

ಘಟನೆ ಬಳಿಕ ಮಿಶ್ರಾ ಮಹಿಳೆ ಬಳಿ ತೆರಳಿ ಈ ಘಟನೆ ಬಹಿರಂಗವಾದರೆ ತನ್ನ ಮಗು ಹಾಗೂ ಪತ್ನಿ ಮೇಲೆ ಪರಿಣಾಮ ಬೀರಲಿದೆ ಎಂದು ಕ್ಷಮಾಪಣೆ ಕೇಳಿದ್ದರು. ಆದರೆ ಮಿಶ್ರಾ ಮುಖ ನೋಡಲು ಇಚ್ಛಿಸದ ಮಹಿಳೆ ಆತನನ್ನು ಬಂಧಿಸುವಂತೆ ಒತ್ತಡ ಹಾಕಿದ್ದರು. ಇದಾದ ಬಳಿಕ ಏರ್‌ಲೈನ್ಸ್ ಸಿಬ್ಬಂದಿ ಇಬ್ಬರಿಗೂ ರಾಜಿ ಮಾಡಿಸಿ, ಮಹಿಳೆಯ ದೂರವಾಣಿ ಸಂಖ್ಯೆಯನ್ನು ಮಿಶ್ರಾಗೆ ನೀಡಿ, ಹಾನಿಗೆ ಹಣ ನೀಡುವಂತೆ ಸೂಚಿಸಿದ್ದರು. ಇದರ ನಂತರ ಮಹಿಳೆ ಮತ್ತು ಮಿಶ್ರಾ ನಡುವೆ ನಡೆದ ವಾಟ್ಸ್‌ಆ್ಯಪ್ ಸಂಭಾಷಣೆಯನ್ನು ಮಿಶ್ರಾ ಪರ ವಕೀಲರು ಬಿಡುಗಡೆ ಮಾಡಿದ್ದಾರೆ. ಅದರಂತೆ ನ.28ರಂದು ಮಹಿಳೆಯ ಬ್ಯಾಗ್, ಶೂ ಸ್ವಚ್ಛಗೊಳಿಸಲು ನೀಡಿದ್ದು, ನ.30ರಂದು ಮಹಿಳೆಗೆ ಹಸ್ತಾಂತರಿಸಲಾಗಿದೆ. ನ.28ರಂದು ಮೊದಲೇ ನಡೆದ ಮಾತುಕತೆಯಂತೆ ಪೇಟಿಎಂ ಮೂಲಕ ಮಿಶ್ರಾ ಮಹಿಳೆಗೆ ಹಣ ವರ್ಗಾಯಿಸಿದ್ದಾರೆ. ಆದರೆ ಡಿ.19ರಂದು ಮಹಿಳೆಯ ಪುತ್ರಿ ಹಣವನ್ನು ಮಿಶ್ರಾಗೆ ಹಿಂದುರುಗಿಸಿ, ಆತನ ಹಣ ನನಗೆ ಬೇಡ ಎಂದಿದ್ದಾರೆ.

ಪಾಣಿಪತ್: ಭಾರತ್ ಜೋಡೊ ಯಾತ್ರೆಯಲ್ಲಿ ಸಾರ್ವಜನಿಕ ಸಭೆ

ಕೇಂದ್ರದ ವಿರುದ್ಧ ರಾಹುಲ್ ವಾಗ್ದಾಳಿ

ಪಾಣಿಪತ್ (ಹರಿಯಾಣ): ಅಗ್ನಿಪಥ ಯೋಜನೆ ಹಾಗೂ ಜಿಎಸ್‌ಟಿ ವಿಷಯ ಸೇರಿದಂತೆ ಅನೇಕ ವಿಷಯಗಳ ಕುರಿತು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಶುಕ್ರವಾರ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

'ಭಾರತ್ ಜೋಡೊ ಯಾತ್ರೆ'ಯ ಭಾಗವಾಗಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಎರಡು ರೀತಿಯ ಭಾರತಗಳು ಅಸ್ತಿತ್ವದಲ್ಲಿವೆ. ಒಂದು ರೈತರು, ಕೃಷಿಕರು, ಸಣ್ಣ ಅಂಗಡಿಗಳವರು ಮತ್ತು ನಿರುದ್ಯೋಗಿ ಯುವಕರ ಭಾರತ. ಎರಡನೆಯದ್ದು ಇಡೀ ದೇಶದ ಸಂಪತ್ತನ್ನು ಬರೀ 200– 300 ಜನರು ಹೊಂದಿರುವ ಭಾರತ. ಶೇ 90ರಷ್ಟು ಲಾಭ ಈ ಜನರ ಕೈಯಲ್ಲಿದೆ. ಸಾಮಾನ್ಯ ಜನರಿಗೆ ಏನೂ ಇಲ್ಲ' ಎಂದು ಆರೋಪಿಸಿದರು.

'21ನೇ ಶತಮಾನದಲ್ಲಿ ಹರಿಯಾಣವು ನಿರುದ್ಯೋಗದಲ್ಲಿ ಚಾಂಪಿಯನ್ ಆಗಿದೆ. ಈ ವಿಷಯದಲ್ಲಿ ನೀವು ಎಲ್ಲರನ್ನೂ ಹಿಂದಿಕ್ಕಿದ್ದೀರಿ'ಎಂದು ಬಿಜೆಪಿ ನೇತೃತ್ವದ ಹರಿಯಾಣ ಸರ್ಕಾರದ ವಿರುದ್ಧವೂ ರಾಹುಲ್ ಟೀಕಿಸಿದರು. 'ನೋಟು ಅಮಾನ್ಯೀಕರಣ ಮತ್ತು ಸರಕು ಹಾಗೂ ಸರಕು ಸೇವಾ ತೆರಿಗೆ (ಜಿಎಸ್‌ಟಿ) ನೀತಿಗಳಲ್ಲ. ಅವು ಸಣ್ಣ ಮತ್ತು ಮಧ್ಯಮ ವ್ಯವಹಾರಗಳನ್ನು ನಾಶಮಾಡುವ ಅಸ್ತ್ರಗಳಾಗಿವೆ. ಮೊದಲು ಅಗ್ನಿಪಥ ಯೋಜನೆ ಏನೆಂದು ನನಗೆ ಅರ್ಥ ಮಾಡಿಸಿ. ಬಿಜೆಪಿಯವರು ತಾವು ದೇಶಪ್ರೇಮಿಗಳು ಎಂದು ಹೇಳಿಕೊಳ್ಳುತ್ತಾರೆ. ಅವರ ದೇಶಪ್ರೇಮ ಎಂಥದ್ದು ಎಂಬುದನ್ನು ನನಗೆ ಅರ್ಥಮಾಡಿಸಿ' ಎಂದರು.

ಹರಿಯಾಣದ ಸೋನಿಪತ್‌ನಲ್ಲಿ ಶುಕ್ರವಾರ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ನೇತೃತ್ವದ 'ಭಾರತ್ ಜೋಡೊ' ಯಾತ್ರೆಯಲ್ಲಿ ಪಕ್ಷದ ಹಿರಿಯ ನಾಯಕ ಭೂಪಿಂದರ್ ಸಿಂಗ್ ಹೂಡಾ ಸೇರಿದಂತೆ ನೂರಾರು ಬೆಂಬಲಿಗರು ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

ರಾಮಮಂದಿರ– ದಿನಾಂಕ ಘೋಷಿಸಲು ಶಾ ಯಾರು: ಖರ್ಗೆ

'ಅಯೋಧ್ಯೆಯಲ್ಲಿ ರಾಮ ಮಂದಿರ 2024ರ ಜನವರಿ 1ರೊಳಗೆ ಸಿದ್ಧಗೊಳ್ಳಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಯಾವ ಆಧಾರದಲ್ಲಿ ಹೇಳುತ್ತಾರೆ? ಅವರು ದೇವಸ್ಥಾನದ ಪೂಜಾರಿಯೇ ಅಥವಾ ಮಹಂತರೇ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಶ್ನಿಸಿದರು.

'ದೇವರ ಮೇಲೆ ಎಲ್ಲರಿಗೂ ನಂಬಿಕೆ ಇದೆ. ಆದರೆ ಇಂತಹ ಹೇಳಿಕೆ ನೀಡುವುದಾದರೂ ಏಕೆ? ತ್ರಿಪುರಾ ವಿಧಾನಸಭಾ ಚುನಾವಣೆ ಮೇಲೆ ಕಣ್ಣಿಟ್ಟು ಈ ಹೇಳಿಕೆ ನೀಡಿದ್ದೀರಾ?' ಎಂದು ಅವರು ಕೇಳಿದರು. ಹಣದುಬ್ಬರ ಮತ್ತು ನಿರುದ್ಯೋಗಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ವಿರುದ್ಧ ಟೀಕಿಸಿದ ಅವರು, 'ಬಿಜೆಪಿಯು ಚುನಾವಣಾ ಸಮಯದಲ್ಲಿ ದೊಡ್ಡ ಭರವಸೆಗಳನ್ನು ನೀಡಿ, ಅಧಿಕಾರಕ್ಕೆ ಬಂದ ನಂತರ ಆ ಮಾತಿಗೆ ತಪ್ಪಿದೆ' ಎಂದು ಆರೋಪಿಸಿದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೊದಲನೇ ವರ್ಷದ ಪುಣ್ಯಸ್ಮರಣೆ

ಶ್ರೀ ಎಸ್. ನಾಗಪ್ಪ
(ವಕೀಲರು, ಸಾಗರ) ನಿಧನ 07/01/2022.
ನಿಮ್ಮ ನೆನಪು ನಮ್ಮ ಮನದಲ್ಲಿ ಅಮರ
ನೀವು ನಮ್ಮ ಜೀವನದಲ್ಲಿ ದಾರಿದೀಪವಾಗಿದ್ದು
ಸದಾ ನಿಮ್ಮ ನೆನಪಿನಲ್ಲಿ ಇರುವ
ಪತ್ನಿ ಎಸ್. ಇಂದಿರಾ ನಾಗಪ್ಪ,
ಮಕ್ಕಳು: ಸುಜಿತ್, ಸವಿತಾ, ಸಮೀರ್, ಸುರಿನ್
ಅಳಿಯ ಹಾಗೂ ಕುಟುಂಬವರ್ಗದವರು

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers
ಚಾಲಕರು ಬೇಕಾಗಿದ್ದಾರೆ ಪ್ರತಿ ತಿಂಗಳು ರೂ. 40,000-50,000 ಗಳಿಸಿ ಕರೆ ಮಾಡಿ: 08069451001 ಅಗತ್ಯವಿದೆ: LMV Driving Licence (3 ವೀಲರ್/ 4 ವೀಲರ್)

Hotel
WANTED FOLLOWING STAFF FOR A VEG- NONVEG HOTEL IN UDUPI.(Opening shortly,)Captain, Manager, Accountant, Cashier, SouthIndian, & Assistant cook, NorthIndian chinese ,Tandoor cook SPECIALIST COOK IN FISH ITEMS, Juice/chat/Pavbaji, Dosa Maker,Teamaker,Waiter, Helpers, Cleaners. Send resume by whatsapp 9768041335

Hospital & Medical Jobs
ಬೇಕಾಗಿದ್ದಾರೆ ಪುರುಷರು, ಮಹಿಳೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣ ಸಂಪರ್ಕಿಸಿ ಸಂಬಳ 13000– 23000 (ಸರ್ಕಾರಿ ನೋಂದಾಯಿತ ಸಂಸ್ಥೆ) 7483960098

Part-Time Jobs
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/ 9611225344

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

General
ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 9035520339/ 9036125229

ಕೆಲಸಕ್ಕೆ ಬೇಕಾಗಿದ್ದಾರೆ SSLCಮೇಲ್ಪಟ್ಟ 25ವರ್ಷವಯಸ್ಸುಳ್ಳ ಮಹಿಳೆಯರು ಪುರುಷರು ಹಾಗೂ ನಿವೃತ್ತ ರಾಜ್ಯ ಹಾಗೂ ಕೇಂದ್ರ ಸರ್ಕಾರಿ ನೌಕರರು ಬೇಕಾಗಿದ್ದಾರೆ. ಇಂದೇ ಸಂಪರ್ಕಿಸಿರಿ: 9663987757, ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

ಬಿಲ್ಡರ್ ಎಸೆನ್ಷಿಯಲ್
Water Proofing
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಚೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವೈಯಕ್ತಿಕ
Change of Name
ನಾನು, ಅನೂಪ್ ಕೆ.ಪಿ. ಬಿನ್ ಕೆ ಪದ್ಮನಾಭನ್ ಈ ಮೂಲಕ ತಿಳಿಸುವುದು ಏನೆಂದರೆ, ನನ್ನ ಮಗಳಾದ ಇಂದುಲೇಖಾ ಅನೂಪ್, ಇವಳ ಜನನ ಪ್ರಮಾಣಪತ್ರದ ಪ್ರಕಾರ ಅವಳ ಜನ್ಮದಿನಾಂಕ 26/12/2006 ಆಗಿರುತ್ತದೆ. ಕಾರಣ, 02/01/2023 ರಂದು ಮಾನ್ಯ ಬೆಂಗಳೂರು ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಸಮ್ಮುಖದಲ್ಲಿ ಪ್ರತಿಜ್ಞಾ ಪೂರ್ವಕವಾಗಿ ಪ್ರಮಾಣೀಕರಿಸಿದ್ದೇನೆ ಮತ್ತು ಇದನ್ನೇ ಅವಳ ಸಿಬಿಎಸ್‌ಇ ಅಂಕಪಟ್ಟಿಯಲ್ಲಿ ಸೇರ್ಪಡೆ ಮಾಡಬೇಕಾಗಿದೆ.

ಭವಿಷ್ಯ
Astrology
ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರವಾಸ
Travel
ಮಹಾಶಿವರಾತ್ರಿ ಪ್ರಯುಕ್ತ 9/2/2023 ಮತ್ತು 24/2/2023ರಿಂದ ವಿಮಾನ ಮತ್ತು ಎ.ಸಿ.ಬಸ್ಸಿನಲ್ಲಿ 13/16 ದಿನಗಳ ನೈಮಿಶಾರಣ್ಯ ಮುಕ್ತಿನಾಥ್,ಪಶುಪತಿನಾಥ್, ಪೋಕ್ರ,ಭಕ್ತಪುರ್,ಕಾಶಿ,ಪುರಿ, ಕೋಲ್ಕತ್ತಾ, ಇತ್ಯಾದಿ.ಹಾಗೂ 27/4/2023ರಿಂದ 34ದಿನಗಳ ಚಾರಧಾಮ್ ಸಮೇತ ವೈಷ್ಣೋದೇವಿ,ಅಮೃತ್‌ಸರ್,ಕಾಶಿ, ಗುಲ್ಮಾರ್ಗ್,ಕಾಶ್ಮೀರ,ಹರಿದ್ವಾರ, ನವದೆಹಲಿ.~ವಿಷ್ಣು ಟ್ರಾವೆಲ್ ಲೈನ್ಸ್ 164/3,ಅರ್.ವಿ.ರಸ್ತೆ ಬೆಂಗಳೂರು.~04,ಸಂಪರ್ಕಿಸಿ: ಷಣ್ಮುಗಾನಂದ:9480182865. 8105657052.

★7.02.2023 16ದಿನಗಳು★ 95ದಿವ್ಯದೇಶ ಪ್ರವಾಸ. 04.03.2023 13/8ದಿನಗಳು ವಿಮಾನದಲ್ಲಿ ಕಾಶಿ,ಪ್ರಯಾಗ ಗಯಾ,ಆಗ್ರಾ ಮಥುರ, ಅಯೋಧ್ಯ.ಆರ್.ಗಾಂಧಿ ಟೂರ್ಸ್(ರಿ) ತ್ಯಾಗರಾಜನಗರ. 9945445809/ 9902433500

★22.02.2023 14ದಿನಗಳು★ ಮಧ್ಯಪ್ರದೇಶ ಗುಜರಾತ್, ರಾಜಸ್ಥಾನ, 4ಜ್ಯೋತಿರ್ಲಿಂಗ ದ್ವಾರಕಾ, ನಿಷ್ಕಳಂಕಮಹಾದೇವ್, ಅಂಬಾಜಿ,ಜೆಸ್ಮಲೇರ್, ಬಿಕಾನೇರ್ ಜೈಪುರ. ಶ್ರೀಗಂಗಾ ಟೂರಿಸ್ಟ್: 9480253807/ 8105522123

Pilgrimage Tours
ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 08/01/23 ಕಾಶಿ, ಗಯ, ಅಯೋಧ್ಯ. 11/02/23 ಪೂರಿ ಜಗನ್ನಾಥ್, ಕೊನರ್ಕ್, ಭುವನೇಶ್ವರ್. 21/02/23 ದೆಹಲಿ, ವೈಷ್ಣೋದೇವಿ. 9591017782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಹೆಸರು ಬದಲಾವಣೆಗಾಗಿ
BOOK YOUR NAME CHANGE AD IN PRAJAVANI ALL KARNATAKA ALL DAYS
CHANGE OF NAME @ 50/-* Per Word
*conditions apply
For More Details Contact:
9731810277 | 9901641752
9845114560 | 9886213331
080- 45557160 | 163 | 164

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,992
ಇಂದಿನ ಅಂತ್ಯ	17,859
	133
ದಿನದ ಕನಿಷ್ಠ	17,795

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹567

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1625 (1630)
ಸೋಯಾ (ರಿಫೈನ್ಡ್)	₹1270 (1275)
ಸೂರ್ಯಕಾಂತಿ (ರಿಫೈನ್ಡ್)	₹1310 (1320)
ಪಾಮೋಲಿನ್	₹952 (958)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1400-1600
ಮಧ್ಯಮ	₹1000-1200
ಸಣ್ಣ	₹500-800

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಪ್ರ.ಕೆ.ಜಿ)	₹505-643
ದ್ವಿತಳಿ (ಪ್ರ.ಕೆ.ಜಿ)	₹233-700

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹135
ಆರ್‌ಎಸ್‌ಎಸ್-5	₹128
ಗುಡ್ ಲಾಟ್	₹122

(ಪ್ರತಿ ಕೆ.ಜಿಗೆ)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಗ್ರ್ಯಾಂಡ್ ವಿಟಾರಾ ಸಿಎನ್‌ಜಿ ಅವತರಣಿಕೆ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ತನ್ನ ಮಧ್ಯಮ ಗಾತ್ರದ ಎಸ್‌ಯುವಿ ಗ್ರ್ಯಾಂಡ್ ವಿಟಾರಾದ ಸಿಎನ್‌ಜಿ ಅವತರಣಿಕೆಯನ್ನು ಶುಕ್ರವಾರ ಬಿಡುಗಡೆ ಮಾಡಿದೆ. ದೆಹಲಿಯಲ್ಲಿ ಎಕ್ಸ್ ಷೋರೂಂ ಬೆಲೆ ₹ 12.85 ಲಕ್ಷದಿಂದ ₹ 14.84 ಲಕ್ಷದವರೆಗೆ ಇದೆ.

ಸಿಎನ್‌ಜಿ ಅವತರಣಿಕೆಯು 5-ಸ್ಪೀಡ್ ಮ್ಯಾನುಯಲ್ ಗಿಯರ್‌ಬಾಕ್ಸ್ ಹೊಂದಿದ್ದು, ಕೆ.ಜಿ.ಗೆ 26.6 ಕಿಲೊ ಮೀಟರ್ ಇಂಧನ ದಕ್ಷತೆ ಹೊಂದಿದೆ ಎಂದು ಕಂಪನಿ ತಿಳಿಸಿದೆ.

ಗ್ರ್ಯಾಂಡ್ ವಿಟಾರಾ ಎಸ್-ಸಿಎನ್‌ಜಿ ಬಿಡುಗಡೆಯೊಂದಿಗೆ ಒಟ್ಟು 14 ಮಾದರಿಗಳಲ್ಲಿ ಸಿಎನ್‌ಜಿ ಆಯ್ಕೆ ನೀಡಿದಂತಾಗಿದೆ ಎಂದು ಕಂಪನಿಯ ಮಾರುಕಟ್ಟೆ ಮತ್ತು ಮಾರಾಟ ವಿಭಾಗದ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ಶಶಾಂಕ್ ಶ್ರೀವಾಸ್ತವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ತಿಂಗಳ ಚಂದಾದಾರಿಕೆ ಮೊತ್ತ ₹30,723 ಪಾವತಿ ಮಾಡಿಯೂ ಈ ಅವತರಣಿಕೆಯನ್ನು ಖರೀದಿಸಬಹುದು ಎಂದು ಕಂಪನಿ ಹೇಳಿದೆ.

ತೈಲ ಮಾರಾಟ: ಐಸಿಐಸಿಐ ಸೆಕ್ಯುರಿಟೀಸ್ ಅಂದಾಜು

ಪೆಟ್ರೋಲ್ ಮಾರಾಟದಲ್ಲಿ ಲಾಭ, ಡೀಸೆಲ್‌ನಿಂದ ನಷ್ಟ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಡಿಸೆಂಬರ್ ತ್ರೈಮಾಸಿಕದಲ್ಲಿ ಪ್ರತಿ ಲೀಟರ್ ಪೆಟ್ರೋಲ್ ಮಾರಾಟದಿಂದ ₹ 10ರಷ್ಟು ಲಾಭ ಗಳಿಸಿವೆ. ಇದೇ ವೇಳೆ ಲೀಟರ್ ಡೀಸೆಲ್ ಮಾರಾಟದಿಂದ ಅವುಗಳಿಗೆ ₹6.5ರಷ್ಟು ನಷ್ಟವಾಗಿದೆ.

ಹಿಂದೆ ಆಗಿದ್ದ ನಷ್ಟವನ್ನು ಭರಿಸುವ ಹಾಗೂ ಡೀಸೆಲ್ ಮಾರಾಟದಿಂದ ಈಗ ಆಗುತ್ತಿರುವ ನಷ್ಟವನ್ನು ಭರಿಸುವ ಉದ್ದೇಶದಿಂದ ಅವು ಪೆಟ್ರೋಲ್ ಬೆಲೆಯನ್ನು ತಗ್ಗಿಸಿಲ್ಲ ಎಂದು ಐಸಿಐಸಿಐ ಸೆಕ್ಯುರಿಟೀಸ್ ಹೇಳಿದೆ.

'ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಕಂಪನಿಗಳು 2022ರ ಏಪ್ರಿಲ್ 6ರ ನಂತರ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಪರಿಷ್ಕರಿಸಿಲ್ಲ.

'2022ರ ಜೂನ್ 24ಕ್ಕೆ ಕೊನೆಗೊಂಡ ವಾರದಲ್ಲಿ ಕಂಪನಿಗಳು ಲೀಟರ್ ಪೆಟ್ರೋಲ್ ಮಾರಾಟದಿಂದ ₹ 17.4ರಷ್ಟು, ಡೀಸೆಲ್ ಮಾರಾಟದಿಂದ ₹ 27.7ರಷ್ಟು ನಷ್ಟ ಅನುಭವಿಸಿದ್ದವು. ಇದು ದಾಖಲೆಯ ನಷ್ಟವಾಗಿತ್ತು. ಡಿಸೆಂಬರ್ ತ್ರೈಮಾಸಿಕದಲ್ಲಿ ಪೆಟ್ರೋಲ್ ಮಾರಾಟದಿಂದ ಲಾಭ ಆಗುತ್ತಿದೆ, ಡೀಸೆಲ್ ಮಾರಾಟದ ನಷ್ಟ ಕಡಿಮೆ ಆಗಿದೆ' ಎಂದು ಐಸಿಐಸಿಐ ಸೆಕ್ಯುರಿಟೀಸ್ ಅಂದಾಜು ಮಾಡಿದೆ.

ಕಚ್ಚಾ ತೈಲದ ಬೆಲೆ ಹೆಚ್ಚಿದ್ದಾಗಲೂ ಪೆಟ್ರೋಲ್, ಡೀಸೆಲ್ ಬೆಲೆ ಪರಿಷ್ಕರಿಸದ ಕಾರಣದಿಂದಾಗಿ ಕಂಪನಿಗಳು ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ₹21,201 ಕೋಟಿ ನಷ್ಟ ಅನುಭವಿಸಿವೆ. ಕಂಪನಿಗಳಿಗೆ ಆಗಿರುವ ನಷ್ಟವನ್ನು ಭರ್ತಿ ಮಾಡಿಕೊಡಬೇಕು ಎಂಬ ಆಗ್ರಹವನ್ನು ತೈಲ ಸಚಿವಾಲಯವು, ಹಣಕಾಸು ಸಚಿವಾಲಯದ ಮುಂದಿರಿಸಲು ನಿರ್ಧರಿಸಿದೆ.

ಬೆಲೆ ಏರಿಳಿತ

2022ರಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ತೀವ್ರ ಏರಿಳಿತವನ್ನು ಕಂಡಿದೆ. ಏಪ್ರಿಲ್‌ನಲ್ಲಿ ಪ್ರತಿ ಬ್ಯಾರೆಲ್‌ಗೆ 102.97 ಡಾಲರ್ ಇದ್ದ ಬೆಲೆಯು ಜೂನ್‌ನಲ್ಲಿ 116.01 ಡಾಲರ್‌ಗೆ ತಲುಪಿತು. ಈಗ ಬೆಲೆಯು 78.09 ಡಾಲರ್‌ನಷ್ಟಿದೆ.

ಮುಂಬೈ ಧಾರಣೆ

ಶೇಂಗಾ

6–1–2023

ಜಾವಾ 70/80(ಹೊಸ)	12150-12200
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	11600-11700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1635 (1640)
ಒಂದು ವಾರದ ಡೆಲಿವರಿ	1630 (1630)
ಸೋಯಾ ಕಚ್ಚಾ	1200 (1210)
ಪಾಮ್ ವಾರದ ಡೆಲಿವರಿ	954 (960)
ಸೂರ್ಯಕಾಂತಿ ಎಣ್ಣೆ ಕಚ್ಚಾ	1190 (1200)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

55,550 (55,550)

ಬೆಳ್ಳಿ ಕೆ.ಜಿ 68,000 (67,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480-500
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	490
ಬಂಟ್ವಾಳ	
ಕೋಕ	12500-25000
ಹೊಸತು	22500-38000
ಹಳತು	48000-54500
ಚಿತ್ರದುರ್ಗ	
ಆಪಿ	45619-46059
ಬೆಟ್ಟೆ	33629-34049
ಕೆಂಪುಗೋಟು	29400-29800
ರಾಶಿ	45139-45569
ಹೊಸನಗರ	
ಚಾಲಿ	38539-38539
ಕೆಂಪುಗೋಟು	29821-36849
ರಾಶಿ	44809-47670
ಕಾರ್ಕಳ	
ಹೊಸತು	30000-39000
ಹಳತು	40000-54500
ಕುಮಟ	
ಚಿಪ್ಪು	26899-32819
ಕೋಕ	17019-29019
ಹಳೆಚಾಲಿ	37999-41799
ಹೊಸಚಾಲಿ	33999-36669
ಶಿವಮೊಗ್ಗ	
ಬೆಟ್ಟೆ	46509-53839
ಗೊರಬಲು	16199-35600
ರಾಶಿ	42501-46899
ಸರಕು	46366-79050
ಸಿದ್ದಾಪುರ	
ಬಿಳಿಗೋಟು	28489-33189
ಹೊಸಚಾಲಿ	31318-35199
ಕೋಕ	26089-31882
ಕೆಂಪುಗೋಟು	30089-32069
ರಾಶಿ	42699-45909
ತಟ್ಟಿಬೆಟ್ಟೆ	38899-44099
ಶಿರಸಿ	
ಬೆಟ್ಟೆ	35569-43999
ಬಿಳಿಗೋಟು	20699-35800
ಚಾಲಿ	35509-43518
ಕೆಂಪುಗೋಟು	30099-36199
ರಾಶಿ	39669-46399
ಯಲ್ಲಾಪುರ	
ಬಿಳಿಗೋಟು	24699-35611
ಕೋಕ	14809-29199
ಹಳೆಚಾಲಿ	35500-42500
ಹೊಸಚಾಲಿ	31500-34319
ಕೆಂಪುಗೋಟು	26899-35617
ರಾಶಿ	46089-52515
ತಟ್ಟಿಬೆಟ್ಟೆ	36699-45799

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13650	13650	13600	160.55 ಸೆಂಟ್ಸ್
ಎಸಿ	6720	6800	6000	
ಆರ್‌ಪಿ	8000	8200	7900	ಲಂಡನ್
ಆರ್‌ಸಿ	4500	155 on OT	4200	1832 ಡಾಲರ್ಸ್

ಅಮೆಜಾನ್: ಭಾರತದಲ್ಲಿ 1 ಸಾವಿರ ಉದ್ಯೋಗ ಕಡಿತ?

ನವದೆಹಲಿ (ಪಿಟಿಐ): ಅಮೆಜಾನ್ ಕಂಪನಿಯು ಭಾರತದಲ್ಲಿ ಅಂದಾಜು ಒಂದು ಸಾವಿರ ನೌಕರರನ್ನು ಕೆಲಸದಿಂದ ತೆಗೆಯಲಿದೆ ಎಂದು ಮೂಲಗಳು ಹೇಳಿವೆ.

ಜಾಗತಿಕವಾಗಿ ಒಟ್ಟು 18 ಸಾವಿರ ನೌಕರರನ್ನು ಕೆಲಸದಿಂದ ತೆಗೆಯುವುದಾಗಿ ಕಂಪನಿ ಈಗಾಗಲೇ ತಿಳಿಸಿದೆ. ಅಮೆಜಾನ್ ಕಂಪನಿಯು ಭಾರತದಲ್ಲಿ ಒಂದು ಲಕ್ಷ ನೌಕರರನ್ನು ಹೊಂದಿದ್ದು, ಶೇ 1ರಷ್ಟು ನೌಕರರು ಕೆಲಸ ಕಳೆದುಕೊಳ್ಳಲಿದ್ದಾರೆ ಎಂದು ಗೊತ್ತಾಗಿದೆ.

ಈ ಕುರಿತಂತೆ ಅಮೆಜಾನ್ ವಕ್ತಾರರಿಂದ ನಿರ್ದಿಷ್ಟ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಕೆವೈಸಿ: ಶಾಖೆಗೆ ಭೇಟಿ ಅನಗತ್ಯ

ದೃಢೀಕರಣಕ್ಕೆ ಡಿಜಿಟಲ್ ವ್ಯವಸ್ಥೆ: ಮಾರ್ಗಸೂಚಿ ನೀಡಿದ ರಿಸರ್ವ್ ಬ್ಯಾಂಕ್



ನವದೆಹಲಿ (ಪಿಟಿಐ): ಬ್ಯಾಂಕ್ ಖಾತೆ ಹೊಂದಿರುವ ಗ್ರಾಹಕರು ತಮ್ಮ ವೈಯಕ್ತಿಕ ಮಾಹಿತಿಯಲ್ಲಿ (ಕೆವೈಸಿ) ಬದಲಾವಣೆ ಅಥವಾ ಅಪ್‌ಡೇಟ್ ಮಾಡಲು ಶಾಖೆಗೆ ಖುದ್ದು ಹಾಜರಾಗುವಂತೆ ಒತ್ತಾಯಿಸಬಾರದು ಎಂದು ಆರ್‌ಬಿಐ ತಾಕೀತು ಮಾಡಿದೆ.

ಕೆವೈಸಿ ಅಪ್‌ಡೇಟ್ ಮಾಡುವ ಸಂಬಂಧ ಮಾರ್ಗಸೂಚಿಗಳನ್ನು ಆರ್‌ಬಿಐ ಬಿಡುಗಡೆ ಮಾಡಿದೆ. ಗ್ರಾಹಕರು ತಮ್ಮ ಕೆವೈಸಿಗೆ ಸಂಬಂಧಿಸಿದಂತೆ ಸರಿಯಾದ ದಾಖಲೆಪತ್ರಗಳನ್ನು ಈಗಾಗಲೇ ನೀಡಿದ್ದರೆ ಮತ್ತು ತಮ್ಮ ವಿಳಾಸ ಬದಲಾಯಿಸದೇ ಇದ್ದರೆ ಕೆವೈಸಿ ಅಪ್‌ಡೇಟ್ ಮಾಡಲು ಶಾಖೆಗೆ ಖುದ್ದು ಹಾಜರಾಗುವ ಅಗತ್ಯ ಇಲ್ಲ ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ.

ಕೆವೈಸಿ ಮಾಹಿತಿಗಳಲ್ಲಿ ಬದಲಾವಣೆ ಇಲ್ಲದೇ ಇದ್ದರೆ ಗ್ರಾಹಕರು ಇ-ಮೇಲ್ ಐ.ಡಿ. ಮೂಲಕ, ಬ್ಯಾಂಕ್‌ಗೆ ನೀಡಿರುವ ಮೊಬೈಲ್ ಸಂಖ್ಯೆಯ ಮೂಲಕ, ಎಟಿಎಂ ಮೂಲಕ ಅಥವಾ ಡಿಜಿಟಲ್ ವ್ಯವಸ್ಥೆಗಳ (ಆನ್‌ಲೈನ್ ಬ್ಯಾಂಕಿಂಗ್/ ಇಂಟರ್‌ನೆಟ್ ಬ್ಯಾಂಕಿಂಗ್, ಮೊಬೈಲ್ ಆ್ಯಪ್) ಮೂಲಕ ಸ್ವಯಂ-ದೃಢೀಕರಣವನ್ನು ಸಂಬಂಧಪಟ್ಟ ಬ್ಯಾಂಕ್‌ಗೆ ಸಲ್ಲಿಸಬೇಕು.

ಗ್ರಾಹಕರು ಶಾಖೆಗೆ ಹಾಜರಾಗದೇ ಸ್ವಯಂ ದೃಢೀಕರಣ ಸಲ್ಲಿಸಲು ಬೇಕಾದ ವ್ಯವಸ್ಥೆಯನ್ನು ಬ್ಯಾಂಕ್‌ಗಳು ಕಲ್ಪಿಸಿಕೊಡಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ವಿಳಾಸದ ಬದಲಾವಣೆಯನ್ನು ಮಾತ್ರವೇ ಮಾಡಬೇಕಿದ್ದರೆ, ಶಾಖೆಗೆ ಹಾಜರಾಗದೇ ಡಿಜಿಟಲ್ ವ್ಯವಸ್ಥೆ, ಇ-ಮೇಲ್, ಅಥವಾ ಎಟಿಎಂ ಮೂಲಕವೇ ದಾಖಲೆ ಸಲ್ಲಿಸಬಹುದು. ವಿಳಾಸ ಬದಲಾಗಿರುವ ಬಗ್ಗೆ ಎರಡು ತಿಂಗಳ ಒಳಗಾಗಿ ಬ್ಯಾಂಕ್ ದೃಢೀಕರಿಸಲಿದೆ.

ಹೊಸದಾಗಿ ಕೆವೈಸಿ ಪ್ರಕ್ರಿಯೆಯನ್ನು ಶಾಖೆಗೆ ಖುದ್ದು ಹಾಜರಾಗಿ ಅಥವಾ ವಿಡಿಯೊ ಆಧಾರಿತ ಗುರುತು ದೃಢೀಕರಣ ಪ್ರಕ್ರಿಯೆ ಮೂಲಕ ಪೂರ್ಣಗೊಳಿಸಬಹುದು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಜಿಡಿಪಿ ಬೆಳವಣಿಗೆ ಶೇ 7ರಷ್ಟು: ಎನ್‌ಎಸ್‌ಒ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ (2022–23) ದೇಶದ ಅರ್ಥ ವ್ಯವಸ್ಥೆಯು ಶೇಕಡ 7ರಷ್ಟು ಬೆಳವಣಿಗೆ ಸಾಧಿಸುವ ಅಂದಾಜು ಮಾಡಲಾಗಿದೆ. ಹಿಂದಿನ ವರ್ಷದಲ್ಲಿ ಅರ್ಥ ವ್ಯವಸ್ಥೆಯು ಶೇ 8.7ರಷ್ಟು ಬೆಳವಣಿಗೆ ಕಂಡಿತ್ತು.

ಗಣಿಗಾರಿಕೆ ಹಾಗೂ ತಯಾರಿಕಾ ವಲಯದಲ್ಲಿ ಬೆಳವಣಿಗೆ ಚೆನ್ನಾಗಿ ಇಲ್ಲದ ಕಾರಣ, ಒಟ್ಟು ಆರ್ಥಿಕ ಬೆಳವಣಿಗೆಯು ಕಡಿಮೆ ಆಗಲಿದೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಶುಕ್ರವಾರ ಬಿಡುಗಡೆ ಮಾಡಿರುವ ಅಂದಾಜಿನ ಪ್ರಕಾರ, ತಯಾರಿಕಾ ವಲಯದ ಬೆಳವಣಿಗೆಯು ಶೇ 1.6ಕ್ಕೆ ಇಳಿಕೆಯಾಗುವ ಸಾಧ್ಯತೆ ಇದೆ. ಹಿಂದಿನ ಆರ್ಥಿಕ ವರ್ಷದಲ್ಲಿ ಈ ವಲಯದ ಬೆಳವಣಿಗೆಯು ಶೇ 9.9ರಷ್ಟು ಇತ್ತು.

ವಲಯ	ಈ ವರ್ಷದ ಬೆಳವಣಿಗೆ ಅಂದಾಜು	ಹಿಂದಿನ ವರ್ಷದ ಬೆಳವಣಿಗೆ
ಕೃಷಿ	3.5	3
ವ್ಯಾಪಾರ, ಹೋಟೆಲ್, ಸಾರಿಗೆ, ಸಂವಹನ, ಪ್ರಸಾರಕ್ಕೆ ಸಂಬಂಧಿಸಿದ ಸೇವೆಗಳು	13.7	11.1
ಹಣಕಾಸು, ರಿಯಲ್ ಎಸ್ಟೇಟ್, ವೃತ್ತಿಪರ ಸೇವೆಗಳು	6.4	4.2
ನಿರ್ಮಾಣ	9.1	11.5
ಸಾರ್ವಜನಿಕ ಆಡಳಿತ, ರಕ್ಷಣೆ	7.9	12.6

(ಬೆಳವಣಿಗೆ ಪ್ರಮಾಣವನ್ನು ಶೇಕಡಾವಾರು ಲೆಕ್ಕದಲ್ಲಿ ನೀಡಲಾಗಿದೆ)

ಗಣಿಗಾರಿಕೆ ಕ್ಷೇತ್ರವು ಈ ವರ್ಷ ಶೇ 2.4ರಷ್ಟು ಬೆಳವಣಿಗೆ ಕಾಣುವ ಅಂದಾಜು ಇದೆ. ಹಿಂದಿನ ವರ್ಷದಲ್ಲಿ ಗಣಿಗಾರಿಕೆ ವಲಯದ ಬೆಳವಣಿಗೆಯು ಶೇ 11.5ರಷ್ಟು ಆಗಿತ್ತು.

ದೇಶದ ಜಿಡಿಪಿ ಶೇ 6.8ರಷ್ಟು ಬೆಳವಣಿಗೆ ಕಾಣಬಹುದು ಎಂದು ಆರ್‌ಬಿಐ ಅಂದಾಜು ಮಾಡಿದೆ. ಅದರೆ ಎನ್‌ಎಸ್‌ಒ ಅಂದಾಜು ಆರ್‌ಬಿಐ ಅಂದಾಜಿಗಿಂತ ತುಸು ಹೆಚ್ಚಿದೆ.

ಆರ್‌ಬಿಐನಿಂದ ಗ್ರೀನ್ ಬಾಂಡ್

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ ಮೊದಲ ಬಾರಿಗೆ ಗ್ರೀನ್ ಬಾಂಡ್ ಹೊರಡಿಸಲಿದ್ದು, ಇದರಿಂದ ಸಿಗುವ ಬಂಡವಾಳವನ್ನು ಇಂಗಾಲ ಹೊರಸೂಸುವುದನ್ನು ಕಡಿಮೆ ಮಾಡುವ ಉದ್ದೇಶದ ಸರ್ಕಾರಿ ಯೋಜನೆಗಳಲ್ಲಿ ಬಳಸಲಾಗುತ್ತದೆ. ಒಟ್ಟು ₹ 16 ಸಾವಿರ ಕೋಟಿ ಮೌಲ್ಯದ ಬಾಂಡ್‌ಗಳನ್ನು ಎರಡು ಕಂತುಗಳಲ್ಲಿ ಹೊರಡಿಸಲಾಗುತ್ತದೆ.

ಜನವರಿ 25 ಹಾಗೂ ಫೆಬ್ರುವರಿ 9ರಂದು ಇದು ನಡೆಯಲಿದೆ. ಪರಿಸರ ಸ್ನೇಹಿ ಮೂಲಸೌಕರ್ಯ ಅಭಿವೃದ್ಧಿಗೆ ಗ್ರೀನ್ ಬಾಂಡ್ ಹೊರಡಿಸಲಾಗುವುದು ಎಂದು ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಪ್ರಕಟಿಸಿತ್ತು. ಐದು ವರ್ಷ ಹಾಗೂ 10 ವರ್ಷಗಳ ಅವಧಿಯ ಗ್ರೀನ್ ಬಾಂಡ್‌ಗಳು ಲಭ್ಯವಿರಲಿವೆ.

ಸಂಕ್ಷಿಪ್ತ ಸುದ್ದಿ

ಎಲ್‌ಐಸಿ ನ್ಯೂ ಜೀವನ್ ಶಾಂತಿ ಯೋಜನೆ ಪರಿಷ್ಕರಣೆ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ತನ್ನ 'ನ್ಯೂ ಜೀವನ ಶಾಂತಿ' ಯೋಜನೆಯನ್ನು ಪರಿಷ್ಕರಿಸಿದ್ದು, ಯೋಜನೆಯಲ್ಲಿ ವಾರ್ಷಿಕ ಪಾವತಿ ಮೊತ್ತವನ್ನು (ಆ್ಯನ್ಯುಟಿ ದರ) ಹೆಚ್ಚಿಸಲಾಗಿದೆ. ಖರೀದಿ ದರ ₹ 1000ಕ್ಕೆ ₹3 ರಿಂದ ₹ 9.75ರವರೆಗೆ ಉತ್ತೇಜಕ ಮೊತ್ತ ಸಿಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಏಕಕಂತಿನ ವಿಮೆ ಯೋಜನೆ ಇದಾಗಿದ್ದು, ತಕ್ಷಣದಿಂದ ಅಥವಾ ಮುಂದೂಡಿದ ವರ್ಷಗಳಿಂದ ಪಿಂಚಣಿ ಪಡೆಯಬಹುದು. ವೈಯಕ್ತಿಕ ಅಥವಾ ಜಂಟಿಯಾಗಿ ಈ ಯೋಜನೆ ಮಾಡಿಸಬಹುದು ಎಂದು ಹೇಳಿದೆ.

ರೂಪಾಯಿ ವಹಿವಾಟು: ದಕ್ಷಿಣ ಏಷ್ಯಾ ಜತೆ ಚರ್ಚೆ

ನವದೆಹಲಿ (ಪಿಟಿಐ): ದಕ್ಷಿಣ ಏಷ್ಯಾದ ದೇಶಗಳೊಂದಿಗೆ ರೂಪಾಯಿಯಲ್ಲಿ ವಹಿವಾಟು ನಡೆಸುವ ಬಗ್ಗೆ ಕೇಂದ್ರ ಸರ್ಕಾರ ಮತ್ತು ಕೇಂದ್ರೀಯ ಬ್ಯಾಂಕ್ ನಡುವೆ ಚರ್ಚೆ ನಡೆದಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಶುಕ್ರವಾರ ಹೇಳಿದ್ದಾರೆ.

ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಅಧಿವೇಶನದಲ್ಲಿ ಮಾತನಾಡಿದ ಅವರು, ರೂಪಾಯಿಯಲ್ಲಿ ಅಂತರರಾಷ್ಟ್ರೀಯ ವ್ಯಾಪಾರ ನಡೆಸುವ ಸಂಬಂಧ ದಕ್ಷಿಣ ಏಷ್ಯಾದ ಕೆಲವು ದೇಶಗಳೊಂದಿಗೆ ಈಗಾಗಲೇ ಚರ್ಚೆ ಆರಂಭಿಸಲಾಗಿದೆ ಎಂದು ಹೇಳಿದ್ದಾರೆ.

ಅಂಧ ಮಹಿಳೆಯರ ಕ್ರಿಕೆಟ್ 9ರಿಂದ

ಪ್ರಜಾವಾಣಿ ವಾರ್ತೆ

ಕರ್ನಾಟಕ ಅಂಧ ಮಹಿಳಾ ಕ್ರಿಕೆಟ್ ತಂಡದ ಆಲ್‌ರೌಂಡರ್ ಕಾವ್ಯಾ (ಎಡ), ನಾಯಕಿ ವರ್ಷಾ ಅವರೊಂದಿಗೆ ಸಮರ್ಥನಂ ಟ್ರಸ್ಟ್ ಸಂಸ್ಥಾಪಕ ಕಾರ್ಯನಿರ್ವಾಹಕ ನಿರ್ದೇಶಕ ಜಿ.ಕೆ. ಮಹಾಂತೇಶ್ ಇದ್ದಾರೆ –ಪ್ರಜಾವಾಣಿ ಚಿತ್ರ

ಬೆಂಗಳೂರು: ಭಾರತ ಅಂಧರ ಕ್ರಿಕೆಟ್ ಸಂಸ್ಥೆ ಮತ್ತು ಸಮರ್ಥನಂ ಟ್ರಸ್ಟ್ ಫಾರ್ ದಿ ಡಿಸೇಬಲ್ಡ್ ಸಹಯೋಗದೊಂದಿಗೆ ಇದೇ 9ರಿಂದ 13ರವರೆಗೆ ಇಂಡಸ್‌ಇಂಡ್ ಬ್ಯಾಂಕ್ ಮಹಿಳಾ ರಾಷ್ಟ್ರೀಯ ಟಿ20 ಕ್ರಿಕೆಟ್ ಟೂರ್ನಿ ಆಯೋಜಿಸಲಾಗಿದೆ.

ಟೂರ್ನಿಯು ಲೀಗ್ ಮತ್ತು ನಾಕೌಟ್ ಮಾದರಿಯಲ್ಲಿ ನಡೆಯಲಿದೆ. 16 ರಾಜ್ಯಗಳ ತಂಡಗಳು ಸ್ಪರ್ಧಿಸಲಿವೆ. ಬರ್ಮಿಂಗ್ ಹ್ಯಾಮ್ ನ 2023ರ ವಿಶ್ವ ಅಂಧರ ಕ್ರೀಡಾಕೂಟದಲ್ಲಿ ಭಾಗವಹಿಸುವ ತಂಡವನ್ನೂ ಈ ಸಂದರ್ಭದಲ್ಲಿ ಆಯ್ಕೆ ಮಾಡಲಾಗುವುದು.

ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಸಮರ್ಥನಂ ಟ್ರಸ್ಟ್ ಸಂಸ್ಥಾಪಕ ಜಿ.ಕೆ. ಮಹಾಂತೇಶ್, 'ಪುರುಷರ ವಿಭಾಗದಲ್ಲಿ ಅಂಧರ ಕ್ರಿಕೆಟ್ ಇವತ್ತು ವಿಶ್ವಮಟ್ಟಕ್ಕೆ ಬೆಳೆದಿದೆ. ನಮ್ಮ ದೇಶದ ತಂಡವೂ ವಿಶ್ವ ಚಾಂಪಿಯನ್ ಆಗಿರುವುದು ಹೆಮ್ಮೆಯ ವಿಷಯ. ಇದೀಗ ಮಹಿಳಾ ತಂಡವೂ ಅಮೋಘ ಸಾಧನೆ ಮಾಡುತ್ತಿದೆ. ಇದರಿಂದಾಗಿ ಈ ವಿಭಾಗದಲ್ಲಿಯೂ ಉತ್ತಮ ಬೆಳವಣಿಗೆ ಇದೆ. ಎಲ್ಲ ರಾಜ್ಯಗಳ ಪ್ರತಿಭೆಗಳ ಉತ್ತೇಜನಕ್ಕಾಗಿ ರಾಷ್ಟ್ರೀಯ ಅಂಧ ಮಹಿಳೆಯರ ಕ್ರಿಕೆಟ್ ಟೂರ್ನಿ ಆಯೋಜಿಸಲಾಗಿದೆ. ಹೋದ ವರ್ಷ ನಮ್ಮ ರಾಜ್ಯ ತಂಡವು ಚಾಂಪಿಯನ್ ಆಗಿತ್ತು' ಎಂದರು.

ಬೆಂಗಳೂರಿನ ನಾಲ್ಕು ಮೈದಾನಗಳಲ್ಲಿ ಪಂದ್ಯಗಳು ನಡೆಯಲಿವೆ. ಬೆಂಗಳೂರು, ಆಲ್ವಿಯೋರ್ ಸ್ಪೋರ್ಟ್ಸ್ ಗ್ರೀನ್ ಪಾರ್ಕ್, ಸಚಿನ್ ತೆಂಡೂಲ್ಕರ್ ಟರ್ಫ್ ಗ್ರೌಂಡ್, ರಾಮಸಾಗರ, ಕ್ರಿಕ್ ಬಜ್ ಕ್ರಿಕೆಟ್ ಅಕಾಡೆಮಿ, ಚಂದಾಪುರ ಮತ್ತು ಬನ್ನೇರುಘಟ್ಟ ರಸ್ತೆಯ ಕ್ರಿಕ್ ಬಜ್ ಕ್ರಿಕೆಟ್ ಅಕಾಡೆಮಿಯಲ್ಲಿ 24 ಲೀಗ್ ಪಂದ್ಯಗಳು ನಡೆಯಲಿವೆ. ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳು ಕ್ರಮವಾಗಿ ಜನವರಿ 12 ಮತ್ತು 13ರಂದು ಅಲ್ವಿಯೊರ್ ಸ್ಪೋರ್ಟ್ಸ್ ಗ್ರೀನ್ ಪಾರ್ಕ್‌ನಲ್ಲಿ ನಡೆಯಲಿವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ತಂಡದ ನಾಯಕಿ ವರ್ಷಾ ಹಾಗೂ ಆಲ್‌ರೌಂಡರ್ ಕಾವ್ಯಾ ತಮ್ಮ ಅನುಭವ ಹಂಚಿಕೊಂಡರು.

ಟೂರ್ನಿಯ ಉದ್ಘಾಟನೆಯು ಗಾಂಧಿನಗರದಲ್ಲಿರುವ ಜನವರಿ 8 ರಂದು ಸಂಜೆ 6:30ಕ್ಕೆ ವಿವಿಡಸ್ ಹೋಟೆಲ್‌ನಲ್ಲಿ ನಡೆಯಲಿದೆ.

ಹರ್ಮನ್ ಪ್ರಚಾರ ರಾಯಭಾರಿ: ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್ ಪ್ರೀತ್ ಕೌರ್ ಅವರನ್ನು ಅಂಧ ಮಹಿಳೆಯರ ಕ್ರಿಕೆಟ್‌ಗೆ ಪ್ರಚಾರ ರಾಯಭಾರಿಯನ್ನಾಗಿ ನೇಮಕ ಮಾಡಲಾಗಿದೆ.

ಸೇಥಿ ಆರೋಪ ತಳ್ಳಿ ಹಾಕಿದ ಎಸಿಸಿ

ಕ್ವಾಲಾಲಂಪುರ (ಪಿಟಿಐ): ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಮುಖ್ಯಸ್ಥ ಹಾಗೂ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ವಿರುದ್ಧ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಮುಖ್ಯಸ್ಥ ನಜಮ್ ಸೇಥಿ ಮಾಡಿರುವ ಆರೋಪಗಳನ್ನು ಎಸಿಸಿ ತಳ್ಳಿಹಾಕಿದೆ.

'ಜಯ್ ಶಾ ಅವರು ಪ್ರಕಟಿಸಿರುವ ಎಸಿಸಿಯ ಎರಡು ವರ್ಷದ ವೇಳಾಪಟ್ಟಿಯು ಏಕಪಕ್ಷೀಯವಾಗಿದೆ' ಎಂದು ಸೇಥಿ ಗುರುವಾರ ಆರೋಪಿಸಿದ್ದರು.

'ಪಿಸಿಬಿ ಸೇರಿದಂತೆ ಎಸಿಸಿಯ ಎಲ್ಲ ಸದಸ್ಯ ರಾಷ್ಟ್ರಗಳಿಗೆ ಎರಡು ವರ್ಷಗಳ ವೇಳಾಪಟ್ಟಿಯನ್ನು ಡಿ.22 ರಂದೇ ಕಳುಹಿಸಲಾಗಿತ್ತು. ಪಿಸಿಬಿಯಿಂದ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ' ಎಂದು ಎಸಿಸಿ ಶುಕ್ರವಾರ ಹೊರಡಿಸಿದ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದೆ.

ಟೆನಿಸ್: ಫೈನಲ್‌ಗೆ ಶ್ರೀರಾಮ್–ಜೀವನ್

ಪುಣೆ (ಪಿಟಿಐ): ಭಾರತದ ಎನ್. ಶ್ರೀರಾಮ್ ಬಾಲಾಜಿ ಮತ್ತು ಜೀವನ್ ನೆಡುಂಚೆಜಿಯನ್ ಅವರು ಟಾಟಾ ಓಪನ್ ಮಹಾರಾಷ್ಟ್ರ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಫೈನಲ್ ತಲುಪಿದರು. ಸೆಮಿಫೈನಲ್‌ನಲ್ಲಿ ಈ ಜೋಡಿಯು 6–4, 7–5ರಿಂದ ಬ್ರಿಟನ್‌ನ ಜೂಲಿಯನ್ ಕ್ಯಾಶ್ ಮತ್ತು ಹೆನ್ರಿ ಪ್ಯಾಟನ್ ಎದುರು ಗೆದ್ದರು.

ಪ್ರಾಣೇಶ್ ಭಾರತದ 79ನೇ ಜಿಎಂ



ಪ್ರಾಣೇಶ್

ಸ್ಟಾಕ್‌ಹೋಮ್ (ಪಿಟಿಐ): ತಮಿಳುನಾಡಿನ ಪ್ರಾಣೇಶ್ ಅವರು ಭಾರತದ 79ನೇ ಚೆಸ್ ಗ್ರ್ಯಾಂಡ್‌ಮಾಸ್ಟರ್ ಎನಿಸಿಕೊಂಡರು. 16 ವರ್ಷದ ಅವರು ಇಲ್ಲಿ ನಡೆದ ರಿಲ್ಟನ್ ಕಪ್ ಟೂರ್ನಿ ಗೆದ್ದು ಈ ಸಾಧನೆ ಮಾಡಿದರು.

ಜಿಎಂ ಪಟ್ಟಕ್ಕೆ ಅಗತ್ಯವಿದ್ದ 2,500 ಎಲೊ ಪಾಯಿಂಟ್ಸ್ ಗಡಿ ತಲುಪಲು ಅವರು ಯಶಸ್ವಿಯಾದರು. ಚೆಸ್‌ನಲ್ಲಿ ಗ್ರ್ಯಾಂಡ್‌ಮಾಸ್ಟರ್ ಪಟ್ಟ ಲಭಿಸಬೇಕಾದರೆ, ಮೂರು ಜಿಎಂ ನಾರ್ಮ್‌ಗಳನ್ನು ಪಡೆಯುವ ಜತೆಯಲ್ಲೇ 2,500 ಎಲೊ ಪಾಯಿಂಟ್ಸ್ ಹೊಂದಬೇಕು.

ಪ್ರಾಣೇಶ್, ಎಂಟು ಸುತ್ತುಗಳಲ್ಲಿ ಗೆಲುವು ಪಡೆದು ಎಂಟು ಪಾಯಿಂಟ್ಸ್ ಸಂಗ್ರಹಿಸಿದರು. 2ನೇ ಸ್ಥಾನ ಪಡೆದ ಸ್ವೀಡನ್‌ನ ಕಾನ್ ಕುಸುಕ್ಸರಿ ಮತ್ತು ಲಾತ್ವಿಯದ ನಿಕಿತ ಮೆಶ್ಕೊವ್ಸ್ ಅವರಿಗಿಂತ ಪೂರ್ಣ ಒಂದು ಪಾಯಿಂಟ್ಸ್ ಮುನ್ನಡೆ ಗಳಿಸಿದರು.

ಗಾಲ್ಫ್: ಅವನಿ ಪ್ರಶಾಂತ್‌ಗೆ 6ನೇ ಸ್ಥಾನ

ಮೆಲ್ಬರ್ನ್ (ಪಿಟಿಐ): ಯುವ ಆಟಗಾರ್ತಿ ಅವನಿ ಪ್ರಶಾಂತ್ ಅವರು ಶುಕ್ರವಾರ ಇಲ್ಲಿ ಕೊನೆಗೊಂಡ ಆಸ್ಟ್ರೇಲಿಯಾ ಮಾಸ್ಟರ್ ಅಮೆಚೂರ್ ಗಾಲ್ಫ್ ಟೂರ್ನಿಯಲ್ಲಿ ಆರನೇ ಸ್ಥಾನ ಪಡೆದುಕೊಂಡರು.

ಮೆಲ್ಬರ್ನ್‌ನ ಸದರ್ನ್ ಗಾಲ್ಫ್ ಕ್ಲಬ್‌ನಲ್ಲಿ ನಡೆದ ಟೂರ್ನಿಯ ನಾಲ್ಕು ಸುತ್ತುಗಳ ಸ್ಪರ್ಧೆಯನ್ನು ಅವರು ಒಟ್ಟು 297 ಸ್ಕೋರ್‌ಗಳೊಂದಿಗೆ ಕೊನೆಗೊಳಿಸಿದರು. ಜಪಾನ್‌ನ ಯುನಾ ಅರಾಕಿ (280) ಅಗ್ರಸ್ಥಾನ ಪಡೆದರೆ, ಮಮಿಕ ಶಿಂಚಿ (286) ಎರಡನೇ ಸ್ಥಾನ ತಮ್ಮದಾಗಿಸಿಕೊಂಡರು.

ಪಾಕ್–ಕಿವೀಸ್ ಪಂದ್ಯ ಡ್ರಾ

ಕರಾಚಿ (ರಾಯಿಟರ್ಸ್): ಅಂತಿಮ ದಿನದಾಟ ರೋಚಕತೆಯಿಂದ ಕೂಡಿದ್ದರೂ, ಪಾಕಿಸ್ತಾನ– ನ್ಯೂಜಿಲೆಂಡ್ ತಂಡಗಳ ನಡುವಿನ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತು.

ಕರಾಚಿಯಲ್ಲಿ ಶುಕ್ರವಾರ ಕೊನೆಗೊಂಡ ಪಂದ್ಯದಲ್ಲಿ ಪಾಕಿಸ್ತಾನ 15 ರನ್‌ಗಳಿಂದ ಹಾಗೂ ನ್ಯೂಜಿ ಲೆಂಡ್ ತಂಡ ಕೇವಲ 1 ವಿಕೆಟ್ ಅಂತರದಿಂದ ಜಯದ ಅವಕಾಶ ಕಳೆದುಕೊಂಡಿತು. ಜಯಕ್ಕೆ 319 ರನ್‌ಗಳ ಗುರಿ ಪಡೆದಿದ್ದ ಆತಿಥೇಯ ತಂಡ ಪಂದ್ಯ ಡ್ರಾದಲ್ಲಿ ಕೊನೆಗೊಂಡಾಗ 9 ವಿಕೆಟ್‌ಗಳಿಗೆ 304 ರನ್ ಗಳಿಸಿತ್ತು. ಸರಣಿಯ ಮೊದಲ ಪಂದ್ಯವೂ ಡ್ರಾ ಆಗಿತ್ತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 449: ಪಾಕಿಸ್ತಾನ: 408. ಎರಡನೇ ಇನಿಂಗ್ಸ್: ನ್ಯೂಜಿಲೆಂಡ್ 5 ವಿಕೆಟ್‌ಗಳಿಗೆ 277 ಡಿಕ್ಲೇರ್ಡ್. ಪಾಕಿಸ್ತಾನ 90 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 304 (ಶಾನ್ ಮಸೂದ್ 35, ಸರ್ಫರಾಜ್ ಅಹ್ಮದ್ 118, ಸೌದ್ ಶಕೀಲ್ 32, ಮೈಕಲ್ ಬ್ರೇಸ್‌ವೆಲ್ 75ಕ್ಕೆ 4, ಟಿಮ್ ಸೌಥಿ 43ಕ್ಕೆ 2, ಇಶ್ ಸೋಧಿ 59ಕ್ಕೆ 2) ಫಲಿತಾಂಶ: ಪಂದ್ಯ ಡ್ರಾ

ಬೆಂಗಳೂರು ರೇಸ್

ಕರಣ್‌ವೀರ್ ಗೆಲ್ಲುವ ನಿರೀಕ್ಷೆ

ಚೀಫ್ ಮಿನಿಸ್ಟರ್ಸ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕರಣ್‌ವೀರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:45ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಅನ್ನೆ ಬೊಲೀನ್ 7, ಸ್ಮೈಲ್ ಅರೌಂಡ್ 3, ಟೈಗರ್ ರಿಟರ್ನ್ಸ್ 1
2ನೇ ರೇಸ್: ಸದರನ್ ಅರಿಸ್ಟೊಕ್ರಾಟ್ 6, ಕ್ಯಾಪ್ರಿಯಾಟಿ 3, ಎಮ್ಮ 7
3ನೇ ರೇಸ್: ಇನ್‌ವಿನ್ಸಿಬಲ್ 1, ಸ್ಟೆಲ್ಲಾಂಟಸ್ 2, ಸೀಕಿಂಗ್ ದಿ ಸ್ಟಾರ್ಸ್ 7
4ನೇ ರೇಸ್: ಅರ್ಟೆಮಿಸ್ ಇಗ್ನೇಸಿಯಾ 1, ಸ್ಯಾಫೈರ್ 5, ಕ್ವೀನ್ ಸ್ಪಿರಿಟ್ 3
5ನೇ ರೇಸ್: ಕರಣ್‌ವೀರ್ 2, ಸ್ಪೀಡ್‌ಸ್ಟರ್ 4
6ನೇ ರೇಸ್: ಮಿರಾ 2, ಫಿಲಾಸಫಿ 3, ವಿಕ್ಟೋರಿಯಾ ಪಂಚ್ 9
7ನೇ ರೇಸ್: ಸ್ಟೆಪ್ ಟು ಡೆಸ್ಟಿನಿ 3, ಅಹರ್ನೆ 2, ದಿ ಅಥಾಬಾಸ್ಕ 6
8ನೇ ರೇಸ್: ಸ್ಟಾರಿ ವಿಂಡ್ 1, ಬಾಲ್ಟಿಮೋರ್ 5, ಚೈನ್ ಆಫ್ ಥಾಟ್ಸ್ 8

ಉತ್ತಮ ಬೆಟ್: ಇನ್‌ವಿನ್ಸಿಬಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಕೋವಿಡ್: ಅಮೆರಿಕದಲ್ಲಿ ಹೆಚ್ಚಿದ ತಪಾಸಣೆ

ನೆವಾರ್ಕ್, ಅಮೆರಿಕ (ಎಪಿ): ಚೀನಾದಲ್ಲಿ ಕೋವಿಡ್ ಸೋಂಕು ಪ್ರಕರಣಗಳು ಗಣನೀಯವಾಗಿ ಏರಿಕೆ ಕಾಣುತ್ತಿರುವ ಹಿಂದೆಯೇ, ಅಮೆರಿಕವು ವಾಯುಮಾರ್ಗದಲ್ಲಿ ಬರುವ ಪ್ರಯಾಣಿಕರನ್ನು ತಪಾಸಣೆಗೆ ಒಳಪಡಿಸುವ ಕ್ರಮವನ್ನು ಹೆಚ್ಚಿಸಿದೆ. ಅಮೆರಿಕದ ಕ್ರಮಕ್ಕೆ ನಾಗರಿಕರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ಕೋವಿಡ್‌ನ ರೂಪಾಂತರ ತಳಿಪತ್ತೆ ಕ್ರಮವಾಗಿ ಸರ್ಕಾರ ವಿಮಾನನಿಲ್ದಾಣದಲ್ಲಿ ಪ್ರಯಾಣಿಕರ ತಪಾಸಣೆಗೆ ಒತ್ತು ನೀಡಿದೆ. ಲಾಸ್ ಏಂಜಲೀಸ್‌ನ ವಿಮಾನ ನಿಲ್ದಾಣ ಸೇರಿದಂತೆ ಏಳು ಪ್ರಮುಖ ನಿಲ್ದಾಣಗಳಲ್ಲಿ ತಪಾಸಣೆ ಮಾಡಲಾಗುತ್ತಿದೆ.

ವಿವಿಧ ದೇಶಗಳಿಂದ ಸುಮಾರು 500 ವಿಮಾನಗಳಲ್ಲಿ ಬಂದ ಪ್ರಯಾಣಿಕರ ತಪಾಸಣೆ ನಡೆಸಿದ್ದು, ಈ ಪೈಕಿ ಹೆಚ್ಚಿನ ವಿಮಾನಗಳು ಚೀನಾ ಮತ್ತು ಆಸುಪಾಸಿನ ನಗರಗಳಿಂದ ಬರುವ ವಿಮಾನಗಳಾಗಿವೆ ಎಂಬುದು ಗಮನಾರ್ಹ.

ಸದ್ಯ ಚೀನಾ, ಹಾಂಗ್‌ಕಾಂಗ್‌ನಿಂದ ಬರುವ ಪ್ರಯಾಣಿಕರು, ಪ್ರಯಾಣಕ್ಕೆ ಎರಡು ದಿನ ಮೊದಲು ಕೋವಿಡ್ ಪರೀಕ್ಷೆಗೆ ಒಳಪಟ್ಟು, ನೆಗೆಟಿವ್ ವರದಿ ನೀಡುವುದು ಕಡ್ಡಾಯ ಎಂದು ವಿಜ್ಞಾನಿಗಳು ಸಲಹೆ ಮಾಡಿದ್ದಾರೆ.

'ಕಟ್ಟುನಿಟ್ಟಿನ ತಪಾಸಣೆ ನಡೆಸದೇ ಏನಾಗುತ್ತಿದೆ ಎಂದು ತಿಳಿಯುವುದು ಕಷ್ಟವಾಗಲಿದೆ' ಎಂದು ಜಾನ್ ಹಾಕಿನ್ಸ್ ಯೂನಿವರ್ಸಿಟಿಯ ಸಾಂಕ್ರಾಮಿಕ ಸೋಂಕು ಪರಿಣತ ಡಾ.ಸ್ಟುವರ್ಟ್ ಕ್ಯಾಂಬೆಲ್ ರೇ ಅಭಿಪ್ರಾಯಪಡುತ್ತಾರೆ.

ಪ್ರಸ್ತುತ ಚೀನಾದಲ್ಲಿ ಸೋಂಕು ಪ್ರಮಾಣ ಹೆಚ್ಚಲು ಬಿಎಫ್.7 ರೂಪಾಂತರ ತಳಿ ಕಾರಣ. ಸಿಡಿಸಿ ವರದಿ ಪ್ರಕಾರ, ಈ ಸೋಂಕು ಈಗಾಗಲೇ ಅಮೆರಿಕದಲ್ಲಿಯೂ ಕಂಡುಬಂದಿದ್ದು, ಒಟ್ಟು ಪ್ರಕರಣದಲ್ಲಿ ಶೇ 2ರಷ್ಟಿದೆ.

ಎಚ್ಚರವಾಗಿರಿ, ಚೀನಾ ಸಲಹೆ (ಎಪಿ): ಚೀನಾದಲ್ಲಿ ಇದೇ ತಿಂಗಳು ಹೊಸ ವರ್ಷಾಚರಣೆ ನಿಮಿತ್ತ ಜನದಟ್ಟಣೆ ಹೆಚ್ಚಲಿರುವ ಕಾರಣ, ಸೋಂಕು ತಡೆಯಲು ಎಚ್ಚರಿಕೆ ವಹಿಸುವಂತೆ ಚೀನಾ ಸರ್ಕಾರ ಜನತೆಗೆ ಸಲಹೆ ನೀಡಿದೆ.

21ಕ್ಕೂ ಹೆಚ್ಚು ದೇಶಗಳಲ್ಲಿ ಕಡ್ಡಾಯ ತಪಾಸಣೆ

ವಾಷಿಂಗ್ಟನ್ (ರಾಯಿಟರ್ಸ್): ಭಾರತ ಸೇರಿದಂತೆ 21 ರಾಷ್ಟ್ರಗಳು ಮತ್ತು ಫ್ರಾನ್ಸ್ ಒಳಗೊಂಡು ಐರೋಪ್ಯ ಒಕ್ಕೂಟದ ಸದಸ್ಯ ರಾಷ್ಟ್ರಗಳು ಕೋವಿಡ್ ಸೋಂಕು ತಡೆ ಕ್ರಮವಾಗಿ ಚೀನಾದಿಂದ ಬರುವ ಪ್ರಯಾಣಿಕರಿಗೆ ತಪಾಸಣೆಯನ್ನು ಕಡ್ಡಾಯಗೊಳಿಸಿವೆ.

ಒಂದೆಡೆ ಕೋವಿಡ್ ಸೋಂಕು ತಡೆ ಮುಂಜಾಗ್ರತೆ ಕ್ರಮಗಳನ್ನು ಚೀನಾ ಸಡಿಲಗೊಳಿಸಿದ್ದರೆ, ಆ ದೇಶದ ಪ್ರಯಾಣಿಕರಿಗೆ ವಿದೇಶಗಳಲ್ಲಿ ನಿರ್ಬಂಧ ಕ್ರಮಗಳು ಹೆಚ್ಚುತ್ತಿವೆ.

ಭಾರತದಲ್ಲಿ ಚೀನಾ, ಹಾಂಗ್‌ಕಾಂಗ್, ಜಪಾನ್, ದಕ್ಷಿಣ ಕೊರಿಯಾ, ಸಿಂಗಪುರ, ಥೈಲ್ಯಾಂಡ್‌ನಿಂದ ಬರುವ ಪ್ರಯಾಣಿಕರಿಗೆ ಕೋವಿಡ್ ನೆಗೆಟಿವ್ ವರದಿ ಹಾಜರಿಯನ್ನು ಕಡ್ಡಾಯಗೊಳಿಸಲಾಗಿದೆ. ಈ ದೇಶಗಳಿಂದ ಬರುವ ಪ್ರಯಾಣಿಕರಿಗೆ ಸೋಂಕು ದೃಢಪಟ್ಟರೆ, ಕ್ಯಾರಂಟೈನ್‌ನಲ್ಲಿ ಇರಿಸಲಾಗುತ್ತದೆ.

ಕರಗುವ ಹಾದಿಯಲ್ಲಿ ಹಿಮನದಿಗಳು

ವಾಷಿಂಗ್ಟನ್(ಎ.ಪಿ): ವಿಜ್ಞಾನಿಗಳು ಅಂದಾಜು ಮಾಡಿದ್ದಕ್ಕಿಂತಲೂ ವೇಗವಾಗಿ ದಿನೇ ದಿನೇ ಹಿಮನದಿಗಳ ವ್ಯಾಪ್ತಿ ಕುಗ್ಗುತ್ತಿದ್ದು, ಕ್ರಮೇಣ ಕಣ್ಮರೆಯಾಗುವ ಹಂತವನ್ನು ತಲುಪುತ್ತಿವೆ.

ಪ್ರಸ್ತುತ ಇರುವ ಜಾಗತಿಕ ತಾಪಮಾನ ಬದಲಾವಣೆಯ ವೇಗ, ಬೆಳವಣಿಗೆ ಕ್ರಮವನ್ನು ಆಧರಿಸಿ ಹೇಳುವುದಾದರೆ ಈ ಶತಮಾನದ ಅಂತ್ಯದ ವೇಳೆಗೆ ಮೂರನೇ ಒಂದರಷ್ಟು ಹಿಮನದಿಗಳು ಕರಗುವ ಸಾಧ್ಯತೆಗಳಿವೆ ಎಂದು ಹೊಸ ಅಧ್ಯಯನವೊಂದು ಹೇಳಿದೆ.

ವಿಶ್ವದ ರಾಷ್ಟ್ರಗಳು ಅಂತರರಾಷ್ಟ್ರೀಯ ಗುರಿ ಸಾಧನೆ ನಿಟ್ಟಿನಲ್ಲಿ ತಾಪಮಾನ ಬದಲಾವಣೆ ತಡೆಯಲು ಬದ್ಧರಾದರೆ ಹಿಮನದಿಗಳು ಕರಗುವಿಕೆಯನ್ನು ಭಾಗಶಃ ತಡೆಯಬಹುದು. ಆದರೆ, ಹೆಚ್ಚಿನ ವಿಜ್ಞಾನಿಗಳ ಪ್ರಕಾರ, ಇದು ಅಸಾಧ್ಯ. ವಿಶ್ವದಲ್ಲಿ ಹಿಮನದಿಗಳಲ್ಲಿ ಶೇ 50ರಷ್ಟು ಕಣ್ಮರೆಯಾಗಬಹುದು ಎಂದು ಅಧ್ಯಯನ ವರದಿ ಹೇಳಿದೆ.

ತಾಪಮಾನ ಬದಲಾವಣೆಯ ವೇಗ ಇನ್ನಷ್ಟು ಹೆಚ್ಚಿದರೂ 2100ನೇ ವರ್ಷದ ವೇಳೆಗೆ ಶೇ 83ರಷ್ಟು ಹಿಮನದಿಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳಲಿವೆ ಎಂದು ಜರ್ನಲ್ ಸೈನ್ಸ್ ನಿಯತಕಾಲಿಕದಲ್ಲಿ ಪ್ರಕಟವಾಗಿರುವ ಈ ಅಧ್ಯಯನ ವರದಿಯು ಹೇಳಿದೆ. ಜಾಗತಿಕ ತಾಪಮಾನದ ವಿಭಿನ್ನ ಏರುಗತಿ ಪ್ರಮಾಣಕ್ಕೆ ಅನುಗುಣವಾಗಿ ಎಷ್ಟು ಹಿಮನದಿಗಳು ಅಸ್ತಿತ್ವ ಕಳೆದುಕೊಳ್ಳಬಹುದು, ಎಷ್ಟು ಟನ್ ನೀರ್ಗಲ್ಲು ಕರಗಬಹುದು, ಎಷ್ಟು ಪ್ರಮಾಣದ ನೀರು ಸಮುದ್ರ ಸೇರಬಹುದು, ಸಮುದ್ರದ ಮಟ್ಟ ಎಷ್ಟು ಏರಬಹುದು ಎಂದು ವಿಜ್ಞಾನಿಗಳು ಲೆಕ್ಕಾಚಾರ ಮಾಡಿದ್ದಾರೆ.

ಕೈಗಾರಿಕಾ ಪ್ರಗತಿಯ ಪೂರ್ವಕ್ಕೆ ಹೋಲಿಸಿದರೆ ವಿಶ್ವದಲ್ಲಿ ಈಗ ತಾಪಮಾನ ಏರಿಕೆಯ ಪ್ರಮಾಣ 2.7 ಡಿಗ್ರಿ ಸೆಲ್ಸಿಯಸ್ ಇದೆ. ಇದರ ಪ್ರಕಾರ, 2100ರ ಅಂತ್ಯಕ್ಕೆ ಶೇ 32ರಷ್ಟು ಹಿಮನದಿಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳಲಿವೆ. ಅಂದರೆ, ಇದರರ್ಥ 28.5 ಟ್ರಿಲಿಯನ್ ಟನ್ ನೀರ್ಗಲ್ಲು ಕರಗಲಿದೆ. ಪರಿಣಾಮ, ಸಮುದ್ರದ ಮಟ್ಟವು 4.5 ಇಚ್ಚಿನಷ್ಟು (115 ಮಿಲಿ ಮೀಟರ್) ಹೆಚ್ಚಲಿದೆ. ಸದ್ಯ, ಮಂಜಿನ ಹಾಳೆಗಳ ಕರಗುವಿಕೆಯ ಪರಿಣಾಮ ಸಮುದ್ರದ ವ್ಯಾಪ್ತಿಯು ವಿಸ್ತಾರವಾಗುತ್ತಿದೆ.

ಕದನ ವಿರಾಮ, ರಷ್ಯಾದ ಕಾರ್ಯತಂತ್ರ: ಉಕ್ರೇನ್

ಕೀವ್ (ಎಪಿ): ಉಕ್ರೇನ್‌ನಲ್ಲಿ ಇರುವ ತನ್ನ ಸೇನೆಗೆ 36 ಗಂಟೆಗಳ ಕಾಲ ಕದನವಿರಾಮ ಪಾಲಿಸಲು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಆದೇಶಿಸಿರುವುದು ಕಾರ್ಯತಂತ್ರ ಎಂದು ಉಕ್ರೇನ್ ಅಧಿಕಾರಿಗಳು ಶಂಕಿಸಿದ್ದಾರೆ.

ಅದರೆ, ಇದಕ್ಕೆ ಪ್ರತಿಯಾಗಿ ಉಕ್ರೇನ್ ಕೂಡ ಕದನವಿರಾಮ ಘೋಷಿಸಲಿದೆಯೇ ಎಂದು ಖಚಿತ ಪಡಿಸಿಲ್ಲ. ಇನ್ನೊಂದೆಡೆ, ರಷ್ಯಾ ಕೂಡ ಈ ಅವಧಿಯಲ್ಲಿ ಉಕ್ರೇನ್ ದಾಳಿ ನಡೆಸಿದರೆ ಪ್ರತ್ಯುತ್ತರ ನೀಡಲಿದೆಯೇ ಎಂದು ಸ್ಪಷ್ಟಪಡಿಸಿಲ್ಲ.

ಯುದ್ಧ ಆರಂಭವಾದ 11 ತಿಂಗಳ ತರುವಾಯ ರಷ್ಯಾ ಇದೇ ಮೊದಲ ಬಾರಿಗೆ ಕದನವಿರಾಮವನ್ನು ಘೋಷಿಸಿದೆ. ಶುಕ್ರವಾರ ಮಧ್ಯಾಹ್ನ ಆರಂಭವಾಗುವ ಕದನವಿರಾಮ ಶನಿವಾರ ಮಧ್ಯರಾತ್ರಿಯವರೆಗೂ ಚಾಲ್ತಿಯಲ್ಲಿರಲಿದೆ.

1,100 ಕಿ.ಮೀ ಅಂತರದ ಗಡಿಯುದ್ದಕ್ಕೂ ರಷ್ಯಾದ ಸೇನೆ ಈ ಅವಧಿಯಲ್ಲಿ ಸಂಘರ್ಷವನ್ನು ನಿಲ್ಲಿಸಲಿದೆ ಎಂದು ಪುಟಿನ್ ಹೇಳಿದ್ದರು. ರಷ್ಯಾದ ಚರ್ಚ್‌ವೊಂದರ ಮುಖ್ಯಸ್ಥರಾದ ಪ್ಯಾಟ್ರಿಯಾರ್ಚ್ ಕಿರಿಲ್ ಈ ಪ್ರಸ್ತಾಪ ಮುಂದಿಟ್ಟಿದ್ದರು. ಜುಲಿಯನ್‌ನ ಕ್ಯಾಲೆಂಡರ್‌ನಂತೆ, ಈ ಚರ್ಚ್‌ನಲ್ಲಿ ಜ.7ರಂದು ಕ್ರಿಸ್‌ಮಸ್ ಆಚರಿಸಲಾಗುತ್ತದೆ.

ರಷ್ಯಾ ಈಗ ಕ್ರಿಸ್‌ಮಸ್‌ನ ನೆಪ ಹೇಳುತ್ತಿದ್ದು, ಈ ಅವಧಿಯಲ್ಲಿ ನಮ್ಮ ನೆಲೆಯ ಸಮೀಪ ಸೇನೆ ನಿಯೋಜಿಸಲು ಸಂಚು ನಡೆಸುತ್ತಿದೆ ಎಂದರು. ಆದರೆ, ರಷ್ಯಾದ ಮನವಿ ಪುರಸ್ಕರಿಸುವ ಕುರಿತು ಯಾವುದೇ ಸ್ಪಷ್ಟನೆ ನೀಡಲಿಲ್ಲ.

ಕದನವಿರಾಮ ಘೋಷಣೆ ನಂತರವು ದಾಳಿ (ಎಎಫ್‌ಪಿ): ಕದನವಿರಾಮ ಘೋಷಣೆ ನಂತರವೂ ರಷ್ಯಾ ಪಡೆಗಳು ಉಕ್ರೇನ್‌ನ ಪೂರ್ವ ಭಾಗದ ಕ್ರಮಾಟೋರ್ಸ್ಕ್ ನಗರದ ಮೇಲೆ ದಾಳಿ ನಡೆಸಿವೆ ಎಂದು ಉಕ್ರೇನ್ ಅಧ್ಯಕ್ಷರ ಕಚೇರಿಯ ಉಪ ಮುಖ್ಯಸ್ಥ ಕಿರಿಲೊ ಟೈಮೊಶೆಂಕೊ ಆರೋಪಿಸಿದ್ದಾರೆ.

ದಾಳಿಯಿಂದ ವಸತಿ ಕಟ್ಟಡ ಹಾನಿಗೊಂಡಿದೆ. ಯಾವುದೇ ಜೀವ ಹಾನಿಯಾಗಿಲ್ಲ ಎಂದು ಅವರು ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

ಹೆಚ್ಚಿನ ನೆರವು: ಅಮೆರಿಕ, ಜರ್ಮನ್

ವಾಷಿಂಗ್ಟನ್(ಪಿಟಿಐ): ಉಕ್ರೇನ್‌ನಲ್ಲಿ ಯುದ್ಧ ಈಗ ನಿರ್ಣಾಯಕ ಘಟ್ಟವನ್ನು ತಲುಪಿದೆ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ. ಅಮೆರಿಕ ಮತ್ತು ಜರ್ಮನಿ ಇದೇ ವೇಳೆ ಹೆಚ್ಚುವರಿ ನೆರವನ್ನೂ ಘೋಷಿಸಿವೆ.

ರಷ್ಯಾದ ಅತಿಕ್ರಮಣ ತಡೆಯಲು ಈ ನಿರ್ಣಾಯಕ ಘಟ್ಟದಲ್ಲಿ ನಾವು ಎಲ್ಲ ನೆರವನ್ನೂ ನೀಡಬೇಕಿದೆ. ರಷ್ಯಾ ಈಗಲೂ ತೀವ್ರ ದಾಳಿ ನಡೆಸುತ್ತಿದೆ ಎಂದು ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು ಹೇಳಿದರು.

ಉಕ್ರೇನ್ ಯುದ್ಧ ಕುರಿತಂತೆ ಮುಂದೇನು ಮಾಡಬೇಕು ಎಂದು ಜರ್ಮನ್‌ನ ಚಾನ್ಸಲರ್ ಜೊತೆಗೆ ಚರ್ಚಿಸಲಾಗಿದೆ. ವಾಯುದಾಳಿ ಎದುರಿಸಲು ಅಗತ್ಯವಾದ ಶಸ್ತ್ರಾಸ್ತ್ರ ಒದಗಿಸಲಾಗುವುದು ಎಂದು ಹೇಳಿದರು.

ರಣಜಿ ಕ್ರಿಕೆಟ್: ಮಯಂಕ್ ಬಳಗಕ್ಕೆ 7 ವಿಕೆಟ್ ಜಯ; ಮಿಂಚಿದ ನಿಕಿನ್ ಜೋಸ್–ಮನೀಷ್

ಕರ್ನಾಟಕ 'ವಿಜಯ'ದ ರೂವಾರಿ ವೈಶಾಖ

• ಗಿರೀಶ ದೊಡ್ಡಮನಿ

ಬೆಂಗಳೂರು: ಶಿಸ್ತುಬದ್ಧ ದಾಳಿ ಮಾಡಿದ ವೈಶಾಖ ವಿಜಯಕುಮಾರ್ ಶುಕ್ರವಾರ ಕರ್ನಾಟಕ ತಂಡದ ಜಯದ ರೂವಾರಿಯಾದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮುಕ್ತಾಯವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಪಂದ್ಯದಲ್ಲಿ ಛತ್ತೀಸಗಢ ತಂಡದ ಎದುರು ಕರ್ನಾಟಕ 7 ವಿಕೆಟ್‌ಗಳಿಂದ ಜಯಿಸಿತು. 122 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಕರ್ನಾಟಕ ತಂಡವು ನಿಕಿನ್ ಜೋಸ್ (ಔಟಾಗದೆ 44) ಮತ್ತು ಮನೀಷ್ ಪಾಂಡೆ (27; 24ಎ) ಅವರ ಬ್ಯಾಟಿಂಗ್ ಬಲದಿಂದ 23.2 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 128 ರನ್ ಗಳಿಸಿ ಗೆದ್ದಿತು.

ಕೊನೆಯ ದಿನದಾಟದ ಚಹಾ ವಿರಾಮಕ್ಕೆ ಸುಮಾರು 20 ನಿಮಿಷಗಳ ಮೊದಲಷ್ಟೇ ಛತ್ತೀಸಗಢ ತಂಡವು ಎರಡನೇ ಇನಿಂಗ್ಸ್‌ನಲ್ಲಿ 77.5 ಓವರ್‌ಗಳಲ್ಲಿ 177 ರನ್ ಗಳಿಸಿ ಆಲೌಟ್ ಆಯಿತು.

ಮೊದಲ ಇನಿಂಗ್ಸ್‌ನಲ್ಲಿ 55 ರನ್‌ಗಳ ಹಿನ್ನಡೆ ಅನುಭವಿಸಿದ್ದ ಪ್ರವಾಸಿ ಬಳಗದ ಬ್ಯಾಟರ್‌ಗಳು ಡ್ರಾ ಸಾಧಿಸುವ ಯೋಜನೆಯೊಂದಿಗೆ ಅಡಿದರು. ಆದರೆ ಈ ಸವಾಲನ್ನು ಆತಿಥೇಯ ಬೌಲಿಂಗ್ ಪಡೆ ಮೀರಿ ನಿಂತಿತು. ಅದರಲ್ಲಿಯೂ ವೈಶಾಖ ತಾಳ್ಮೆ ಮತ್ತು ಚಾಣಾಕ್ಷತನ ಮೇಳೈಸಿದ ಬೌಲಿಂಗ್ ಮಾಡಿದರು.

ಇನ್ನೊಂದು ಬದಿಯಿಂದ ವಿದ್ವತ್, ಕೌಶಿಕ್ ಉತ್ತಮ ಬೆಂಬಲ ನೀಡಿದರು. ಗುರುವಾರದ ದಿನ ದಾಟದ ಅಂತ್ಯಕ್ಕೆ ಛತ್ತೀಸಗಢ ತಂಡವು 2 ವಿಕೆಟ್‌ಗಳಿಗೆ 35 ರನ್ ಗಳಿಸಿತ್ತು. ಕೊನೆಯ ದಿನ ಬೆಳಿಗ್ಗೆ ಆಶುತೋಷ್ ವಿಕೆಟ್ ಗಳಿಸುವಲ್ಲಿ ವೈಶಾಖ ಯಶಸ್ವಿಯಾದರು. ಸ್ಪಿನ್ನರ್ ಗೌತಮ್ ಬೌಲಿಂಗ್‌ನಲ್ಲಿ ಹರಪ್ರೀತ್ ಸಿಂಗ್ ಔಟಾದರು. ಆದರೆ ಅಮನದೀಪ್ (50;111ಎ) ಮತ್ತು ಮಯಂಕ್ ವರ್ಮಾ (46; 128ಎ) ಪ್ರತಿರೋಧ-ವೊಡ್ಡಿದರು.

ವಿಕೆಟ್ ಗಳಿಸಿದ ವೈಶಾಖ ವಿಜಯಕುಮಾರ್ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಪ್ರಜಾವಾಣಿ ಚಿತ್ರ/ವಿ. ಪುಷ್ಕರ್

ಮುಖ್ಯಾಂಶಗಳು
- ಮೊದಲ ಇನಿಂಗ್ಸ್‌ನಲ್ಲಿ ಅರ್ಧಶತಕ ದಾಖಲಿಸಿದ್ದ ನಿಕಿನ್, ಸಮರ್ಥ್
- ಕರ್ನಾಟಕ ತಂಡಕ್ಕೆ ಟೂರ್ನಿಯಲ್ಲಿ ಎರಡನೇ ಜಯ ಇದು

ನಿಕಿನ್ ಆಟ, ಪಾಂಡೆ ಬೀಸಾಟ: ಸಾಧಾರಣ ಗುರಿಯನ್ನು ಬೆನ್ನಟ್ಟಿದ ಆತಿಥೇಯರಿಗೆ ಛತ್ತೀಸಗಢ ತಂಡವು ಕಠಿಣ ಪ್ರತಿರೋಧವೊಡ್ಡಿತು. ಸಾಧ್ಯವಾದಷ್ಟು ಸಮಯ ವ್ಯರ್ಥ ಮಾಡುವುದು ಮತ್ತು ಕರ್ನಾಟಕ ಬ್ಯಾಟರ್‌ಗಳು ರನ್ ಗಳಿಸದಂತೆ ನೋಡಿಕೊಳ್ಳಲು ಎದುರಾಳಿಗಳು ಬಲೆ ಹೆಣೆದಿದ್ದರು.

32 ಓವರ್‌ಗಳನ್ನು ಕಡ್ಡಾಯವಾಗಿ ಹಾಕಲೇಬೇಕಿದ್ದರಿಂದ ಎರಡೂ ಬದಿಯಿಂದ ಎಡಗೈ ಸ್ಪಿನ್ನರ್‌ಗಳು ದಾಳಿ ಆರಂಭಿಸಿದರು. ಅದಕ್ಕೆ ತಕ್ಕಂತೆ ಮಯಂಕ್ ಮತ್ತು ಸಮರ್ಥ್ ಉತ್ತಮ ಆರಂಭ ಒದಗಿಸಿದರು. ಆದರೆ ನಾಲ್ಕನೇ ಓವರ್‌ನಲ್ಲಿ ಮಯಂಕ್ ಔಟಾದರು. ಸಮರ್ಥ್ ಜೊತೆಗೂಡಿದ ಯುವಪ್ರತಿಭೆ ನಿಕಿನ್ ಜೋಸ್ ಒಂಟಿ ಮತ್ತು ಎರಡು ರನ್‌ಗಳನ್ನು ಪಡೆಯುತ್ತ ಮೊತ್ತ ಹೆಚ್ಚಿಸಿದರು. ಬೌಲರ್‌ಗಳು ಲೆಗ್‌ಸ್ಟಂಪ್‌ನಿಂದ ಹೊರಗೇ ಎಸೆತಗಳನ್ನು ಬೌಲರ್‌ಗಳು ಪ್ರಯೋಗಿ-ಸುತ್ತಿದ್ದರು. ಅದಕ್ಕೆ ತಕ್ಕಂತೆ ಫೀಲ್ಡಿಂಗ್ ನಿಯೋಜನೆಗೊಂಡಿತ್ತು. ಇದರಿಂದಾಗಿ ಬ್ಯಾಟರ್‌ಗಳು ಸ್ವೀಪ್ ಮತ್ತು ರಿವರ್ಸ್ ಸ್ವೀಪ್‌ಗಳಿಗೆ ಮೊರೆಹೋದರು.

14ನೇ ಓವರ್‌ನಲ್ಲಿ ಸಮರ್ಥ್ ಆಡಿದ ಎಸೆತದಲ್ಲಿ ಎರಡನೇ ರನ್ ಓಡಲು ನಿಕಿನ್ ಸ್ಪಂದಿಸಲಿಲ್ಲ. ಇದರಿಂದಾಗಿ ಕ್ರೀಸ್‌ಗೆ ಮರಳುವ ಹಾದಿಯಲ್ಲಿ ಸಮರ್ಥ್ ರನೌಟ್ ಆದರು. ಅಸಮಾಧಾನದಿಂದ ಪೆವಿಲಿಯನ್‌ಗೆ ಮರಳಿದರು. ಆಗ ಕ್ರೀಸ್‌ಗೆ ಬಂದ ಮನೀಷ್ ಪಾಂಡೆ ಕ್ರೀಡಾಂಗಣದ ಒಂದು ಗ್ಯಾಲರಿಯಲ್ಲಿದ್ದ ಕೆಲವು ಅಭಿ-ಮಾನಿಗಳನ್ನು ರಂಜಿಸಿದರು. ತಂಡದ ಮೊತ್ತ 100ರ ಗಡಿ ಮುಟ್ಟಿದಾಗ ಮನೀಷ್ ಔಟಾದರು. ನಂತರ ಜವಾಬ್ದಾರಿಯುತ ಆಟವಾಡಿದ ನಿಕಿನ್ ಸಿಕ್ಸರ್ ಬಾರಿಸಿ ವಿಜಯದ ರನ್ ಗಳಿಸಿದರು.

ಬಿ.ಆರ್. ಶರತ್‌ಗೆ ಗಾಯ

ಕರ್ನಾಟಕ ತಂಡದ ವಿಕೆಟ್‌ಕೀಪರ್ ಬಿ.ಆರ್. ಶರತ್ ಅವರು ಗಾಯಗೊಂಡರು. ಗೌತಮ್ ಬೌಲಿಂಗ್‌ನಲ್ಲಿ ಕ್ಯಾಚ್ ಪಡೆಯುವ ಪ್ರಯತ್ನದಲ್ಲಿ ಅವರಿಗೆ ಪೆಟ್ಟುಬಿತ್ತು. ಪ್ರಥಮ ಚಿಕಿತ್ಸೆ ನೀಡಿದ ಫಿಸಿಯೊ ಜೊತೆಗೆ ಶರತ್ ಕುಂಟುತ್ತಲೆ ಪೆವಿಲಿಯನ್ ಸೇರಿದರು. ಅವರ ಬದಲಿಗೆ ಶರತ್ ಶ್ರೀನಿವಾಸ್ ವಿಕೆಟ್‌ಕೀಪಿಂಗ್ ನಿರ್ವಹಿಸಿದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಛತ್ತೀಸಗಢ 311 (109.3 ಓವರ್‌ಗಳಲ್ಲಿ)
ಕರ್ನಾಟಕ: 366 (121.4 ಓವರ್‌ಗಳಲ್ಲಿ)
ಎರಡನೇ ಇನಿಂಗ್ಸ್: ಛತ್ತೀಸಗಢ 177 (77.5 ಓವರ್‌ಗಳಲ್ಲಿ)
ಆಶುತೋಷ್ ಸಿ ಸಮರ್ಥ್ ಬಿ ವೈಶಾಖ 18 (78ಎ, 4X1), ಅಮನದೀಪ್ ಬಿ ವೈಶಾಖ 50 (111ಎ, 4X6), ಹರಪ್ರೀತ್ ಸಿಂಗ್ ಬಿ ಗೌತಮ್ 8 (18, 4X1), ವರ್ಮಾ ಎಲ್‌ಬಿಡಬ್ಲ್ಯು ಶ್ರೇಯಸ್ 46 (128ಎ, 4X5), ಶಶಾಂಕ್ ಸಿ ಶರತ್ ಶ್ರೀನಿವಾಸ್ (ಬದಲೀ) ಬಿ ವೈಶಾಖ 12 (40ಎ, 4X1, 6X1), ಅಜಯ್ ಬಿ ವೈಶಾಖ 13 (18ಎ, 4X2), ಸುಮಿತ್ ಸಿ ಮನೀಷ್ ಬಿ ಗೌತಮ್ 18 (48ಎ, 4X4), ರವಿಕಿರಣ ಔಟಾಗದೆ 1 (3ಎ), ಸೌರಭ್ ಬಿ ವೈಶಾಖ 6 (7ಎ, 6X1)
ಇತರೆ: 5 (ಬೈ 4, ವೈಡ್ 1)
ವಿಕೆಟ್ ಪತನ: 3–60 (ಅಶುತೋಷ್; 29.2), 4–75 (ಹರಪ್ರೀತ್; 34.1), 5–91 (ಅಮನದೀಪ್; 41.6), 6–121 (ಶಶಾಂಕ್; 55.6), 7–141 (ಅಜಯ್ ಮಂಡಲ್; 61.4), 8–170 (ಮಯಂಕ್ ವರ್ಮಾ; 75.4), 9–170 (ಸುಮಿತ್ ರುಯ್ಕರ್;76.3), 10–177 (ಸೌರಭ್ ಮಜುಂದಾರ್; 77.5)
ಬೌಲಿಂಗ್: ವಿದ್ವತ್ ಕಾವೇರಪ್ಪ 16–5–27–1, ವಿ. ಕೌಶಿಕ್ 12–4–24–1, ವಿಜಯಕುಮಾರ್ ವೈಶಾಖ 18.5–4–59–5, ಕೆ. ಗೌತಮ್ 17–5–41–2, ಶ್ರೇಯಸ್ ಗೋಪಾಲ್ 13–3–21–1, ಆರ್. ಸಮರ್ಥ್ 1–0–1–0
ಕರ್ನಾಟಕ 3ಕ್ಕೆ128 (23.2 ಓವರ್‌ಗಳಲ್ಲಿ)
ಸಮರ್ಥ್ ರನ್‌ಔಟ್ (ಹರಪ್ರೀತ್) 24 (40ಎ), ಮಯಂಕ್ ಸಿ ರವಿಕಿರಣ ಬಿ ಸುಮಿತ್ 14 (12ಎ, 4X2), ನಿಕಿನ್ ಅಜೇಯ 44 (59ಎ, 4X1, 6X2) ಮನೀಷ್ ಸಿ ಅಜಯ್ ಬಿ ಸುಮಿತ್ 27 (24ಎ, 4X2, 6X2), ಗೌತಮ್ ಅಜೇಯ 2 (5ಎ)
ಇತರೆ: 17 (ಬೈ 11, ಲೆಗ್‌ಬೈ 6)
ವಿಕೆಟ್ ಪತನ: 1–20 (ಮಯಂಕ್ ಅಗರವಾಲ್; 3.5), 2–62 (ಆರ್. ಸಮರ್ಥ್; 13.4), 3–100 (ಮನೀಷ್ ಪಾಂಡೆ; 20.3)
ಬೌಲಿಂಗ್: ಅಜಯ್ ಮಂಡಲ್ 11.2–0–70–0, ಸುಮಿತ್ ರುಯ್ಕರ್ 11–0–35–2, ರವಿಕಿರಣ್ 1–0–6–0

ಫಲಿತಾಂಶ: ಕರ್ನಾಟಕ ತಂಡಕ್ಕೆ 7 ವಿಕೆಟ್‌ಗಳ ಜಯ
ಪಂದ್ಯಶ್ರೇಷ್ಠ: ವಿಜಯಕುಮಾರ್ ವೈಶಾಖ
ಮುಂದಿನ ಪಂದ್ಯ: ಕರ್ನಾಟಕ–ರಾಜಸ್ಥಾನ (ಜ 10ರಿಂದ)

ಕೇರಳಕ್ಕೆ ಗೋವಾ ಆಘಾತ

ತಿರುವನಂತಪುರ (ಪಿಟಿಐ): ಆಫ್‌ಸ್ಪಿನ್ನರ್ ಮೋಹಿತ್ ರೆಡ್ಕರ್ (73ಕ್ಕೆ6) ಅಮೋಘ ಬೌಲಿಂಗ್ ಬಲದಿಂದ ಗೋವಾ ತಂಡವು ಸಿ ಗುಂಪಿನ ಪಂದ್ಯದಲ್ಲಿ ಆತಿಥೇಯ ಕೇರಳಕ್ಕೆ ಆಘಾತ ನೀಡಿತು.

ಎರಡನೇ ಇನಿಂಗ್ಸ್‌ನಲ್ಲಿ ಕೇರಳ ತಂಡವನ್ನು 200 ರನ್‌ಗಳಿಗೆ ಕಟ್ಟಿ-ಹಾಕುವಲ್ಲಿ ಗೋವಾ ಸಫಲವಾಯಿತು. 155 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಗೋವಾ ತಂಡವನ್ನು ಇಶಾನ್ ಗಡೇಕರ್ (ಔಟಾಗದೆ 67) ಮತ್ತು ಸಿದ್ಧೇಶ್ ಲಾಡ್ (ಅಜೇಯ 33) ಗೆಲುವಿನ ದಡ ಸೇರಿಸಿದರು. ಟೂರ್ನಿಯಲ್ಲಿ ಗೋವಾ ತಂಡಕ್ಕೆ ಇದು ಮೊದಲ ಜಯ ಹಾಗೂ ಕೇರಳಕ್ಕೆ ಪ್ರಥಮ ಸೋಲು.

ಸಂಕ್ಷಿಪ್ತ ಸ್ಕೋರು: ಸಿ ಗುಂಪು: (ತಿರುವನಂತಪುರ)ಮೊದಲ ಇನಿಂಗ್ಸ್: ಕೇರಳ: 265, ಗೋವಾ 311, ಎರಡನೇ ಇನಿಂಗ್ಸ್: ಕೇರಳ 62.3 ಓವರ್‌ಗಳಲ್ಲಿ 200. ಗೋವಾ: 48.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 157 (ಇಶಾನ್ ಗಡೇಕರ್ ಔಟಾಗದೆ 67, ಸಿದ್ಧೇಶ್ ಲಾಡ್ ಔಟಾಗದೆ 33, ಜಲಜ್ ಸಕ್ಸೆನಾ 53ಕ್ಕೆ1) ಫಲಿತಾಂಶ: ಗೋವಾ ತಂಡಕ್ಕೆ 7 ವಿಕೆಟ್‌ಗಳ ಜಯ.

(ದೆಹಲಿ) ಮೊದಲ ಇನಿಂಗ್ಸ್: ಪುದು ಚೇರಿ 216, ಸರ್ವಿಸಸ್ 466 ಎರಡನೇ ಇನಿಂಗ್ಸ್: ಪುದುಚೇರಿ: 96.3 ಓವರ್‌ಗಳಲ್ಲಿ 313 (ಅರುಣ್ ಕಾರ್ತಿಕ್ 130, ಕೃಷ್ಣ ಪಾಂಡೆ 64, ದಿವೇಶ್ ಪಠಾಣಿಯಾ 83ಕ್ಕೆ3, ಪುಳಕಿತ್ ನಾರಂಗ್ 52ಕ್ಕೆ2, ರಾಹುಲ್ ಸಿಂಗ್ 37ಕ್ಕೆ2) ಸರ್ವಿಸಸ್: 13.2 ಓವರ್ ಗಳಲ್ಲಿ 5 ವಿಕೆಟ್‌ಗಳಿಗೆ 67 (ರಾಹುಲ್ ಸಿಂಗ್ ಗೆಹ್ಲೋತ್ ಔಟಾಗದೆ 33, ಸಾಗರ್ ಉದೇಶಿ 20ಕ್ಕೆ3) ಫಲಿತಾಂಶ: ಸರ್ವಿಸಸ್‌ಗೆ 5 ವಿಕೆಟ್ ಜಯ.

(ಜೈಪುರ): ಮೊದಲ ಇನಿಂಗ್ಸ್: ಜಾರ್ಖಂಡ್ 92, ರಾಜಸ್ಥಾನ: 287. ಎರಡನೇ ಇನಿಂಗ್ಸ್: ಜಾರ್ಖಂಡ್: 9ಕ್ಕೆ470 ಡಿಕ್ಲೇರ್ಡ್ (ಅನುಕೂಲ್ ರಾಯ್ 125, ಸೌರಭ್ ತಿವಾರಿ 78, ಋತುರಾಜ್ ಸಿಂಗ್ 90ಕ್ಕೆ3, ತನ್ವೀರ್ ಉಲ್ ಹಕ್ 82ಕ್ಕೆ3) ರಾಜಸ್ಥಾನ: 33 ಓವರ್‌ಗಳಲ್ಲಿ 4ಕ್ಕೆ194 (ಯಶ್ ಕೊಠಾರಿ 95, ಕರಣ್ ಲಾಂಬಾ ಔಟಾಗದೆ 37, ಶಹಬಾಜ್ ನದೀಂ 48ಕ್ಕೆ3).

ರಣಜಿ ಟ್ರೋಫಿ ಕ್ರಿಕೆಟ್: ಸಿ ಗುಂಪು

ತಂಡ	ಪಂದ್ಯ	ಜಯ	ಸೋಲು	ಡ್ರಾ	ಅಂಕ
ಕರ್ನಾಟಕ	4	2	0	2	19
ರಾಜಸ್ಥಾನ	4	1	0	3	14
ಕೇರಳ	4	2	1	1	13
ಛತ್ತೀಸಗಢ	4	2	2	0	13
ಗೋವಾ	4	1	0	3	11
ಜಾರ್ಖಂಡ್	4	1	1	2	10
ಸರ್ವಿಸಸ್	4	1	1	2	10
ಪುದುಚೇರಿ	4	0	4	0	0

ಟೆಸ್ಟ್: 3ನೇ ದಿನದಾಟ ರದ್ದು

ಸಿಡ್ನಿ (ಎಎಫ್‌ಪಿ): ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವಣ ಮೂರನೇ ಕ್ರಿಕೆಟ್ ಟೆಸ್ಟ್ ಪಂದ್ಯದ ಮೂರನೇ ದಿನದಾಟ ಮಳೆಯಿಂದ ರದ್ದು ಗೊಂಡಿತು. ಶುಕ್ರವಾರ ಒಂದೂ ಎಸೆತದ ಆಟ ನಡೆಯಲಿಲ್ಲ.

ಆಸ್ಟ್ರೇಲಿಯಾ ತಂಡ ಮೊದಲ ಇನಿಂಗ್ಸ್‌ನಲ್ಲಿ 4 ವಿಕೆಟ್‌ಗಳಿಗೆ 475 ರನ್ ಗಳಿಸಿದೆ. ಉಸ್ಮಾನ್ ಖ್ವಾಜಾ 195 ರನ್‌ಗಳೊಂದಿಗೆ ಔಟಾಗದೆ ಇದ್ದಾರೆ.

ಭಾರತಕ್ಕೆ ಸರಣಿ ಗೆಲುವಿನ ವಿಶ್ವಾಸ

ಟಿ20 ಕ್ರಿಕೆಟ್: ರಾಜ್‌ಕೋಟ್‌ನಲ್ಲಿ ಲಂಕಾ ವಿರುದ್ಧದ ಕೊನೆಯ ಪಂದ್ಯ ಇಂದು

ರಾಜ್‌ಕೋಟ್ (ಪಿಟಿಐ): ಯುವ ಬೌಲರ್‌ಗಳು ಮತ್ತು ಅಗ್ರ ಕ್ರಮಾಂಕದ ಬ್ಯಾಟರ್‌ಗಳಿಂದ ಉತ್ತಮ ಪ್ರದರ್ಶನ ನಿರೀಕ್ಷಿಸುತ್ತಿರುವ ಭಾರತ ತಂಡ, ಶ್ರೀಲಂಕಾ ವಿರುದ್ಧದ ಕೊನೆಯ ಟಿ20 ಪಂದ್ಯದಲ್ಲಿ ಗೆಲುವಿನ ವಿಶ್ವಾಸದಲ್ಲಿದೆ.

ಮೊದಲ ಪಂದ್ಯವನ್ನು ಎರಡು ರನ್‌ಗಳಿಂದ ಗೆದ್ದಿದ್ದ ಹಾರ್ದಿಕ್ ಪಾಂಡ್ಯ ಬಳಗ, ಗುರುವಾರ ನಡೆದಿದ್ದ 2ನೇ ಪಂದ್ಯವನ್ನು 16 ರನ್‌ಗಳಿಂದ ಸೋತಿತ್ತು. ಮೂರು ಪಂದ್ಯಗಳ ಸರಣಿ 1–1 ರಲ್ಲಿ ಸಮಬಲದಲ್ಲಿ-ದ್ದು, ರಾಜ್‌ಕೋಟ್‌ನಲ್ಲಿ ಶನಿವಾರ ನಡೆಯಲಿರುವ ಪಂದ್ಯ ನಿರ್ಣಾಯಕ ಎನಿಸಿದೆ.

ಯುವ ಬೌಲರ್‌ಗಳ ಅಸ್ಥಿರ ಪ್ರದರ್ಶನವೇ ಪುಣೆಯಲ್ಲಿ ಗುರುವಾರ ಭಾರತದ ಸೋಲಿಗೆ ಪ್ರಮುಖ ಕಾರಣವಾಗಿತ್ತು. ಉಮ್ರಾನ್ ಮಲಿಕ್ ಮತ್ತು ಶಿವಂ ಮಾವಿ ಅವರನ್ನು ಲಂಕಾ ಬ್ಯಾಟರ್‌ಗಳು ನಿರಾಯಾಸವಾಗಿ ಎದುರಿಸಿದ್ದರು. ಇಬ್ಬರೂ ಉತ್ತಮ ಲೈನ್ ಮತ್ತು ಲೆಂಗ್ತ್ ಕಾಪಾಡಿಕೊಳ್ಳುವ-ಲ್ಲಿ ವಿಫಲರಾಗಿದ್ದರು.

ಅಕ್ಷರ್ ಪಟೇಲ್

ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರೂ ಎಂದಿನ ಲಯದಲ್ಲಿ ಬೌಲ್ ಮಾಡಿರಲಿಲ್ಲ. ಎರಡು ಓವರ್‌ಗಳಲ್ಲಿ 5 ನೋಬಾಲ್ ಎಸೆದಿದ್ದರು. ಆದಷ್ಟು ಬೇಗ ತಪ್ಪುಗಳನ್ನು ತಿದ್ದಿಕೊಳ್ಳುವ ಸವಾಲು ವೇಗದ ಬೌಲರ್‌ಗಳ ಮುಂದಿದೆ.

ಯುವ ಆಟಗಾರರು ಅನುಭವ ಪಡೆಯಲಿ ಎಂಬ ಉದ್ದೇಶದಿಂದ ತಂಡದ ಆಡಳಿತ ಅವರಿಗೆ ಇನ್ನಷ್ಟು ಅವಕಾಶ ನೀಡುವ ಸಾಧ್ಯತೆಯಿದೆ.

'ಯುವ ಆಟಗಾರರಿಗೆ ಕೆಲವೊಮ್ಮೆ ಇಂತಹ ಪಂದ್ಯಗಳು ಎದುರಾಗುತ್ತವೆ. ಅವರು ಇನ್ನೂ ಕಲಿಯುವ ಹಂತ-ದಲ್ಲಿದ್ದಾರೆ. ಆದ್ದರಿಂದ ಅವರ ಬಗ್ಗೆ ನಾವು ತಾಳ್ಮೆಯಿಂದ ಇರಬೇಕಾಗುತ್ತದೆ' ಎಂದು ಕೋಚ್ ರಾಹುಲ್ ದ್ರಾವಿಡ್ ಹೇಳಿದ್ದಾರೆ.

ತಂಡವನ್ನು ಕಾಡುತ್ತಿರುವ ಇನ್ನೊಂದು ಚಿಂತೆ ಅಗ್ರ ಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯ. ಎರಡೂ ಪಂದ್ಯಗಳಲ್ಲಿ ಭಾರತಕ್ಕೆ ಉತ್ತಮ ಆರಂಭ ದೊರೆತಿಲ್ಲ. ಶುಭಮನ್ ಗಿಲ್ ಕ್ರಮವಾಗಿ 7 ಹಾಗೂ 5 ರನ್ ಗಳಿಸಿ ಔಟಾಗಿದ್ದರು.

ಅಕ್ಷರ್ ಪಟೇಲ್ ಅವರ ಆಲ್‌ರೌಂಡ್ ಆಟ ತಂಡದ ಬಲ ಹೆಚ್ಚಿಸಿದೆ. ರವೀಂದ್ರ ಜಡೇಜ ಅವರ ಸ್ಥಾನವನ್ನು ಸಮರ್ಥವಾಗಿ ತುಂಬುವ ಎಲ್ಲ ಸೂಚನೆಗಳನ್ನು ಅಕ್ಷರ್ ನೀಡಿದ್ದಾರೆ. ಪುಣೆಯಲ್ಲಿ ನಡೆದಿದ್ದ ಪಂದ್ಯದಲ್ಲಿ 24 ರನ್‌ಗಳಿಗೆ2 ವಿಕೆಟ್ ಪಡೆದಿದ್ದ ಅವರು ಆ ಬಳಿಕ ಬ್ಯಾಟಿಂಗ್‌ನಲ್ಲಿ ಅಬ್ಬರಿಸಿ 31 ಎಸೆತಗಳಲ್ಲಿ 65 ರನ್ ಪೇರಿಸಿದ್ದರು.

ಮತ್ತೊಂದೆಡೆ ಶ್ರೀಲಂಕಾ ತಂಡ ಆತ್ಮವಿಶ್ವಾಸದಲ್ಲಿದ್ದು, ಆತಿಥೇಯರಿಗೆ ಪ್ರಬಲ ಪೈಪೋಟಿ ನೀಡಲು ಸಜ್ಜಾಗಿದೆ. ರಾಜ್‌ಕೋಟ್ ಕ್ರೀಡಾಂಗಣದ ಪಿಚ್ ಬ್ಯಾಟಿಂಗ್‌ಗೆ ಯೋಗ್ಯವಾಗಿದ್ದು, ಬೃಹತ್ ಮೊತ್ತದ ಹೋರಾಟ ನಿರೀಕ್ಷಿಸಲಾಗಿದೆ.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಐಎಸ್‌ಎಲ್ ಫುಟ್‌ಬಾಲ್ ಟೂರ್ನಿ: ಬಿಎಫ್‌ಸಿಗೆ ಜಯ

ಗುವಾಹಟಿ: ಬಿಎಫ್‌ಸಿ ತಂಡದವರು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಕೊನೆಗೂ ಗೆಲುವಿನ ಹಾದಿಗೆ ಮರಳಿದರು.

ಇಂದಿರಾ ಗಾಂಧಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿ 2–1 ಗೋಲುಗಳಿಂದ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವನ್ನು ಮಣಿಸಿತು.

ಶಿವಶಕ್ತಿ ನಾರಾಯಣನ್ ಅವರು 50ನೇ ನಿಮಿಷದಲ್ಲಿ ಗೋಲು ಗಳಿಸಿ ಬೆಂಗಳೂರಿನ ತಂಡ ಮುನ್ನಡೆ ಗಳಿಸಲು ಕಾರಣರಾದರು. ಆದರೆ ರೊಮೇನ್ ಫಿಲಿಪ್ಪೊಟೆಕ್ಸ್ ಅವರು 66ನೇ ನಿಮಿಷದಲ್ಲಿ ನಾರ್ತ್‌ಈಸ್ಟ್ ತಂಡಕ್ಕೆ ಸಮಬಲ ತಂದಿತ್ತರು.

ಪಂದ್ಯ ಇನ್ನೇನು ಡ್ರಾದಲ್ಲಿ ಕೊನೆಗೊಳ್ಳಲಿದೆ ಎನ್ನುವಷ್ಟರಲ್ಲಿ ಅಲನ್ ಕೋಸ್ತಾ (90ನೇ ನಿ.) ಅವರು ಗೋಲು ಗಳಿಸಿ ಬಿಎಫ್‌ಸಿಗೆ ರೋಚಕ ಗೆಲುವು ತಂದುಕೊಟ್ಟರು. ಉದಾಂತ ಸಿಂಗ್ ನೀಡಿದ ಪಾಸ್‌ನಲ್ಲಿ ಅವರು ಚೆಂಡನ್ನು ಗುರಿ ಸೇರಿಸಿದರು.

13 ಪಂದ್ಯಗಳಿಂದ 13 ಪಾಯಿಂಟ್ಸ್ ಹೊಂದಿರುವ ಬಿಎಫ್‌ಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿದೆ.

ಸಂಕ್ಷಿಪ್ತ ಸುದ್ದಿ

ಅಡ್ವೊಕೇಟ್ ಜನರಲ್ ಕಪ್ ಕ್ರಿಕೆಟ್ ಇಂದು

ಬೆಂಗಳೂರು: ಅಡ್ವೊಕೇಟ್ ಜನರಲ್ ಕಪ್ ಟೆನಿಸ್ ಬಾಲ್ ಕ್ರಿಕೆಟ್ ಟೂರ್ನಿ ಶನಿವಾರ ನಡೆಯಲಿದೆ.

ಡೇರಿ ಸೈನ್ಸಸ್ ವಿಶ್ವವಿದ್ಯಾಲಯದ ಆವರಣದಲ್ಲಿ ಬೆಳಿಗ್ಗೆ 8 ಗಂಟೆಗೆ ಆರಂಭವಾಗುವ ಟೂರ್ನಿಗೆ ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ ಚಾಲನೆ ನೀಡಲಿದ್ದಾರೆ. ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ ಮತ್ತಿತರರು ಉಪಸ್ಥಿತರಿರುವರು.

ಇಂದಿನಿಂದ ಎಐಟಿಎ ಟೆನಿಸ್

ಬೆಂಗಳೂರು: ಜೈನ್ ಅಂತರರಾಷ್ಟ್ರೀಯ ವಸತಿ ಶಾಲೆಯು (ಜೆಐಆರ್‌ಎಸ್) ಕರ್ನಾಟಕ ರಾಜ್ಯ ಟೆನಿಸ್ ಸಂಸ್ಥೆ ಸಹಯೋಗದಲ್ಲಿ ಜ.7 ರಿಂದ 13ರ ವರೆಗೆ ಎಐಟಿಎ ಟ್ಯಾಲೆಂಟ್ ಸೀರಿಸ್ ಟೆನಿಸ್ ಟೂರ್ನಿ ಆಯೋಜಿಸಿದೆ.

ನಗರದ ಜೈನ್ ಗ್ಲೋಬಲ್ ಕ್ಯಾಂಪಸ್ ಹಾಗೂ ಜೆಐಆರ್‌ಎಸ್ ಆವರಣದಲ್ಲಿ ನಡೆಯುವ ಟೂರ್ನಿಯಲ್ಲಿ 12 ಮತ್ತು 16 ವರ್ಷ ವಯಸ್ಸಿನ ಬಾಲಕ ಹಾಗೂ ಬಾಲಕಿಯರ ವಿಭಾಗಗಳಲ್ಲಿ ಪಂದ್ಯ ಆಯೋಜಿಸಲಾಗಿದೆ.

ರಾಯಲ್ಸ್‌ಗೆ ಗೆಲುವು

ಬೆಂಗಳೂರು: ರಾಯಲ್ಸ್ ಎಫ್‌ಸಿ ಮತ್ತು ಪರಿಕ್ರಮ ಎಫ್‌ಸಿ ತಂಡಗಳು ಬಿಡಿಎಫ್‌ಎ 'ಎ' ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಗೆಲುವು ಸಾಧಿಸಿದವು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ರಾಯಲ್ಸ್ ಎಫ್‌ಸಿ 2–0ಯಿಂದ ವೆಹಿಕಲ್ಸ್ ಎಫ್‌ಸಿ ಎದುರು ಗೆದ್ದಿತು. ರಾಯಲ್ಸ್ ಪರ ಸಲೀಂ ಆರ್. (55ನೇ ನಿ.) ಮತ್ತು ವೇಲು (68ನೇ ನಿ.) ಗೋಲು ಗಳಿಸಿದರು. ಇನ್ನೊಂದು ಪಂದ್ಯದಲ್ಲಿ ಪರಿಕ್ರಮ 1–0ಯಿಂದ ಡಿವೈಇಎಸ್ ತಂಡವನ್ನು ಸೋಲಿಸಿತು.

ಪ್ರತೀಕಾರಕ್ಕಾಗಿ ಬರ್ತಿದ್ದಾರೆ 'ಕಿಂಗ್ & ಕ್ವೀನ್'

ಯೂಸುಫ್ ಅರಕ್ಕಲ್ ಕಣ್ಣಲ್ಲಿ ಯೇಸು

ಮಂಜುಶ್ರೀ ಎಂ. ಕಡಕೋಳ

ಕಲೆ

ಜಗತ್ತಿಗೆ ಶಾಂತಿ ಮತ್ತು ಪ್ರೇಮ ಸಂದೇಶವನ್ನು ಸಾರಿದ ಯೇಸುಕ್ರಿಸ್ತ, ಕ್ರೈಸ್ತರ ಪಾಲಿನ ಆರಾಧ್ಯದೈವ ಮಾತ್ರವಲ್ಲ, ಮನುಷ್ಯ ಪ್ರೀತಿಯುಳ್ಳ ಸಕಲರೂ ಆರಾಧಿಸುವಂಥ ವ್ಯಕ್ತಿತ್ವವುಳ್ಳವರು. 'ತಪ್ಪು ಮಾಡುವುದು ಮಾನವ ಸಹಜ ಗುಣ. ತಪ್ಪನ್ನು ತೋರಿ, ತಿದ್ದಿ ಕ್ಷಮಿಸಿ ಹೊಸತನ ನೀಡುವುದು ದೈವೀಗುಣ' ಎನ್ನುವ ಸಂದೇಶ ಸಾರಿದ ಯೇಸುವಿನ ಮಾನವೀಯ ಗುಣಗಳಿಗೆ ಸೋಲದವರಿಲ್ಲ. ಅಂಥದ್ದೇ ಸೆಳೆತಕ್ಕೊಳಗಾದ ಖ್ಯಾತ ಕಲಾವಿದ ದಿ.ಯೂಸುಫ್ ಅರಕ್ಕಲ್ ಅವರು ಕಲಾಪ್ರೇಮಿಗಳಿಗೆ ಅಪರೂಪದ ಉಡುಗೊರೆ ನೀಡಲೆಂದು ಯೇಸುಕ್ರಿಸ್ತನ ಕುರಿತಂತೆ ಸರಣಿಯೋಪಾದಿಯಲ್ಲಿ 1999ರ ಡಿಸೆಂಬರ್‌ನಲ್ಲಿ ವರ್ಣಚಿತ್ರಗಳನ್ನು ರಚಿಸಿದ್ದಾರೆ.



ದಿ. ಯೂಸುಫ್ ಅರಕ್ಕಲ್

'ದಿ ಕ್ರೈಸ್ಟ್ ಸಿರೀಸ್' ಶೀರ್ಷಿಕೆಯಲ್ಲಿ ಕಲಾಕೃತಿಗಳನ್ನು ರಚಿಸಿರುವ ಯೂಸುಫ್ ಅವರು ತಮ್ಮ ಚಿತ್ರಕಲೆಯ ಮೂಲಕ ಯೇಸು ಅವರ ಜೀವನ ಮತ್ತು ಸರಳ ವ್ಯಕ್ತಿತ್ವವನ್ನು ಅನಾವರಣಗೊಳಿಸಿದ್ದಾರೆ. 'ಮಿಲೇನಿಯಂ ಕ್ರೈಸ್ಟ್' ಶೀರ್ಷಿಕೆಯ ಕಲಾಕೃತಿಯನ್ನು ಹೊರತುಪಡಿಸಿ ಯೂಸುಫ್ ಅವರ ಇತರ ಕಲಾಕೃತಿಗಳು ಇದುವರೆಗೆ ಸಾರ್ವಜನಿಕ ವೀಕ್ಷಣೆಗೆ ತೆರೆದುಕೊಂಡಿರಲಿಲ್ಲ. ಯೇಸುಕ್ರಿಸ್ತನ ಸರಣಿಯ ಮೊದಲ ಪ್ರದರ್ಶನವನ್ನು ರೋಮ್‌ನ ವ್ಯಾಟಿಕನ್ ನಗರದಲ್ಲಿ ಪ್ರದರ್ಶಿಸಬೇಕೆಂಬುದು ಅವರ ಮಹದಾಸೆಯಾಗಿತ್ತು. ಅಂತೆಯೇ 2013ರಲ್ಲಿ ವ್ಯಾಟಿಕನ್‌ನ ನಿಯೋಗವು ಅರಕ್ಕಲ್ ಸ್ಟುಡಿಯೊಕ್ಕೆ ಭೇಟಿ ನೀಡಿ ಅವರ ವರ್ಣಚಿತ್ರಗಳ ಬಗ್ಗೆ ಅಪಾರ ಮೆಚ್ಚುಗೆಯನ್ನು ವ್ಯಕ್ತಪಡಿಸಿತ್ತು. ಆದರೆ, ವ್ಯಾಟಿಕನ್‌ನಲ್ಲಿನ ನಿಯಮದ ಕಾರಣಕ್ಕಾಗಿ 'ದಿ ಕ್ರೈಸ್ಟ್' ಸರಣಿಯ ಮೊದಲ ಪ್ರದರ್ಶನವನ್ನು ಅಲ್ಲಿ ಆಯೋಜಿಸಲಾಗಲಿಲ್ಲ.

'ಆರಂಭದಲ್ಲಿ 'ಕ್ರೈಸ್ಟ್ ಸಿರೀಸ್' ಅನ್ನು ಯೂಸುಫ್ ಅವರು ಸರಣಿ ರೂಪದಲ್ಲಿ ತರಲು ಯೋಜಿಸಿರಲಿಲ್ಲ. ಆದರೆ, ಅವರು ಒಂದೇ ದಿನದಲ್ಲಿ ಅಂದರೆ 1999ರ ಡಿ.31ರ ಬೆಳಿಗ್ಗೆ 6ರಿಂದ 2000ರ ಜನವರಿ 1ರ ಮುಂಜಾನೆಯ ತನಕ ಸರಣಿಯೋಪಾದಿಯಲ್ಲಿ ಕಲಾಕೃತಿಗಳನ್ನು ರಚಿಸಿದರು. ಇಡೀ ದಿನ ಉತ್ಸಾಹದಿಂದ ಇದ್ದ ಯೂಸುಫ್ ಇಡೀ ಕಲಾ ಜಗತ್ತು ಮತ್ತು ಕಲಾಪ್ರೇಮಿಗಳಿಗೆ ಸಹಸ್ರಮಾನದ ಮೊದಲ ದಿನವೇ ಅರ್ಥಪೂರ್ಣ ಉಡುಗೊರೆ ನೀಡಿದ್ದರು' ಎಂದು ಸ್ಮರಿಸಿಕೊಳ್ಳುತ್ತಾರೆ ಯೂಸುಫ್ ಅವರ ಪತ್ನಿ ಸಾರಾ ಅರಕ್ಕಲ್.

'ಇಡೀ ಸರಣಿಯಲ್ಲಿ ಯೇಸುವನ್ನು ಏಷ್ಯನ್ ಮಾದರಿಯಲ್ಲಿ ಚಿತ್ರಿಸಲಾಗಿದೆ. ಯೇಸುವಿನ ಮುಖವು ಉದಯಿಸುವ ಸೂರ್ಯನ ಕಡೆಗೆ ತಿರುಗಿದ್ದು, ಸತ್ಯ ಮತ್ತು ಪುನರುತ್ಥಾನದ ವಿಜಯವನ್ನು ಸಂಕೇತಿಸುತ್ತದೆ. ಅಂತೆಯೇ ಸಾವು ಮತ್ತು ಸೋಲಿನ ವಿಷಣ್ಣತೆಯನ್ನೂ ಬಿಂಬಿಸುತ್ತದೆ. ಇಸ್ರೇಲ್‌ಗೆ ಭೇಟಿ ನೀಡಿದ ಕೆಲವೇ ವರ್ಷಗಳ ನಂತರ ಯೂಸುಫ್ ಕ್ರಿಸ್ತನ ಕುರಿತ ಕಲಾಕೃತಿಗಳ ರಚನೆಯತ್ತ ಗಮನ ಕೇಂದ್ರೀಕರಿಸಿದರು. ತಮ್ಮ ವಿಶಿಷ್ಟ ಶೈಲಿಯನ್ನು ಉಳಿಸಿಕೊಂಡೇ ಅವರು ಈ ಕಲಾಕೃತಿಗಳನ್ನು ರಚಿಸಿರುವುದು ವಿಶೇಷ' ಎಂದೂ ಸಾರಾ ವಿಶ್ಲೇಷಿಸುತ್ತಾರೆ.



ಯೂಸುಫ್ ಅರಕ್ಕಲ್ ಅವರ ಚಿತ್ರಗಳು

'ದಿ ಕ್ರೈಸ್ಟ್ ಸಿರೀಸ್' ಪ್ರದರ್ಶನ 8ರಿಂದ

ಚಿತ್ರಕಲಾವಿದ ಯೂಸುಫ್ ಅರಕ್ಕಲ್ ಅವರ 'ದಿ ಕ್ರೈಸ್ಟ್ ಸಿರೀಸ್' ಪ್ರದರ್ಶನ: ಆಯೋಜನೆ- ಸಾರಾ ಅರಕ್ಕಲ್ ಗ್ಯಾಲರಿ, ಸ್ಥಳ- ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), 4ನೇ ಮುಖ್ಯರಸ್ತೆ, ದೊಮ್ಮಲೂರು ಎರಡನೇ ಹಂತ. ಬೆಂಗಳೂರು. ದಿನಾಂಕ: ಜ. 8ರಿಂದ ಜ. 14ರವರೆಗೆ, ಸಮಯ: ಬೆಳಿಗ್ಗೆ 11ರಿಂದ ರಾತ್ರಿ 8ರವರೆಗೆ. ಮಾಹಿತಿಗಾಗಿ: 9845039648.

ಯೂಸುಫ್ ಅವರ ಈ ಕಲಾಕೃತಿಗಳಲ್ಲಿರುವ ಯೇಸುವಿನ ಜೀವನವು ಅಧ್ಯಾತ್ಮ ಮತ್ತು ಧಾರ್ಮಿಕ ನೆಲೆಗಿಂತ ಭಿನ್ನವಾಗಿ ಮಾನವೀಯ ಮೌಲ್ಯಗಳನ್ನು ಬಿಂಬಿಸುವ ನೆಲೆಗಟ್ಟನ್ನು ಹೊಂದಿರುವುದು ವಿಶೇಷ. ಕಲಾಕೃತಿಗಳಲ್ಲಿನ ಬಣ್ಣಗಳ ಸಂಯೋಜನೆ, ಸೂಕ್ಷ್ಮ ಗೆರೆಗಳು, ಯೇಸುವಿನ ಭಾವತೀವ್ರತೆ ನೋಡುಗರನ್ನು ಥಟ್ಟನೆ ಸೆಳೆಯುತ್ತವೆ.

ಯೇಸುವಿನ ಜೀವನ ಸನ್ನಿವೇಶಗಳನ್ನು ಚಿತ್ರಿಸುವ ಯೂಸುಫ್ ಅರಕ್ಕಲ್ ಅವರ 12 ವರ್ಣಚಿತ್ರಗಳು ಜನವರಿ 8ರಿಂದ 14ರವರೆಗೆ ನಗರದ ದೊಮ್ಮಲೂರಿನ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಪ್ರದರ್ಶನವಾಗಲಿವೆ. ಇದೇ ಮೊದಲ ಬಾರಿಗೆ ಬೆಂಗಳೂರಿನ ಕಲಾಪ್ರೇಮಿಗಳಿಗಾಗಿ ಕ್ರಿಸ್ತನ ಸರಣಿ ಕಲಾಕೃತಿಗಳ ಪ್ರದರ್ಶನವನ್ನು ಸಾರಾ ಅರಕ್ಕಲ್ ಗ್ಯಾಲರಿಯು ಆಯೋಜಿಸಿದೆ. ❖

ರಾಗಿಕಣದಲ್ಲಿ ರೈತ ಸಂಕ್ರಾಂತಿ

'ಸಾವಯವ ಸಂಕ್ರಾಂತಿ ಆಚರಿಸಿ- ವಿಷ ಆಹಾರ ತ್ಯಜಿಸಿ' ಸಂದೇಶವನ್ನಿಟ್ಟುಕೊಂಡು ರಾಗಿಕಣವು ಈ ಬಾರಿಯ ಸಂಕ್ರಾಂತಿ ಹಬ್ಬದ ನಿಮಿತ್ತ ವಾರದ ಸಂತೆಯನ್ನು ಆಯೋಜಿಸಿದೆ.

ಕನಕಪುರ ಆರ್ಗಾನಿಕ್ಸ್ ಸಂಸ್ಥೆಯ ಸಾವಯವ ಕೃಷಿಕರು ತಾವೇ ಬೆಳೆದ ಧಾನ್ಯಗಳನ್ನು ಸಂತೆಗೆ ತರುತ್ತಿರುವುದು ವಿಶೇಷ. ಧಾನ್ಯಗಳ ಜತೆಗೆ ಅವರ ಕೃಷಿ ವಿಧಾನಗಳು, ಬೆಳೆಗಳ ವಿಶಿಷ್ಟತೆ, ಸಾಮಾಜಿಕ ಜೀವನ ಮತ್ತು ಸಾಂಸ್ಥಿಕ ಚಟುವಟಿಕೆಗಳ ಬಗ್ಗೆಯೂ ಸಂತೆಯಲ್ಲಿ ಹಂಚಿಕೊಳ್ಳಲಿದ್ದಾರೆ.

ಇದರ ಜತೆಗೆ 'ಸಂಕ್ರಾಂತಿ'ಯ ವಿಶೇಷ ಬೆಳೆಗಳಾದ ಅವರೆ, ತೊಗರಿ, ಹಲಸಂದೆ, ಎಳ್ಳು, ಬೆಲ್ಲ, ಕೊಬ್ಬರಿ, ಗೆಣಸು, ಕುಂಬಳ ಹಾಗೂ ಹಬ್ಬ ಕಾಲದ ಧಾನ್ಯಗಳು ಖರೀದಿಗೆ ದೊರೆಯಲಿವೆ. ಸಂಕ್ರಾಂತಿ ಹಬ್ಬದ ಸಿರಿಧಾನ್ಯದ ಹುಗ್ಗಿಯನ್ನು ಮಡಕೆಯಲ್ಲಿ ತಯಾರಿಸಿ ಉಣಬಡಿಸುವ ಕಾರ್ಯಕ್ರಮವೂ ಇದೆ. ಊಟೋಪಾಚಾರದ ನಡುವೆ ಸಂಕ್ರಾಂತಿ ಸಂಭ್ರಮವನ್ನು ದುಪ್ಪಟ್ಟುಗೊಳಿಸಲು ಕನ್ನಡ



ಜಾನಪದ ಕಲಾವಿದರ ತಮಟೆ ವಾದನವೂ ಇರಲಿದೆ.

ಸ್ಥಳ: ರಾಗಿಕಣ, ಶ್ರೀರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ, ಬನ್ನೇರುಘಟ್ಟ ಬಳಿ, ಬೆಂಗಳೂರು. ಜ. 8 ಭಾನುವಾರ ಬೆಳಿಗ್ಗೆ 10ಕ್ಕೆ. ಮಾಹಿತಿಗಾಗಿ: 9972676426

ಪ್ರತೀಕಾರಕ್ಕಾಗಿ ಬರ್ತಿದ್ದಾರೆ 'ಕಿಂಗ್ & ಕ್ವೀನ್'

ಇತಿ ಆಚಾರ್ಯ

ಸಿನಿ ಹನಿ

ಪ್ರತೀಕಾರದ ಕಥಾಹಂದರದ ಚಿತ್ರವೊಂದು ಸೆಟ್ಟೇರಿದೆ. 'ಕಿಂಗ್ & ಕ್ವೀನ್' ಚಿತ್ರದ ಹೆಸರು. ಶ್ರೇಯಸ್ ಚಿಂಗ ನಾಯಕನಾಗಿ ಹಾಗೂ ಇತಿ ಆಚಾರ್ಯ ನಾಯಕಿಯಾಗಿ ಅಭಿನಯಿಸುತ್ತಿದ್ದಾರೆ. ನಟ ಜಗ್ಗೇಶ್ ಪುತ್ರ ಯತಿರಾಜ್ ಸಹ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಸಿನಿಮಾ ಪಿ.ಆರ್.ಒ ಸುಧೀಂದ್ರ ವೆಂಕಟೇಶ್ ಅವರು ಚಿತ್ರದ ಪೋಸ್ಟರ್ ಬಿಡುಗಡೆ ಮಾಡಿದರು.

ಅರ್ಜುನ್ ಸುಬ್ರಹ್ಮಣ್ಯ ಈ ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾಗುತ್ತಿದ್ದಾರೆ. ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಯನ್ನು ನಿರ್ದೇಶಕರೇ ಬರೆದಿದ್ದಾರೆ. ಫೆಬ್ರವರಿ ಮೊದಲವಾರದಿಂದ ಬೆಂಗಳೂರಿನಲ್ಲಿ ಚಿತ್ರೀಕರಣ ಆರಂಭವಾಗಲಿದೆ.

ಶ್ರೇಯಸ್ ಚಿಂಗ ಅಭಿನಯದ 'ಡೇವಿಡ್' ಚಿತ್ರವನ್ನು ನಿರ್ಮಿಸಿರುವ ಪ್ರಸಾದ್ ರುದ್ರಮುನಿ ನಿರಗಂಟಿ, ಪ್ರದೀಪ್ ಅಬ್ಬಯ್ಯ ಹಾಗೂ ವರುಣ್ ರಾಘವೇಂದ್ರ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ.

ಚಿತ್ರದಲ್ಲಿ ನಾಲ್ಕು ಸುಮಧುರ ಹಾಡುಗಳಿದೆ. ಆಲ್ ಒಕೆ ಅವರ ಸಂಗೀತವಿದೆ. ಚೇತನ್ ಡಿಸೋಜ, ಚಾಮರಾಜ್, ರವಿ ಜಮಖಂಡಿ, ರೋಹಿತ್ ಅರುಣ್ ಅವರ ಸಾಹಸ ಸಂಯೋಜನೆಯಿದೆ. ❖

ಹೊಸ ಪ್ರತಿಭೆಗಳ 'ದ್ವಂದ್ವ'

ಎಂಬಿಎ ಮುಗಿಸಿ, ಎಂಎನ್‌ಸಿದಲ್ಲಿ ಉದ್ಯೋಗ ಮಾಡುತ್ತಿರುವ ಇಬ್ಬರು ಗೆಳೆಯರು ಸೇರಿಕೊಂಡು 'ದ್ವಂದ್ವ' ಚಿತ್ರ ನಿರ್ಮಿಸುತ್ತಿದ್ದಾರೆ.

ಕಥೆ, ಚಿತ್ರಕಥೆ, ನಿರ್ದೇಶನ ಎಲ್.ಭರತ್ ಅವರದ್ದು. ಕಾಮನ್‌ಮ್ಯಾನ್ ಪ್ರೊಡಕ್ಷನ್ ಅಡಿಯಲ್ಲಿ ಹನೂರು ತಾಲ್ಲೂಕಿನ ಪ್ರದೀಪ್ ಕೌದಳ್ಳಿ ಬಂಡವಾಳ ಹೂಡುತ್ತಿದ್ದಾರೆ. ಇವರೊಂದಿಗೆ ಎಚ್.ಆರ್.ವಿಶ್ವನಾಥ್, ರಾಮುಕೊಣ್ಣಾರ್ ಹಾಗೂ ಮಣಿಕಡಕೊಳ ಅವರು ಚಿತ್ರದ ಸಹ ನಿರ್ಮಾಪಕರು.

ಚಿತ್ರವು ರಾಜಕೀಯ ಮತ್ತು ವಿಜ್ಞಾನ ವಿಷಯ ಆಧರಿಸಿದ ಕಥಾಹಂದರವನ್ನು ಹೊಂದಿದೆ. ಬೆಳಿಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯ ನಡುವೆ ನಡೆಯುವ ಕಥೆಯಿದು. ಹೈಪರ್‌ಥೈಮಿಸಿಯಾ ಕಾಯಿಲೆ ಇರುವ ಹುಡುಗಿಯು ಒಂದು ಸಲ ಏನನ್ನಾದರೂ ನೋಡಿದರೆ 10-20 ವರ್ಷಗಳ ಕಾಲ ನೆನಪಿನಲ್ಲಿಡುವ ಇರುವ ಶಕ್ತಿ ಹೊಂದಿರುತ್ತಾಳೆ. ಇದನ್ನು ಅರಿತುಕೊಂಡ ಪ್ರಭಾವಿ ರಾಜಕಾರಣಿಗಳು ಆಕೆಯನ್ನು ಯಾವ ರೀತಿ ಉಪಯೋಗಿಸಿಕೊಳ್ಳುತ್ತಾರೆ. ಇದರಿಂದ ಅವಳ ಬದುಕು ಎಲ್ಲಿಗೆ ಹೋಗಿ ನಿಲ್ಲುತ್ತದೆ ಎಂಬುದು ಕಥೆ.

'ಉಗ್ರಂ' ಖ್ಯಾತಿಯ ತಿಲಕ್ ನಾಯಕ. 'ಕನ್ಯಾಕುಮಾರಿ' ಧಾರಾವಾಹಿಯಲ್ಲಿ ನಟಿಸಿದ್ದ ಆಸಿಯಾ ಫಿರ್ದೋಸಿ ಹಾಗೂ ನಯನಾ ನಾಯಕಿಯರು. ಶೋಭರಾಜ್, ದಿನೇಶ್ ಮಂಗಳೂರು, ಎಚ್.ಎಂ.ಟಿ.ವಿಜಯ್, ರಘುರಮಣಕೊಪ್ಪ, ಅನಿತಾಭಟ್, ಬಲರಾಜವಾಡಿ, ಮಿಮಿಕ್ರಿಗೋಪಿ, ವರುಣ್‌ಕೃಷ್ಣ ನಟಿಸುತ್ತಿದ್ದಾರೆ.

ಪ್ರತಾಪ್ ಸಾಹಿತ್ಯದ ನಾಲ್ಕು ಹಾಡುಗಳಿಗೆ ಆಕಾಶ್‌ಪರ್ವ ಸಂಗೀತ ಸಂಯೋಜಿಸಿದ್ದಾರೆ. ಛಾಯಾಗ್ರಹಣ-ಸಂಕಲನ ಋಷಿಕೇಶ್, ಸಾಹಸ ಜಾನಿ ಮಾಸ್ಟರ್ ಅವರದ್ದು. ಮೂಡಿಗೆರೆ, ಚಿಕ್ಕಮಗಳೂರು, ಸಕಲೇಶಪುರ, ಬೆಂಗಳೂರು, ತುಮಕೂರು, ಕನಕಪುರ ಕಡೆಗಳಲ್ಲಿ ಶೇಕಡ 95ರಷ್ಟು ಚಿತ್ರೀಕರಣ ಮುಗಿಸಿದೆ ಚಿತ್ರತಂಡ. ❖

ಎಂಬಿಎ ಮುಗಿಸಿ, ಎಂಎನ್‌ಸಿದಲ್ಲಿ ಉದ್ಯೋಗ ಮಾಡುತ್ತಿರುವ ಇಬ್ಬರು ಗೆಳೆಯರು ಸೇರಿಕೊಂಡು 'ದ್ವಂದ್ವ' ಚಿತ್ರ ನಿರ್ಮಿಸುತ್ತಿದ್ದಾರೆ.

ತಿಲಕ್

Paras Creations Presents...
INDIA'S biggest ever Discount offer
ರಾಜರಾಜೇಶ್ವರಿ ಕಲ್ಯಾಣ ಮಂಟಪ, ರಾಜಾಜಿನಗರದಲ್ಲಿ
ಭಾರತದ ವಿವಿಧ ರೇಷ್ಮೆ ಸಮೂಹಗಳಿಂದ ಸಂಗ್ರಹಿಸಿದ
ಕಾಟನ್, ರೇಷ್ಮೆ, ಫ್ಯಾನ್ಸಿ ಸೀರೆಗಳು ಮತ್ತು ಕುರ್ತಿಗಳು
ಸೀರೆ ಮತ್ತು ಬ್ರಾಂಡೆಡ್ ಗಾರ್ಮೆಂಟ್ಸ್ ಬೃಹತ್ ಪ್ರದರ್ಶನ
ರೂ. 600/- ರಿಂದ ರೂ. 1500/- ವರೆಗೆ ಯಾವುದೇ ಫ್ಯಾನ್ಸಿ ಕಾಟನ್, ಸಿಲ್ಕ್ ಮತ್ತು ಪ್ರಿಂಟೆಡ್ ಮಾರಾಟವಾಗುವ ಸೀರೆಗಳು
ಕೇವಲ ರೂ. 150/- ರಿಂದ ರೂ. 200/- ಕ್ಕೆ ಖರೀದಿಸಿರಿ
Novelty Range : ಭಾಗಲಪುರಿ ಸಿಲ್ಕ್, ಬನಾರಸ್ ಸಿಲ್ಕ್, ಕ್ರೇಪ್ ಸಿಲ್ಕ್, ಮಣಿಪುರಿ ಕಾಟನ್, ಒಡಿಶಾ ಕಾಟನ್, ಗದ್ವಾಲ್ ಕಾಟನ್, ಕೋಸಾ ಕಾಟನ್, ಎಂಬ್ರಾಯಡರಿ, ರಿಚ್ ಪಲ್ಲು ಜರಿ ಬಾರ್ಡರ್, ಸೂಪರ್ ನೆಟ್, ಮಾರ್ಬಲ್ ಶಿಫಾನ್, ಕೋರಿಯನ್ ಸಿಲ್ಕ್, ಖಾದಿ ಸಿಲ್ಕ್, ಮೈಕ್ರೋ ಸಿಲ್ಕ್ ಸೀರೆ, ಇತ್ಯಾದಿ...
ಕೇವಲ ರೂ. 500/- ಮತ್ತು ಮೇಲ್ಪಟ್ಟು
ಸ್ಪೇಷಲ್ ಕೌಂಟರ್ಸ್
ಜೈಪುರ ಡಿಸೈನರ್ ಕುರ್ತಿ ಕೇವಲ ರೂ. 350/- ಮತ್ತು ಮೇಲ್ಪಟ್ಟು
ಜೈಪುರ ಫ್ಯಾನ್ಸಿ ಬೆಡ್ ಶೀಟ್‌ಗಳು ಪಿಲ್ಲೋ/ಕುಶನ್ ಕವರ್, ಸೋಫಾ ಬ್ಯಾಕ್
ಕಾಟನ್ ಫ್ಯಾನ್ಸಿ ಡ್ರೆಸ್ ಮೆಟೀರಿಯಲ್ಸ್

ONLY BIG BRAND GARMENTS
ಕೋಟ್ಯಂತರ ರೂಪಾಯಿ ಮೌಲ್ಯದ ಲೇಡಿಸ್ ಮತ್ತು ಜೆಂಟ್ಸ್ ಬ್ರಾಂಡೆಡ್ ಗಾರ್ಮೆಂಟ್ಸ್ ಈಗ ಉತ್ಪಾದನಾ ಬೆಲೆಗಿಂತ ಕಡಿಮೆ ದರದಲ್ಲಿ
UPTO 80% DISCOUNT
ಈಗ ಕೇವಲ ರೂ. 250/- ರಿಂದ 350/-ಕ್ಕೆ
ಲೇಡಿಸ್ ಮತ್ತು ಜೆಂಟ್ಸ್ ವೆರೈಟಿ, ಕ್ಯಾಶುಯಲ್ ಮತ್ತು ಫಾರ್ಮಲ್ ವೇರ್ ಟಿ-ಶರ್ಟ್, ವಿ ನೆಕ್ ಟಿ-ಶರ್ಟ್, ರೌಂಡ್ ನೆಕ್ ಟಿ-ಶರ್ಟ್, ಬ್ರಾಂಡೆಡ್ ಡಿಸೈನರ್ ಕುರ್ತಿ, ಲೇಡಿಸ್ ಟಾಪ್, ಲೋವರ್, ಲೇಡಿಸ್ ಸ್ವೆಟರ್, ಜಾಗಿಂಗ್ ಬರ್ಮುಡಾ ಇತ್ಯಾದಿ...
SPL. COUNTERS: Office Wear Shirt, Party Wear Shirt, Cotton Trousers, Jeans, Sweat Shirt, Jacket, Lower Etc... Just Rs. 600/- to 1000/- only
ಸೇಲ್ ಕೇವಲ 5 ದಿನಗಳು ಮಾತ್ರ : 7, 8, 9, 10 & 11 ಜನವರಿ | ಬೆಳಿಗ್ಗೆ 10 ರಿಂದ ರಾತ್ರಿ 9 ರವರೆಗೆ
We Accept UPI & all Debit/Credit Cards
ರಾಜರಾಜೇಶ್ವರಿ ಕಲ್ಯಾಣ ಮಂಟಪ | 2ನೇ ಬ್ಲಾಕ್, ಡಾ. ರಾಜ್‌ಕುಮಾರ್ ರಸ್ತೆ, ಆರ್.ಟಿ.ಓ ಆಫೀಸ್ ಹತ್ತಿರ, ರಾಜಾಜಿನಗರ, ಬೆಂಗಳೂರು

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ಬೆಚ್ಚಗಿರಲಿ ಪುಟ್ಟ ಕಂದಮ್ಮ

ಡಾ. ವೀಣಾ ಎನ್.ಸುಳ್ಯ

ಒಂಬತ್ತು ತಿಂಗಳು ತಾಯಿಯ ಗರ್ಭಗೃಹದಲ್ಲಿ ಬೆಚ್ಚಗೆ ಮಲಗಿ ಈಜಾಡುತ್ತಾ ನೆಮ್ಮದಿಯಿಂದ ಇದ್ದ ಮಗು , ದಿನಗಳು ತುಂಬುತ್ತಿದ್ದಂತೆ ಹೆರಿಗೆ ನೋವು ಪ್ರಾರಂಭವಾಗಿ ಈ ಲೋಕಕ್ಕೆ ಅಡಿ ಇಡುವ ಸೂಚನೆ ನೀಡುತ್ತದೆ. ಅಲ್ಲಿಂದಲೇ ಅದರ ಸುರಕ್ಷತೆಗೆ ಒತ್ತು ನೀಡಿ, ಆರೈಕೆಯ ತಯಾರಿ ನಡೆಸಬೇಕಾಗುತ್ತದೆ.

ಮಗುವಿನ ಬೆಳವಣಿಗೆ ಕಡಿಮೆಯಿದ್ದಾಗ, ಹೆರಿಗೆ ನೋವು ತೀವ್ರವಾಗಿದ್ದಾಗ, ಗರ್ಭಕೋಶ ಸಂಕುಚಿತಗೊಳ್ಳುತ್ತಿ ದ್ದರೆ, ಕರುಳ ಬಳ್ಳಿಯ ಮೇಲೆ ಅತಿಯಾದ ಒತ್ತಡ ಬಿದ್ದಾಗ ಮಗುವಿಗೆ ಸರಬರಾಜಾಗುವ ರಕ್ತದ ಪ್ರಮಾಣದಲ್ಲಿ ವ್ಯತ್ಯಾಸ ಉಂಟಾಗುತ್ತದೆ. ರಕ್ತಪೂರೈಕೆ ಕಡಿಮೆಯಾಗಿ ಮಗುವಿನ ಹೃದಯಬಡಿತದಲ್ಲಿ ಏರುಪೇರು ಉಂಟಾಗು ತ್ತದೆ. ಇದರಿಂದ ಮಗುವಿಗೆ ಸುಸ್ತಾದ ಸೂಚನೆಗಳು ಕಂಡು ಬರಬಹುದು. ಹಾಗಾಗಿ ಹೆರಿಗೆಯ ನೋವು ಎಂಬ ಹಂತವನ್ನು ತಾಯಿ ಮಗು ಏಕಕಾಲಕ್ಕೆ ದಾಟುವುದು ಅಷ್ಟು ಸುಲಭದ ಮಾತಲ್ಲ.

> ತಾಯಿಯ ಗರ್ಭದಲ್ಲಿ ಸುರಕ್ಷಿತವಾಗಿರುವ ಪುಟ್ಟ ಕಂದಮ್ಮ, ಅಲ್ಲಿಂದ ಹೊರ ಬರುತ್ತಿದ್ದಂತೆ ಜಗತ್ತಿನ ವಾತಾವರಣಕ್ಕೆ ಹೊಂದಿಕೊಳ್ಳಬೇಕಾಗುತ್ತದೆ. ಎಲ್ಲ ಋತುಗಳಲ್ಲಿಯೂ ಮಗುವನ್ನು ಬೆಚ್ಚಗಿಡುವುದು ಅವಶ್ಯಕ.

ಈ ಹಂತ ದಾಟಿದ ಮೇಲೆ ಹೊರಜಗತ್ತಿನ ವಾತಾವರಣಕ್ಕೆ ಹಸುಗೂಸಿನ ದೇಹ ಹೊಂದಿಕೊಳ್ಳಬೇಕು. ಉಸಿರಾಟದ ಪ್ರಕ್ರಿಯೆ ಪ್ರಾರಂಭವಾಗಬೇಕು. ರಕ್ತ ಪರಿಚಲನೆಯಲ್ಲಿ ವ್ಯತ್ಯಾಸ ಉಂಟಾದರೂ, ಎರಡು ಗಂಟೆಯಲ್ಲಿ ಸಹಜ ಸ್ಥಿತಿಗೆ ಬರುತ್ತದೆ. ವಾತಾವರಣದ ಉಷ್ಣತೆಯೊಂದಿಗೆ ಹೊಂದಿಕೊಳ್ಳಲು ತ್ರಾಸ ಪಡುತ್ತದೆ. ಬೇಸಿಗೆಯಾಗಲಿ, ಚಳಿಗಾಲವೇ ಆಗಲಿ ವಾತಾವರಣದ ಉಷ್ಣತೆ ನೋಡಿಕೊಂಡು ಅದಕ್ಕೆ ತಕ್ಕುದಾಗಿ ಉಡುಪಿನ ವ್ಯವಸ್ಥೆ ಮಾಡಬೇಕು.

ಚಳಿಗಾಲದಲ್ಲಿ ಥಂಡಿ ಸಮಯದಲ್ಲಿ ಮಗುವಿನ ಕಾಳಜಿ ಹೆಚ್ಚು ಮಾಡಬೇಕು. ಗರ್ಭದಲ್ಲಿರುವಂತೆ ಮಗುವನ್ನು ಬೆಚ್ಚಗೆ ಇಡುವ ಮೂಲಕ ಅದರ ಆರೋಗ್ಯವನ್ನು ಕಾಪಾಡಬಹುದು. ಬೆಚ್ಚಗೆ ಇಡದಿದ್ದರೆ ಲಘೂಷ್ಣತೆಗೆ (ಹೈಪೋಥರ್ಮಿಯ) ಒಳಗಾಗುವ ಸಂಭವ ಇರುತ್ತದೆ.

ಲಘೂಷ್ಣತೆಯ ಲಕ್ಷಣಗಳೇನು?

- ಮಗುವಿನ ದೇಹ ತಂಪಾಗಿರುತ್ತದೆ
- ಕಾಲುಗಳಲ್ಲಿ ಉಷ್ಣತೆ ಕಮ್ಮಿಯಾಗಿರುತ್ತದೆ. ಮಗುವಿನ ಪಾದಗಳನ್ನು ಕೈಯ ಅಂಗೆಯಲ್ಲಿ ಹಿಡಿದಾಗ ಅಂಗೈಯ ಹಾಗೂ ಪಾದದ ಉಷ್ಣತೆ ಒಂದೇ ಇರುವ ಅನುಭವ ಕೊಡಬೇಕು. ದೇಹದ ಉಷ್ಣತೆ ಕಡಿಮೆಯಾಗಲು ಪ್ರಾರಂಭವಾಗಿದ್ದರೆ, ಮೊದಲ ಸೂಚನೆ ಸಿಗುವುದು ಇಲ್ಲಿಯೇ.
- ಮಗು ಹಾಲು ತೆಗೆದುಕೊಳ್ಳುವುದನ್ನು ನಿರಾಕರಿಸುತ್ತದೆ. ಚಟುವಟಿಕೆಯಿಲ್ಲದೆ ಸುಮ್ಮನೆ ಮಲಗಿರುತ್ತದೆ. ಕೈ ಕಾಲುಗಳು ಸಡಿಲವಾಗಿ ಬಲಹೀನವಾಗಿರುತ್ತದೆ. ಹೆಚ್ಚು ಹೊತ್ತು ನಿದ್ದೆಯಲ್ಲಿ ಇರುತ್ತದೆ.
- ಮಗುವಿನ ದೇಹದಲ್ಲಿ ಸಕ್ಕರೆಯ ಅಂಶ ವಿಪರೀತವಾಗಿ (60 gm% ಗಿಂತ) ಕಡಿಮೆ ಆಗುತ್ತದೆ.

ಲಘೂಷ್ಣತೆಯಿಂದಾಗುವ ತೊಂದರೆಗಳೇನು?

- ಮಗುವಿನ ದೇಹದ ಗಾತ್ರ ಮತ್ತು ವಿಸ್ತಾರದ ಅಸಮತೋಲನದಿಂದ ದೇಹದಿಂದ ಹೆಚ್ಚು ಉಷ್ಣತೆ ಹೊರಬೀಳುವಂತಾಗುತ್ತದೆ.
- ಚರ್ಮದ ಕೆಳಗೆ ಇರುವ ಕೊಬ್ಬಿನ ಅಂಶ ಕಡಿಮೆಯಾಗುತ್ತದೆ ಮತ್ತು ಚರ್ಮ ಸರಿಯಾಗಿ ಬೆಳೆಯುವುದಿಲ್ಲ.
- ಶರೀರದಲ್ಲಿ ಉಷ್ಣತೆಯನ್ನು ಹೆಚ್ಚು ಮಾಡು ಪ್ರಕ್ರಿಯೆಗಳು ಇನ್ನು ಪೂರ್ಣ ಪ್ರಮಾಣದಲ್ಲಿ ಬೆಳೆದಿರುವುದಿಲ್ಲ .
- ತಕ್ಷಣ ಗುರುತಿಸದೆ ಹೋದರೆ ಮಗುವಿನ ಶರೀರದಲ್ಲಿ ಮೆಟಬಾಲಿಕ್ ಅಸಿಡೋಸಿಸ್ ಆಗಿ ಎಲ್ಲಾ ಜೀವಕೋಶಗಳ ಪ್ರಕ್ರಿಯೆಗಳು ನಿಧಾನಗೊಂಡು. ಸ್ಥಗಿತವಾಗಬಹುದು. ಮಗು ಪ್ರಜ್ಞೆ ಕಳೆದು ಕೊಂಡು ಕೋಮಕ್ಕೆ ಜಾರಬಹುದು. ನಂಜು ಆಗಿ ಮರಣ ಹೊಂದುವ ಸಾಧ್ಯತೆ ಹೆಚ್ಚಿರುತ್ತದೆ.

ಏನೆಲ್ಲ ಮಾಡಬಹುದು?

- ಸ್ನಾನ ಮಾಡಿಸುವಾಗ ಉಗುರುಬಿಸಿ ನೀರಿನಲ್ಲಿ ಮಾಡಿಸುವುದು . ಸ್ನಾನ ಮಾಡಿಸುವಾಗ ಹೆಚ್ಚು ಸಮಯ ತೆಗೆದುಕೊಳ್ಳದಿರುವುದು.
- ಹೆಚ್ಚು ಹೊತ್ತು ಬರಿ ಮೈಯಲ್ಲಿ ಮಗುವನ್ನು ಬಿಡದೆ ಇರುವುದು.
- ತಲೆಗೆ ಕಡ್ಡಾಯವಾಗಿ ಬಟ್ಟೆ ಸುತ್ತುವುದು.
- ಮಗು ಮೂತ್ರ ಮಾಡಿದ್ದರೆ ಒದ್ದೆ ಬಟ್ಟೆಯನ್ನು ಕೂಡಲೇ ಬದಲಾಯಿಸಬೇಕು.
- ಎಷ್ಟೋ ಬಾರಿ ಮಗು ನಿದ್ರಿಸುತ್ತಿದೆ ಎಂದು ತಿಳಿದುಕೊಂಡೇ ಇರುತ್ತಾರೆ. ಮಗುವಿಗೆ ಲಘೂಷ್ಣತೆಯ ಆಗಿರಬಹುದು ಎಂಬ ಅಂದಾಜು ಇರುವುದಿಲ್ಲ. ಮಗುವನ್ನು ಬೆಚ್ಚಗೆ ನೋಡಿಕೊಳ್ಳುವುದು ತೀರ ಅವಶ್ಯಕ.

ಸೋಂಕಿನಿಂದ ರಕ್ಷಿಸಿ

ಇದು ವೈರಸ್‌ಗಳ ಕಾಲ. ಯಾವಾಗ ಎಲ್ಲಿ ಹೇಗೆ ವೈರಸ್‌ಗಳು ಆಕ್ರಮಣ ಮಾಡುತ್ತವೆಯೆಂದು ಹೇಳಲು ಬರುವುದಿಲ್ಲ. ಹಾಗಾಗಿ ವೈರಸ್ ಹಾವಳಿಯಿಂದ ನವಜಾತ ಶಿಶುವಿಗೆ ತೊಂದರೆಯಾಗುವುದನ್ನು ತಪ್ಪಿಸಬೇಕು. ಇದರಲ್ಲಿ ತಾಯಿಯ ಜತೆ ಮನೆಯವರು, ಮಗುವನ್ನು ನೋಡಲು ಬರುವ ಸಂದರ್ಶಕರ ಪಾತ್ರವೂ ಹೆಚ್ಚಿರುತ್ತದೆ.

ಹಿಂದಿನ ಕಾಲದಲ್ಲಿ ಬಾಣಂತಿ ಹಾಗೂ ಮಗುವಿಗೆ ಪ್ರತ್ಯೇಕ ಕೊಠಡಿಯ ವ್ಯವಸ್ಥೆ ಇರುತ್ತಿತ್ತು. ಬಾಣಂತಿಗೆ ನಂಜು ಆಗಬಾರದು ಎನ್ನುವುದು ಒಂದು ಕಾರಣವಾದರೆ, ನವಜಾತಶಿಶುವಿಗೆ ನಂಜು(ಸೋಂಕು) ಆಗಬಾರದು ಎನ್ನುವ ಉದ್ದೇಶ ಇತ್ತು. ಹಾಗಾಗಿ, ಯಾವುದೇ ವ್ಯಕ್ತಿ ಶೀತ, ಕೆಮ್ಮಿನಿಂದ ಬಳಲುತ್ತಿದ್ದರೆ ಅಂತಹವರು ಮಗುವಿನ ಸಂಪರ್ಕಕ್ಕೆ ಬಂದರೆ ಮಗುವಿಗೆ ಶ್ವಾಸಕೋಶದ ನಂಜು ಆಗಬಹುದು. ಮನೆಗೆ ಬರುವ ನೆಂಟರು- ಇಷ್ಟರು ಬಂದು ಮಗುವನ್ನು ಎತ್ತಿಕೊಂಡಾಗ ಅವರಿಂದಲೂ ಮಗುವಿಗೆ ಸೋಂಕು ಉಂಟಾಗಬಹುದು.

ಹೀಗೆ ಮಾಡಿ...

ಸಂದರ್ಶಕರ ಸಂಖ್ಯೆಯನ್ನು ಆದಷ್ಟು ಕಡಿಮೆ ಮಾಡುವುದು ಒಳ್ಳೆಯದು. ಮಗುವನ್ನು ಮುಟ್ಟುವ ಮೊದಲು, ತಾವು ಧರಿಸಿದ್ದ ಬಟ್ಟೆ ಬದಲಾಯಿಸಿಕೊಳ್ಳಬೇಕು

ಸಾಬೂನಿನಿಂದ ಕೈ ತೊಳೆದುಕೊಳ್ಳಬೇಕು. ಮಗುವಿನ ಮುಖವನ್ನು ತಮ್ಮ ಮುಖದ/ ಮೂಗಿನ ಹತ್ತಿರ ತೆಗೆದುಕೊಂಡು ಹೋಗಬಾರದು. ಬಾಯಿಯ/ಮೂಗಿನಿಂದ ಬ್ಯಾಕ್ಟೀರಿಯಾ/ವೈರಸ್ ಗಳು ನೇರವಾಗಿ ಮಗುವಿನ ಶ್ವಾಸಕೋಶವನ್ನು ತಲುಪುವ ಸಾಧ್ಯತೆಗಳಿವೆ.

(ಲೇಖಕರು ಸ್ತ್ರೀ ಆರೋಗ್ಯ ತಜ್ಞರು)

ಲಘೂಷ್ಣತೆ ನಿಯಂತ್ರಣಕ್ಕೆ ಇಲ್ಲಿದೆ ಉಪಾಯ

- ಮಗುವನ್ನು ಬೆಚ್ಚನೆಯ ಬಟ್ಟೆಯಲ್ಲಿ ಸುತ್ತುವುದರ ಜೊತೆಗೆ ತಾಯಿಯ ಪಕ್ಕದಲ್ಲಿಯೇ , ತಾಯಿಯ ದೇಹಕ್ಕೆ ತಾಗುವಂತೆ, ಚರ್ಮಕ್ಕೆ ಚರ್ಮ ತಾಗುವಂತೆ ಮಲಗಿಸಬೇಕು.(ಬೆಡ್ಡಿಂಗ್ ಇನ್) ಇದು ಮಗುವಿನ ದೃಷ್ಟಿಯಲ್ಲಿಯೂ, ಹಾಲು ಉತ್ಪತ್ತಿಯಾಗುವ ನಿಟ್ಟಿನಲ್ಲಿಯೂ ಉಪಯುಕ್ತ ಕಾರಿ.
- ಕಡಿಮೆ ತೂಕದ ಮಗು ಹಾಗೂ ದಿನ ತುಂಬುವ ಮೊದಲೇ (37 ವಾರಗಳ ಮೊದಲು) ಹುಟ್ಟಿದ ಮಕ್ಕಳು ಲಘೂಷ್ಣತೆಯ ತೊಂದರೆಗೆ ಒಳಗಾಗುವ ಸಂಭವನೀಯತೆ ಹೆಚ್ಚು. ಅಂತಹ ಸಂದರ್ಭದಲ್ಲಿ ಕಾಂಗರೂ ಮದರ್ ಕೇರ್ (KMC) ಕೊಡಬಹುದು.

ಕಾಂಗರೂ ಮದರ್ ಕೇರ್ (KMC) ಅಂದರೆ ಏನು?

ಕಾಂಗರೂ ಮಗುವನ್ನು ಹೆತ್ತ ಬಳಿಕ ಅದು ಪೂರ್ಣ ಪ್ರಮಾಣದಲ್ಲಿ ಬೆಳೆಯುವವರೆಗೆ ಹೇಗೆ ತನ್ನ ಚೀಲದಲ್ಲಿ ಇಟ್ಟು ಕೊಂಡು ಬೆಳೆಸುತ್ತದೋ, ಹಾಗೆಯೇ ಬರಿ ಮೈಯಲ್ಲಿ ಮಗುವನ್ನು ತಾಯಿಯ ದೇಹಕ್ಕೆ ತಾಗುವಂತೆ ಇಟ್ಟು, ಬಟ್ಟೆಯಿಂದ ಸುತ್ತುವುದು. ಆಗ ತಾಯಿಯ ದೇಹದ ಉಷ್ಣತೆ ಮಗುವನ್ನು ಬೆಚ್ಚಗೆ ಇಡುತ್ತದೆ. ಈ ರೀತಿಯ ಚಿಕಿತ್ಸೆಯನ್ನು ತಾಯಿಯೇ ಕೊಡಬೇಕೆಂದಲ್ಲ, ತಂದೆ ಅಥವಾ ಯಾರೇ ಸಹಾಯಕರೂ ಕೊಡಬಹುದು.

ಗರ್ಭಕಂಠ ಕ್ಯಾನ್ಸರ್ ತಡೆಗೆ ಲಸಿಕೆ

ಡಾ. ಸ್ಮಿತಾ ಜೆ.ಡಿ.

ಇತ್ತೀಚಿನ ದಿನಗಳಲ್ಲಿ ಅತ್ಯಂತ ಸಾಮಾನ್ಯವಾಗುತ್ತಿರುವ ಕಾಯಿಲೆಯೆಂದರೆ ಅದು ಕ್ಯಾನ್ಸರ್. ಬದಲಾದ ಜೀವನಶೈಲಿ, ಆಹಾರಾಭ್ಯಾಸಗಳು, ರಾಸಾಯನಿಕಗಳ ಬಳಕೆ, ವಿಕಿರಣಗಳು, ಅಪೌಷ್ಟಿಕತೆ ಇವೆಲ್ಲವೂ ಕ್ಯಾನ್ಸರ್ ಉಂಟಾಗಲು ಕಾರಣವೆನ್ನಬಹುದು. ಜತೆಗೆ ಧೂಮಪಾನ, ಮದ್ಯಪಾನ, ಸ್ವಲ್ಪ ಮಟ್ಟಿಗೆ ಅನುವಂಶೀಕತೆಯೂ ಕಾರಣ.
ಆದರೆ, ಕ್ಯಾನ್ಸರ್‌ಗೆ ಕೆಲವು ವೈರಾಣುವಿನ ಸೋಂಕು ಕಾರಣವಾಗಬಹುದು ಎಂಬುದು ಬಹು ಜನರಿಗೆ ತಿಳಿಯದ ಸಂಗತಿ. ಅದನ್ನು ಎಚ್.ಪಿ.ವಿ. ವೈರಾಣು (HUMAN PAPILOMA VIRUS) ಸೋಂಕು ಎಂದು ಕರೆಯಲಾಗುತ್ತದೆ. ಈ ವೈರಾಣುವಿನ ಸೋಂಕು ಉಂಟಾದರೆ ಬಾಯಿ (oral) ಮತ್ತು ಗರ್ಭಕಂಠ (cervix) ಕ್ಯಾನ್ಸರ್ ಉಂಟಾಗುತ್ತದೆ.
ಲೈಂಗಿಕ ಕ್ರಿಯೆಯ ಮೂಲಕವೂ ಈ ಸೋಂಕು ಒಬ್ಬರಿಂದ ಇನ್ನೊಬ್ಬರಿಗೆ ಹರಡಬಹುದು. ಪ್ರಪಂಚದ ಮೂರನೇ ಅತಿ ಸಾಮಾನ್ಯ ಎನಿಸಿರುವ ಗರ್ಭಕಂಠ ಕ್ಯಾನ್ಸರ್ ತಡೆಯಲು ಹ್ಯೂಮನ್ ಪಪಿಲೋಮಾ ವೈರಸ್ (ಎಚ್‌ಪಿವಿ) ಲಸಿಕೆ ಪರಿಣಾಮಕಾರಿ.

ಯಾರು ಈ ಲಸಿಕೆಯನ್ನು ಪಡೆಯಬಹುದು?

- ಎಲ್ಲಾ 11 ರಿಂದ 12 ವರ್ಷದ ಮಕ್ಕಳು ಈ ಲಸಿಕೆಯನ್ನು ತೆಗೆದುಕೊಳ್ಳುವುದು ಸೂಕ್ತ.
- 26 ವರ್ಷದ ಕೆಳಗಿನ ವಯಸ್ಕರೂ ಈ ಲಸಿಕೆಯನ್ನು ಪಡೆಯಬಹುದಾಗಿದೆ.
- 11 ರಿಂದ 12 ವರ್ಷದಲ್ಲಿ ಮೊದಲನೆ ಡೋಸ್ ಅನ್ನು ಪಡೆಯಬಹುದು.
- 15 ವರ್ಷದ ಒಳಗಿನವರಲ್ಲಿ ಎರಡು ಡೋಸ್‌ಗಳು, 15 ರಿಂದ 26 ವರ್ಷದವರಿಗೆ ಮೂರು ಡೋಸ್ ಲಸಿಕೆಯ ಅವಶ್ಯಕತೆಯಿರುತ್ತದೆ.
- ಆಂತರಿಕ ರೋಗ ನಿರೋಧಕ ಶಕ್ತಿ ಕಡಿಮೆಯಿರುವ 9 ರಿಂದ 26 ವರ್ಷದವರಲ್ಲಿ ಮೂರು ಡೋಸ್‌ಗಳ ಅವಶ್ಯಕತೆಯಿರುತ್ತದೆ.
- 27 ವರ್ಷ ಮೇಲ್ಪಟ್ಟವರು ಈ ಲಸಿಕೆಯನ್ನು ಪಡೆಯಬಹುದಾದರೂ ಉಪಯೋಗ ಕಡಿಮೆಯಿದ್ದು ವೈದ್ಯರ ಸಮಾಲೋಚನೆ ಅವಶ್ಯಕತೆಯಿರುತ್ತದೆ.

ಯಾರು ಈ ಲಸಿಕೆ ಪಡೆಯಬಾರದು?

ತೀವ್ರ ರೀತಿಯ ಅಲರ್ಜಿಗಳಿಂದ ಬಳಲುತ್ತಿರುವವರು, ಈಸ್ಟ್‌ನ (ಶಿಲೀಂಧ್ರ) ಅಲರ್ಜಿ ಹೊಂದಿರುವವರು, ಗರ್ಭಿಣಿಯರು ಈ ಲಸಿಕೆ ಪಡೆಯದಿರುವುದು ಉತ್ತಮ.

ಅಡ್ಡಪರಿಣಾಮಗಳು

ಲಸಿಕೆ ಪಡೆದ ಜಾಗ ಕೆಂಪಾಗುವುದು, ಊದಿಕೊಳ್ಳುವುದು, ಜ್ವರ, ತಲೆಬಾಧೆ, ಸುಸ್ತು, ಮಾಂಸಖಂಡಗಳ ನೋವುಗಳು ಸಾಮಾನ್ಯವಾಗಿದ್ದು ಭಯಪಡುವ ಅಗತ್ಯವಿಲ್ಲ.

ಅಧ್ಯಯನ ಏನು ಹೇಳುತ್ತೆ?

ಅಧ್ಯಯನಗಳ ಪ್ರಕಾರ ಈ ಲಸಿಕೆಯು ಶೇ 90 ರಷ್ಟು ಎಚ್.ಪಿ.ವಿ ವೈರಾಣುವಿನ ಸೋಂಕಿನಿಂದ ಉದ್ಭವಿಸಬಹುದಾದ ಕ್ಯಾನ್ಸರ್ ಅನ್ನು ಯಶಸ್ವಿಯಾಗಿ ತಡೆಯುತ್ತದೆ..
2006ರಲ್ಲಿ ಪ್ರಥಮವಾಗಿ ಈ ಲಸಿಕೆಯ ಪ್ರಯೋಗವನ್ನು ಮಾಡಲಾಗಿದ್ದು, ಶೇ 86 ರಷ್ಟು ಯುವ ಜನರಲ್ಲಿ ಉದ್ಭವಿಸುವ ಜನನೇಂದ್ರಿಯದ ವಾರ್ಟ್‌ಗಳನ್ನು ಕಡಿಮೆಮಾಡಬಹುದಾಗಿದೆ.
ಹೆಂಗಸರಲ್ಲಿ ಸಾಮಾನ್ಯವಾಗಿ ಕಂಡುಬರುವ ಗರ್ಭಕಂಠ(cervix) ಕ್ಯಾನ್ಸರ್‌ಗಳನ್ನು ತಡೆಯಬಹುದಾಗಿದೆ.
ಈ ಲಸಿಕೆಯು ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿದ್ದು ಜನರು ಇದರ ಉಪಯೋಗವನ್ನು ಪಡೆಯಬಹುದು.

(ಲೇಖಕಿ: ಓರಲ್ ಮೆಡಿಸನ್ ಹಾಗೂ ರೇಡಿಯಾಲಜಿ ತಜ್ಞರು)

ಸಾಬೂದಾನಿ ಸ್ಪೆಷಲ್

ನಳಪಾಕ

ಸಾಬೂದಾನಿ ಖಿಚಡಿ

ಬೇಕಾಗುವ ಸಾಮಗ್ರಿಗಳು:
ಒಂದು ಕಪ್ ಸಾಬೂದಾನಿ, ನೀರು, ಅರ್ಧ ಕಪ್ ಕಡಲೆಕಾಯಿ, ಒಂದು ಟೀ ಸ್ಪೂನ್ ಉಪ್ಪು, ಸಕ್ಕರೆ, ಜೀರಿಗೆ, ಎರಡು ಟೇಬಲ್ ಸ್ಪೂನ್ ತುಪ್ಪ, ಐದು ಕರಿಬೇವಿನ ಎಲೆಗಳು, ಸಣ್ಣಗೆ ಹೆಚ್ಚಿದ ಶುಂಠಿ, ಮೆಣಸಿನಕಾಯಿ, ಬೇಯಿಸಿದ ಆಲೂಗಡ್ಡೆ ಒಂದು, ಅರ್ಧ ನಿಂಬೆ, ಕೊತ್ತಂಬರಿ ಸೊಪ್ಪು

ಮಾಡುವ ವಿಧಾನ:
ಸಾಬೂದಾನಿಯನ್ನು ಚೆನ್ನಾಗಿ ತೊಳೆದು, ಆರು ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ. ಅದು ಇನ್ನೂ ಗಟ್ಟಿಯಾಗಿದ್ದರೆ, ಸ್ವಲ್ಪ ನೀರು ಸಿಂಪಡಿಸಿ ಮತ್ತು 30 ನಿಮಿಷಗಳ ಕಾಲ ನೆನೆಸಿ.

ಒಂದು ಪಾತ್ರೆಯಲ್ಲಿ ಕಡಲೆಕಾಯಿಯನ್ನು ಹುರಿಯಿರಿ. ಅದನ್ನು ಮಿಕ್ಸ್‌ಗೆ ಹಾಕಿ ಜರಿ ಬರಿ ರುಬ್ಬಿಕೊಳ್ಳಿ. ಅದನ್ನು ನೆನೆಸಿದ ಸಾಬೂದಾನಿಗೆ ಸೇರಿಸಿ. ಕಡಲೆಕಾಯಿ ಪುಡಿಯನ್ನು ಸೇರಿಸುವುದರಿಂದ ಹೆಚ್ಚುವರಿ ತೇವಾಂಶ ಹೀರಿಕೊಳ್ಳುತ್ತದೆ. ಉಪ್ಪು, ಸಕ್ಕರೆ ಸೇರಿಸಿ.

ಪಾತ್ರೆಯಲ್ಲಿ ಬಿಸಿ ಮಾಡಿದ ತುಪ್ಪಕ್ಕೆ ಜೀರಿಗೆ, ಕರಿಬೇವಿನ ಎಲೆ, ಮೆಣಸಿನಕಾಯಿ ಹಾಗೂಬೇಯಿಸಿದ ಆಲೂಗಡ್ಡೆ ಹಾಕಿ. ಎಲ್ಲವೂ ಕೆಂಪಗೆ ಆಗುವವರೆಗೂ ಹುರಿಯಿರಿ. ಇದಕ್ಕೆ ಸಾಬೂದಾನಿ ಕಡಲೆಕಾಯಿ ಮಿಶ್ರಣ ಸೇರಿಸಿ. ಇದಕ್ಕೆ ನಿಂಬೆ ರಸ ಹಾಗೂ ಕೊತ್ತಂಬರಿ ಸೊಪ್ಪು ಸೇರಿಸಿ.

ಸಾಬೂದಾನಿ ದೋಸೆ

ಬೇಕಾಗುವ ಸಾಮಗ್ರಿಗಳು:
ಅರ್ಧಕಪ್ ಸಾಬೂದಾನಿ, ಅರ್ಧಕಪ್ ಊದಲು ಅಕ್ಕಿ, ಒಂದು ಬೇಯಿಸಿದ ಆಲೂಗಡ್ಡೆ, ಅರ್ಧ ಕಪ್ ಮೊಸರು, ಸಣ್ಣಗೆ ಹೆಚ್ಚಿದ ಎರಡು ಮೆಣಸಿನ ಕಾಯಿ, ಶುಂಠಿ, ಕೊತ್ತಂಬರಿ ಸೊಪ್ಪು, ಒಂದು ಟೀ ಸ್ಪೂನ್ ಜೀರಿಗೆ, ಕಾಳುಮೆಣಸು, ಹುರಿದ ಕಡಲೆಕಾಯಿ, ಉಪ್ಪು.

ಮಾಡುವ ವಿಧಾನ:
ಬಾಣಲೆಯಲ್ಲಿ ಸಾಬೂದಾನಿಯನ್ನು ಚೆನ್ನಾಗಿ ಹುರಿದು ಮಿಕ್ಸಿಯಲ್ಲಿ ಪುಡಿ ಮಾಡಿಕೊಳ್ಳಿ. ನಂತರ ಊದಲು ಅಕ್ಕಿಯನ್ನು ಪುಡಿ ಮಾಡಿ ಬಟ್ಟಲಿಗೆ ಹಾಕಿ. ಅದಕ್ಕೆ ಬೇಯಿಸಿದ ಆಲೂಗಡ್ಡೆಯನ್ನು ಮಿಕ್ಸಿಗೆ ಹಾಕಿ ಅದರ ಮಿಶ್ರಣವನ್ನು ಸೇರಿಸಿ. ಈ ಮಿಶ್ರಣಕ್ಕೆ ಮೊಸರು, ಮೆಣಸಿನಕಾಯಿ, ಶುಂಠಿ, ಕೊತ್ತಂಬರಿ ಸೊಪ್ಪು, ಜೀರಿಗೆ, ಕಾಳುಮೆಣಸು, ಕಡಲೆಕಾಯಿ, ಉಪ್ಪು ಸೇರಿಸಿ. ಹಿಟ್ಟಿನಲ್ಲಿ ಉಂಡೆಯಾಗದಂತೆ ನೋಡಿಕೊಳ್ಳಿ.20 ನಿಮಿಷ ಹಿಟ್ಟನ್ನು ಹಾಗೆ ಬಿಡಿ. ಬಿಸಿಯಾದ ಕಾವಲಿ ಮೇಲೆ ದೋಸೆ ಗರಿ ಗರಿಯಾಗುವವರೆಗೂ ಹುರಿಯಲು ಬಿಟ್ಟರೆ ಸಾಬೂದಾನಿ ದೋಸೆ ಸಿದ್ಧ.

ಸಾಬೂದಾನಿ ಇಡ್ಲಿ

ಬೇಕಾಗುವ ಸಾಮಗ್ರಿಗಳು:
ಒಂದು ಕಪ್ ಸಾಬೂದಾನಿ, ಒಂದು ಕಪ್ ಇಡ್ಲಿ ರವಾ ಅಥವಾ ಅಕ್ಕಿ ರವಾ, 2 ಕಪ್ ಹುಳಿ ಬಂದ ಮೊಸರು, 2 ಕಪ್ ನೀರು, ರುಚಿಗೆ ತಕ್ಕಷ್ಟು ಉಪ್ಪು, ಗೋಡಂಬಿ ಮತ್ತು ಇಡ್ಲಿ ಅಚ್ಚುಗಳಿಗೆ ಹಾಕಲು ಎಣ್ಣೆ.

ಮಾಡುವ ವಿಧಾನ:

ಸಾಬೂದಾನಿ, ರವೆಯನ್ನು ಚೆನ್ನಾಗಿ ತೊಳೆದುಕೊಂಡು ಅದಕ್ಕೆ ತಾಜಾ ಹುಳಿ ಬಂದ ಮೊಸರು ಸೇರಿಸಿ ಒಂದು ರಾತ್ರಿ ಇಡಿ. ಮೊಸರು ದಪ್ಪಗಿದ್ದು, ಇಡ್ಲಿ ಹಿಟ್ಟು ದಪ್ಪಗಾದರೆ ಮಾತ್ರ ನೀರು ಸೇರಿಸಿ. ನಂತರ ಹಿಟ್ಟನ್ನು ಚೆನ್ನಾಗಿ ಮಿಶ್ರಣ ಮಾಡಿ, ಮೊಸರಿನಲ್ಲಿ ನೆಂದ ಸಾಬೂದಾನಿ ಚೆನ್ನಾಗಿ ಕರಗುವವರೆಗೂ ತಿರುಗಿಸಿ. ಇದಕ್ಕೆ ಉಪ್ಪು ಸೇರಿಸಿ.. ಇಡ್ಲಿ ಅಚ್ಚಿಗೆ ಎಣ್ಣೆ ಸವರಿ ಅದಕ್ಕೆ ಹಿಟ್ಟು ಹಾಕಿ ಅದರ ಮೇಲೆ ಗೋಡಂಬಿ ಸೇರಿಸಿ(ಬೇಕಿದ್ದರೆ ತುಪ್ಪದಲ್ಲಿ ಹುರಿಯಬಹುದು) 10 ನಿಮಿಷಗಳ ಕಾಲ ಹಬೆಯಲ್ಲಿ ಬೇಯಿಸಿದರೆ ಬಿಸಿ ಬಿಸಿ ಇಡ್ಲಿ ಸಿದ್ಧವಾಗುತ್ತದೆ.

ಲೈಂಗಿಕ ಶೋಷಣೆಯ ಅಗೋಚರ ಮುಖಗಳು

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

- ಹವಿ 35ರ ವಿವಾಹಿತೆ. ಇಬ್ಬರು ಮಕ್ಕಳು, ಅತ್ತೆ ಮಾವಂದಿರು ಇದ್ದಾರೆ. ಇತ್ತೀಚೆಗೆ ಹವಿ ಸ್ನಾನ ಮಾಡುತ್ತಿರುವಾಗ ಮಾವ ಕದ್ದು ನೋಡುತ್ತಿರುವುದನ್ನು ಗಮನಿಸಿದಳು. ಕೆಲವೊಮ್ಮೆ ಒಣಹಾಕಿದ ಅವಳ ಒಳಉಡುಪುಗಳ ಮೇಲೆ ವೀರ್ಯಸ್ಖಲನದ ಗುರುತುಗಳು ಕಂಡುಬಂದವು. ಮಾವನವರನ್ನು ಪ್ರಶ್ನಿಸಿದಾಗ ಅವರು ಒಪ್ಪಿಕೊಳ್ಳಲಿಲ್ಲ. ಹವಿಯೊಳಗೆ ಹಲವಾರು ಗೊಂದಲಗಳಿದ್ದವು. ಬೇರೆ ಕಡೆ ವಾಸಿಸಬೇಕೇ? ವಿಚಾರವನ್ನು ಮನೆಯಲ್ಲಿ ಹೇಳಿದರೆ ಅತ್ತೆಯವರಿಗೆ ನೋವಾಗಬಹುದಲ್ಲವೇ? ಮಾವನ ದುರ್ವರ್ತನೆ ಚುಚ್ಚುಮಾತುಗಳನ್ನು ಸಹಿಸಿಕೊಂಡು ನರಕವನ್ನು ಅನುಭವಿಸಬೇಕೇ?
- ಸಿಮಿ 40ರ ಗೃಹಿಣಿ. ಬಾಲ್ಯದಲ್ಲಿ ತಂದೆಯಿಂದ ಲೈಂಗಿಕ ಹಿಂಸೆ ಅನುಭವಿಸಿದ್ದಳು. ಆ ಕಹಿ ಅನುಭವದಿಂದ ಹೊರಬರಲಾಗದೆ ಆಗಾಗ ಖಿನ್ನಳಾಗುತ್ತಿದ್ದಳು.
- ರಿಚಿ 25ರ ಯುವತಿ. ಬಾಲ್ಯದಲ್ಲಿ ಹತ್ತಿರದ ನೆಂಟರಿಂದ ಲೈಂಗಿಕ ಹಿಂಸೆಯನ್ನು ಎದುರಿಸಿದ್ದಳು. ಮದುವೆಯಾಗಿ 1 ವರ್ಷವಾದರೂ ಯೋನಿಸೆಡೆತದಿಂದಾಗಿ (ವಜೈನಸ್ಮಸ್) ಪತಿಯ ಜೊತೆ ಸೇರಲಾಗಲಿಲ್ಲ. ಯಾವುದೇ ವೈದ್ಯಕೀಯ ತೊಂದರೆಗಳು ಇರಲಿಲ್ಲ.
- ಪತ್ನಿಯಿಂದ ದೂರ ಬದುಕುತ್ತಿದ್ದ ಪತಿ 12 ವರ್ಷದ ಮಗಳನ್ನು ನೋಡಲು ಬಂದಾಗ ಅವಳ ಅಂಗಾಂಗ ಗಳನ್ನು ಲೈಂಗಿಕವಾಗಿ ಸ್ಪರ್ಶಿಸುತ್ತಿದ್ದ. ಮಗಳ ವರ್ತನೆಯಲ್ಲಿ ಆಗುತ್ತಿದ್ದ ಬದಲಾವಣೆಗೆ ಪರಿಹಾರ ಹುಡುಕಲು ಮನೋಚಿಕಿತ್ಸೆಗೆ ಕರೆತಂದಾಗ ಈ ವಿಚಾರ ಹೊರಬಂದಿತು.

ಇವೆಲ್ಲಾ ಸಹಾಯ ಕೇಳಿ ಬಂದವರ ದುರಂತ ಕಥೆಗಳು. (ಹೆಸರು ವಯಸ್ಸುಗಳನ್ನು ಬದಲಾಯಿಸಲಾಗಿದೆ.) ಈ ದುರಂತಗಳಲ್ಲಿ ಸಮಾಜದ ಕಣ್ಣಿಗೆ ಬೀಳದ ಮಹಿಳೆಯರ ಹಾಗೂ ಮಕ್ಕಳ ಲೈಂಗಿಕ ಶೋಷಣೆಯ ಮುಖಗಳಿವೆ. ತಮ್ಮ ಘನತೆ ಗೌರವಗಳನ್ನು ರಕ್ಷಣೆ ಮಾಡಿಕೊಳ್ಳಲಾಗದ ಅವರ ಸಿಟ್ಟು ಅಸಹಾಯಕತೆಗಳಿವೆ.

ಇದರ ಸಿಕ್ಕುಗಳು ನಾಗರಿಕ ಎನ್ನಿಸಿಕೊಳ್ಳುವ ಸಮಾಜದ ಮುಖವಾಡದಲ್ಲಿ ಹೂತು ಹೋಗಿರುತ್ತವೆ.

ಪರಿಚಿತರೇ ಹೆಚ್ಚು ಅಪಾಯಕಾರಿ

ಮಹಿಳೆ ಮತ್ತು ಮಕ್ಕಳ ಮೇಲೆ ನಡೆಯುವ ಲೈಂಗಿಕ ಶೋಷಣೆಯ ಹೆಚ್ಚಿನ ಪಾಲು ಪರಿಚಿತರು ಅಥವಾ ಕುಟುಂಬದವರಿಂದಲೇ ಆಗುತ್ತದೆ ಎಂದು ಸಮೀಕ್ಷೆಗಳಿಂದ ತಿಳಿದುಬಂದಿದೆ. ಲೈಂಗಿಕ ಶೋಷಣೆ ಮಾಡುವವರು ಹಿರಿಯರು ಅಥವಾ ಕುಟುಂಬ ಹಾಗೂ ಸಮಾಜಗಳಲ್ಲಿ ಅಧಿಕಾರದ ಸ್ಥಾನದಲ್ಲಿರುವವರಾಗಿದ್ದಾಗ ಮಹಿಳೆಯರು ಮತ್ತು ಮಕ್ಕಳಿಗೆ ಪ್ರತಿಭಟಿಸುವ ಹಾಗೂ ಕಾನೂನಿನ ಮೊರೆಹೋಗುವ ಅವಕಾಶಗಳು ಕಡಿಮೆಯಾಗಿ ಶೋಷಣೆ ಮುಂದುವರೆಯುವ ಮತ್ತು ಹೆಚ್ಚುವ ಸಾಧ್ಯತೆಗಳಿರುತ್ತವೆ. ಶೋಷಿತರು ಇದರಿಂದ ದೈಹಿಕವಾಗಿ ಮತ್ತು ಮಾನಸಿಕವಾಗಿ ಜರ್ಜರಿತರಾಗುತ್ತಾರೆ. ಕುಟುಂಬದವರಿಗೆ ನೋವು ಕೊಡಲಾಗದ ಮತ್ತು ಕುಟುಂಬದ ಮಾನ ಮರ್ಯಾದೆಗಳನ್ನು ಕಾಪಾಡುವ ಭಾರವನ್ನೂ ಕೂಡ ಹೊತ್ತುಕೊಳ್ಳುವ ಮಹಿಳೆಯರು ಪ್ರತಿಭಟಿಸುವ ಶಕ್ತಿ ಕಳೆದುಕೊಳ್ಳುತ್ತಾರೆ. ಕುಟುಂಬದ ಹಿರಿಯರ ಮೇಲೆ ಸಂಪೂರ್ಣ ಅವಲಂಬಿತರಾಗಿರುವ ಮಕ್ಕಳು ತಮಗೇನಾಗುತ್ತಿದೆ ಎನ್ನುವುದನ್ನೂ ತಿಳಿಯಲಾಗದೆ ಹಿಂಸೆಯಲ್ಲಿ ನರಳುತ್ತಾರೆ.

ಕಾರಣಗಳು ಹಲವು

ಪತಿಪತ್ನಿಯರ ನಡುವೆ ಸಾಮರಸ್ಯವಿಲ್ಲದಿದ್ದರೂ ಸಾಮಾಜಿಕ ಧಾರ್ಮಿಕ ಒತ್ತಡಗಳಲ್ಲಿ ಒಟ್ಟಾಗಿ ಬದುಕುತ್ತಾ ಲೈಂಗಿಕ ತೃಷೆ ತೀರಿಸಿಕೊಳ್ಳಲು ಇಂತಹ ವಿಕೃತಿಗಳಿಗೆ ಮೊರೆಹೋಗಬಹುದು.

ಸಾಮಾಜಿಕವಾಗಿ ಇಳಿವಯಸ್ಸಿನ ಲೈಂಗಿಕತೆಯನ್ನು ಕೀಳಾಗಿ ನೋಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಅಥವಾ ವಯೋಸಹಜ ನಿರಾಸಕ್ತಿಯಿಂದಾಗಿ ದಂಪತಿಯಲ್ಲಿ ಒಬ್ಬರು ಸಂಗಾತಿಯನ್ನು ಲೈಂಗಿಕವಾಗಿ ದೂರಮಾಡುತ್ತಾರೆ. ಆಗ ಅತೃಪ್ತರು ತಮ್ಮ ಲೈಂಗಿಕ ಒತ್ತಡವನ್ನು ಗೌರವಯುತವಾಗಿ ಪರಿಹರಿಸಿಕೊಳ್ಳಲಾಗದೆ ವಿಕೃತ ಮಾರ್ಗಗಳನ್ನು ಅರಸುತ್ತಾರೆ. ಇನ್ನೂ ಕೆಲವರಲ್ಲಿ ಲೈಂಗಿಕ ವಿಕೃತಿ ಆಳವಾಗಿ ಬೇರೂರಿರುತ್ತದೆ.

ಪ್ರತಿಭಟನೆ ಅನಿವಾರ್ಯ

ತಮ್ಮ ವ್ಯಕ್ತಿತ್ವದ ಘನತೆ ಮತ್ತು ಮಾನಸಿಕ ಸಮಾಧಾನಕ್ಕೆ ಕುಂದುಂಟಾದಾಗ ಆತ್ಮರಕ್ಷಣೆ ಮಾಡಿಕೊಳ್ಳುವುದು ಮಹಿಳೆಯರ ಪ್ರಥಮ ಆದ್ಯತೆಯಾಗಬೇಕಲ್ಲವೇ? ದುಷ್ಕೃತ್ಯ ಎಸಗುವವರ ಮಾನ ಮರ್ಯಾದೆಗಳನ್ನು ಕಾಯುವುದು ಮಹಿಳೆಯರ ಜವಾಬ್ದಾರಿ ಹೇಗಾಗುತ್ತದೆ? ಎಲ್ಲಾ ಮಹಿಳೆಯರು ಇಂತಹ ಸಂದರ್ಭಗಳಲ್ಲಿ ತಮ್ಮನ್ನು ಮಾತ್ರ ತಕ್ಷಣದ ಆದ್ಯತೆಯಾಗಿ ಮಾಡಿಕೊಂಡು ಬದಲಾವಣೆಗೆ ಪ್ರಯತ್ನಿಸಬೇಕು.

1. ಲೈಂಗಿಕ ಹಿಂಸಾಚಾರ ಎಸಗುವ ವ್ಯಕ್ತಿ ಕುಟುಂಬಕ್ಕೆ ನೇರವಾಗಿ ಸಂಬಂಧಿಸಿದವರು ಆಗಿರದಿದ್ದರೆ ತಕ್ಷಣ ಪೊಲೀಸರ ಸಹಾಯ ಪಡೆಯಬೇಕು. ಎಚ್ಚರಿಕೆ ನೀಡಿ ಸುಮ್ಮನಿದ್ದರೆ ಹಿಂಸಾಚಾರಿಗಳಿಗೆ ಸಾಕ್ಷಿನಾಶ, ಅಪಪ್ರಚಾರ ಮುಂತಾದವುಗಳ ಮೂಲಕ ಹೆಚ್ಚಿನ ಹಿಂಸೆ ನೀಡಲು ಅವಕಾಶ ನೀಡಿದಂತಾಗುತ್ತದೆ. ಇರುವ ಸಾಕ್ಷ್ಯಾಧಾರಗಳನ್ನು ಭದ್ರವಾಗಿಸಿಕೊಂಡು ಕಾನೂನನ್ನು ಆಶ್ರಯಿಸಲು ಹಿಂಜರಿಯಬಾರದು.
2. ಹತ್ತಿರದ ಸಂಬಂಧ, ವೃದ್ಧಾಪ್ಯ ಮುಂತಾದ ಕಾರಣಗಳಿಗಾಗಿ ಪೊಲೀಸರಿಗೆ ದೂರು ನೀಡುವುದು ಅಸಾಧ್ಯ ಎನ್ನಿಸಿದಾಗಲೂ ಮಹಿಳೆಯರು ಸುಮ್ಮನಿರುವಂತಿಲ್ಲ. ಪತಿಪತ್ನಿಯರು ಮತ್ತು ಸಾಧ್ಯವಿದ್ದರೆ ಕುಟುಂಬದ ಎಲ್ಲರೂ ಸೇರಿ ಅಂತಹ ವ್ಯಕ್ತಿಯ ಜೊತೆ ಮಾತನಾಡಬೇಕು. ಇಂತಹ ವಿಕೃತ ವರ್ತನೆಗಳನ್ನು ಸಹಿಸುವುದು ಸಾಧ್ಯವೇ ಇಲ್ಲ ಎನ್ನುವ ಸಂದೇಶವನ್ನು ಸ್ಪಷ್ಟವಾಗಿ ತಲುಪಿಸಬೇಕು. ತಕ್ಷಣ ಇದು ನಿಲ್ಲದಿದ್ದರೆ ವಿಷಯವನ್ನು ಎಲ್ಲರಿಗೂ ತಿಳಿಸಿ ಅವರನ್ನು ಕುಟುಂಬದಿಂದ ದೂರ ಉಳಿಯುವ ವ್ಯವಸ್ಥೆ ಮಾಡುವುದು ಅಥವಾ ತಾವೇ ಮನೆಯಿಂದ ಬೇರಾಗುವುದು ಅನಿವಾರ್ಯ ಎಂದು ಹೇಳಬೇಕು. ಅವರಿಗೆ ಲೈಂಗಿಕ ಒತ್ತಡಗಳಿದ್ದರೆ ಅದಕ್ಕೆ ಸರಿಯಾದ ದಾರಿಗಳನ್ನು ಕಂಡುಕೊಳ್ಳಲು ಹೇಳಬೇಕು. ಅಗತ್ಯವಿದ್ದರೆ ಆಪ್ತಸಮಾಲೋಚಕರ ಸಹಾಯ ಕೊಡಿಸಬೇಕು. ವಿಚಾರವನ್ನು ಕುಟುಂಬದ ಜನರಲ್ಲಿ ಮಾತ್ರ ಉಳಿಸಿಕೊಳ್ಳುವುದು ಉತ್ತಮ. ಅಗತ್ಯವಿದ್ದರೆ ಕುಟಂಬದ ಎಲ್ಲರೂ ಸೇರಿ ತಜ್ಞ ಮನೋಚಿಕಿತ್ಸಕರ ಸಹಾಯ ಪಡೆಯಬಹುದು.
3. ಮಕ್ಕಳಿಗೆ ಲೈಂಗಿಕ ಹಿಂಸಾಚಾರದಿಂದ ರಕ್ಷಿಸಿಕೊಳ್ಳುವ ಮಾಹಿತಿ, ಸಿದ್ಧತೆ ನೀಡಬೇಕು. ಯಾರಾದರೂ ಅವರ ಖಾಸಗಿ ಅಂಗಗಳನ್ನು ಸ್ಪರ್ಶಿಸಿದರೆ ತಕ್ಷಣ ಪ್ರತಿಭಟಿಸಬೇಕು ಮತ್ತು ನಮಗೆ ಮಾಹಿತಿ ನೀಡಬೇಕು ಎಂದೂ ಮಕ್ಕಳಿಗೆ ತಿಳಿಸಬೇಕು.

ತಮ್ಮ ವ್ಯಕ್ತಿತ್ವದ ಘನತೆ ಹಾಗೂ ಮಾನಸಿಕ ಸಮಾಧಾನ ಕಾಪಾಡಿಕೊಳ್ಳುವುದೂ ಕೂಡ ಮಹಿಳೆಯರ ಆತ್ಮರಕ್ಷಣೆಯ ಭಾಗವಾಗಿರಬೇಕು. ಅದಿಲ್ಲದಿದ್ದರೆ ಇಂತಹ ಅಗೋಚರ ಶೋಷಣೆ ನಿರಂತರವಾಗಿ ಮಹಿಳೆಯರನ್ನು ಕುಗ್ಗಿಸುತ್ತದೆ. ಹಿಂಸೆಗೆ ಪ್ರತಿಭಟಿಸದಿದ್ದರೆ ವಿಕೃತ ಮನಸ್ಸಿನವರಿಗೆ ಉತ್ತೇಜನ ದೊರತಂತಾಗಿ ಅವರು ಮತ್ತೆ ಹಲವರ ಮೇಲೆ ಇದೇ ಪ್ರಯತ್ನ ಮಾಡುವ ಸಾಧ್ಯತೆಗಳಿವೆ ಎನ್ನುವುದನ್ನು ಮರೆಯುವಂತಿಲ್ಲ.

(ಲೇಖಕರು ಶಿವಮೊಗ್ಗದಲ್ಲಿ ಮನೋಚಿಕಿತ್ಸಕರು)

ಏನಾದ್ರೂ ಕೇಳ್ಬೋದು...

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ಆರೋಗ್ಯ

ತಾಂಬೂಲದಲ್ಲಡಗಿದೆ ಆರೋಗ್ಯದ ಗುಟ್ಟು

ತಾಂಬೂಲ ಸೇವನೆಯ ಉಪಯೋಗಗಳು ಸಾಕಷ್ಟಿವೆ. ಬಾಯಿಯ ದುರ್ಗಂಧ ಹಾಗೂ ಬ್ಯಾಕ್ಟೀರಿಯಾಗಳನ್ನು ನಿವಾರಿಸಿ ಪಚನ ಕ್ರಿಯೆಯನ್ನು ಸರಾಗಗೊಳಿಸುತ್ತದೆ. ಅದರಲ್ಲಿ ಬಳಸುವ ಅಡಿಕೆ ನರವ್ಯೂಹವನ್ನು ಚುರುಕುಗೊಳಿಸುತ್ತದೆ.

ಡಾ.ವಿ.ಎ.ಲಕ್ಷ್ಮಣ್, ಆಯುರ್ವೇದ ವೈದ್ಯರು

ಶುಭಾ ಕೆ.ಬಿ.

ಹಿಂದಿನ ಕಾಲದಲ್ಲಿ ಊಟವಾದ ನಂತರ ಕಡ್ಡಾಯವಾಗಿ ಎಲೆ-ಅಡಿಕೆ ಹಾಕುವುದು ಒಂದು ರೀತಿ ಸಂಪ್ರದಾಯವಾಗಿತ್ತು. ಈಗಲೂ ಕೆಲವು ಕಡೆ ಮುಂದುವರಿದಿದೆ. ಕೆಲವು ಕಡೆ ತಾಂಬೂಲ ಹಾಕುವ ಸ್ವರೂಪ ಬದಲಾಗಿದೆ. ಈಗ ತಾಂಬೂಲದ ಜಾಗವನ್ನು ಬೀಡ ಆವರಿಸಿದೆ. ತಾಂಬೂಲವಾಗಲಿ, ಬೀಡ ಆಗಲಿ ಅದರಲ್ಲಿ ಕಾಯಂ ಆಗಿ, ಸಾಮಾನ್ಯವಾಗಿರುವ ವಸ್ತುಗಳೆಂದರೆ ಅದು ವೀಳ್ಯದೆಲೆ-ಅಡಿಕೆ-ಸುಣ್ಣ...!

ತಿಂದ ಆಹಾರ ಚಂದ ಜೀರ್ಣ ಆಗಲು ಊಟದ ನಂತರ ತಾಂಬೂಲ ಸವಿಯುವ ಅಭ್ಯಾಸವಿತ್ತು. ಹಾಗಾಗಿ, ಇವತ್ತು ನಗರ ಪ್ರದೇಶದ ಮದುವೆಯಂತಹ ಶುಭಸಮಾರಂಭಗಳಲ್ಲಿ ಊಟದ ನಂತರ ಬೀಡದ ವ್ಯವಸ್ಥೆ ಇರುತ್ತದೆ. ವೀಳ್ಯದೆಲೆಯ ತಾಂಬೂಲ ಸೇವನೆ ಕೇವಲ ಅಜೀರ್ಣ ನಿವಾರಣೆಗಷ್ಟೇ ಸೀಮಿತವಾಗಿಲ್ಲ. ಈ ತಾಂಬೂಲ ಸೇವನೆಯ ಹಿಂದೆ ಅನೇಕ ಆರೋಗ್ಯಕ್ಕೆ ಪೂರಕವಾದ ಸಂಗತಿಗಳಿವೆ. ಅವುಗಳು ಹೀಗಿವೆ.

- ವೀಳ್ಯದೆಲೆ ಜೊತೆ ಸೇರಿಸುವ ಕೊಬ್ಬರಿ, ಜೀರಿಗೆ, ಅಜ್ವಾನ, ಲವಂಗ, ಸೋಂಪು ಎಲ್ಲ ಅಂಶಗಳು ಕೂಡ ಜೀರ್ಣಕ್ರಿಯೆಗೆ ಸಹಕಾರಿಯಾಗಿವೆ. ಅಲ್ಲದೇ ಬಾಯಿಯ ದುರ್ಗಂಧವನ್ನು ದೂರ ಮಾಡುತ್ತದೆ. ಆದರೆ, ಎಲೆ - ಅಡಿಕೆ ಹಾಕಿದರೆ ಹಲ್ಲಿನಲ್ಲಿ ಕರೆ ಉಳಿಯುತ್ತದೆ ಎಂದುಕೊಂಡು, ತಾಂಬೂಲ ಸವಿಯುವುದನ್ನೇ ಬಿಡುತ್ತಾರೆ. ಹಾಗೆ ಮಾಡದೇ, ಎಲೆ-ಅಡಿಕೆ ಜಗಿದ ನಂತರ, ಚೆನ್ನಾಗಿ ಬಾಯಿ ತೊಳೆದುಕೊಂಡರೆ ಸಾಕಲ್ಲವೇ ?
- ಆಯುರ್ವೇದದ ಪ್ರಕಾರ ಸಾಮಾನ್ಯವಾಗಿ ಅನಾರೋಗ್ಯಕ್ಕೆ ವಾತ, ಪಿತ್ತ, ಕಫ ಇವೇ ಮೂರು ಕಾರಣಗಳು. ಇವುಗಳನ್ನು ನಿವಾರಿಸುವ ಶಕ್ತಿ ತಾಂಬೂಲಕ್ಕೆ ಇದೆ. ಅಡಿಕೆಗೆ ವಾತ ನಿವಾರಿ ಸುವ ಗುಣವಿದ್ದರೆ, ವೀಳೆದೆಲೆಗೆ ಕಫ ಶಮನ ಮಾಡುವ ಗುಣವಿದೆ. ಸುಣ್ಣ ಪಿತ್ತವನ್ನು ನಿವಾರಿಸುತ್ತದೆ ಎನ್ನುತ್ತಾರೆ ಆಯುರ್ವೇದ ತಜ್ಞರು.
- ಅಡಿಕೆಗೆ ದೇಹದಲ್ಲಿರುವ ನೀರು ಅಥವಾ ರಕ್ತದ ಹರಿವನ್ನು ನಿಯಂತ್ರಿಸುವ ಶಕ್ತಿ ಇದೆ. ಈ ಕೆಲಸವನ್ನು ಅಡಿಕೆಯ ಒಗರು ನಿರ್ವಹಿಸುತ್ತದೆ. ಮಲಗುವ ಮುನ್ನ ಎಲೆ, ಅಡಿಕೆ, ಸುಣ್ಣ ಸೇರಿಸಿ ಸೇವಿಸುವುದರಿಂದ ರಾತ್ರಿ ಮೂತ್ರವಿಸರ್ಜನೆಗೆ ಏಳುವ ಪ್ರಮೇಯ ಇರುವುದಿಲ್ಲ.
- ಎಲೆ ಸೇವನೆಯಿಂದ ಆಹಾರ ಜೀರ್ಣವಾಗುವ ಜತೆಗೆ ಆಸಿಡಿಟಿ, ಗ್ಯಾಸ್ಟ್ರಿಕ್ ಹಾಗೂ ಅಲ್ಪ ಪ್ರಮಾಣದ ಕೆಮ್ಮನ್ನೂ ನಿವಾರಿಸುತ್ತದೆ.
- ಸುಣ್ಣದಲ್ಲಿ ಯಥೇಚ್ಛವಾಗಿ ಕ್ಯಾಲ್ಶಿಯಂ ಇರುತ್ತದೆ. ಹಾಗಾಗಿ, ತಾಂಬೂಲ ಸೇವನೆಯಿಂದ ಸಹಜವಾಗಿಯೇ ದೇಹಕ್ಕೆ ಕ್ಯಾಲ್ಶಿಯಂ ಅಂಶ ದೊರೆಯುತ್ತದೆ.
- ಸುಣ್ಣ ಸೇವನೆಯಿಂದ ಮಂಡಿನೋವು ನಿವಾರಣೆಯಾಗಿ ಮೂಳೆಗಟ್ಟಿಯಾಗುತ್ತದೆ. ಹಾಲು ಕುಡಿಯುವ ಮಕ್ಕಳಿಗೆ ಜೀರ್ಣಕ್ರಿಯೆ ತೊಂದರೆ ಆಗಿದ್ದರೆ ಅಂತಹ ಬಾಣಂತಿಯರಿಗೆ ವೀಳ್ಯದೆಲೆ ಸೇವಿಸಲು ಹೇಳುತ್ತಾರೆ. ಗಮನದಲ್ಲಿರಲಿ ಒಂದು ದಿನದಲ್ಲಿ ಒಂದು ಗೋಧಿ ಕಾಳಿನಷ್ಟು ಸುಣ್ಣವನ್ನು ಮಾತ್ರ ಸೇವಿಸಬಹುದು, ಮಕ್ಕಳಿಗಾದರೆ ಅರ್ಧ ಗೋಧಿ ಕಾಳಿನ ಗಾತ್ರ ಸಾಕು.

'ರಾಮಾಚಾರಿ 2.0' ಪೋಸ್ಟರ್

ರಾಮಾಚಾರಿ 2.0 ಶೀರ್ಷಿಕೆ ಹಾಡು ಬಿಡುಗಡೆ

ಪನೋರಮಿಕ್ ಸ್ಟುಡಿಯೋ, ಮೇಘನಾ ಕ್ರಿಯೇಷನ್ಸ್ ಬ್ಯಾನರ್ ಅಡಿ ನಟ ತೇಜಸ್ ನಿರ್ಮಾಣ ಮತ್ತು ಅಭಿನಯದ 'ರಾಮಾಚಾರಿ 2.0' ಚಿತ್ರದ ಶೀರ್ಷಿಕೆ ಹಾಡು ಭಾನುವಾರ ಬಿಡುಗಡೆಯಾಗಿದೆ. ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ. ಪ್ರಚಾರ ಭರದಿಂದ ಸಾಗಿದೆ ಎಂದು ತೇಜಸ್ ತಿಳಿಸಿದ್ದಾರೆ.

ಕೌಸ್ತುಭ ಹಾಗೂ ಚಂದನಾ ಈ ಚಿತ್ರದ ನಾಯಕಿಯರು. ಶೀರ್ಷಿಕೆ ಹಾಡಿನಲ್ಲಿ ವಿಷ್ಣುವರ್ಧನ್ ಅವರಿಗೂ ಗೌರವ ಸಲ್ಲಿಸಲಾಗಿದೆ.

ವಿಷ್ಣುವರ್ಧನ್ ಅಭಿನಯದ 'ನಾಗರಹಾವು' ಚಿತ್ರದ ರಾಮಾಚಾರಿ, ರವಿಚಂದ್ರನ್ ಅಭಿನಯದ 'ರಾಮಾಚಾರಿ' ಇಲ್ಲಿ ಹೊಸ ಅವತಾರದಲ್ಲಿ 2.0 ಆವೃತ್ತಿ ರೂಪದಲ್ಲಿ ಕಾಣಿಸಿಕೊಂಡಿದ್ದಾರೆ.

ರಾಘವೇಂದ್ರ ರಾಜ್‌ಕುಮಾರ್, ಸ್ವಾತಿ, ಸ್ಪರ್ಶರೇಖಾ, ವಿಜಯ್ ಚೆಂಡೂರ್, ಪ್ರಭು ಸೂರ್ಯ, ಶಶಿಧರ್ ತಾರಾಗಣದಲ್ಲಿದ್ದಾರೆ.

ಚಿತ್ರ ಶೀಘ್ರ ತೆರೆ ಕಾಣಲಿದೆ ಎಂದಿರುವ ತೇಜಸ್ ಬಿಡುಗಡೆ ದಿನಾಂಕದ ಗುಟ್ಟು ಬಿಟ್ಟುಕೊಟ್ಟಿಲ್ಲ. ಈ ನಡುವೆ ತೇಜಸ್ ಅವರ ಹೊಸ ಚಿತ್ರ 'ಗಾಡ್' ಸೆಟ್ಟೇರಿದ್ದು ಶೀಘ್ರ ಚಿತ್ರೀಕರಣ ಆರಂಭವಾಗಲಿದೆ.

ಸಿನಿ ಹನಿ

ಯಾವುದು ಯಶ್ ಹೊಸ ಪ್ರಾಜೆಕ್ಟ್?

'ಈ ವರ್ಷದ ಹುಟ್ಟುಹಬ್ಬಕ್ಕೆ ನಿಮ್ಮ ಜೊತೆ ಇರಲು ಸಾಧ್ಯವಾಗುತ್ತಿಲ್ಲ. ಆದರೆ ಆದಷ್ಟು ಬೇಗ ನಿಮಗೆ ಸಿಗುತ್ತೇನೆ ಮತ್ತು ನಿಮ್ಮ ಕಾಯುವಿಕೆಯನ್ನು ಅರ್ಥಪೂರ್ಣವಾಗಿಸುತ್ತೇನೆ' ಎಂದು ಪತ್ರದಲ್ಲಿ ಯಶ್ ಉಲ್ಲೇಖಿಸಿದ್ದಾರೆ.

'ಕೆ.ಜಿ.ಎಫ್. ಚಾಪ್ಟರ್-2' ಸಿನಿಮಾ ಬಳಿಕ ನಟ ರಾಕಿಂಗ್ ಸ್ಟಾರ್ ಯಶ್ ಮುಂದಿನ ಪ್ರಾಜೆಕ್ಟ್ ಯಾವುದು ಎನ್ನುವ ಪ್ರಶ್ನೆ ಇನ್ನೂ ಉಳಿದಿದೆ. ಇದಕ್ಕೆ ಭಾನುವಾರ(ಜ.8) ಅಂದರೆ ಯಶ್ ಜನ್ಮದಿನದಂದು ಉತ್ತರ ಸಿಗಲಿದೆ ಎಂಬ ಮಾತು ಗಾಂಧಿನಗರದಲ್ಲಿ ಹರಿದಾಡುತ್ತಿತ್ತು. ಇದಕ್ಕೆ ಪೂರಕವಾಗಿ ಯಶ್ ಟ್ವೀಟ್ ಮಾಡಿದ್ದಾರೆ.

ಗುರುವಾರ ತಡರಾತ್ರಿ ತಮ್ಮ ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಮಾನಿಗಳಿಗೆ ಪತ್ರವೊಂದನ್ನು ಯಶ್ ಪೋಸ್ಟ್ ಮಾಡಿದ್ದಾರೆ. 'ನಿಮ್ಮ ಕಲ್ಮಶವಿಲ್ಲದ ಪ್ರೀತಿ, ಸಾಟಿಯೇ ಇಲ್ಲದ ಅಭಿಮಾನ, ನನ್ನ ಹೃದಯ ತುಂಬುವಂತೆ ಮಾಡಿದೆ. ನನಗೆ ಗೊತ್ತು ನೀವೆಲ್ಲಾ ಕಾಯುತ್ತಿದ್ದೀರಾ...ಹುಟ್ಟಿದ ದಿನ ತುಂಬಾ ವಿಶೇಷ ಅಂತ ನನಗೆ ಅನ್ನಿಸೋಕೆ ಶುರುವಾಗಿದ್ದೇ ಇತ್ತೀಚಿನ ವರ್ಷಗಳಲ್ಲಿ. ಯಾವಾಗ ನೀವು ನನ್ನ ದಿನವನ್ನ ನಿಮ್ಮ ದಿನವನ್ನಾಗಿಸಿಕೊಂಡು ಆಚರಿಸಿ ವಿಜೃಂಭಿಸೋಕೆ ಶುರು ಮಾಡಿದ್ದರಿಂದ. ಹಾಗಾಗಿ ನಾನು ಕೂಡ ಈ ವರ್ಷದ ಹುಟ್ಟುಹಬ್ಬದಂದು ನಿಮ್ಮನ್ನ ನೋಡಬೇಕು, ನಿಮ್ಮೊಂದಿಗೆ ಸಮಯ ಕಳೆಯಬೇಕು ಅಂದುಕೊಂಡಿದ್ದೆ. ಆದರೆ ಜಗದಗಲದ ನಿರೀಕ್ಷೆಯಲ್ಲಿರುವ ನಿಮ್ಮ ಮುಂದೆ ನಿಲ್ಲಲು ಇನ್ನೂ ಸ್ವಲ್ಪವೇ ಸ್ವಲ್ಪ ಸಮಯ ಕೊಡಿ. ನಿಮಗಾಗಿ ವಿಭಿನ್ನವಾಗಿರೊದೇನನ್ನೋ ನಿಮ್ಮ ಮುಂದೆ ತರಲು ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದೇನೆ. ಅಲ್ಲಿಯವರೆಗೂ ನಿಮ್ಮ ತಾಳ್ಮೆ ಮತ್ತು ಪ್ರೀತಿಯೇ ನನಗೆ ಈ ವರ್ಷದ ಹುಟ್ಟುಹಬ್ಬದ ಉಡುಗೊರೆ. ಈ ವರ್ಷದ ಹುಟ್ಟುಹಬ್ಬಕ್ಕೆ ನಿಮ್ಮ ಜೊತೆ ಇರಲು ಸಾಧ್ಯವಾಗುತ್ತಿಲ್ಲ. ಆದರೆ ಆದಷ್ಟು ಬೇಗ ನಿಮಗೆ ಸಿಗುತ್ತೇನೆ ಮತ್ತು ನಿಮ್ಮ ಕಾಯುವಿಕೆಯನ್ನು ಅರ್ಥಪೂರ್ಣವಾಗಿಸುತ್ತೇನೆ' ಎಂದು ಪತ್ರದಲ್ಲಿ ಯಶ್ ಉಲ್ಲೇಖಿಸಿದ್ದಾರೆ.

ಜನ್ಮದಿನದಂದೇ ಯಶ್ ತಮ್ಮ ಹೊಸ ಪ್ರಾಜೆಕ್ಟ್ ಘೋಷಿಸುತ್ತಾರಾ ಅಥವಾ ಇನ್ನೂ ಸಮಯಾವಕಾಶ ತೆಗೆದುಕೊಳ್ತಾರ ಅನ್ನೋದೇ ಅಭಿಮಾನಿಗಳ ಪ್ರಶ್ನೆಯಾಗಿದೆ.

ಕಳೆದ ಏ.14ರಂದು 'ಕೆ.ಜಿ.ಎಫ್-ಚಾಪ್ಟರ್-2' ರಿಲೀಸ್ ಆಗಿತ್ತು. ಇದಾದ ಬಳಿಕ ಕೆಲ ಕಾಲ ಕುಟುಂಬದೊಂದಿಗೆ ವಿದೇಶ ಪ್ರವಾಸ, ಚಿತ್ರರಂಗದ ಹೊಸ ತಂತ್ರಜ್ಞಾನಗಳ ಅನ್ವೇಷಣೆ, ಜಾಹೀರಾತುಗಳ ಚಿತ್ರೀಕರಣದಲ್ಲೇ ಯಶ್ ತೊಡಗಿಸಿಕೊಂಡಿದ್ದರು. ತಮ್ಮ ಮುಂದಿನ ಸಿನಿಮಾದ ಬಗ್ಗೆ ಸಣ್ಣ ಸುಳಿವನ್ನೂ ಅವರು ಇಲ್ಲಿಯವರೆಗೂ ಬಿಟ್ಟುಕೊಟ್ಟಿಲ್ಲ. ಯಶ್ ಅವರ ಜನ್ಮದಿನ ಹತ್ತಿರವಾದಂತೆ, ತಮಿಳು ನಿರ್ದೇಶಕರೊಬ್ಬರು ಯಶ್‌ಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ ಎನ್ನುವ ಸುದ್ದಿ ಸದ್ಯ ಗಾಂಧಿನಗರದೊಳಗೆ ಸುಳಿದಿದೆ. ಜ.8ಕ್ಕೆ ಇದು ಘೋಷಣೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಒನ್‌ಪ್ಲಸ್ ಹೊಸ ಫೋನ್ ಶೀಘ್ರ ಮಾರುಕಟ್ಟೆಗೆ

ಪ್ರೀಮಿಯಂ ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್ ಮಾರುಕಟ್ಟೆಯಲ್ಲಿ ಜನಪ್ರಿಯತೆ ಗಳಿಸಿರುವ ಒನ್‌ಪ್ಲಸ್, ನೂತನ ಮಾದರಿಯನ್ನು ಚೀನಾದಲ್ಲಿ ಬಿಡುಗಡೆ ಮಾಡಿದೆ.

ಒನ್‌ಪ್ಲಸ್ 11 5G ಈ ವರ್ಷದ ಮೊದಲ ಪ್ರೀಮಿಯಂ ಸ್ಮಾರ್ಟ್‌ಫೋನ್ ಆಗಿದೆ ಎಂದು ಕಂಪನಿ ಹೇಳಿದೆ. ಹಿಂಭಾಗದಲ್ಲಿ ವೃತ್ತಾಕಾರದ ದೊಡ್ಡ ವಿನ್ಯಾಸದ ಕ್ಯಾಮೆರಾ ಇದೆ.

ಒನ್‌ಪ್ಲಸ್ 11 5G

6.7 ಇಂಚಿನ ಕ್ವಾಡ್ ಎಚ್‌ಡಿ + ಡಿಸ್‌ಪ್ಲೇ, ಇನ್ ಡಿಸ್‌ಪ್ಲೇ ಫಿಂಗರ್‌ಪ್ರಿಂಟ್ ಸೆನ್ಸರ್ ಹೊಂದಿದೆ.

ಸ್ನ್ಯಾಪ್‌ಡ್ರ್ಯಾಗನ್ 8 ಜೆನ್ 2 ಪ್ರೊಸೆಸರ್ ಜತೆಗೆ ಅಡ್ರೆನೊ 740 ಗ್ರಾಫಿಕ್ಸ್ ಬೆಂಬಲ ಹೊಂದಿದೆ. 12GB ಮತ್ತು 16GB LPDDR5X RAM ಎಂಬ ಎರಡು ಆಯ್ಕೆ ಹಾಗೂ 256 GB ಮತ್ತು 512 GB ಸ್ಟೋರೇಜ್ ಜತೆಗೆ ದೊರೆಯಲಿದೆ. 5,000mAh ಬ್ಯಾಟರಿ ಮತ್ತು 100W SuperVOOC ಚಾರ್ಜಿಂಗ್ ಬೆಂಬಲ, ಆ್ಯಂಡ್ರಾಯ್ಡ್ 13 ಆಧಾರಿತ ಕಲರ್‌ಓಎಸ್ 13 ಮೂಲಕ ಹೊಸ ಒನ್‌ಪ್ಲಸ್ ಸ್ಮಾರ್ಟ್‌ಫೋನ್ ಕಾರ್ಯನಿರ್ವಹಿಸುತ್ತದೆ.

ಹಿಂಭಾಗದಲ್ಲಿ 50 ಮೆಗಾಪಿಕ್ಸೆಲ್ ಮುಖ್ಯ ಕ್ಯಾಮೆರಾ ಜತೆಗೆ 48 ಮೆಗಾಪಿಕ್ಸೆಲ್ ವೈಡ್ ಆ್ಯಂಗಲ್ ಕ್ಯಾಮೆರಾ, 32 ಮೆಗಾಪಿಕ್ಸೆಲ್ ಟೆಲಿಫೋಟೊ ಲೆನ್ಸ್ ಮತ್ತು 16 ಮೆಗಾಪಿಕ್ಸೆಲ್ ಸೆಲ್ಫಿ ಇದರಲ್ಲಿದೆ.

ಒನ್‌ಪ್ಲಸ್ 11 5G ಸ್ಮಾರ್ಟ್‌ಫೋನ್ ಫೆಬ್ರುವರಿ 11ರಂದು ನವದೆಹಲಿಯಲ್ಲಿ ಬಿಡುಗಡೆಯಾಗಲಿದೆ.

ರೂಪೇಶ್ ಶೆಟ್ಟಿ, ಗೀತಾ ಭಾರತಿ ಹಾಗೂ ಪಂಚಮಿ ರಾವ್

ಜ.13ಕ್ಕೆ 'ಮಂಕು ಭಾಯ್ ಫಾಕ್ಸಿ ರಾಣಿ' ತೆರೆಗೆ

ಗಗನ್ ಎಂ. ನಿರ್ದೇಶನದ ಚೊಚ್ಚಲ ಚಿತ್ರ, 'ಬಿಗ್‌ಬಾಸ್' ವಿಜೇತ ನಟ ರೂಪೇಶ್ ಶೆಟ್ಟಿ ನಟನೆಯ 'ಮಂಕು ಭಾಯ್ ಫಾಕ್ಸಿ ರಾಣಿ' ಸಿನಿಮಾ ಜ.13ಕ್ಕೆ ಬೆಳ್ಳಿತೆರೆಗೆ ಬರಲಿದೆ.

ರೂಪೇಶ್ ಶೆಟ್ಟಿ, 'ಬ್ರಹ್ಮಗಂಟು' ಧಾರಾವಾಹಿ ಖ್ಯಾತಿಯ ನಟಿ ಗೀತಾ ಭಾರತಿ, ಪಂಚಮಿ ರಾವ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ ಈ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ.

'ಈ ಸಿನಿಮಾ ಚಿತ್ರೀಕರಣ ಪೂರ್ಣಗೊಂಡು ಮೂರು ವರ್ಷ ಕಳೆದಿದೆ. ಚಿತ್ರದಲ್ಲಿ ಕಟೆಂಟ್ ಹೀರೊ. ಯಕ್ಷಗಾನದಲ್ಲಿ ಸಿಂಹದ ವೇಷ ಹಾಕುವ ಹುಡುಗನ ಕಥೆ ಚಿತ್ರದಲ್ಲಿದೆ. ಸ್ನೇಹಿತರೇ ಆತನ ಪ್ರಪಂಚ. ಇದರೊಂದಿಗೆ ಒಂದು ಮುಗ್ಧ ಪ್ರೇಮಕಥೆ ಇರುವ ಸಿನಿಮಾ ಇದು. ಚಿತ್ರಕ್ಕಾಗಿ ತೂಕ ಹೆಚ್ಚಿಸಿಕೊಂಡಿದ್ದೆ. ಕನ್ನಡದಲ್ಲಿ ಹೀರೊ ಆಗಿ ನಟಿಸುತ್ತಿರುವ ಐದನೇ ಸಿನಿಮಾವಿದು. ಆ ಎಲ್ಲ ಸಿನಿಮಾಗಳಲ್ಲಿ ನಾನಿದ್ದೇನೆ ಎಂದು ಹೇಳುತ್ತಿದ್ದೆ. ಆದರೆ ಮೊದಲ ಬಾರಿ ರೂಪೇಶ್ ಶೆಟ್ಟಿ ಸಿನಿಮಾ ಬರುತ್ತಿದೆ ಎಂದು ಎಲ್ಲರೂ ಹೇಳುತ್ತಿದ್ದಾರೆ. ಇದು ಖುಷಿ ನೀಡಿದೆ' ಎನ್ನುತ್ತಾರೆ ರೂಪೇಶ್.

'ಕಿರುಚಿತ್ರ, ಡಾಕ್ಯುಮೆಂಟರಿ ನಿರ್ದೇಶನ ಮಾಡಿದ್ದೇನೆ. ತುಳು ಸಿನಿಮಾವೊಂದಕ್ಕೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ. 'ಮಂಕು ಭಾಯ್ ಫಾಕ್ಸಿ ರಾಣಿ' ನನ್ನ ನಿರ್ದೇಶನದ ಮೊದಲ ಸಿನಿಮಾ. ಈ ಸಿನಿಮಾವನ್ನು ಮೊದಲು ಕಿರುಚಿತ್ರವನ್ನಾಗಿ ಮಾಡಲು ನಿರ್ಧರಿಸಿದ್ದೆವು. ರೂಪೇಶ್ ಶೆಟ್ಟಿ ಅವರು ಈ ಸಿನಿಮಾ ಮಾಡಲು ಒಪ್ಪಿಕೊಂಡ ಮೇಲೆ ಇದರ ಕಥೆಯನ್ನು ಸಿನಿಮಾಗೆ ಹೇಗೆ ಬೇಕೋ ಹಾಗೆ ಬದಲಾಯಿಸಿಕೊಂಡೆವು. 2019ರಲ್ಲಿ ಆರಂಭವಾದ ಸಿನಿಮಾವಿದು. ಈಗ ಬಿಡುಗಡೆಯ ಹಂತಕ್ಕೆ ಬಂದಿದೆ. ಪೂರ್ತಿ ಕಥೆ ಮಂಗಳೂರು ಕನ್ನಡ ಭಾಷೆಯಲ್ಲಿ ಸಾಗಲಿದೆ. ಯಕ್ಷಗಾನದಲ್ಲಿ ಸಿಂಹದ ವೇಷ ಹಾಕುವ ಹುಡುಗನ ಜೀವನದಲ್ಲಿ ನಡೆಯುವ ಪ್ರೇಮಕಥೆ ಸುತ್ತ ಕಥೆಯನ್ನು ಹೆಣೆಯಲಾಗಿದೆ' ಎನ್ನುತ್ತಾರೆ ಗಗನ್.

ನಿರ್ಮಾಪಕ ಜೋಶ್ವ ಜೈಶಾನ್ ಕ್ರಾಸ್ತ, ಜೋಶ್ವ ಮೀಡಿಯಾ ಪ್ರೈವೇಟ್ ಲಿಮಿಟೆಡ್ ಬ್ಯಾನರ್‌ನಡಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ವಿನ್ಯಾಸ್ ಮದ್ಯ, ಶಮೀರ್ ಮುಡಿಪು ಸಂಗೀತ ನಿರ್ದೇಶನ, ಶಿನೋಯ್ ವಿ ಜೋಸೆಫ್ ಹಿನ್ನೆಲೆ ಸಂಗೀತ, ಎಂ.ಕೆ. ಷಜಹಾನ್ ಕ್ಯಾಮೆರಾ ವರ್ಕ್, ಸುಶಾಂತ್ ಶೆಟ್ಟಿ, ಪ್ರಜ್ವಲ್ ಸುವರ್ಣ ಸಂಕಲನ ಚಿತ್ರಕ್ಕಿದೆ. ಪ್ರಕಾಶ್ ತೂಮಿನಾಡು, ಅರ್ಜುನ ಕಜೆ, ಪ್ರಶಾಂತ್ ಅಂಚನ್, ವಿವೇಕ್ ಶೆಟ್ಟಿ ಸೇರಿದಂತೆ ಹಲವು ಕಲಾವಿದರು ಚಿತ್ರದಲ್ಲಿ ಅಭಿನಯಿಸಿದ್ದಾರೆ.

ತಂತ್ರಜ್ಞಾನ

ಬಜೆಟ್ ದರದಲ್ಲಿ ಪೊಕೊ ಫೋನ್

ಶಓಮಿ ಗ್ರೂಪ್‌ನಿಂದ ಪ್ರತ್ಯೇಕಗೊಂಡ ಬಳಿಕ ಪೊಕೊ ಕಂಪನಿ ಗ್ಯಾಜೆಟ್ ಮಾರುಕಟ್ಟೆಗೆ ವಿವಿಧ ಸ್ಮಾರ್ಟ್‌ಫೋನ್‌ಗಳನ್ನು ಬಿಡುಗಡೆ ಮಾಡಿದೆ.

ಈ ಬಾರಿ ಪೊಕೊ, ಭಾರತದ ಮಾರುಕಟ್ಟೆಗೆ C50 ಎಂಬ ಆಕರ್ಷಕ ಸ್ಮಾರ್ಟ್‌ಫೋನ್ ಅನ್ನು ಬಿಡುಗಡೆ ಮಾಡಿದೆ. ಬಜೆಟ್ ದರದಲ್ಲಿ ಹೊಸ ಮಾದರಿ ಬಯಸುವವರಿಗೆ ಪೊಕೊ C50 ಉತ್ತಮ ಆಯ್ಕೆ ಎಂದು ಕಂಪನಿ ತಿಳಿಸಿದೆ.

ಹೊಸ ಪೊಕೊ C50: ನೂತನ ಸ್ಮಾರ್ಟ್‌ಫೋನ್‌ನಲ್ಲಿ 6.52 ಇಂಚಿನ ಎಚ್‌ಡಿ + ಡಿಸ್‌ಪ್ಲೇ, ಹಿಂಭಾಗದಲ್ಲಿ ಫಿಂಗರ್‌ಪ್ರಿಂಟ್ ಸೆಕ್ಯುರಿಟಿ ಸೆನ್ಸರ್ ಇದೆ.

ಮೀಡಿಯಾಟೆಕ್ ಹಿಲಿಯೊ A22 ಒಕ್ಟಾ ಕೋರ್ ಪ್ರೊಸೆಸರ್, 2GB ಮತ್ತು 3GB LPDDR4X RAM ಆಯ್ಕೆ ಹಾಗೂ 32GB ಸ್ಟೋರೇಜ್ ಇದರಲ್ಲಿದೆ. ಆ್ಯಂಡ್ರಾಯ್ಡ್ 12 ಗೊ ಎಡಿಶನ್, ಹಿಂಭಾಗದಲ್ಲಿ 8 ಮೆಗಾಪಿಕ್ಸೆಲ್ ಮುಖ್ಯ ಕ್ಯಾಮೆರಾ, 5 ಮೆಗಾಪಿಕ್ಸೆಲ್ ಸೆಲ್ಫಿ ಕ್ಯಾಮೆರಾ ಹೊಂದಿದೆ.

ಪೋಕೊ C50 ಸ್ಮಾರ್ಟ್‌ಫೋನ್‌ನಲ್ಲಿ 5,000mAh ಬ್ಯಾಟರಿ ಮತ್ತು 10W ಚಾರ್ಜಿಂಗ್ ಬೆಂಬಲವಿದೆ ಎಂದು ಕಂಪನಿ ಹೇಳಿದೆ.

ಕಂಟ್ರಿ ಗ್ರೀನ್ ಮತ್ತು ರಾಯಲ್ ಬ್ಲೂ ಎಂಬ ಎರಡು ಬಣ್ಣಗಳಲ್ಲಿ ಹೊಸ ಫೋನ್ ದೊರೆಯಲಿದೆ.

ಬೆಲೆ ವಿವರ: 2GB RAM + 32GB ಮಾದರಿಗೆ ₹6,499 ಮತ್ತು 3GB RAM + 32GB ಆವೃತ್ತಿಗೆ ₹7,299 ದರವಿದೆ ಎಂದು ಪೊಕೊ ಹೇಳಿದೆ.